ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಾನಕೋಗಿಲೆಗೆ ಅಂತಿಮ ವಿದಾಯ

ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸೋಮವಾರ ಬಾಲಿವುಡ್ ಹಿರಿಯ ಗಾಯಕಿ ಆಶಾ ಭೋಸ್ಲೆಯವರ ಅಂತ್ಯಸಂಸ್ಕಾರ ನಡೆಯಿತು. ಇದಕ್ಕೂ ಮುನ್ನ ನೂರಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.

|| ಜೈ ಶ್ರೀ ಗುರುದೇವ್ ||

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ಪರಮಪೂಜ್ಯ ಯುಗಯೋಗಿ ಜಗದ್ಗುರು ಪದ್ಮಭೂಷಣ ಪುರಸ್ಕೃತ
ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ

ಶ್ರೀಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆ

ದಿವ್ಯಸಾನಿಧ್ಯವನ್ನು
ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಲೋಕಾರ್ಪಣೆಯನ್ನು ಭಾರತದ ಹೆಮ್ಮೆಯ ಪ್ರಧಾನಮಂತ್ರಿಗಳಾದ
ಶ್ರೀ ನರೇಂದ್ರ ಮೋದಿ ಜಿ ಅವರು ನೆರವೇರಿಸಲಿದ್ದಾರೆ

ದಿನಾಂಕ – ಏಪ್ರಿಲ್ 15ನೇ ಬುಧವಾರ, ಸಮಯ – **ಬೆಳಿಗ್ಗೆ** 10:00
ಸ್ಥಳ – ಶ್ರೀ ಕ್ಷೇತ್ರ ಆದಿಚುಂಚನಗಿರಿ **ಸರ್ವರಿಗೂ ಆದರದ ಸ್ವಾಗತ**

ತಮಗೆ ಹೃತ್ಪೂರ್ವಕ ಸುಸ್ವಾಗತ ಬಯಸುವವರು

KNS INFRA® Think Plots.® Think KNS.
KNS Infrastructure Pvt. Ltd.

₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 14.04.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ಫೋಟಿಸಿದ ಇಶಾನ್ ಕಿಶನ್

ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದ್ರಾಬಾದ್ ಬ್ಯಾಟರ್ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ನಡೆಸಿದರು. ಅವರು 44 ಎಸೆತಗಳಲ್ಲಿ 8 ಬೌಂಡರಿ, 6 ಸಿಕ್ಸರ್‌ಗಳ ಸಮೇತ 91 ರನ್ ಚಚ್ಚಿದರು.

ಸೊಂಪಾದ ಪುಟಗಳು

ಸಮುದಾಯದ ನಾಯಕತ್ವಕ್ಕೆ ಕೈನಲ್ಲಿ ಪೈಪೋಟಿ!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಅತ್ತ ದರಿ, ಇತ್ತ ಪುಲಿ ಹೊಸ ಬದುಕಿನ ರೀತಿ ಕಣ್ರೀ !
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನೀವು ಬೆಳಗ್ಗೆ ಬೇಗನೆ ಏಳುವುದು ಮುಖ್ಯವಲ್ಲ. ಬೆಳಗ್ಗೆ ಏಳುವಾಗ ಸಂತೋಷದಿಂದ ಏಳುವುದು ಮುಖ್ಯ. ಬೆಳಗ್ಗೆ ಏಳುವಾಗ ಆ ದಿನವಿಡೀ ಏನು ಮಾಡಬೇಕು ಎಂಬ ಬಗೆ ತಿಳಿದಿರುವುದು ಇನ್ನೂ ಮುಖ್ಯ.

ವಕ್ರತುಂಡೋಕ್ತಿ



ಯಾವ ಕೆಲಸ ಮಾಡಿದರೂ ದಣಿವಿಲ್ಲದ ವ್ಯಕ್ತಿ ಅಂದ್ರೆ, ಬೇರೆಯವರನ್ನು ಟೀಕೆ ಮಾಡುವವ.

ಜಯಮೃತ್ಯುಂಜಯ ಶ್ರೀಗೆ ಜಯ: ದೂರು ಹಿಂಪಡೆದ ಮಹಿಳೆ

ಬೆಂಗಳೂರು: ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ವಿರುದ್ಧ ಲೈಂಗಿಕ ದೌರ್ಜನ್ಯ ಹಾಗೂ ಬ್ಲ್ಯಾಕ್ ಮೇಲ್ ಆರೋಪ ಮಾಡಿದ್ದ ಮಹಿಳೆ, ಈಗ ತಮ್ಮ ದೂರುಗಳನ್ನೇ ಹಿಂಪಡೆದಿದ್ದಾರೆ. ಕೆಲವು ದಿನಗಳ ಹಿಂದೆ, ಸ್ವಾಮೀಜಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ತಿಮರೋಡಿ ಗಡಿಪಾರಿಗೆ ಹೈ ತಡೆ

ಬೆಂಗಳೂರು: ಸಾಮಾಜಿಕ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ತಾಲೂಕಿಗೆ ಗಡಿಪಾರು ಮಾಡುವ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಪುತ್ತೂರು ಉಪ ವಿಭಾಗಾಧಿಕಾರಿಯ ಮೂರನೇ ಬಾರಿಯ ಗಡಿಪಾರು ಆದೇಶವನ್ನು ಏ.16ರವರೆಗೆ ಜಾರಿ ಮಾಡದಂತೆ ಸರಕಾರ ಮತ್ತು ಪುತ್ತೂರು ಉಪ ವಿಭಾಗಾಧಿಕಾರಿಗೆ ಹೈಕೋರ್ಟ್ ಸೂಚಿಸಿದೆ.

ಅಂಚೆ ಕಚೇರಿಗಳಲ್ಲೂ ಸಿಗುತ್ತದೆ ಜನೌಷಧ

ದೆಹಲಿ: ಪ್ರಮುಖ ಔಷಧಗಳನ್ನು ಅಗ್ಗದಲ್ಲಿ ನೀಡುವ ಜನೌಷಧ ಕೇಂದ್ರಗಳನ್ನು ಭಾರತೀಯ ಅಂಚೆ ಕಚೇರಿಗಳಲ್ಲಿ ಆರಂಭಿಸಲು ಕೇಂದ್ರ ಸರಕಾರ ಚಿಂತನೆ ನಡೆಸಿದೆ. ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಈ ಕುರಿತಂತೆ ಕೇಂದ್ರ ಸಂಪರ್ಕ ಸಚಿವ ಸಿಂಧಿಯಾಗೆ ಪತ್ರ ಬರೆದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಹೆಂಡತಿ ನೋಡಿ ಬೊಗಳಿದ್ದಕ್ಕೆ ನಾಯಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ ಗಂಡ
ಸುದ್ದಿ



ಕಾಂಗ್ರೆಸ್ ಶಾಸಕರಿಗೆ ನಾಳೆ ಬಾ ಭರವಸೆ

ಸಂಪುಟದಲ್ಲಿ ಸ್ಥಾನ ಕೇಳಿ ದೆಹಲಿಗೆ ತೆರಳಿದ್ದ ಶಾಸಕರಿಂದ ಎಐಸಿಸಿ ಅಧ್ಯಕ್ಷ ಖರ್ಗೆ ಭೇಟಿ

ಸಂಪುಟ ಪುನಾರಚನೆ ಮಾಡಿ: 30 ಅಧಿಕ ಶಾಸಕರ ಆಗ್ರಹ । ಕೈಗೆ ಸಿಕ್ಕಿಲ್ಲ ರಾಹುಲ್

ವಿಶ್ವವಾಣಿ ಸುದ್ದಿಮನೆ ದೆಹಲಿ

ಸಚಿವ ಸಂಪುಟ ಪುನಾರಚನೆ ವೇಳೆ ಸಚಿವಪಟ್ಟ ಪಡೆಯುವ ಆಸೆಯನ್ನು ಹೊತ್ತು, ದೆಹಲಿಗೆ ಹೋಗಿದ್ದ ಕಾಂಗ್ರೆಸ್ ಶಾಸಕರಿಗೆ ನಿರೀಕ್ಷೆಯಂತೆ 'ನಾಳೆ ಬಾ' ಭರವಸೆ ಮಾತ್ರ ಸಿಕ್ಕಿದೆ. ಹೈಕಮಾಂಡ್ ಜತೆ ಚರ್ಚಿಸಿ ಅವರು ಹೇಳಿದ ಸಂದೇಶವನ್ನು ರವಾನಿಸುವುದಾಗಿ ಹೇಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೈತೊಳೆದುಕೊಂಡಿದ್ದಾರೆ ಎನ್ನಲಾಗಿದೆ.

ದೆಹಲಿಗೆ ತೆರಳಿದ್ದ ಶಾಸಕರ ನಿಯೋಗ ಸೋಮವಾರ ಸಂಜೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದೆ. ಈ ವೇಳೆ ಸಚಿವ ಸಂಪುಟ ಪುನಾರಚನೆ ಮಾಡಲೇಬೇಕೆಂದು ಖರ್ಗೆ ಎದುರು 'ಆಗ್ರಹಪೂರ್ವಕ' ಮನವಿ ಮಾಡಿದ್ದಾರೆ. ಆದರೆ ಈ ವಿಷಯದಲ್ಲಿ ಏಕಾಂಗಿಯಾಗಿ ಯಾವುದೇ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ. ಪಕ್ಷದ ಹೈಕಮಾಂಡ್ ಜತೆ ಚರ್ಚಿಸಿ, ಬಳಿಕ ತೀರ್ಮಾನ ಕೈಗೊಳ್ಳಲಾಗುವುದು ಎನ್ನುವ

ಭರವಸೆಯನ್ನು ನೀಡಿದ್ದಾರೆ ಎನ್ನಲಾಗಿದೆ.

ಶಾಸಕರು ದೆಹಲಿಗೆ ತೆರಳುವುದು ನಿಶ್ಚಿತವಾಗುತ್ತಿದ್ದಂತೆ, ಈ ರೀತಿಯ ಭರವಸೆ ಸಿಗುವ ಮಾತುಗಳು ಕೇಳಿಬಂದಿತ್ತು. ಶಾಸಕರು ಇಡೀ ದಿನ ಕಾದ ಬಳಿಕ ಸಂಜೆ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿಗೆ ಅವಕಾಶ ಸಿಕ್ಕಿದೆ. ಆದರೆ ಯಾವುದೇ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿಲ್ಲ. ಸದ್ಯ ರಾಹುಲ್ ಗಾಂಧಿ ಅವರು ಪಂಚರಾಜ್ಯ ಚುನಾವಣೆಯಲ್ಲಿ 'ಬ್ಯುಸಿ' ಇದ್ದಾರೆ. ಆದ್ದರಿಂದ ಈ ಹಂತದಲ್ಲಿ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಆಗುವುದಿಲ್ಲ. ಆದ್ದರಿಂದ ಚುನಾವಣೆ ಮುಗಿದ ಬಳಿಕ ಚರ್ಚಿಸಿ, ತಿಳಿಸಲಾಗುವುದು ಎಂಬ ಭರವಸೆ ನೀಡಿದ್ದಾರೆ.

ಸಿಗದ ಇತರೆ ನಾಯಕರು: ಮಲ್ಲಿಕಾರ್ಜುನ ಖರ್ಗೆ ಹೊರತಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರ ಭೇಟಿಯ ನಿರೀಕ್ಷೆಯಲ್ಲಿ ಶಾಸಕರಿದ್ದರು. → 4

ಹೈಕಮಾಂಡ್ ಬಳಿ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ, 2ನೇ ಬಾರಿ ಗೆದ್ದಿರುವವರೂ ಮಂತ್ರಿಗಳಾಗಬಹುದು. ಈ ಹಿಂದೆಯೂ ನಡೆದಿದೆ. ಆದರೆ ಇದು ಸಮಯವಲ್ಲ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ದೆಹಲಿಯಲ್ಲಿ ಸಿದ್ದರಾಮಯ್ಯ ಅಥವಾ ಶಿವಕುಮಾರ್ ಪರ ಲಾಬಿ ಮಾಡಲು ಬಂದಿಲ್ಲ. ನಾವು ಇಲ್ಲಿಗೆ ಸಂಪುಟ ಪುನಾರಚನೆ ಮಾಡಿ ಎಂದು ಕೇಳಲು ಹಾಗೂ ಸಚಿವ ಸಂಪುಟದಲ್ಲಿ ನಮಗೂ ಸ್ಥಾನ ನೀಡುವಂತೆ ಕೇಳಲು ಬಂದಿದ್ದೇವೆ.
-ಅಶೋಕ್ ಪಟ್ಟಣ್, ಶಾಸಕ

ಜಬ್ಬಾರ್ ಆಯ್ತು, ನಸೀರ್ ಅಹ್ಮದ್ ರಾಜೀನಾಮೆ ನಿಶ್ಚಿತ

ಸಚಿವ ಸಂಪುಟ ಪುನಾರಚನೆ ಕಸರತ್ತು ಒಂದೆಡೆಯಾದರೆ, ಇನ್ನೊಂದೆಡೆ ದಾವಣಗೆರೆ ದಕ್ಷಿಣ ಉಪಚುನಾವಣೆಯ ವಿವಾದದಲ್ಲಿ ಎರಡನೇ ವಿಕೆಟ್ ಬೀಳುವುದು ನಿಶ್ಚಿತ ಎನ್ನಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಪಕ್ಷದ ವಿರುದ್ಧವಾಗಿ ಕೆಲ ಮುಸ್ಲಿಂ ನಾಯಕರು ಕೆಲಸ ಮಾಡಿದ್ದಾರೆ ಎಂದು ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್ ಆರೋಪಿಸಿದ ಬೆನ್ನಲ್ಲೇ, ಅಬ್ದುಲ್ ಜಬ್ಬಾರ್ ಅಲ್ಪಸಂಖ್ಯಾತ ಘಟಕಕ್ಕೆ ರಾಜೀನಾಮೆ ನೀಡಿದ್ದರು. ಇದೀಗ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ನಸೀರ್ ಅಹ್ಮದ್ ರಾಜೀನಾಮೆ ನೀಡುವುದು ನಿಶ್ಚಿತ ಎನ್ನಲಾಗಿದೆ. ಚಿಕ್ಕಮಗಳೂರು ಪ್ರವಾಸದಿಂದ ಮುಖ್ಯಮಂತ್ರಿಗಳು ವಾಸಪಾದ ಬಳಿಕ ಸೋಮವಾರ ರಾತ್ರಿ ನಸೀರ್ ಜತೆ ಮಾತನಾಡಿ, ರಾಜೀನಾಮೆ ನೀಡುವಂತೆ ಸೂಚನೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿದ್ದು, ಸೋಮವಾರ ತಡರಾತ್ರಿ ಅಥವಾ ಮಂಗಳವಾರ ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಹೊರ್ಮುಜ್‌ಗೆ ಅಮೆರಿಕ ದಿಗ್ಬಂಧನ

ಹಡಗುಗಳು ಇರಾನ್ ಬಂದರು ಪ್ರವೇಶಕ್ಕೆ ಈಗ ಅಮೆರಿಕ ನಿರ್ಬಂಧ

ಕೊಲ್ಲಿಯಲ್ಲಿ ಯಾವ ಬಂದರೂ ಸುರಕ್ಷಿತವಾಗಿರಲ್ಲ: ಇರಾನ್ ಎಚ್ಚರಿಕೆ

ಕದನವಿರಾಮವಾದರೂ ಮತ್ತೆ ಸಂಘರ್ಷ, ಜಾಗತಿಕ ಮಾರುಕಟ್ಟೆ ಪತನ

ದೆಹಲಿ: ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಅಮೆರಿಕ- ಇರಾನ್ ನಡುವೆ ಶಾಂತಿಸಂಧಾನ ವಿಫಲವಾಗುತ್ತಿದ್ದಂತೆಯೇ, ಪರಿಸ್ಥಿತಿ ಮತ್ತೆ ಉಲ್ಬಣಗೊಂಡಿದೆ. ಸೋಮವಾರ ರಾತ್ರಿ 7.30ರಿಂದ ಇರಾನ್ ವಶದಲ್ಲಿರುವ ಹೊರ್ಮುಜ್ ಜಲಸಂಧಿಯನ್ನು ವಿಶ್ವದ ಯಾವುದೇ ದೇಶಗಳ ಹಡಗುಗಳು ಪ್ರವೇಶಿಸಲು ಬಿಡುವುದಿಲ್ಲ ಎಂದು ಅಮೆರಿಕ ಘೋಷಿಸಿದೆ. ಯಾವುದೇ ಹಡಗುಗಳು ಇರಾನ್‌ನ ಬಂದರುಗಳ ಮೂಲಕ ಹೊರ್ಮುಜ್ ಜಲಸಂಧಿ ಪ್ರವೇಶಿಸಲು ಬಿಡಲ್ಲ, ಆದರೆ ಇತರೆ ಮಾರ್ಗಗಳ ಮೂಲಕ ಸಾಗಿ ಹೊರ್ಮುಜ್ ಅನ್ನು ಪ್ರವೇಶಿಸಿದರೆ ಅದನ್ನು ತಡೆಯಲ್ಲ ಎಂದು ಅಮೆರಿಕ ಹೇಳಿದೆ. ಇದರಿಂದ ಕೆರಳಿರುವ ಇರಾನ್, ಒಂದು ವೇಳೆ ತನ್ನ ಬಂದರುಗಳಿಗೆ ಹಡಗು ಪ್ರವೇಶಕ್ಕೆ ಅಡ್ಡಿ ಮಾಡಿದರೆ ಪರ್ಷಿಯಾ ಕೊಲ್ಲಿಯಲ್ಲಿರುವ ಯಾವುದೇ ಬಂದರುಗಳು ಸುರಕ್ಷಿತವಾಗಿರಲ್ಲ. ಒಂದೋ ಪರ್ಷಿಯಾ ಕೊಲ್ಲಿಯಲ್ಲಿರುವ ಮತ್ತು ಒಮಾನ್ ಸಮುದ್ರದಲ್ಲಿರುವ ಎಲ್ಲ ಬಂದರುಗಳೂ ಸುರಕ್ಷಿತವಾಗಿರುತ್ತವೆ, ಇಲ್ಲ ಯಾವುದೂ ಸುರಕ್ಷಿತವಾಗಿರಲ್ಲ ಎಂದು ಇರಾನ್ ಸೇನೆ ಐಆರ್‌ಜಿಸಿ ತಿಳಿಸಿದೆ.

ಪರಮಾಣು ಶಸ್ತ್ರ ಅಭಿವೃದ್ಧಿ ಮಾಡುವುದನ್ನು ಇರಾನ್ ನಿಲ್ಲಿಸಬೇಕು, ಹೊರ್ಮುಜ್ ಅನ್ನು ಎಲ್ಲ ದೇಶಗಳಿಗೂ ತೆರೆಯಬೇಕು ಎಂದು ಶಾಂತಿ ಮಾತುಕತೆ ವೇಳೆ ಅಮೆರಿಕ ಷರತ್ತು ಹಾಕಿತ್ತು. ಇದನ್ನು ಇರಾನ್ ತಿರಸ್ಕರಿಸಿತ್ತು. ಇದರ ಬೆನ್ನಲ್ಲೇ ಇರಾನ್ ಬಂದರುಗಳಿಗೆ ಇತರೆ ದೇಶಗಳ ಹಡಗು ಪ್ರವೇಶ ತಡೆಯುವುದಾಗಿ ಅಮೆರಿಕ ಘೋಷಿಸಿದೆ. ಇದು ಮತ್ತೆ ಭಾರತ ಮತ್ತು ಇತರೆ ದೇಶಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಲೆಬನಾನ್‌ನಲ್ಲಿ 5 ಸಾವು

ಲೆಬನಾನ್‌ನ ದಕ್ಷಿಣ ಭಾಗದಲ್ಲಿರುವ ಹೆಜ್ಬೊಲ್ಲಾ ಉಗ್ರರ ನೆಲೆಯಿರುವ ಹಳ್ಳಿಗಳ ಮೇಲೆ ಇಸ್ರೇಲ್ ತನ್ನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ವಿವಿಧ ಭಾಗಗಳಲ್ಲಿ ನಡೆಸಿದ ದಾಳಿಯಲ್ಲಿ 6 ಉಗ್ರರು ಸಾವನ್ನಪ್ಪಿದ್ದಾರೆ, ಇತರೆ 11 ಮಂದಿ ಗಾಯಗೊಂಡಿದ್ದಾರೆಂದು ವರದಿಗಳು ಹೇಳಿವೆ.

ಇಂದು ಲೆಬನಾನ್, ಇಸ್ರೇಲ್ ಮಾತುಕತೆ?

ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಈ ಹಿಂದೆ ಇಸ್ರೇಲ್ ಜೊತೆಗೆ ಮಂಗಳವಾರ ಮಾತುಕತೆ ನಡೆಯಲಿದೆ ಎಂದಿದ್ದರು. ಅಮೆರಿಕದ ರಾಜಧಾನಿ ವಾಷಿಂಗ್ಟನ್‌ನಲ್ಲಿ ಮಂಗಳವಾರ ಎರಡೂ ದೇಶಗಳ ನಡುವೆ ಮಾತುಕತೆ ನಡೆಯುವ ಸಾಧ್ಯತೆಯಿದೆ. ಈ ಮಾತುಕತೆಗೆ ಮಧ್ಯಸ್ಥಿಕೆ ವಹಿಸಲು ತಾನು ಸಿದ್ಧ ಎಂದು ಇಟಲಿ ಹೇಳಿಕೊಂಡಿದೆ. ಹೆಜ್ಬೊಲ್ಲದಿಂದ ಇಸ್ರೇಲ್ ಮೇಲೆ ದಾಳಿ, ಅದಕ್ಕೆ ಪ್ರತಿಯಾಗಿರುವ ಇಸ್ರೇಲ್ ಪ್ರತಿದಾಳಿಯನ್ನು ಇಟಲಿ ಖಂಡಿಸಿದೆ.

ಪೋಪ್ ಲಿಯೋರನ್ನು ವ್ಯಂಗ್ಯವಾಡಿದ ಟ್ರಂಪ್

ಅಮೆರಿಕ-ಇಸ್ರೇಲ್‌ಗಳು ಇರಾನ್ ಮೇಲೆ ದಾಳಿ ನಡೆಸಿರುವುದನ್ನು ಹಿಂದಿನಿಂದಲೂ ವಿರೋಧಿಸುತ್ತಿರುವ ಪೋಪ್ ಲಿಯೋ ಮೇಲೆ ಅಮೆರಿಕ ಅಧ್ಯಕ್ಷ ಟ್ರಂಪ್ ಮುಗಿಬಿದ್ದಿದ್ದಾರೆ. ಒಂದು ವೇಳೆ ತಾನು ಅಮೆರಿಕ ಅಧ್ಯಕ್ಷನಾಗಿರದೇ ಇದ್ದಿದ್ದರೆ, ಲಿಯೋ ವ್ಯಾಟಿಕನ್‌ನಲ್ಲಿ ಪೋಪ್ ಆಗಿರುತ್ತಿರಲಿಲ್ಲ. ಅವರಿಗೆ ಜಾಗತಿಕ ವಿದ್ಯಮಾನಗಳ ಬಗ್ಗೆ ಗೊತ್ತಿಲ್ಲ. ಅವರೊಬ್ಬ ದುರ್ಬಲ ವ್ಯಕ್ತಿ ಎಂದು ಹೇಳಿದ್ದಾರೆ. ಇದಕ್ಕೆ ತಲೆಕೆಡಿಸಿಕೊಳ್ಳಲ್ಲ ಎಂದು ಪೋಪ್ ಲಿಯೋ ಹೇಳಿದ್ದಾರೆ.

ಹರಪೀಠದಿಂದ ವಚನಾನಂದ ಶ್ರೀ ಉಚ್ಚಾಟನೆ, ಹೈಡ್ರಾಮಾ

ಪೀಠದ 12 ಧರ್ಮದರ್ಶಿಗಳ ಸಭೆಯಲ್ಲಿ ಶ್ರೀಗಳ ವಿರುದ್ಧ ಕ್ರಮ

ಹರಿಹರ ಮಠದಲ್ಲಿ ಉದ್ವಿಗ್ನ ವಾತಾವರಣ, ನಿಷೇದಾಜ್ಞೆ ಜಾರಿ

ಲೆಕ್ಕ ಕೊಡಿ ಹೋರಾಟ ಉಚ್ಚಾಟನೆಗೆ ಕಾರಣ: ವಚನಾನಂದ ಶ್ರೀ

ವಿಶ್ವವಾಣಿ ಸುದ್ದಿಮನೆ ದಾವಣಗೆರೆ

ಮಹತ್ವದ ಬೆಳವಣಿಗೆಯೊಂದರಲ್ಲಿ ಹರಿಹರದಲ್ಲಿರುವ ಹರ ಪೀಠಾಧ್ಯಕ್ಷ ಸ್ಥಾನದಿಂದ ಶ್ರೀ ವಚನಾನಂದ ಸ್ವಾಮೀಜಿಗಳನ್ನು

ಉಚ್ಚಾಟನೆ ಮಾಡಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ. ಸೋಮ ವಾರ ಇಡೀ ದಿನ ಮಠದ ಆವರಣದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿ, ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಗುರುಪೀಠದಲ್ಲಿ ಸೋಮವಾರ ನಡೆದ 12 ಧರ್ಮದರ್ಶಿಗಳ ಸಭೆಯಲ್ಲಿ ಹರಿಹರ ವೀರಶೈವ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಶ್ರೀಗಳನ್ನು ಉಚ್ಚಾಟನೆ ಮಾಡಲಾಗಿದೆ. ಬಳಿಕ ಈ ವಿಷಯದ ಬಗ್ಗೆ ಪೀಠದ ಟ್ರಸ್ಟಿ ಬಸವರಾಜ ದಿಂಡೂರ ಮಾತನಾಡಿ, ವಚನಾನಂದ ಅವರಿಗೆ ಶ್ವಾಸಪೀಠ ಅಥವಾ ಹರಿಹರದ ಪೀಠಗಳ ಪೈಕಿ ಒಂದನ್ನು ಮಾತ್ರ ಆಯ್ಕೆ ಮಾಡುವಂತೆ ಹೇಳಲಾಗಿತ್ತು. ಆದರೆ ಅವರು ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಆದ್ದರಿಂದ ಅವರನ್ನು ಪದಚ್ಯುತಿ ಮಾಡ ಲಾಗಿದೆ ಎಂದು ಹೇಳಿದ್ದಾರೆ.

ಟ್ರಸ್ಟಿಗಳ ಈ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಮಠದ ಭಕ್ತರು, ಹರಪೀಠದ ಮುಂಭಾಗದಲ್ಲಿ ನಿಷೇಧಾಜ್ಞೆಯ ನಡುವೆಯೂ ಟ್ರಸ್ಟ್ ವಿರುದ್ಧ ಪ್ರತಿಭಟನೆ ನಡೆಸಿದರು.

ಲೆಕ್ಕಪತ್ರ ಸಮಿತಿಗೆ ಪ್ರತಿ ಒಂದು ರು.ಗಳ ಮಾಹಿತಿ ನೀಡಲಾಗಿದೆ. ಯಾರೇ ಬಂದು ಲೆಕ್ಕ ಕೇಳಿದ್ದರೂ ನಾವು ಕೊಡಲು ಸಿದ್ಧರಿದ್ದೇವೆ. ಆದರೆ, ಕೆಲವರ ಉದ್ದೇಶವೇ ಬೇರೆ ಆಗಿದೆ. ಮುಂದಿನ ಪೀಠದ ಭವಿಷ್ಯದ ಸಲುವಾಗಿ ಸರ್ವಾನುಮತದಿಂದ ಶ್ರೀಗಳ ಬದಲಾವಣೆ ತೀರ್ಮಾನ ತೆಗೆದುಕೊಳ್ಳಲಾಗಿದೆ.
-ಬಿ.ಸಿ.ಉಮಾಪತಿ, ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ

ಆಗಿದ್ದೇನು?

- ಸೋಮವಾರ ಹರಿಹರ ವೀರಶೈವ ಪಂಚಮಸಾಲಿ ಪೀಠದ 12 ಧರ್ಮದರ್ಶಿಗಳ ಸಭೆ
- ವಚನಾನಂದ ಶ್ರೀಗಳು ಪೀಠದ ಆಯ್ಕೆಯಲ್ಲಿ ನಿಯಮ ಉಲ್ಲಂಘಿಸಿದ್ದಾರೆ: ಟ್ರಸ್ಟಿಗಳು
- ಟ್ರಸ್ಟಿಗಳು ಅವ್ಯವಹಾರ ಮಾಡಿದ್ದಾರೆ, ಅದನ್ನು ಪ್ರಶ್ನಿಸಿದ್ದಕ್ಕೆ ಈ ಕ್ರಮ: ಶ್ರೀಗಳ ಉತ್ತರ

ಗಾನ ಕೋಗಿಲೆಗೆ ಅಂತಿಮ ವಿದಾಯ

ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಸಂಸ್ಕಾರ

ಸರಕಾರಿ ಮರ್ಯಾದೆಗಳೊಂದಿಗೆ ಗಾಯನ ದಂತಕಥೆಗೆ ಅಂತಿಮ ನಮನ

ಮುಂಬೈ: ಹೃದಯಾಘಾತದಿಂದ ಭಾನುವಾರ ನಿಧನರಾಗಿದ್ದ ಬಾಲಿವುಡ್‌ನ ಹಿರಿಯ ಗಾಯಕಿ ಆಶಾ ಭೋಸ್ಲೆಯವರ ಅಂತಿಮ ಸಂಸ್ಕಾರ, ಸೋಮವಾರ ಸಂಜೆ ಮುಂಬೈನ ದಾದರ್‌ನಲ್ಲಿರುವ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರಕಾರಿ ಮರ್ಯಾದೆಗಳೊಂದಿಗೆ ನೆರವೇರಿತು. ಶಿವಾಜಿ ಪಾರ್ಕ್‌ಗೆ ಅವರ ಪಾರ್ಥಿವ ಶರೀರ ಆಗಮಿಸಿದ ನಂತರ ಮುಂಬೈ ಪೊಲೀಸ್ ವತಿಯಿಂದ ಗನ್ ಸೆಲ್ಯೂಟ್ ನೀಡಲಾಯಿತು. ಆನಂತರ ಆಶಾರವರ ಪುತ್ರ ಆನಂದ್ ಭೋಸ್ಲೆಯವರು ಹಿಂದೂ ಸಂಪ್ರದಾಯದಂತೆ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ

ಮಾಡಿದರು. ಈ ಭಾವುಕ ಸನ್ನಿವೇಶಕ್ಕೆ ಹಿಂದಿ ಚಿತ್ರರಂಗದ ತಾರೆಯರು, ಗಾಯಕರು, ಸಂಗೀತ ನಿರ್ದೇಶಕರು, ಚಿತ್ರನಿರ್ದೇಶಕರು, ನಿರ್ಮಾಪಕರು ಸೇರಿದಂತೆ ಸಾವಿರಾರು ಅಭಿಮಾನಿಗಳು ಸಾಕ್ಷಿಯಾದರು.

- ಹಿಂದೂ ಪದ್ಧತಿಯಂತೆ ಅಂತ್ಯ ಸಂಸ್ಕಾರ, ಪುತ್ರ ಆನಂದ್ ಭೋಸ್ಲೆಯಿಂದ ಅಗ್ನಿಸ್ಪರ್ಶ
- ಅಂತಿಮ ದರ್ಶನ ಪಡೆದ ದೇಶದ ಗಣ್ಯಾತಿಗಣ್ಯರು, ಚಿತ್ರೋದ್ಯಮದ ಪ್ರಮುಖರು
- ಮುಂಬೈನಲ್ಲಿ ಸಾವಿರಾರು ಅಭಿಮಾನಿಗಳಿಂದ ಆಶಾತಾಯ್‌ಗೆ ಕಣ್ಣೀರಿನ ವಿದಾಯ

ಭದ್ರಾ ಸೇತುವೆ ಉದ್ಘಾಟಿಸಿದ ಸಿಎಂ

ಹಂದೂರು ಗ್ರಾಮದಿಂದ ನರಸಿಂಹರಾಜಪುರವನ್ನು ಸಂಪರ್ಕಿಸುವ ಭದ್ರಾ ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಉದ್ಘಾಟಿಸಿ, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನಲ್ಲಿ ಈ ಕಾರ್ಯಕ್ರಮ ನಡೆಯಿತು. ಈ ವೇಳೆ ಸಚಿವ ಸತೀಶ್ ಜಾರಕಿಹೊಳಿ, ಕೆ.ಜೆ.ಜಾರ್ಜ್, ಶಾಸಕರಾದ ಟಿ.ಡಿ.ರಾಜೇಗೌಡ, ಆನಂದ್, ಶ್ರೀನಿವಾಸ್, ಮಾಗಡಿ ಬಾಲಕೃಷ್ಣ, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ. ಶ್ರೀನಿವಾಸ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಉಪಸ್ಥಿತರಿದ್ದರು.

ಬಿಹಾರದ ನೂತನ ಸಿಎಂ ಆಯ್ಕೆಗೆ ಇಂದು ಕಸರತ್ತು

ಮುಖ್ಯಮಂತ್ರಿ ಸ್ಥಾನಕ್ಕೆ ಇಂದು ನಿತೀಶ್ ರಾಜೀನಾಮೆ

ಚೌಧರಿಗೆ ಬಿಹಾರದ ಮೊದಲ ಬಿಜೆಪಿ ಸಿಎಂ ಪಟ್ಟ?

ಪಾಟ್ನಾ: ಸುಮಾರು ಒಂದು ತಿಂಗಳವರೆಗೆ ನನೆಗುದಿಗೆ ಬಿದ್ದಿದ್ದ ಬಿಹಾರದ ಮುಂದಿನ ಮುಖ್ಯ

ಮಂತ್ರಿ ಯಾರು ಎಂಬ ಪ್ರಶ್ನೆಗೆ ಮಂಗಳವಾರ (ಏ. 14) 'ಅಧಿಕೃತ' ಉತ್ತರ ಸಿಗಲಿದೆ. ಹಾಲಿ ಉಪಮುಖ್ಯಮಂತ್ರಿ, ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಸಾಮ್ರಾಟ್ ಚೌಧರಿಯವರೇ ಮುಂದಿನ ಮುಖ್ಯಮಂತ್ರಿಯಾಗುವುದು ಬಹುತೇಕ ಖಚಿತವಾಗಿದೆ. ಹಾಗಾದರೆ, ಅವರು ಬಿಹಾರದ ಮೊದಲ ಬಿಜೆಪಿ ಮುಖ್ಯಮಂತ್ರಿ ಯೆನಿಸಲಿದ್ದಾರೆ. ಚೌಧರಿಯವರ ಪ್ರಮಾಣವಚನ ಸಮಾರಂಭ ಏ.15ರಂದು ನಡೆಯಲಿದ್ದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸುವ ಸಾಧ್ಯತೆಗಳಿವೆ. → 4

ಬೆಕ್ಕಿಗೆ ಚೆಲ್ಲಾಟ: ಮನುಷ್ಯರಿಗೆ ಪ್ರಾಣಸಂಕಟ

ನೆರೆಹೊರೆಯಲ್ಲಿ ಕಿಚ್ಚು ಹಚ್ಚಿದ ಬೆಕ್ಕಿನ ಹೆರಿಗೆ । ಮರಿಗಳ ಮಾಲೀಕತ್ವ ಠಾಣೆಯಲ್ಲಿ ಇತ್ಯರ್ಥ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

'ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ' ಎನ್ನುವುದು ಗಾದೆ. ಆದರೆ ಬೆಂಗಳೂರಿನಲ್ಲಿ ಎರಡು ಬೆಕ್ಕಿನ 'ಆಟ'ಕ್ಕೆ ಜನಿಸಿದ ನಾಲ್ಕು ಮರಿಗಳ ವಿಷಯದಲ್ಲಿ ಅಕ್ಕ-ಪಕ್ಕದ ಮನೆಯವರು ಕಿತ್ತಾಡಿಕೊಂಡು ಪೊಲೀಸ್ ಠಾಣೆ ಮೆಟ್ಟಿಲೇರಿರುವ ಘಟನೆ ನಡೆದಿದೆ. ರಾಜಧಾನಿ ಬೆಂಗಳೂರಿನ ಶೇಷಾದ್ರಿಪುರದಲ್ಲಿ ಇತ್ತೀಚಿಗೆ ಬೆಕ್ಕೊಂದು ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ಇಷ್ಟೇ ಆಗಿದ್ದರೆ ದೊಡ್ಡ ಸುದ್ದಿಯಾಗುತ್ತಿರಲಿಲ್ಲ, ಆದರೆ ಈ ನಾಲ್ಕು ಮರಿಗಳ ಜನನಕ್ಕೆ ಕಾರಣವಾಗಿರೋದು ಯಾವ



ಬೆಕ್ಕು? ಎನ್ನುವ ಕಾರಣಕ್ಕೆ ಶುರುವಾದ ಗಲಾಟೆ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ. ಕೊನೆಗೆ ಪೊಲೀಸರು ಕೂತು ಬೆಕ್ಕಿನ ಮರಿಗಳಿಗೆ ನ್ಯಾಯ ಕೊಡಿಸುವ ಕೆಲಸವನ್ನು ಮಾಡಿ ಗಲಾಟೆಯನ್ನು ಶಮನಗೊಳಿಸಿದ್ದಾರೆ.

ನೆರೆಹೊರೆ ಮನೆಯವರು ಎರಡು ಬೆಕ್ಕನ್ನು ಸಾಕಿದ್ದರು. ಅದರಲ್ಲಿ ಒಂದು ಗಂಡಾದರೆ, ಇನ್ನೊಂದು ಹೆಣ್ಣಂತೆ. ಈ ಎರಡೂ ಬೆಕ್ಕುಗಳು ಸೇರಿಕೊಂಡು, 'ಸಂಸಾರ' ನಡೆಸಿವೆ. ಇದರ ಫಲವಾಗಿ ಹೆಣ್ಣು ಬೆಕ್ಕು ನಾಲ್ಕು ಮರಿಗಳಿಗೆ ಜನನ ನೀಡಿದೆ. ಆದರೆ ನಾಲ್ಕು ಮರಿಗಳು ನಮ್ಮ ಮನೆಯ ಗಂಡು ಬೆಕ್ಕಿಗೆ ಹುಟ್ಟಿವೆ ಎನ್ನುವುದಕ್ಕೆ ಸಾಕ್ಷ್ಯವೇನು ಎಂದು ಗಂಡು ಬೆಕ್ಕಿನ ಮನೆಯವರು ವಾದ ಮಂಡಿಸಿದ್ದಾರೆ. ಇದಕ್ಕೆ ಹೆಣ್ಣು ಬೆಕ್ಕಿನ ಮನೆಯವರೂ ವಾದ ಮಾಡಿದ್ದಾರೆ. ಕೊನೆಗೆ ಗಲಾಟೆ ಆಸಿಡ್ ಹಾಕುವುದಾಗಿ ಬೆದರಿಸುವ ಹಂತಕ್ಕೆ ಹೋಗಿತ್ತು. ಕೊನೆಗೆ ಪೊಲೀಸರು ಮಧ್ಯಪ್ರವೇಶಿಸಿ, ಎರಡು ಬೆಕ್ಕನ್ನು ಗಂಡು ಬೆಕ್ಕಿನ ಮನೆಯವರು ಹಾಗೂ ಇನ್ನೆರಡು ಬೆಕ್ಕನ್ನು ಹೆಣ್ಣು ಬೆಕ್ಕಿನ ಮನೆಯವರು ಸಾಕಬೇಕೆಂದು 'ನ್ಯಾಯ' ಕೊಟ್ಟು ವಿವಾದವನ್ನು ಇತ್ಯರ್ಥಗೊಳಿಸಿದ್ದಾರೆ.

ತಕರಾರುಗಳೇನು?

ಹೆಣ್ಣು ಬೆಕ್ಕು ನಾಲ್ಕು ಮರಿಗಳಿಗೆ ಜನ್ಮ ನೀಡಿದ ಬಳಿಕ ಹೆಣ್ಣು ಬೆಕ್ಕಿನ ಮನೆಯವರು, ಪಕ್ಕದ ಮನೆಯವರೊಂದಿಗೆ ಜಗಳಕ್ಕಿಳಿದಿದ್ದಾರೆ. ಈ ಮರಿಗಳು ಗಂಡು ಬೆಕ್ಕಿನದ್ದೇ ಎಂದು ವಾದಕ್ಕಿಳಿದು ಮರಿಗಳನ್ನು ಗಂಡು ಬೆಕ್ಕಿನ ಮನೆಯ ಮುಂದೆ ಎಸೆದಿದ್ದಾರೆ. ಆ ವೇಳೆ ಗಂಡು ಬೆಕ್ಕಿನ ಕಡೆಯವರು ನಮಗೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಿದ್ದರಿಂದ ಗಲಾಟೆ ನಡೆದಿದೆ.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 14.04.2026 ಸಂಪುಟ: 11 ಸಂಚಿಕೆ: 88 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಹಿಳಾ ಮೀಸಲು ಐತಿಹಾಸಿಕ: ಮೋದಿ

ಮಹಿಳಾ ಮೀಸಲು ಅಂಗೀಕರಿಸಲು ಎರಡು ದಿನಗಳ ವಿಶೇಷ ಅಧಿವೇಶನಕ್ಕೆ ಸಂಸತ್ತು ಸಿದ್ಧವಾಗಿದೆ. ಇದು ಐತಿಹಾಸಿಕ ದಿನವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ನಡೆದ ವಿಶೇಷ ಸಭೆಯಲ್ಲಿ ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

"ಜನರ ಜೀವನ ಮಟ್ಟ ಸುಧಾರಿಸಲು ಶಿಕ್ಷಣವು ಪ್ರಮುಖವಾದ ಅಸ್ತ್ರವಾಗಿದೆ"

-ಡಾ. ಬಿ.ಆರ್. ಅಂಬೇಡ್ಕರ್

135ನೇ ಜನ್ಮದಿನಾಚರಣೆ

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ

ಡಾ. ಬಿ.ಆರ್. ಅಂಬೇಡ್ಕರ್ ರವರ

ಪ್ರತಿಮೆಗೆ ಮಾಲಾರ್ಪಣೆ

ಏಪ್ರಿಲ್ 14, 2026, ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ
ವಿಧಾನಸೌಧದ ಪೂರ್ವ ದ್ವಾರ, ಬೆಂಗಳೂರು

ವೇದಿಕೆ ಕಾರ್ಯಕ್ರಮ

ಏಪ್ರಿಲ್ 14, 2026, ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ
ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ, ಬೆಂಗಳೂರು

``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

@SWDGok

ಮಂಡ್ಯದಲ್ಲಿ ಎಆರ್ಎಐ ಕೇಂದ್ರದ ಜಾಗದ ಕುರಿತು ಸಚಿವ ಎಂಬಿಪಿ ಜತೆ ಸಮಾಲೋಚನೆ

ಮುಂದಿನ ಬಾರಿ ಮೈತ್ರಿ ಸರಕಾರ: ಎಚ್‌ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸಚಿವರಾದ ಬಳಿಕ ಎಚ್.ಡಿ.ಕುಮಾರಸ್ವಾಮಿ ಮೊದಲ ಬಾರಿ ವಿಧಾನಸೌಧಕ್ಕೆ ಆಗಮಿದ್ದ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸಚಿವ ಎಂ.ಬಿ.ಪಾಟೀಲ ಹೂಗುಚ್ಛ ನೀಡಿ ಸ್ವಾಗತಿಸಿದರು.

ಕೇಂದ್ರ ಸಚಿವರಾದ ಬಳಿಕ ಎಚ್.ಡಿ.ಕುಮಾರಸ್ವಾಮಿ ಮೊದಲ ಬಾರಿ ವಿಧಾನಸೌಧಕ್ಕೆ ಆಗಮಿಸಿ ಸಚಿವ ಎಂ.ಬಿ.ಪಾಟೀಲ್ ಅವರೊಂದಿಗೆ ಚರ್ಚೆ ನಡೆಸಿದ್ದಲ್ಲದೆ, 2028ಕ್ಕೆ ರಾಜ್ಯದಲ್ಲಿ ಮೈತ್ರಿ ಸರಕಾರ ಅಧಿಕಾರಕ್ಕೆ ಬರುತ್ತದೆ ಎಂದು ಭವಿಷ್ಯ ನುಡಿದಿದ್ದಾರೆ.

ರಾಜ್ಯ ಸರಕಾರದ ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ್ ಅವರ ಕಚೇರಿಯಲ್ಲಿ ಕೈಗಾರಿಕೆ ಅಭಿವೃದ್ಧಿಯ ಬಗ್ಗೆ ಸಮಾಲೋಚನೆ ನಡೆಸಿದ ಬಳಿಕ ಮುಂದಿನ ಚುನಾವಣೆಯಲ್ಲಿ ಮೈತ್ರಿ ಸರಕಾರ ಅಧಿಕಾರಕ್ಕೆ ಬರಲಿದ್ದು, ವಿಧಾನಸೌಧಕ್ಕೆ ಮತ್ತೆ ಬರುವ ಸಂದರ್ಭ ಸೃಷ್ಟಿಸುವ ಪ್ರಯತ್ನ ನಡೆಸುತ್ತೇವೆ ಎನ್ನುವ ಮೂಲಕ ಕುತೂಹಲ ಮೂಡಿಸಿದ್ದಾರೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಎಚ್.ಡಿ.ಕುಮಾರಸ್ವಾಮಿ, ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಜಾಗ ಹಂಚಿಕೆ ಮಾಡುವ ಬಗ್ಗೆ ಈಗಾಗಲೇ ಹಲವು ವಿಚಾರವನ್ನು ಬಹಿರಂಗವಾಗಿ ಚರ್ಚೆ ಮಾಡಲಾಗಿದೆ. ಅದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕಾಗಿರುವ ಹಿನ್ನೆಲೆಯಲ್ಲಿ ನೀವೇ ಒಂದು ಸಭೆ ಕರೆಯಿರಿ, ನಾನು ಕೂಡ ಬರುತ್ತೇನೆ ಎಂದು ಎಂ.ಬಿ.ಪಾಟೀಲ್ ಅವರಿಗೆ ಹೇಳಿದ್ದೆ. ಅದರಂತೆ ಅವರು ಸಭೆ ಕರೆದಿದ್ದರು ಹಾಗೂ ಆ ಸಭೆಯಲ್ಲಿ ಬಹಳ ಉತ್ತಮ ರೀತಿಯಲ್ಲಿ ಚರ್ಚೆಗಳು ನಡೆದವು. ಸಚಿವರು ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿದರು ಎಂದರು. ಕೇಂದ್ರ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಆಟೋಮೋಟಿವ್ ರಿಸರ್ಚ್ ಇನ್ಸ್ಟಿಟ್ಯೂಟ್ (ಎಆರ್ಎಐ) ಪರೀಕ್ಷಾ ಕೇಂದ್ರವನ್ನು ಮಂಡ್ಯದಲ್ಲಿ ಸ್ಥಾಪಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಅಂತಹ ಕೇಂದ್ರಗಳು ಇಡೀ ರಾಷ್ಟ್ರದಲ್ಲಿ ನಾಲ್ಕು ಕಡೆ ಮಾತ್ರ ಇವೆ. ಐದನೇ ಕೇಂದ್ರವನ್ನು ಕರ್ನಾಟಕಕ್ಕೆ ತರಬೇಕು ಎನ್ನುವುದು ನನ್ನ ಉದ್ದೇಶವಾಗಿದೆ. ಇದು ಅಂತಾರಾಷ್ಟ್ರೀಯ ಮಟ್ಟದ ಟೆಸ್ಟಿಂಗ್ ಕೇಂದ್ರ ಆಗಬೇಕಿದೆ. ಈ ಟೆಸ್ಟಿಂಗ್ ಕೇಂದ್ರದಿಂದ ಆಟೋಮೊಬೈಲ್ ಕ್ಷೇತ್ರಕ್ಕೆ ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಿಕ್ ವಾಹನ ಉದ್ಯಮಕ್ಕೆ ಅತಿ ಹೆಚ್ಚು ಉತ್ತೇಜನ ದೊರೆಯಲಿದೆ. ಈ ಬಗ್ಗೆ ಸಚಿವರೊಂದಿಗೆ ವ್ಯಾಪಕ ನೆಲಗಟ್ಟಿನಲ್ಲಿ ಸಮಾಲೋಚನೆ ನಡೆಸಲಾಯಿತು ಎಂದರು.

ಎಐಎಆರ್ ಕೇಂದ್ರವು ಸೇರಿದಂತೆ ಅದಕ್ಕೆ ಪೂರಕ ವ್ಯವಸ್ಥೆಗಳನ್ನು ನಿರ್ಮಿಸುವ ಉದ್ದೇಶದಿಂದ ಸುಮಾರು 500–600 ಎಕರೆ ಭೂಮಿ ಬೇಕಿದೆ. ಅದು ನನ್ನ ಲೋಕಸಭಾ ಕ್ಷೇತ್ರ ಮಂಡ್ಯದಲ್ಲೇ ಆಗಬೇಕು ಎಂದು ನಿರ್ಧರಿಸಿದ್ದೇನೆ. ಯಾರ ಯಾರ ಹೃದಯದಲ್ಲಿ ಏನೇನಿದೆ ಎನ್ನುವುದು ನನಗೇನು ಗೊತ್ತು? ಮಂಡ್ಯದ ಜನತೆಯ ಋಣ ತೀರಿಸಬೇಕಿದೆ ನಾನು. ಅಷ್ಟೇ ಅಲ್ಲದೆ ಎಂಬಿ ಪಾಟೀಲ್ ಅವರು ಭರವಸೆ ನೀಡಿದಂತೆ ಉತ್ತಮ ಸಹಕಾರ ನೀಡಿದ್ದೆ. ಆದರೆ ರಾಜ್ಯಕ್ಕೆ ಮತ್ತಷ್ಟು ಕೈಗಾರಿಕೆಗಳನ್ನು ತರಬಹುದು. ಈ ಘಟಕಕ್ಕೆ ಈಗಾಗಲೇ ಎರಡು ಮೂರು ಜಾಗ ನೋಡಿದ್ದೇವೆ. ಅಲ್ಲಿ ಲಭ್ಯವಿರುವ ಜಾಗ ಬಹಳ ಸೀಮಿತವಾಗಿದೆ. ಆ ಅಂಶದ ಬಗ್ಗೆಯೂ ರಾಜ್ಯದ ಕೈಗಾರಿಕಾ ಸಚಿವರ ಜತೆ ಚರ್ಚಿಸಲಾಯಿತು. ಕೈಗಾರಿಕಾಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯನ್ನು ಸಮಾನಂತರವಾಗಿ ನಡೆಯಬೇಕು ಎನ್ನುವುದು ನನ್ನ ಉದ್ದೇಶವಾಗಿದೆ. ಏಪ್ರಿಲ್ 30 ತಾರೀಖಿನ ಒಳಗಡೆ ಜಾಗದ ಸಮಸ್ಯೆ ಬಗೆಹರಿಸಿ ಕೊಡುವಂತೆ ಸಚಿವರನ್ನು ಕೋರಿದ್ದೇನೆ. ಏಕೆಂದರೆ ಮೇ ತಿಂಗಳಲ್ಲಿ ಟೆಸ್ಟಿಂಗ್ ಕೇಂದ್ರ ಸ್ಥಾಪನೆಗೆ ಭೂಮಿ ಪೂಜೆ ನೆರವೇರಿಸುವ ಉದ್ದೇಶ ಸಚಿವಾಲಯ ಹೊಂದಿದೆ ಎಂದರು.

ಉದ್ದೇಶಿತ ಟೆಸ್ಟಿಂಗ್ ಕೇಂದ್ರಕ್ಕೆ ಸರಕಾರ 100 ಎಕರೆ ನೀಡುವುದಾಗಿ ತಿಳಿಸಿದೆ. ಆದರೆ, ಇನ್ನು ಹೆಚ್ಚಿನ ಜಾಗ ಕೊಟ್ಟರೆ ಉತ್ತಮ ರೀತಿಯಲ್ಲಿ ಯೋಜನೆ ಅನುಷ್ಠಾನಕ್ಕೆ ತರಬಹುದು. ಈ ಬಗ್ಗೆ ಎಂ.ಬಿ.ಪಾಟೀಲ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಕಾಂಗ್ರೆಸ್ ನಾಯಕರು ನನ್ನ ಸಂಪರ್ಕದಲ್ಲಿ ಇಲ್ಲ

ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದ ಕಾಂಗ್ರೆಸ್ ಪಕ್ಷದ ಒಳಗೆ ಉಂಟಾಗುವ ಉಂಟಾಗಿರುವ ಗೊಂದಲಗಳ ಬಗ್ಗೆ ನಾನೇಕೆ ಉತ್ತರಿಸಲಿ. ಏನಿದು ಅವರ ಪಕ್ಷದ ಆಂತರಿಕ ವಿಚಾರ. ಈವರೆಗೂ ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿರುವ ಯಾವೊಬ್ಬ ಮುಖಂಡರು ನನ್ನ ಸಂಪರ್ಕದಲ್ಲಿ ಇಲ್ಲ. ಒಂದು ವೇಳೆ ಸಂಪರ್ಕಕ್ಕೆ ಬಂದರೆ ನಮ್ಮ ಪಕ್ಷದ ಹಿರಿಯ ನಾಯಕನ ಜೊತೆ ಚರ್ಚಿಸಿ ಸಾಧಕ ಬಾಧಕಗಳನ್ನು ಪರಿಶೀಲಿಸಿ ನಿರ್ಧಾರ ಕೈಗೊಳ್ಳುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು.

ಬಿಹಾರದ ನೂತನ ಸಿಎಂ ಇಂದು ಆಯ್ಕೆ

← ಮೊದಲಪುಟದಿಂದ

ಮಹತ್ವದ ಸರಣಿ ಸಭೆಗಳು: ಶುಕ್ರವಾರವಷ್ಟೇ (ಏ.10) ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಏ.14ರಂದು ರಾಜ್ಯಪಾಲರಾದ ನಿವೃತ್ತ ಲೆ.ಜನರಲ್ ಸಯ್ಯದ್ ಅತಾ ಹಸ್ನೈನ್‌ರಿಗೆ ಸಿಎಂ ಹುದ್ದೆಗೆ ರಾಜೀನಾಮೆ ಸಲ್ಲಿಸಲಿದ್ದಾರೆ. ಅದರ ಬೆನ್ನಲ್ಲೇ ಎರಡು ಪ್ರಮುಖ ಸಭೆಗಳು ನಡೆಯಲಿವೆ.

ಮೊದಲನೆಯದ್ದಾಗಿ, ಬಿಹಾರದಲ್ಲಿ ನಿತೀಶ್ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಬಿಜೆಪಿ ಹೈಕಮಾಂಡ್‌ನಿಂದ ವೀಕ್ಷಕರಾಗಿ ನಿಯುಕ್ತಿಯಾಗಿರುವ ಶಿವರಾಜ್ ಸಿಂಗ್ ಚೌಹಾಣ್ ಅವರು ಈಗಾಗಲೇ ಬಿಹಾರಕ್ಕೆ ಆಗಮಿಸಿದ್ದು, ಏ.14ರಂದು ನಡೆಯಲಿರುವ ಎನ್‌ಡಿಎ ಮಿತ್ರಪಕ್ಷಗಳ ಸಭೆ ನಡೆಸಲಿದ್ದಾರೆ. ಆ ಸಭೆಯ ನಂತರ, ಬಿಹಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಅಲ್ಲಿ ಬಿಜೆಪಿ ಶಾಸಕಾಂಗ ಸಭೆಯ ನಾಯಕರನ್ನು ಆರಿಸಲಾಗುತ್ತದೆ. ಸಾಮ್ರಾಟ್ ಚೌಧರಿಯವರೇ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ವರ್ಷದ ನಂತರ ಈಡೇರಿದ ಬಿಜೆಪಿ ಆಸೆ

2025ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿಯು, ಬಿಜೆಪಿ, ಎಲ್‌ಜೆಪಿ, ಎಚ್‌ಎಎಂ ಹಾಗೂ ಉಪೇಂದ್ರ ಕುಶ್ವಾಹ ಅವರ ಆರ್‌ಎಲ್‌ಪಿ ಪಕ್ಷಗಳು ಸ್ಪರ್ಧಿಸಿ ಅಧಿಕಾರಕ್ಕೆ ಬರುವಲ್ಲಿ ಸಫಲವಾಗಿದ್ದವು. ಚುನಾವಣೆಯಲ್ಲಿ ಜೆಡಿಯು 85 ಸ್ಥಾನ ಗೆದ್ದಿತ್ತು, ಬಿಜೆಪಿ 89 ಸ್ಥಾನ ಗೆದ್ದಿತ್ತು. ಮೈತ್ರಿಕೂಟದಲ್ಲಿ ಹೆಚ್ಚಿನ ಸ್ಥಾನ ಗೆದ್ದವರಿಗೆ ಸಿಎಂ ಹುದ್ದೆ ಎಂಬ ಅಲಿಖಿತ ನಿಯಮವಿದೆ. ಆದರೂ, ನಿತೀಶ್ ಕುಮಾರ್ ಅವರ ವರ್ಚಸ್ಸಿನಿಂದಾಗಿ ಬಿಜೆಪಿಗೆ ಆಗ ಸಿಎಂ ಹುದ್ದೆ ತಪ್ಪಿತ್ತು. ಈಗ ಅದಕ್ಕೆ ಕಾಲ ಕೂಡಿಬಂದಿದೆ.

ಕಾಂಗ್ರೆಸ್ ಶಾಸಕರಿಗೆ ನಾಳೆ ಬಾ ಭರವಸೆ

← ಮೊದಲಪುಟದಿಂದ

ಆದರೆ ಸೋಮವಾರ ಸಮಯಾವಕಾಶ ಸಿಗದೇ ಇದ್ದಿದ್ದರಿಂದ, ಮಂಗಳವಾರ ಈ ಇಬ್ಬರು ನಾಯಕರನ್ನು ಭೇಟಿಯಾಗುವ ಆಲೋಚನೆಯಲ್ಲಿ ಶಾಸಕರಿದ್ದು, ದೆಹಲಿಯಲ್ಲಿಯೇ ಉಳಿದುಕೊಂಡಿದ್ದಾರೆ. ಇದರೊಂದಿಗೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಅವಕಾಶ ಕೇಳುವ ಹಾಗೂ ಅನುಮತಿ ಪಡೆದುಕೊಳ್ಳುವ ಸಾಧ್ಯತೆಗಳಿವೆ.

ಈ ಬಗ್ಗೆ ಮಾತನಾಡಿರುವ ಹಿರಿಯ ಶಾಸಕ ಟಿ.ಬಿ.ಜಯಚಂದ್ರ, ಹೈಕಮಾಂಡ್ ಈ ಮೊದಲು ಎರಡು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಸಂಪುಟ ಪುನಾರಚನೆ ಮತ್ತು ಹೊಸ ಮುಖಗಳನ್ನು ಸೇರಿಸುವುದಾಗಿ ಭರವಸೆ ನೀಡಿತ್ತು ಎಂದು ಶಾಸಕರು ಹೇಳಿಕೊಂಡಿದ್ದಾರೆ. ಈಗ ಸರಕಾರ ರಚನೆಯಾಗಿ ಮೂರು ವರ್ಷಗಳು ಸಮೀಪಿಸುತ್ತಿವೆ. ಇನ್ನೊಂದು ತಿಂಗಳು ಕಳೆದರೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಆದರೆ ಭರವಸೆ ಇನ್ನೂ ಈಡೇರಿಲ್ಲ. ಆದ್ದರಿಂದ ಹೈಕಮಾಂಡ್‌ಗೆ ಭರವಸೆಯನ್ನು ನೆನಪಿಸಲು ಮತ್ತು ತಕ್ಷಣದ ಸಂಪುಟ ಪುನಾರಚನೆಗೆ ಒತ್ತಾಯಿಸಲು ನಾವು ಬಂದಿದ್ದೇವೆ. ವಿಧಾನಸಭಾ ಚುನಾವಣೆಗೆ ಕೇವಲ ಎರಡು ವರ್ಷಗಳು ಬಾಕಿ ಇರುವುದರಿಂದ ಇತರ ಶಾಸಕರು ಸಚಿವರಾಗಿ ಸೇವೆ ಸಲ್ಲಿಸಲು ಅವಕಾಶ ಪಡೆಯುವ ಸಮಯ ಬಂದಿದೆ. ಇದು ಹೊಸ ಮುಖಗಳಿಗೆ ಅವಕಾಶ ಮಾಡಿಕೊಡುತ್ತದೆ. ಮಾತ್ರವಲ್ಲದೇ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಅನಗತ್ಯ ಹೇಳಿಕೆ ನೀಡಿದರೆ ಶಿಸ್ತುಕ್ರಮ: ಡಿಕೆ ಎಚ್ಚರಿಕೆ

ಇನ್ನು ಶಾಸಕರ ದೆಹಲಿ ಪರೇಡ್‌ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದು, ಪಕ್ಷದ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಅನವಶ್ಯಕವಾಗಿ ಏನೇನೋ ಹೇಳಿಕೆ ನೀಡಿದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. 25 ಜನ ಶಾಸಕರು ದೆಹಲಿಗೆ ತೆರಳಿದ್ದಾರೆ. ಪಕ್ಷದ ಶಿಸ್ತನ್ನು ಎಲ್ಲಾ ಶಾಸಕರು ಕಾಪಾಡಬೇಕು. ಪಕ್ಷಕ್ಕೆ ಗೌರವ ನೀಡಬೇಕು. ಮಾಧ್ಯಮಗಳ ಮುಂದೆ ಪಕ್ಷದ ಗೌರವವನ್ನು ಹಾಳು ಮಾಡಬಾರದು. ಮುಖ್ಯಮಂತ್ರಿಗಳೂ ಸಹ ಈಗಾಗಲೇ ಈ ವಿಚಾರದ ಬಗ್ಗೆ ಹೇಳಿದ್ದಾರೆ. ಮುಂದಕ್ಕೆ ಎಲ್ಲರ ಭವಿಷ್ಯ ಪಕ್ಷದಲ್ಲಿದೆಯೇ ಹೊರತು ಮಾಧ್ಯಮಗಳಲ್ಲಿ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಬೆಂಗಳೂರಿನ ನಿವಾಸದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾದ ಡಿ.ಕೆ.ಶಿವಕುಮಾರ್, ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಮತಗಳು ಒಡೆಯುವಂತೆ ಮಾಡಿರುವ ಕಾಂಗ್ರೆಸ್ ನಾಯಕರ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪರೋಕ್ಷವಾಗಿ ಹೇಳಿರುವ ವಿಷಯವೂ ಚರ್ಚೆಗೆ ಬಂದಿದ್ದು, ಚುನಾವಣೆಯ ಬಳಿಕ ಕ್ರಮವಹಿಸುವ ಚರ್ಚೆಗಳು ನಡೆದಿವೆ ಎನ್ನಲಾಗಿದೆ. ಈ ಬಗ್ಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಪಕ್ಷದಿಂದ ತಮಿಳುನಾಡಿಗೆ ತೆರಳುವಂತೆ ಸೂಚನೆ ನೀಡಿದ್ದರು. ಅಲ್ಲಿಗೆ ಹೋಗಿ ಬಂದಿದ್ದೇನೆ. ಮತ್ತೆ ತೆರಳಬೇಕಾಗಿದೆ. ಆ ಬಗ್ಗೆ ಎಐಸಿಸಿ ಅಧ್ಯಕ್ಷರಿಗೆ ವರದಿ ನೀಡಬೇಕಿತ್ತು ಹಾಗೂ ರಾಜ್ಯ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ, ವರದಿ ಸಲ್ಲಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ಮಡಕೇರಿ
ದೂರವಾಣಿ: 08272–228328 Email:dcfsfmdk@rediffmail.com
ಸಂಖ್ಯೆ: ಬಿಜೆಟಿ/ಸ.ಅ.ಸಂ/ಸಾ.ಅ/ಟೆಂಡರ್–2/2026–27 ದಿನಾಂಕ: 13/04/2026
ಟೆಂಡರ್ ಪ್ರಕಟಣೆ
2026–27 ನೇ ಸಾಲಿನಲ್ಲಿ ಈ ವಿಭಾಗದ ಮೂರು ಸಸ್ಯಕ್ಷೇತ್ರಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಸರ್ಕಾರಿ ಜಮೀನು/ಸಂಸ್ಥೆ /ಶಾಲಾ ಕಾಲೇಜ್ ನೆಡುತೋಪು ಪೋಷಣೆ ಮತ್ತು ಸಸಿಗಳ ಪೋಷಣೆ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಮೊದಲನೇಯ ಟೆಂಡರ್ ದಿನಾಂಕ 27–04–2026 ಎರಡನೇಯ ಟೆಂಡರ್ ದಿನಾಂಕ 04–05–2026 ಆಗಿರುತ್ತದೆ.
ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಾಮಾಜಿಕ ಅರಣ್ಯ ವಿಭಾಗ, ಮಡಿಕೇರಿ ಅರಣ್ಯ ಭವನದ, ಕೆಳ ಮಹಡಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ. (ಕಛೇರಿ ದೂರವಾಣಿ ಸಂಖ್ಯೆ: 08272–228328)
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ವಿಭಾಗ
ಮಡಿಕೇರಿ

ನೆಫ್ರೋ-ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂ. ಸಂ.1052/03-04)
(ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಉನ್ನತ ವೈದ್ಯಕೀಯ ವಿಜ್ಞಾನಗಳ ಸ್ನಾತಕೋತ್ತರ ಸಂಸ್ಥೆ, ಭಾರತದ ವೈದ್ಯಕೀಯ ಮಂಡಳಿಯಿಂದ ಗುರುತಿಸಲ್ಪಟ್ಟಿದೆ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002. ದೂ: 26700527
ಫ್ಯಾಕ್ಸ್: 26706777, ಇ–ಮೇಲ್ : nephrourology.institute@gmail.com
ವೆಬ್‌ಸೈಟ್: www.nephrourology.in
ಸಂಖ್ಯೆ: INU/ADMN/PROC/110/2026 ದಿನಾಂಕ: 13.04.2026
ಟೆಂಡರ್ ಪ್ರಕಟಣೆ
ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002 ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1. Procurement of Medical Equipments for Nephrology Department.
2. Procurement of Medical Equipments for Urology Department.
Last date for Online submission of Tender is 27.04.2026 at 5.30 p.m.
ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು.
ಸೂಚನೆ:– ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **www.nephrourology.in** ದಲ್ಲಿ ವೀಕ್ಷಿಸಬಹುದು.
ಸಹಿ/– ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು

ಕರ್ನಾಟಕ ಸರಕಾರ
ಲೋಕೋಪಯೋಗಿ ಇಲಾಖೆ, ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ
ಬೆಳಗಾವಿ ವಿಭಾಗ, ಬೆಳಗಾವಿ–590 016.
Phone No.: 0831-2467103 E-Mail: eepwdbgm01@gmail.com
ಕ್ರಸಂ: ಕಾ.ನಿ.ಇಂ/ಲೋಇ/ಬೆವಿ/ತಾಸ/ಟೆಂಡರ್/ನೋಟಿಫಿಕೇಶನ್/2026–27/250
ದಿನಾಂಕ: 13–04–2026
ಟೆಂಡರ್ ಅಧಿಸೂಚನೆ (ಕೆ.ಪಿ.ಪಿ.ಪಿ. ನಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಟ್ **ಕೆಡಬ್ಲ್ಯೂ–4** ರಲ್ಲಿ 01 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು **ರೂ. 4067.70 ಲಕ್ಷಗಳು** ಇದ್ದು, ಮುಂಗಡ ಮೊತ್ತವು **ರೂ. 40.67ಲಕ್ಷಗಳು** ಇರುತ್ತದೆ. ಟೆಂಡರ್‌ನ್ನು ಸ್ವೀಕರಿಸುವ ಕೊನೆಯ **ದಿನಾಂಕ 20–05–2026 ರ ಸಂಜೆ 4.30 ಗಂಟೆಯವರೆಗೆ,** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 21–05–2026 ರ ಸಂಜೆ 4.45 ಗಂಟೆ ನಂತರ.** ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ **ದಿನಾಂಕ: 20–04–2026 ರ ನಂತರ** ಪಡೆಯಬಹುದು. (ಒಂದು ವೇಳೆ ಬೀಡ್ ಸ್ವೀಕೃತವಾಗದಿದಲ್ಲಿ 7 ದಿನಗಳ ಸ್ವಯಂ ಚಾಲೀತ ಸಕ್ರೀಯಗೊಳಿಸಲಾಗಿದೆ).
ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/92/2026–27/ದೇಶಪಾಂಡೆಪಬ್ಲಿಸಿಟಿ

ಪುರಸಭಾ ಕಾರ್ಯಾಲಯ ಚಂದಾಪುರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560081
ಫೋನ್: 080–27832411, E-Mail: ka.chandapura.tmc@gmail.com
ಸಂ:ಚಂ.ಪು.ಕಾ/ತಾ.ಶಾ/ಕೆಪಿಪಿಪಿ/ಟೆಂ/01/2026–27 ದಿನಾಂಕ:13.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳನ್ವಯ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಗಳನ್ವಯ, ಎಸ್.ಎಫ್.ಸಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಉಳಿಕೆ ಮೊತ್ತದ ನಿಧಿಯಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇಲಾಖಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ವಿವರಗಳನ್ನು ಪಡೆದು ಭಾಗವಹಿಸಬಹುದು. (As Per Government order No.FD 4 PCL 2008, Bangalore, dated:14.10.2008 and Government Order No. FD 876 Exp-12/2017, Bangalore, dated: 10/10/2027 and A&B Value Considered Upto 2024-25)

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2026-27/RD/WORK_INDENT57271	1.12
2	DMA/2026-27/RD/WORK_INDENT57274	2.69

ವೇಳಾಪಟ್ಟಿ: 1) ಕೆಪಿಪಿಪಿ ಪೋರ್ಟಲ್ ಮೂಲಕ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ:21.04.2026 ಸಂಜೆ 5:00 ಗಂಟೆಯವರೆಗೆ. 2)** ಸ್ವೀಕೃತವಾದ ಟೆಂಡನ್ನು ತೆರೆಯುವ **ದಿನಾಂಕ ಮತ್ತು ಸಮಯ:22.04.2026 ರಂದು ಸಂಜೆ 5:30 ಗಂಟೆಗೆ. 3)** ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಕಿರಿಯ ಅಭಿಯಂತರರಿಂದ ಅಥವಾ ದೂರವಾಣಿ ಸಂಖ್ಯೆ:080–27832411 ರಲ್ಲಿ ಮಾಹಿತಿ ಪಡೆಯಬಹುದು.
ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಚಂದಾಪುರ
ವಾಸಾಸಂಇ/ವಾಪ್ರ/ಜಿಎ/166/2026–27

GOVERNMENT OF KARNATAKA
Principal, Survey Settlement Training Institute, Hadajana Mysuru -571311
No. SSTI-ADMN/01/2026 # E-1142632 Dated: 01.04.2026
TENDER NOTIFICATION
For Providing Manpower Services for Principal, Survey Settlement Training Institute, Hadajana Mysuru -571311 **Tender Reference** SSTI-ADM-E-1142632/2026 **Commencement of issue of Bid document through Karnataka Public Procurement Portal (KPPP) of Government of Karnataka:** 07.04.2026 **Pre bid Meeting:** 15.04.2026 04.00 PM. **Last date and time for uploading of tender in e-Procurement platform:** 23.04.2026, 05.30 PM. **Time and date of opening of tenders: Technical Bid**: 27.04.2026 11:00 AM. **Time and date of opening of tenders: FINANCIAL BID:** On or after 28.04.2026, After Technical Bid approval financial bid will be intimated to the Bidders. **Contact Person for queries:** Shri MALLIK KUMAR M, SUPERINTENDENT(ADM), SURVEY SETTLEMENT AND TRAINING INSTITUTE MYSORE 571311 Telephone-08212500530 E-Mail: mysoreprincipalssti@gmail.com **Method of Submission of Proposals:** https://kppp.karnataka. gov.in/ **Place of Pre-Bid meeting. And Opening of Tenders and Address for communication:** SURVEY SETTLEMENT AND TRAINING INSTITUTE MYSORE 571311
EMD Amount: 2,50,000-00
Note: Completed tender shall be uploaded through e-Procurement system only in the manner described under instructions to Tenders Section of tender Documents on or before the last date & time stipulated.
DIPR/DDMYS/43/KSMCA/39/2026-27 **Sd/- PRINCIPAL**

ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ
ಸಾಮಾಜಿಕ ಅರಣ್ಯ ಉಪ ವಿಭಾಗ ಜಮಖಂಡಿ
Office of the, Assistant Conservator of Forests
Social Forestry Sub-Division Jamakhandi
ಕ್ರಸಂ:ಸಅಸಂ/ಸಾಅಜಉವಿ/ಹೊವಾ/ಸಿಆರ್–02/2026–27 ದಿನಾಂಕ:10–04–2026
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಪೋರ್ಟಲ್ 2.0 ಮೂಲಕ ಮಾತ್ರ)
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026–27ನೇ ಸಾಲಿನಲ್ಲಿ ಜಮಖಂಡಿ ಸಾಮಾಜಿಕ ಅರಣ್ಯ ಉಪ ವಿಭಾಗ ಹಾಗೂ ವಲಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸಲು ಗಣಕಯಂತ್ರ ಸಹಾಯಕರು, ಹಾಗೂ ವಾಹನ ಚಾಲಕರುಗಳನ್ನು ಪೂರೈಸಲು ಅರ್ಹ ಗುತ್ತಿಗೆದಾರರಿಗೆ ಮಾತ್ರ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಪೋರ್ಟಲ್ 2.0 ಪೋರ್ಟಲ್ (https://kppp.karnataka.gov.in) ಮೂಲಕ Indent No KFD/2025-26/SE1635 ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ	04–05–2026 ಬೆಳಿಗ್ಗೆ 10:00 ಘಂಟೆಗೆ
ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	05–05–2026 ಬೆಳಿಗ್ಗೆ 10:00 ಘಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	06–05–2026 ಬೆಳಿಗ್ಗೆ 10:00 ಘಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	07–05–2026 ಬೆಳಿಗ್ಗೆ 10:00 ಘಂಟೆಗೆ
ಇ.ಎಂ.ಡಿ ಮೊತ್ತ	2.5%

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಜಮಖಂಡಿ.
DIPR/BGK/RO-NO-04/KSMCA/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2026–27/65 ದಿನಾಂಕ :08/04/2026
ಇ –ಪ್ರೋಕ್ಯೂರಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿ–ಲಕೋಟೆ ಪದ್ಧತಿಯಲ್ಲಿ
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : 1. Development of Sri Kattimani Sanstanmath Hiremeth Sukshetra Halkatti at Halkatta Village in Taluka, 2. Development work of Kambaleshwar Math at Chittapur town in Chittapur taluka, 3. Development work of Sri.Bhojalingeshwar Math at Sugur(N) village in Chittapur Taluka, 4. Development work of Sri.Siddalingeshwar Math at Pethasiroor Village in Chittapur Taluka, 5. Development work of Siddalingeshwar Kattimani Hiremath at Mugulnagaon Village in Chittapur Taluka, Construction of warehouse to store pottery scraps in Melkunda K village of Kalaburagi South Assembly constituency in Kalaburagi Taluka and Construction Public toilet at Buddha Nagar of Tarfil colony in Kalaburagi Taluka, 2) **ಲೆಕ್ಕ ಶೀರ್ಷಿಕೆ : ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ,** 3) **ಟೆಂಡರಿಗಿಟ್ಟ ಅಂದಾಜು ಮೊತ್ತ : ಕನಿಷ್ಠ Rs.67,20,681.41 ಗರಿಷ್ಠ : Rs.1,27,00,300.38,** 4) **ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಮತ್ತು ಮೇಲ್ಪಟ್ಟು,** 5) **ಟೆಂಡರ ಫಾರಂ ಪಡೆಯುವ ದಿನಾಂಕ : 09.04.2026 ರಿಂದ 23.04.2026 ಸಾಯಂಕಾಲ 4:00 ಗಂಟೆವರೆಗೆ** 6) **ಟೆಂಡರ ಅರ್ಜಿ ಬೆಲೆ : ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ** 7) ಇ.ಎಂ.ಡಿ. **ಕನಿಷ್ಠ : Rs.55,500.00, ಗರಿಷ್ಠ Rs.6,15,500.00** 8) **ಟೆಂಡರ ಸಲ್ಲಿಸುವ ದಿನಾಂಕ : 09.04.2026 ರಿಂದ 23.04.2026 ಸಾಯಂಕಾಲ 4:00 ಗಂಟೆವರೆಗೆ** 9) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.04.2026 ಸಾಯಂಕಾಲ 4:00 ಗಂಟೆ ನಂತರ,** 10) **ಆರ್ಥಿಕ ಬಿಡ್‌ತೆರೆಯುವ ದಿನಾಂಕ : 27.04.2026 ಬೆಳಿಗ್ಗೆ 11:00 ಗಂಟೆ ನಂತರ,** 11) **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ಕುಸನೂರ ರಸ್ತೆ ರಾಜಾಪೂರ ಕಲಬುರಗಿ** 12) **ಅಂತರಜಾಲ ತಾಣದ ವಿಳಾಸ** www.kppp.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/32/ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ (ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523
ಸಂ:ಕಿಮ್ಸ್/ಕೊಪ್ಪಳ/ಟೆಂಡರ್/2026–27/46 **ದಿನಾಂಕ: 13/04/2026**
:: ಟೆಂಡರ್ ಅಧಿಸೂಚನೆ ::
ಕಿಮ್ಸ್ ಕೊಪ್ಪಳ ಸಂಸ್ಥೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣ/ಸಾಮಾಗ್ರಿಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆ 1999–2000 ರ ಅನ್ವಯ ಕರ್ನಾಟಕ ಸರ್ಕಾರಧ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: 1.ಕಿಮ್ಸ್/ಕೊಪ್ಪಳ/ತು.ಚಿ.ವಿ/2026–27 ದಿನಾಂಕ:13/04/2026
ವಿವರ: ಕಿಮ್ಸ್ ಕೊಪ್ಪಳ ಸಂಸ್ಥೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣ/ಸಾಮಾಗ್ರಿಗಳನ್ನು ಇ–ಟೆಂಡರ್ ಮೂಲಕ ಖರೀದಿಸಿ ಪೂರೈಸಿಕೊಳ್ಳುವ ಕುರಿತು. **ಟೆಂಡರ್ ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ):** 100.02
ಇ.ಎಂ.ಡಿ ರೂ.: ರೂ. 1,50,000/–
1. ಟೆಂಡರ್‌ಗಳನ್ನು ದಿನಾಂಕ: **15/04/2026** ಸಾಯಂಕಾಲ 5.30 ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14/05/2026** ಸಾಯಂಕಾಲ 05:30 ಗಂಟೆ ವರೆಗೆ. 3. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **16/05/2026** ಬೆಳಿಗ್ಗೆ 11:30 ಗಂಟೆಗೆ 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: **20/05/2026** ಬೆಳಿಗ್ಗೆ 11.30 ಗಂಟೆಗೆ
ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http//www.kimskoppal.kar.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/22/ಕೆಎಸ್‌ಎಂಸಿಎ/2026–27

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ
ದೂರವಾಣಿ ಮತ್ತು ಪ್ಯಾಕ್ಸ್ ಸಂಖ್ಯೆ:08175–273229 **email: tstaff_ulb_holenarasipur@yahoo.co.in**
ನಂ:ಪುಸಹೊನಪು/ಆ.ಶಾ/15ನೇ.ಹ/ಎಸ್.ಡಬ್ಲ್ಯೂ.ಎಂ/2026–27 ದಿನಾಂಕ: 10.04.2026
:: ಟೆಂಡರ್ ಪ್ರಕಟಣೆ :: (ಕೆಪಿಪಿಪಿ ಮುಖಾಂತರ)
ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ 15ನೇ ಹಣಕಾಸು ಮತ್ತು ಪುರಸಭಾ ಅನುದಾನದಡಿ ಈ ಕೆಳಕಂಡ ಯಂತ್ರೋಪಕರಣ/ವಾಹನ/ಸೇವೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು ತಮ್ಮ ದರಗಳನ್ನು ಇ–ಪ್ರಕ್ಯೂರ್‌ಮೆಂಟ್ https://kppp.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿರುತ್ತದೆ. ಕ್ರ.ಸಂ.ಕಾಮಗಾರಿಯ ವಿವರ: 1)ಹೊಳೆನರಸೀಪುರ ಪುರಸಭೆಗೆ ಅವಶ್ಯವಿರುವ ಸೆಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರ ಖರೀದಿಸುವುದು. Indent No: DMA/2025-26/IND5801/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)55.00 ಇಎಂಡಿ ಮೊತ್ತ (ರೂ.ಗಳಲ್ಲಿ)137500–00 2)ಹೊಳೆನರಸೀಪುರ ಪುರಸಭಾ ಕಛೇರಿ ಕೆಲಸ ಕಾರ್ಯಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ 2 (ಇಬ್ಬರು) ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. Indent No: DMA/2025-26/SE7215/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)5.98 ಇಎಂಡಿ ಮೊತ್ತ (ರೂ.ಗಳಲ್ಲಿ)15000–00 3)ಹೊಳೆನರಸೀಪುರ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಇತರೆ ಸ್ವಚ್ಛತಾ ಸಿಬ್ಬಂದಿಗಳು ಮತ್ತು ಒಳಚರಂಡಿ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವ ವಾರ್ಷಿಕ ಟೆಂಡರ್ Indent No: DMA/2025-26/SE7340/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)14.50 ಇಎಂಡಿ ಮೊತ್ತ (ರೂ.ಗಳಲ್ಲಿ)36250–00 4)ಹೊಳೆನರಸೀಪುರ ಪುರಸಭೆಗೆ ಅವಶ್ಯವಿರುವ 2 ಸಂಖ್ಯೆಯ ಆಟೋ ಟಿಪ್ಪರ್ ವಾಹನಗಳನ್ನು ಖರೀದಿಸುವುದು. Indent No: DMA/2026-27/IND6180 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)19.93 ಇಎಂಡಿ ಮೊತ್ತ (ರೂ.ಗಳಲ್ಲಿ)50000–00 ಕೆಪಿಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.04.2026 ಸಂಜೆ 5.30 ಗಂಟೆಗೆ, ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 21.04.2026 ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 23.04.2026 ಬೆಳಿಗ್ಗೆ: 11.00 ಗಂಟೆಗೆ * ಕೆಪಿಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2026 ಸಂಜೆ 5.30 ಗಂಟೆಗೆ, ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 29.04.2026 ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 02.05.2026 ಬೆಳಿಗ್ಗೆ: 11.00 ಗಂಟೆಗೆ
ಸಹಿ/–ಮಾನ್ಯ ಆಡಳಿತಾಧಿಕಾರಿಗಳು, (ಪುರಸಭೆ ಹೊಳೆನರಸೀಪುರ) ಹಾಸನ ಉಪವಿಭಾಗ, ಹಾಸನ.
ಸಹಿ/– ಮುಖ್ಯಾಧಿಕಾರಿ. ಪುರಸಭೆ, ಹೊಳೆನರಸೀಪುರ
ವಾಸಾಸಂಇ/ಹಿಸನಿ/ಹಾಸನ/33/ಕೆಎಸ್‌ಎಂಸಿಎ/2026–27

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯಪುರ.
ದೂರವಾಣಿ ಸಂಖ್ಯೆ: 08352–250107 ಫ್ಯಾಕ್ಸ್: 08352–258038
ಇ–ಮೇಲ್: dhobijapur@gmail.com
ಸಂಖ್ಯೆ: ಜಿಆಕುಕ/ಹೂ.ಗು/ಕರೆ–02/2026–27 ದಿನಾಂಕ:09.04.2026
ಇ–ಟೆಂಡರ್ ಪ್ರಕಟಣೆ
2026–27 ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆಯ ಅಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯಕ್ರಮ ಸಹಾಯಕರು, ಲೆಕ್ಕ ಪತ್ರ ಸಹಾಯಕರು, ಗಣಕಯಂತ್ರ ಸಹಾಯಕರು, ಎಲ್.ಡಿ.ಸಿ. ಗ್ರುಪ್ ಡಿ, ವಾಹನ ಚಾಲಕರು, ಸ್ವಚ್ಛತಾ ಸಿಬ್ಬಂದಿಗಳ, ಆಡಳಿತ ಸಹಾಯಕರು, ಆಸ್ಪತ್ರೆ ಸಹಾಯಕರು, ಮಲ್ಟಿ ಟಾಸ್ಕ ವರ್ಕರ್, ರೆಕಾರ್ಡ ಕೀಪರ್, ಎಮ್.ಐ.ಎಸ್ ಐ.ಟಿ ಹುದ್ದೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಂಸ್ಥೆಗಳಿಂದ ಮಾನವ ಸಂಪನ್ಮೂಲ ಸೇವೆ ಒದಗಿಸಲು/ಪಡೆಯಲು ಇ–ಟೆಂಡರ್ ಕರೆಯಲಾಗಿದೆ.
* ಇ–ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ: 10.04.2026
* ಇ–ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 18.04.2026 ಸಾಯಂಕಾಲ 5.00 ಗಂಟೆವರೆಗೆ.
* ತಾಂತ್ರಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ: 21.04.2026 ಮಧ್ಯಾಹ್ನ 1.30 ಗಂಟೆಗೆ.
* ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.04.2026 ಬೆಳಿಗ್ಗೆ 11.00 ಗಂಟೆಗೆ (ಬದಲಾವಣೆಗೊಳಪಟ್ಟಿರುತ್ತದೆ.)
ಹೆಚ್ಚಿನ ವಿವರಗಳಿಗಾಗಿ ಮೇಲ್ಕಾಣಿಸಿದ ಕಛೇರಿಗೆ ಸಂಪರ್ಕಿಸುವುದು. ಆಸಕ್ತಿಯುಳ್ಳ ಬಿಡ್‌ದಾರರು ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.
ಸಹಿ/– ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸಂಘ ವಿಜಯಪುರ
ವಾಸಾಸಂಇ/ವಿಜಯಪುರ/19/ಕೆಎಸ್‌ಎಂಸಿಎ/2026–27

ಸಮಾಚಾರ ಸಣ್ಣದಲ್ಲ

ಬಾಣಂತಿ, ಮಗು ಸಾವು: ಬಿಮ್ಸ್ ವಿರುದ್ಧ ಆಕ್ರೋಶ

ಬೆಳಗಾವಿ: ಬಿಮ್ಸ್ ವೈದ್ಯರ ನಿರ್ಲಕ್ಷ್ಯಕ್ಕೆ ಬಾಣಂತಿ ಹಾಗೂ ಮಗು ಸಾವನ್ನಪ್ಪಿರುವ ಆರೋಪ ಕೇಳಿ ಬಂದಿದೆ. ಬೆಳಗಾವಿ ಜಿಲ್ಲೆಯ ತುರಮರಿ ಗ್ರಾಮದ ಬಾಣಂತಿ 21 ವರ್ಷದ ಈರಮ್ಮ ಶಿಗೀಹಳ್ಳಿ ಏಪ್ರಿಲ್

10 ರಂದು ಮಧ್ಯಾಹ್ನ 12 ಗಂಟೆಗೆ ಬೀಮ್ಸ್ ಆಸ್ಪತ್ರೆಗೆ ದಾಖಲಾ ಗಿದ್ದರು ಎನ್ನಲಾಗಿದೆ. ಆಸ್ಪತ್ರೆಗೆ ದಾಖಲಾದಾಗಿನಿಂದ ಇಲ್ಲಿಯವರೆಗೆ ಸರಿಯಾಗಿ ಚಿಕಿತ್ಸೆ ನೀಡಿಲ್ಲ ಎಂದು ಕುಟುಂಬಸ್ಥರು ಆಕ್ರೋಶ ಹೊರಹಾಕಿದ್ದಾರೆ. ವೈದ್ಯರು ಸರಿಯಾಗಿ ಚಿಕಿತ್ಸೆ ನೀಡಿಲ್ಲ ಎಂದು ಕುಟುಂಬಸ್ಥರ ಆಕ್ರೋಶ ವ್ಯಕ್ತಪಡಿ ಸಿದ್ದು, ಮಧ್ಯ ರಾತ್ರಿ 1.30ಕ್ಕೆ ಬಾಣಂತಿ ಹಾಗೂ ಆಕೆಯ ಹೊಟ್ಟೆಯಲಿದ್ದ ನವಜಾತ ಹೆಣ್ಣು ಶಿಶು ಸಾವನ್ನಪ್ಪಿದೆ. ಹೀಗಾಗಿ ಬಾಣಂತಿ ಹಾಗೂ ಮಗು ವಿನ ಸಾವಿಗೆ ನ್ಯಾಯಕೊಡಿ ಎಂದು ಕುಟುಂಬಸ್ಥರು ಕಣ್ಣೀರು ಹಾಕಿದ್ದಾರೆ. ಬಿಮ್ಸ್ ಆಸ್ಪತ್ರೆಗೆ ಎಪಿಸಿಎಂಸಿ ಸಿಪಿಐ ಉಸ್ಮಾನ ಆವಟಿ, ಪಿಎಸ್‌ಐ ಸರ್ದಾರ್ ಮುತ್ತಿತರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಎಪಿಎಂಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕಾಂಗ್ರೆಸ್ ಕಾರ್ಯಕರ್ತನ ಕೊಲೆ: 9 ಮಂದಿ ಬಂಧನ

ಧಾರವಾಡ: ಕಾಂಗ್ರೆಸ್ ಯುವ ನಾಯಕ

ಫೈರೋಜ್ ಪಠಾಣ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆಗೆ ವೈಯಕ್ತಿಕ ದ್ವೇಷವೇ ಪ್ರಮುಖ ಕಾರಣವಾಗಿದೆ. ಪ್ರಕರಣ ಸಂಬಂಧ 9 ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಅವರು, 9 ಜನರನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಹೆಚ್ಚುವರಿ ತನಿಖೆಗಾಗಿ ಕಸ್ಟಡಿಗೆ ಪಡೆದಿದ್ದೇವೆ. ಕೊಲೆಗೆ ಬಳಸಿದ ಎರಡು ಬೈಕ್ ಹಾಗೂ ಒಂದು ಕಾರ್ ವಶಕ್ಕೆ ಪಡೆಯಲಾಗಿದೆ. ಕೊಲೆಗೆ ಸಂಬಂಧಿಸಿದಂತೆ ಮೊಹಮ್ಮದ್ ಷಾ, ಸೈಯದ್ ಗೌಸ್ ಜಾನಿಷಾ, ಫರವೇಜ್ ಆಲಂ ಮಹಲ್ದಾರ, ಸಮೀರ್ ಅಹ್ಮದ್ ಮಕಾಂದಾರ್, ಸದ್ದಾಂಹುಸೇನ್ ನವಲಗುಂದ, ಖೈಫ್ ರೆಹಮಾನ್‌ಬಾಯಿ, ಅರಬಾಜ್ ಹಂಚಿನಾಳ, ಸೋಹಿಲ್‌ಖಾನ್ ಹಾಲಭಾವಿ ಹಾಗೂ ಮಕ್ತುಂ ಸೊಗಲದ ಎಂಬುವವರನ್ನು ಬಂಧಿಸಲಾಗಿದೆ ಎಂದರು.

ಸುಟ್ಟ ಸ್ಥಿತಿಯಲ್ಲಿ ಇಬ್ಬರ ಮೃತದೇಹಗಳು ಪತ್ತೆ

ಕೊಪ್ಪಳ: ಜಿಲ್ಲೆಯಲ್ಲಿ ಕುಕನೂರು ತಾಲೂಕಿನ ಮಸಬ ಹಂಚಿನಾಳ ಗ್ರಾಮದ ಹೊರವಲಯದಲ್ಲಿ ಪೈಪ್‌ಲೈನ್ ಕಾಮಗಾರಿಗಾಗಿ ಅಗೆದ ಗುಂಡಿಯಲ್ಲಿ ಸೋಮವಾರ ಇಬ್ಬರು ಯುವಕರ ಮೃತದೇಹಗಳು ಪತ್ತೆಯಾಗಿದ್ದು, ಪ್ರಕರಣವು ಹಲವು ಅನುಮಾನಗಳಿಗೆ ಕಾರಣವಾಗಿದೆ. ಮೃತರನ್ನು 23 ವರ್ಷದ ರುದ್ರೇಶ್ ಗಂಗಾವತಿ ಮತ್ತು 32 ವರ್ಷದ ರವಿ ರಾಮಣ್ಣ ತಟ್ಟಿ ಎಂದು ಗುರುತಿಸಲಾಗಿದೆ. ಇವರಿಬ್ಬರೂ ಒಂದೇ ಗ್ರಾಮದ ನಿವಾಸಿಗಳಾಗಿದ್ದು, ಸ್ನೇಹಿತರಾಗಿದ್ದರೆಂದು ತಿಳಿದುಬಂದಿದೆ. ಕಳೆದ ಕೆಲವು ವರ್ಷಗಳಿಂದ ಕೋಳಿ ಫಾರಂನಲ್ಲಿ ಕೆಲಸ ಮಾಡುತ್ತಿದ್ದು, ಕುಟುಂಬದ ಆಧಾರಸ್ತಂಭರಾಗಿದ್ದರು. ನಾಲ್ಕೈದು ದಿನಗಳ ಹಿಂದೆ ಕೆಲಸಕ್ಕೆ ಎಂದು ಮನೆಯಿಂದ ತೆರಳಿದ್ದರು. ಇದೀಗ ಶವವಾಗಿ ಪತ್ತೆಯಾಗಿದ್ದಾರೆ. ಘಟನಾ ಸ್ಥಳದಲ್ಲಿ ಮೃತದೇಹಗಳು ಸುಟ್ಟ ಸ್ಥಿತಿಯಲ್ಲಿ ಕಂಡುಬಂದಿದ್ದು, ಪಕ್ಕದಲ್ಲೇ ಎಣ್ಣೆ ಪ್ಯಾಕೆಟ್‌ಗಳು ಹಾಗೂ ತುಂಡಾದ ಚಪ್ಪಲಿಗಳು ಪತ್ತೆಯಾಗಿವೆ. ಇದರಿಂದ ಶವಗಳಿಗೆ ಬೆಂಕಿ ಹಚ್ಚಲಾಗಿದೆಯೇ ಎಂಬ ಅನುಮಾನವೂ ವ್ಯಕ್ತವಾಗಿದೆ. ಮೃತರ ಬೈಕ್ ಘಟನೆ ನಡೆದ ಸ್ಥಳದಿಂದ ಬೇರೆಡೆ ಪತ್ತೆಯಾಗಿದ್ದು, ಅದಕ್ಕೆ ಹೆಚ್ಚಿನ ಹಾನಿ ಕಂಡು ಬಂದಿಲ್ಲ. ಘಟನೆ ತಿಳಿದ ತಕ್ಷಣ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್‌ಅರಸಿದ್ದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಶ್ವವಾಣಿ ಕ್ಲಬ್ ಹೌಸ್
14.04.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಡಾ. ಶ್ರೀನಿವಾಸ್ ಪ್ರಸಾದ್
ವಿಷಯ
ಕನ್ನಡ ಚಲನಚಿತ್ರ ಸಾಹಿತ್ಯ
vishwavani.news

ದಿನ ವಿಶೇಷ

14 ಏಪ್ರಿಲ್ 2026 ಮಂಗಳವಾರ

» ಸೂರ್ಯೋದಯ	: 6-08
» ಸೂರ್ಯಾಸ್ತ	: 6-46
» ತಿಥಿ	: ದ್ವಾದಶಿ
» ನಕ್ಷತ್ರ	: ಶತಭಿಷ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ಶ್ವಾಸಗುರು ವಿರುದ್ಧ ಅವಿಶ್ವಾಸ ನಿರ್ಣಯ

ಪಂಚಮಸಾಲಿ ಪೀಠದಿಂದ ವಚನಾನಂದ ಶ್ರೀ ಪದಚ್ಯುತಿ | ಧರ್ಮದರ್ಶಿಗಳ ವಿರುದ್ಧ ಲೆಕ್ಕಕೊಡಿ ಚಳವಳಿ

ಶ್ರೀಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿ, ಪೊಲೀಸರೊಂದಿಗೆ ಭಕ್ತರ ವಾಗ್ವಾದ, ದಿನವಿಡೀ ಹೈಡ್ರಾಮಾ

ಪೊಲೀಸರೊಂದಿಗೆ ವಚನಾನಂದ ಶ್ರೀ ವಾಗ್ವಾದ.

ವಚನಾನಂದ ಸ್ವಾಮೀಜಿಗಳನ್ನು ಪೀಠದಿಂದ ಪದಚ್ಯುತಿಗೊಳಿಸಲಾಗಿದೆ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದ ಧರ್ಮದರ್ಶಿಗಳು.

ದಾವಣಗೆರೆ: ಹರಿಹರದ ಹೊರವಲಯದಲ್ಲಿರುವ ಪಂಚಮಸಾಲಿ ಹರಪೀಠದ ಟ್ರಸ್ಟಿಗಳು, ಶ್ರೀಗಳು ಹಾಗೂ ಮಠದ ಭಕ್ತರ ನಡುವಿನ ಗೊಂದಲ ತಾರಕಕ್ಕೇರಿದ್ದು, ಇತ್ತ ಮಠದ ಭಕ್ತರು ಟ್ರಸ್ಟಿಗಳ ವಿರುದ್ಧ ಲೆಕ್ಕಕೊಡಿ ಚಳವಳಿ ಆರಂಭಿಸಿದ್ದರೆ, ಅತ್ತ ಟ್ರಸ್ಟಿಗಳು ಮಠದ ಜಗದ್ಗುರು ವಚನಾನಂದ ಶ್ರೀಗಳನ್ನೇ ಪದಚ್ಯುತಿಗೊಳಿಸಿದ್ದಾರೆ. ಗುರುಪೀಠದಲ್ಲಿ ಸೋಮವಾರ ನಡೆದ 12 ಧರ್ಮದರ್ಶಿಗಳ ಸಭೆಯಲ್ಲಿ ಹರಿಹರ ವೀರಶೈವ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಶ್ರೀಗಳನ್ನು ಪದಚ್ಯುತಿಗೊಳಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಪೀಠದ ಟ್ರಸ್ಟಿ ಬಸವರಾಜ ದಿಂಡೂರ, ಶ್ರೀ ವಚನಾನಂದ ಅವರಿಗೆ ಶ್ವಾಸಪೀಠ ಅಥವಾ ಹರಿಹರದ ಪೀಠಗಳ ಪೈಕಿ ಒಂದನ್ನು ಮಾತ್ರ ಆಯ್ಕೆ ಮಾಡುವಂತೆ ಹೇಳಲಾಗಿತ್ತು. ಆದರೆ, ಇದಕ್ಕೆ ತದ್ವಿರುದ್ಧವಾಗಿ ಶ್ರೀಗಳು ನಡೆದುಕೊಂಡ ಕಾರಣ ಪದಚ್ಯುತಿ ಮಾಡಲಾಗಿದೆ ಎಂದರು.

ಮತ್ತೊಬ್ಬ ಟ್ರಸ್ಟಿ ಜಿ.ಪಿ.ಪಾಟೀಲ್ ಮಾತನಾಡಿ, ಇದು ಟ್ರಸ್ಟ್‌ನ ವೈಯಕ್ತಿಕ ನಿರ್ಧಾರವಲ್ಲ. ಇದು ಸಮಾಜದ ನಿರ್ಧಾರ. ಶ್ರೀಗಳು ಮಠದಲ್ಲೇ ಇದ್ದರೂ ನಮ್ಮನ್ನು ಒಳಗೆ ಕರೆಯುತ್ತಿಲ್ಲ. ಶ್ವಾಸಪೀಠ ಬಿಡದಿರುವುದೇ ಅವರ ಪದಚ್ಯುತಿಗೆ ಮುಖ್ಯ ಕಾರಣ ಎಂದು ಹೇಳಿದರು.

ಲೆಕ್ಕ ಕೊಡಿ ಚಳವಳಿ: ಶ್ರೀಮಠದ ಅಭಿವೃದ್ಧಿ ಕಾರ್ಯಗಳಿಗೆ ಸಮಾಜ ನೀಡಿರುವ ಹಣವನ್ನು ಟ್ರಸ್ಟಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ ಭಕ್ತವೃಂದ, ಪಂಚಮಸಾಲಿ ಹರಪೀಠದ ಮುಂಭಾಗದಲ್ಲಿ ಸೋಮವಾರ ಬೆಳಗ್ಗೆ ‘ಲೆಕ್ಕ ಕೊಡಿ ಚಳವಳಿ’ ಪ್ರಾರಂಭಿಸಿತು. ಮುನ್ನೆಚ್ಚರಿಕೆ ಕ್ರಮವಾಗಿ ತಹಸೀಲ್ದಾರ್ ಸಂತೋಷ ಕುಮಾರ 144 ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಆದರೂ ರಾಜ್ಯ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ಅರುಣ ಕುಮಾರ ಪೂಜಾರ, ನಂದಿಹಳ್ಳಿ ಹಾಲಪ್ಪ, ಹೊಳೆಸಿರಗೆರಿ ಗ್ರಾಮದ ಮುಖಂಡ ಎಂ.ಜಿ. ಪರಮೇಶ್ವರಗೌಡ್ರ, ದಾವಣಗೆರೆ ಪಾಲಿಕೆ ಮಾಜಿ ಮೇಯರ್ ಬಿ.ಜಿ ಅಜಯ್ ಕುಮಾರ, ಮಠದ ಆಡಳಿತಾಧಿಕಾರಿ ಡಾ.ಎಚ್.ಪಿ.ರಾಜಕುಮಾರ್, ಟ್ರಸ್ಟಿ ಹರಿಹರದ ಬಾಬಣ್ಣ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಮಾಜದ 100ಕ್ಕೂ ಹೆಚ್ಚು ಭಕ್ತರನ್ನು ಲೆಕ್ಕಕೊಡಿ ಚಳವಳಿಯನ್ನು ಮುಂದುವರಿಸಿದರು. ಈ ವೇಳೆ ಪೊಲೀಸರು ಭಕ್ತರನ್ನು ಪೊಲೀಸರು ಬಂಧಿಸಿ, ಕರೆದೊಯ್ದರು.

ಗದ್ದಲ ಗಲಾಟೆ: ಭಾರೀ ಸಂಖ್ಯೆಯಲ್ಲಿ ಸೇರಿದ್ದ ಮಠದ ಭಕ್ತರನ್ನು ಬಂಧಿಸುವ ವೇಳೆ ಪೊಲೀಸರು ಹಾಗೂ ಪಂಚಮಸಾಲಿ ಸಮಾಜದ ಮುಖಂಡರ ಮಧ್ಯೆ ಕೆಲಕಾಲ ವಾದ ವಿವಾದ, ಗದ್ದಲ ಗಲಾಟೆ ನಡೆಯಿತು. ಈ ವೇಳೆ ‘ಧರ್ಮದರ್ಶಿಗಳೇ ಕಳ್ಳ ಲೆಕ್ಕ ಬೇಡ, ಧರ್ಮದ ಲೆಕ್ಕ ಕೊಡಿ’, ‘ಲೆಕ್ಕ ಕೊಡಿ, ಮಠ ಉಳಿಸಿ’ ಸೇರಿದಂತೆ ಇತರ ಘೋಷಣೆಗಳು ಕೇಳಿಬಂದವು.

ಮುಖಂಡ ಅಸ್ವಸ್ಥ: ಪ್ರತಿಭಟನೆ ವೇಳೆ ನೂಕಾಟ, ತಳ್ಳಾಟವಾದ್ದರಿಂದ ಪಂಚಮಸಾಲಿ ಸಮಾಜದ ಮುಖಂಡ ಎಂ.ಜಿ ಪರಮೇಶ್ವರಗೌಡ್ರ ತೀವ್ರ ಅಸ್ವಸ್ಥಗೊಂಡು ನೆಲಕ್ಕೆ ಬಿದ್ದರು. ತಕ್ಷಣ ಅವರನ್ನು ಪೊಲೀಸ್ ವಾಹನದಲ್ಲೇ ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು.

ಟ್ರಸ್ಟಿಗಳಿಗೆ ಚಪ್ಪಲಿ ತೋರಿಸಿದ ಭಕ್ತರು: ಹರಿಹರ ಪಂಚಮಸಾಲಿ ಪೀಠದಿಂದ ವಚನಾನಂದ ಶ್ರೀಗಳನ್ನು ಪದಚ್ಯುತಿ ಮಾಡಿದ್ದರಿಂದ ಆಕ್ರೋಶಗೊಂಡ ಮಠದ ಭಕ್ತರು ಮಠದ ಹೊರಭಾಗದಲ್ಲಿ ಬಸ್‌ನಲ್ಲಿ ತೆರಳುತ್ತಿದ್ದ ಟ್ರಸ್ಟಿಗಳಿಗೆ ಚಪ್ಪಲಿ ತೋರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಭಕ್ತರ ಮೇಲೆ ದಬ್ಬಾಳಿಕೆ ಬೇಡ: ‘ಮಠದ ಭಕ್ತರ ಮೇಲೆ ಪೊಲೀಸರು ದಬ್ಬಾಳಿಕೆ, ಹಲ್ಲೆ ಮಾಡುವುದು ಸರಿಯಲ್ಲ. ನೀವು ಈ ಕೂಡಲೇ ಮಠದ ಆವರಣದಿಂದ ಹೊರಡಿ’ ಎಂದು ವಚನಾನಂದ ಶ್ರೀಗಳು ಪೊಲೀಸರಿಗೆ ಸೂಚಿಸಿದರು. ಇದರಿಂದ ಕೆಲ ಕಾಲ ಸ್ವಾಮೀಜಿ ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು. ನಮ್ಮ ಭಕ್ತರಿಗೆ ತೊಂದರೆ ಕೊಟ್ಟರೆ ಸಹಿಸಲ್ಲವೆಂದರು. ಈ ಸಂದರ್ಭದಲ್ಲಿ ನಡೆದ ತಳ್ಳಾಟ, ನೂಕಾಟದಿಂದ ಶ್ರೀಗಳ ಕೈಬೆರಳಿಗೆ ಗಾಯವಾಯಿತು.

ಏನಿದು ಪ್ರಕರಣ? ಯಾಕೀ ಪ್ರಹಸನ?

ಹರಿಹರ ಪಂಚಮಸಾಲಿ ಮಠದ ಆಡಳಿತ ಮಂಡಳಿ, ಟ್ರಸ್ಟ್ ಹಾಗೂ ವಚನಾನಂದ ಶ್ರೀಗಳ ನಡುವೆ ಕಳೆದ ಕೆಲವು ದಿನಗಳಿಂದ ಮುಸುಕಿನ ಗುದ್ದಾಟ ನಡೆಯುತ್ತಿತ್ತು. ಟ್ರಸ್ಟ್‌ನಿಂದ ವಚನಾನಂದ ಶ್ರೀಗಳಿಗೆ ಎಚ್ಚರಿಕೆ ನೀಡಿ ಬೆಂಗಳೂರಿನಲ್ಲಿರುವ ಶ್ವಾಸಪೀಠ ತೊರೆದು ಪಂಚಮಸಾಲಿ ಪೀಠಕ್ಕೆ ಸಂಪೂರ್ಣ ಸಮಯ ಕೊಡುವಂತೆ ಎಚ್ಚರಿಸಿದ್ದರು. ಇಲ್ಲವಾದಲ್ಲಿ ಮಠದಿಂದ ಹೊರ ಹಾಕುವುದಾಗಿ ಎಚ್ಚರಿಸಿದ್ದರು. ಅಲ್ಲದೇ, ಮಠದ ಆಡಳಿತಾಧಿಕಾರಿ ರಾಜಕುಮಾರ್ ಅವರನ್ನು ಹುದ್ದೆಯಿಂದ ವಜಾ ಮಾಡಿದ್ದರು. ಆಡಳಿತಾಧಿಕಾರಿ ರಾಜಕುಮಾರ್ ಟ್ರಸ್ಟಿಗಳು ಮಠದ ಭಕ್ತರಿಂದ ಸಂಗ್ರಹಿಸಲಾದ ನಗದು ಮತ್ತು ಆಭರಣದ ಬಗ್ಗೆ ಸರಿಯಾದ ಲೆಕ್ಕ ಪತ್ರ ಕೊಟ್ಟಿಲ್ಲ. ಇದನ್ನು ಪ್ರಶ್ನೆ ಮಾಡಿದ್ದಕ್ಕೆ ನನಗೆ ಹಾಗೂ ಶ್ರೀಗಳಿಗೆ ಬೆದರಿಕೆ ಹಾಕಿ ನಮ್ಮನ್ನು ಪೀಠದ ಆಡಳಿತಾಧಿಕಾರಿ ಹುದ್ದೆಯಿಂದ ವಜಾ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಇದರ ಬೆನ್ನಲ್ಲೇ ಕೆಲ ಮುಖಂಡರೂ ಟ್ರಸ್ಟಿಗಳಿಂದ ಹಣದ ದುರುಪಯೋಗವಾಗುತ್ತಿದ್ದು, ಕೂಡಲೇ ಸಾರ್ವಜನಿಕವಾಗಿ ಲೆಕ್ಕಪತ್ರ ನೀಡಬೇಕು ಎಂದು ಕಳೆದ ಎರಡು ವಾರದ ಹಿಂದೆ ‘ಲೆಕ್ಕ ಕೊಡಿ ಚಳವಳಿ’ ಆರಂಭಿಸಿದ್ದರು. ಅದರಂತೆ ಸೋಮವಾರವೂ ಚಳವಳಿ ನಡೆಸಿದರು.

ಮಠದ ಭಕ್ತರಿಂದ ಸಂಗ್ರಹಗೊಂಡ ಸ್ಥಿರಾಸ್ತಿ ಹಾಗೂ ಕೋಟ್ಯಂತರ ಹಣವನ್ನು ಟ್ರಸ್ಟ್‌ನ ಕೆಲವು ಪ್ರಭಾವಿಗಳು ದುರ್ಬಳಕೆ ಮಾಡಿಕೊಂಡ ಆರೋಪವಿದೆ. ಹೀಗಾಗಿ, ಕೂಡಲೇ ಸಮರ್ಪಕ ಲೆಕ್ಕಪತ್ರ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಾವಿರಾರು ಜನ ಆಗಮಿಸಿ ಟ್ರಸ್ಟಿಗಳಿಗೆ ಛೀಮಾರಿ ಹಾಕಲಿದ್ದಾರೆ. ಪೊಲೀಸರು ಮಠದ ಕಳ್ಳರು, ಲೂಟಿಕೋರರಿಗೆ ರಕ್ಷಣೆ ನೀಡುತ್ತಿದ್ದಾರೆ. ಧರ್ಮದ ಲೆಕ್ಕ ನೀಡಬೇಕು.

-ಎಚ್.ಎಸ್.ಶಿವಶಂಕರ್, ಹರಿಹರ ಮಾಜಿ ಶಾಸಕ

2008ರಿಂದ ಮಠದಲ್ಲಿ ಅವ್ಯವಹಾರ ನಡೆದಿದೆ. ಸರಕಾರ ನೀಡಿದ 11 ಕೋಟಿಯಲ್ಲಿ 5 ಕೋಟಿ ಅವ್ಯವಹಾರ ನಡೆದಿದೆ. ಹಲವಾರು ಭಕ್ತರು ನೀಡಿರುವ ಹಣದಲ್ಲಿ ದುರುಪಯೋಗ ನಡೆದಿದೆ. ಸ್ಥಳೀಯ ಪಿಡಿಒ ಹಾಗೂ ಟ್ರಸ್ಟ್ ಸದಸ್ಯರ ಸಹಿ ದುರ್ಬಳಕೆ ಮಾಡಿಕೊಂಡು ಟ್ರಸ್ಟಿ ಚಂದ್ರಶೇಖರ ಪೂಜಾರ್ ಅವ್ಯವಹಾರ ಮಾಡಿದ್ದಾರೆ. ಈ ಬಗ್ಗೆ ಲೆಕ್ಕ ನೀಡಬೇಕು.

-ಅರುಣ್ ಕುಮಾರ್ ಪೂಜಾರ್, ರಾಣೆಬೆನ್ನೂರು ಮಾಜಿ ಶಾಸಕ

ಲೆಕ್ಕಪತ್ರ ಸಮಿತಿಗೆ ಪ್ರತಿ ಒಂದು ರುಪಾಯಿಯ ಮಾಹಿತಿ ನೀಡಲಾಗಿದೆ. ಯಾರೇ ಬಂದು ಲೆಕ್ಕ ಕೇಳಿದರೂ ನಾವು ಕೊಡಲು ಸಿದ್ಧರಿದ್ದೇವೆ. ಆದರೆ, ಕೆಲವರ ಉದ್ದೇಶವೇ ಬೇರೆ ಆಗಿದೆ. ಪೀಠದ ಮುಂದಿನ ಭವಿಷ್ಯಕ್ಕಾಗಿ ಸರ್ವಾನುಮತದಿಂದ ಶ್ರೀಗಳ ಬದಲಾವಣೆ ತೀರ್ಮಾನ ತೆಗೆದುಕೊಳ್ಳಲಾಗಿದೆ. ಗೌರವಯುತವಾಗಿ ಪೀಠ ತ್ಯಜಿಸದಿದ್ದರೆ ಕಾನೂನು ಕ್ರಮದ ಮೂಲಕ ಹೊರಹಾಕಲಾಗುವುದು.

-ಬಿ.ಸಿ.ಉಮಾಪತಿ, ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ

ಕಾಲೇಜು ಬಸ್‌ನಲ್ಲಿ ಬಂದ ಟ್ರಸ್ಟಿಗಳು

ಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ದಾವಣಗೆರೆ ಮಹಾಂತಸ್ವಾಮಿ ಪಿಯು ಕಾಲೇಜಿನ ಬಸ್‌ನಲ್ಲಿ ಬಂದ ಪೀಠದ ಟ್ರಸ್ಟಿಗಳಾದ ಬಿ.ಸಿ.ಉಮಾಪತಿ, ಬಾವಿಬೆಟ್ಟಪ್ಪ, ಬಸವರಾಜ ದಿಂಡೂರು, ಎಚ್.ಎಸ್.ನಾಗರಾಜ, ಚಂದ್ರಶೇಖರ ಪೂಜಾರ ಹಾಗೂ ಉಳಿದ ಟ್ರಸ್ಟ್ ಪದಾಧಿಕಾರಿಗಳು ಮಠದಲ್ಲಿ ಸಭೆ ನಡೆಸಿ, ಪೀಠಾಧಿಪತಿ ವಚನಾನಂದ ಶ್ರೀಗಳನ್ನು ಪೀಠಾಧೀಶ ಸ್ಥಾನದಿಂದ ಪದಚ್ಯುತಿಗೊಳಿಸಿದ್ದೇವೆ ಎಂದು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಮಠದ ಆವರಣದಲ್ಲಿ ಜಮಾವಣೆಗೊಂಡ ಪೊಲೀಸರು, ಭಕ್ತರು.

ಟ್ರಸ್ಟಿಗಳು ಬಚಾವ್ ಆಗಲು ನನ್ನನ್ನು ಟಾರ್ಗೆಟ್ ಮಾಡಿದ್ದಾರೆ: ಸ್ವಾಮೀಜಿ

ಹರಿಹರ: ಮಠದ ಟ್ರಸ್ಟಿಗಳ ನಿರ್ಧಾರ ಹಾಸ್ಯಾಸ್ಪದವಾಗಿದೆ. ಅವರು ಬಚಾವಾಗಲು

ನನ್ನನ್ನು ಟಾರ್ಗೆಟ್ ಮಾಡಿದ್ದಾರೆ. ನನ್ನನ್ನೇ ಮಠದಿಂದ ಹೊರಗಿಟ್ಟರೆ ಅವರನ್ನು ಪ್ರಶ್ನಿಸುವವರು ಯಾರು ಎಂಬುದು ಅವರ ದುರಾಲೋಚನೆ. ಟ್ರಸ್ಟಿಗಳು ಸಾಕಷ್ಟು ಅವ್ಯವಹಾರ ಮಾಡಿದ್ದಾರೆ. ಇದನ್ನು ಸ್ವಾಮಿಗಳು, ಭಕ್ತರು ಪ್ರಶ್ನಿಸುತ್ತಿ ದ್ದಾರೆ. ಹಾಗಾಗಿ, ನನ್ನನ್ನೇ ಟಾರ್ಗೆಟ್ ಮಾಡಿದ್ದಾರೆ. ಮುಂದಿನ ತೀರ್ಮಾನ ಮಠದ ಭಕ್ತರಿಗೆ ಬಿಟ್ಟಿದ್ದೇನೆ ಎಂದು ವಚನಾನಂದ ಶ್ರೀಗಳು ಪ್ರತಿಕ್ರಿಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈ ಹಿಂದೆಯೂ ವ್ಯವಸ್ಥಿತವಾಗಿ ಷಡ್ಯಂತ್ರದ ಮೂಲಕ ಹಿರಿಯ ಸ್ವಾಮೀಜಿಯನ್ನು ಹೊರದಬ್ಬಿದ್ದರು. ನಾನು ಕಳೆದ 8 ವರ್ಷಗಳಿಂದ ಪ್ರಾಮಾಣಿಕವಾಗಿ ಮಠ ಕಟ್ಟುವ, ಸಂಘಟನೆ ಮಾಡುವ ಕಾರ್ಯ ಮಾಡಿದ್ದೇವೆ. ರಾಜ್ಯಾಧ್ಯಕ್ಷರಾದ ಸೋಮನಗೌಡ ಪಾಟೀಲ್ ಅವರ ನೇತೃತ್ವದಲ್ಲಿ 18 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಂಘಟನೆ ಮಾಡಿರುವೆ. ಈವರೆಗೂ ಮಠದಲ್ಲಿ ಒಂದೇ ಒಂದು ಚೆಕ್ಕಿಗೂ ನಾನು ಸಹಿ ಮಾಡಿಲ್ಲ, ಭಕ್ತರು ಕೊಟ್ಟ ಹಣ ಅವರಿಗೆ ವಾಪಸ್ ಕೊಟ್ಟು ಬಂದಿರುವೆ. ಹಾಗಾಗಿ, ಇದರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದರು. ಮಠದಲ್ಲಿ ಸಿಬ್ಬಂದಿ ಮೇಲೆ ಹಲ್ಲೆ ಮಾಡುವ, ನಮಗೆ ಬೆದರಿಕೆ ಹಾಕುವ, ಷಡ್ಯಂತ್ರ ಮಾಡುವ ಧರ್ಮದರ್ಶಿಗಳೇ ಹೆಚ್ಚಿದ್ದಾರೆ. ಟ್ರಸ್ಟ್ ಕಾನೂನು ಬಾಹಿರ ಕೆಲಸದಲ್ಲಿ ತೊಡಗಿದೆ. ಕಟ್ಟಡ ನಿರ್ಮಾಣಕ್ಕೆ ಸರಕಾರದಿಂದ ಹತ್ತಾರು ಕೋಟಿ ರು. ಅನುದಾನವೂ ಬಂದಿದೆ. ಆದರೆ ಕಟ್ಟಡ ಎಲ್ಲಿದೆ? ಅವರು ಭಕ್ತರ ಕೋರಿಕೆಯಂತೆ ಬಂದು ಲೆಕ್ಕ ಕೊಟ್ಟು ಹೋಗಬೇಕಿತ್ತು. ಆದರೆ ಅವರು ನನ್ನ ಗಮನಕ್ಕೆ ಬಾರದೆ ಸಭೆ ನಡೆಸಿದ್ದಾರೆ. ದಿವ್ಯ ಸಾನ್ನಿಧ್ಯ ವಚನಾನಂದ ಶ್ರೀ ಎಂದು ಮುದ್ರಿಸಿದ್ದಾರೆ. ಆದರೆ, ನನ್ನನ್ನು ಸಭೆಗೆ ಆಹ್ವಾನಿಸಿಲ್ಲ. ಭಕ್ತರಿಂದ 2008ರಲ್ಲಿ 8 ಕೋಟಿ ಹಣ ಬಂತು, ಅದರಲ್ಲಿ ಎರಡೂವರೆ ಕೋಟಿ ಖರ್ಚಾಯ್ತು. ಉಳಿದ ಐದು ಕೋಟಿ ಏನು ಮಾಡಿದ್ದಾರೆ ಎಂಬ ಬಗ್ಗೆ ಇವರು ಲೆಕ್ಕ ಕೊಡುತ್ತಿಲ್ಲ ಎಂದು ಹೇಳಿದರು.

ಇದು ಧರ್ಮ ಯುದ್ಧ

ಗ್ರಾಪಂ ಪಿಡಿಒ ಸಹಿ ಸಹ ಫೋರ್ಜರಿ ಮಾಡಿದವರು, ಹಗರಣ ಮಾಡಿದ ಕಳ್ಳರೇ ಪೊಲೀಸ್ ರಕ್ಷಣೆಯಲ್ಲಿ ಮಠಕ್ಕೆ ಬರುತ್ತಿರುವುದು. ಪ್ರತಿ ತಿಂಗಳು ಅವರು ನಾಲ್ಕು ಲಕ್ಷ ರು. ಮಠದ ಖರ್ಚು ತೋರಿಸುತ್ತಿದ್ದರು. ಆದರೆ, ನಾನು ಪೀಠಕ್ಕೆ ಬಂದಮೇಲೆ ಹಳ್ಳಿಹಳ್ಳಿ ತಿರುಗಿ ಭಕ್ತರಿಂದ ಸಂಗ್ರಹಿಸಿದ ಒಂದು ಕೋಟಿ ಡೆಪಾಸಿಟ್ ಮಾಡಿದ್ದೇವೆ. ಅದರಲ್ಲಿ ಮಠ ನಡೆಯುತ್ತಿದೆ. ಯಾವುದೇ ಧರ್ಮದರ್ಶಿಯಿಂದ ಅಲ್ಲ ಎಂದು ಶ್ರೀಗಳು ಸ್ಪಷ್ಟಪಡಿಸಿದರು. ಶ್ವಾಸಪೀಠದಲ್ಲಿನ ಗುರುತು, ಹೆಸರಿನಿಂದಲೇ ನನ್ನನ್ನು ಈ ಪೀಠಕ್ಕೆ ನೇಮಿಸಿದ್ದು. ಯಾವುದೇ ಷರತ್ತುಗಳಿಲ್ಲದೇ ಪೀಠಾಧಿಪತಿಯಾಗಿದ್ದೇನೆ. ಆಗ ನನಗೆ ಶ್ವಾಸಪೀಠ ಬಿಡುವಂತೆ ಎಂದೂ ಹೇಳಿಲ್ಲ. ಶ್ವಾಸಪೀಠದ ಹೆಸರಲ್ಲಾಗಲೀ, ನನ್ನ ಹೆಸರಲ್ಲಾಗಲಿ ಒಂದಿಂಚೂ ಭೂಮಿ ಇಲ್ಲ. ಈಗ ಅದೇ ನೆಪವನ್ನಿಟ್ಟುಕೊಂಡು ನಮ್ಮನ್ನು ಹೊರಗಿಡುವ ಯತ್ನ ಮಾಡಿದ್ದಾರೆ. ಇದು ಧರ್ಮಯುದ್ಧ. ಇದರಲ್ಲಿ ಕೌರವರು ಯಾರು? ಪಾಂಡವರು ಯಾರು? ಎಂಬುದು ಶೀಘ್ರದಲ್ಲೇ ಗೊತ್ತಾಗಲಿದೆ ಎಂದರು.

ಟ್ರಸ್ಟಿಗಳ ವಿರುದ್ಧ ಘೋಷಣೆ ಕೂಗಿದ ಮಠದ ಭಕ್ತರು.

ಲೈಂಗಿಕ ದೌರ್ಜನ್ಯ ನಡೆದಿಲ್ಲ: ಸಂತ್ರಸ್ತೆ

ಬಾಗಲಕೋಟೆ: ಬಸವ ಜಯ

ಮೃತ್ಯುಂಜಯ ಸ್ವಾಮೀಜಿ ವಿರುದ್ಧದ ಕೇಸ್‌ಗೆ ಇದೀಗ ಬಿಗ್ ಟ್ವಿಸ್ಟ್ ಸಿಕ್ಕಿದೆ. ಸಂತ್ರಸ್ತ ಮಹಿಳೆ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂದು ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ನಾನು ಶ್ರೀಗಳ ವಿರುದ್ಧ ದೂರು ನೀಡಿಲ್ಲ. ನನ್ನ ಮತ್ತು ಸ್ವಾಮೀಜಿ ಮೇಲಿರುವ ಆರೋಪಗಳೆಲ್ಲವೂ ಸುಳ್ಳು. ನನ್ನ ಹೆಸರಿನಲ್ಲಿ ಯಾರೋ ದುಷ್ಕರ್ಮಿಗಳು ಅಪಪ್ರಚಾರ ಮಾಡಿದ್ದಾರೆ. ನನ್ನ ಹೆಸರಿನಲ್ಲಿ ದೂರು ನೀಡಿದ್ದಾರೆ. ಆದರೆ ನಾನು ದೂರು ನೀಡಿಲ್ಲ. ಟಿವಿಯಲ್ಲಿ ನೋಡಿದಾಗಲೇ ನನಗೆ ಈ ವಿಚಾರ ಗೊತ್ತಾಗಿದ್ದು, ನನ್ನ ಮೇಲೆ ಯಾವುದೇ ಲೈಂಗಿಕ ದೌರ್ಜನ್ಯ ಆಗಿಲ್ಲ. ಶ್ರೀಗಳು ಅಸಭ್ಯ ವರ್ತನೆ ಮಾಡಿಲ್ಲ ಎಂದಿದ್ದಾರೆ.

ವಿಜಯಪುರದಲ್ಲಿ ನಡೆದ ಗಲಾಟೆ ಸಮಯದಲ್ಲಿ ನಾನು ಕೇವಲ ಮಾತಾಡಬೇಕು ಎಂದು ಕರೆದಿದ್ದೆ, ಆಗ ನನ್ನ ಸಂಬಂಧಿಯೊಬ್ಬ ಕೂಗಾಡಿದ್ದ ಅಷ್ಟೇ ಅದರ ಹೊರತಾಯೂ ಬೇರೆ ಏನೂ ನಡೆದಿಲ್ಲ. ನಾನು ಶ್ರೀಗಳ ಬಳಿ ಯಾವುದೇ ಹಣಕ್ಕೆ ಡಿಮ್ಯಾಂಡ್ ಮಾಡಿಲ್ಲ. ಹಣ ಕೇಳುವ ಪರಿಸ್ಥಿತಿ ನಮಗೆ ಬಂದಿಲ್ಲ. ನಮ್ಮ ಇಬ್ಬರ ನಡುವೆ ಇರುವುದು ಕೇವಲ ಭಕ್ತೆ ಹಾಗೂ ಗುರುವಿನ ಸಂಬಂಧ ಅಷ್ಟೆ. ಏ.6ಕ್ಕೆ ದೂರು ನೀಡಿರುವುದು ಯಾರು ಎಂಬುದು ನನಗೆ ಗೊತ್ತಿಲ್ಲ. ಅದೊಂದು ಸುಳ್ಳು ದೂರು, ಯಾರು ಕೂಡ ಅದನ್ನು ನಂಬಬೇಡಿ. ಸದ್ಯ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾಲ್ಕು ದಿನದಲ್ಲಿ ಬಂದು ಎಲ್ಲವನ್ನು ವಿವರವಾಗಿ ಹೇಳುತ್ತೇನೆ ಎಂದು ವಿಡಿಯೊದಲ್ಲಿ ತಿಳಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ನೀಡದೇ ಕೇಂದ್ರದಿಂದ ದ್ರೋಹ | ಕೇಂದ್ರಕ್ಕಿಂತ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮ

ಎನ್‌ಆರ್‌ಪುರ: ಭದ್ರಾ ಹಿನ್ನೀರು ಸೇತುವೆಗೆ ಸಿಎಂ ಚಾಲನೆ

ಚಿಕ್ಕಮಗಳೂರು: ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರ ಕಲ್ಯಾಣ ಆಗುತ್ತಿದೆ. ಗ್ಯಾರಂಟಿಗಳ ನಡುವೆಯೂ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಕೇಂದ್ರಕ್ಕಿಂತ ಉತ್ತಮವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಿಕ್ಕಮಗಳೂರಿನ ಹಂದೂರು ಗ್ರಾಮದಿಂದ ನರಸಿಂಹರಾಜಪುರಕ್ಕೆ ಸಂಪರ್ಕಿಸುವ ಭದ್ರಾ ಹಿನ್ನೀರಿನಲ್ಲಿ ನಿರ್ಮಿಸಿರುವ ಸೇತುವೆ ಮತ್ತು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 36 ಕೋಟಿ ರು.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಸೇತುವೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇಂದು ಚಾಲನೆ ನೀಡಲಾಗಿದೆ. ವಿರೋಧ ಪಕ್ಷದವರು ಅಭಿವೃದ್ಧಿ ಕೆಲಸಗಳಿಗೆ ಹಣವಿಲ್ಲ, ಗ್ಯಾರಂಟಿಗಳ ನಂತರ ಖಜಾನೆ ಖಾಲಿಯಾಗಿವೆ. ಅಭಿವೃದ್ಧಿ ಶೂನ್ಯ ಎಂದು ಟೀಕಿಸುತ್ತಾರೆ. ಆದರೆ ಗ್ಯಾರಂಟಿಗಳ ಜತೆಗೆ ನಮ್ಮ ಸರಕಾರ ಅಭಿವೃದ್ಧಿಯನ್ನೂ ಮಾಡಿ ಮಾದರಿ ಆಗಿದೆ ಎಂದರು.

ಮೈಸೂರು ಮಹಾರಾಜರಾಗಿದ್ದ ನರಸಿಂಹರಾಜ ಒಡೆಯರ್ ಅವರ ಕಾಲದಲ್ಲಿ ಎಡಳ್ಳಿಯಾಗಿದ್ದ ಈ ಪ್ರದೇಶಕ್ಕೆ ನರ ಸಿಂಹ ರಾಜಪುರ ಎಂದು ನಾಮಕರಣ ವಾಯಿತು. ಈ ಭಾಗದ ಅಭಿವೃದ್ಧಿಯ ಉದ್ದೇಶದಿಂದ ಇಲ್ಲಿನ ಶಾಸಕರ ಒತ್ತಾಸೆ ಯಿಂದ ಸೇತುವೆ ನಿರ್ಮಾಣ ಸಾಧ್ಯ ವಾಗಿದೆ. ಉಳಿದಂತೆ ರಸ್ತೆ ಅಗಲೀಕರಣ, ಬ್ಯಾರೇಜ್ ಕಂ ಬ್ರಿಡ್ಜ್ ನಿರ್ಮಾಣ, ಪ್ರವಾ ಸೋದ್ಯಮವೂ ಸೇರಿದಂತೆ ಹಲವು ಬೇಡಿಕೆ ಗಳ ಬಗ್ಗೆ ಸರಕಾರ ಕ್ರಮ ಕೈಗೊಳ್ಳಲಿದೆ ಎಂದರು.



ಚಿಕ್ಕಮಗಳೂರಿನ ಹಂದೂರು ಗ್ರಾಮದಿಂದ ನರಸಿಂಹರಾಜಪುರಕ್ಕೆ ಸಂಪರ್ಕಿಸುವ ಭದ್ರಾ ಹಿನ್ನೀರಿನಲ್ಲಿ ನಿರ್ಮಿಸಿರುವ ಸೇತುವೆಯನ್ನು ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು. ಈ ವೇಳೆ ಸಚಿವರಾದ ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ಶಾಸಕ ಟಿ.ಡಿ. ರಾಜೇಗೌಡ ಸೇರಿ ಹಲವರಿದ್ದರು.

ಸೇತುವೆ ಬಳಿ ಸಿದ್ದರಾಮಯ್ಯ ಪುತ್ಥಳಿ ಅನಾವರಣ

ಹೊನ್ನೇಕುಡಿಗೆ ಸಂಪರ್ಕ ಸೇತುವೆ ಬಳಿ ನಿರ್ಮಾಣ ಮಾಡಿರುವ ಸಿಎಂ ಸಿದ್ದರಾಮಯ್ಯನವರ ಪುತ್ಥಳಿಯನ್ನು ಸಿದ್ದರಾಮಯ್ಯನವರೇ ಅನಾವರಣಗೊಳಿಸಿದರು. ಸಂಪರ್ಕ ಸೇತುವೆಗೆ ನನ್ನ ಹೆಸರು ಯಾಕೆ ಇಟ್ಟರಪ್ಪಾ ಎಂದು ಶಾಸಕರು ಹಾಗೂ ಪಕ್ಷದ ಮುಖಂಡರುಗಳಿಗೆ ಕೇಳಿ ನಗುತ್ತಲೇ ಮುಂದೆ ಸಾಗಿ, ಪುಟಾಣಿ ಮಕ್ಕಳಿಗೆ ಹಸ್ತ ಲಾಘನ ಮಾಡಿ, ನೆರೆದಿದ್ದ ಮಹಿಳೆಯರೊಂದಿಗೆ ಸೆಲ್ಫಿಗೆ ಪೋಸು ಕೊಟ್ಟು ಗಮನ ಸೆಳೆದರು.

ಮುಖ್ಯಮಂತ್ರಿಗಳಿಗೆ ರಾಜೇಗೌಡ ಮನವಿ

ಕೊಪ್ಪದಲ್ಲಿ ಎಸಿ ಕಚೇರಿ ಸ್ಥಾಪನೆ, ಶೃಂಗೇರಿ ರಸ್ತೆ ಅಗಲೀಕರಣಕ್ಕೆ ಅನುದಾನ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪುನರ್ವಸತಿ ಪರಿಹಾರ, ಕೊಪ್ಪದಿಂದ ಶಿವಮೊಗ್ಗ ಏರ್‌ಪೋರ್ಟ್‌ಗೆ ಹೋಗುವ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಶಾಸಕ ಟಿ.ಡಿ.ರಾಜೇಗೌಡ ಅವರು ಸಿಎಂ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಕಾಂಗ್ರೆಸ್ ಗ್ಯಾರಂಟಿ ಬಿಜೆಪಿ ಅನುಕರಣೆ: ಕಾಂಗ್ರೆಸ್ ಸರಕಾರವೊಂದೆ ಕೊಟ್ಟ ಮಾತಿನಂತೆ ನಡೆಯುವ ಸರಕಾರವಾಗಿದೆ ಎಂದರು. ನಮ್ಮ ಸರಕಾರದಿಂದ ಗ್ಯಾರಂಟಿಗಳಿಗೆ ಇದುವರೆಗೆ 1.30 ಲಕ್ಷ ಕೋಟಿ ರು. ವೆಚ್ಚ ಮಾಡಲಾಗಿದೆ. ರಾಜ್ಯದ ಗ್ಯಾರಂಟಿಗಳನ್ನು ಟೀಕಿಸುವ ಬಿಜೆಪಿಯವರು ಇತರೆ ರಾಜ್ಯಗಳಲ್ಲಿ ಅವುಗಳನ್ನೇ ಅನುಸರಿಸುತ್ತಿದ್ದಾರೆ. ಕೇಂದ್ರಕ್ಕಿಂತ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದರು.

ನಮ್ಮ ಸರಕಾರ ನುಡಿದಂತೆ ನಡೆದಿದೆ: ಬಿಜೆಪಿಯ ರಾಜ್ಯಾಧ್ಯಕ್ಷ ವಿಜಯೇಂದ್ರರವರು ರಾಜ್ಯದ ಆರ್ಥಿಕತೆ ವಸ್ತುಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಿ ಎಂದು ಟೀಕಿಸಿದ್ದಾರೆ. ಅವರು ಬಜೆಟ್ ನ ಅಂಶಗಳ ಬಗ್ಗೆ ಮನನ ಮಾಡಿಕೊಳ್ಳದೇ, ಕೇವಲ ಪ್ರಚಾರಕ್ಕಾಗಿ ಹೇಳಿಕೆ ನೀಡುತ್ತಿದ್ದಾರೆ. 15ನೇ ಹಣಕಾಸಿನ ಆಯೋಗದಲ್ಲಿ ಶಿಫಾರಸ್ಸು ಮಾಡಿದ್ದ ಅನುದಾನವನ್ನು ಕೇಂದ್ರ ನೀಡದೇ, ರಾಜ್ಯದ ಜನರಿಗೆ ಅನ್ಯಾಯ ಮಾಡಲಾಗಿದೆ. ಬಿಜೆಪಿಯ ಪ್ರಧಾನಿ ಮೋದಿಯವರು ನೀಡಿದ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ಅವರ ಒಳ್ಳೆಯ ದಿನಗಳು ಬರಲೇ ಇಲ್ಲ. ಆದರೆ ನಮ್ಮ ಸರಕಾರ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿ, ನುಡಿದಂತೆ ನಡೆದಿದೆ ಎಂದರು.

ವೇದಿಕೆ ಮೇಲೆ ಎಂ.ಎಲ್ಸಿ ಡಾ. ಆರತಿಕೃಷ್ಣ, ಶಾಸಕರುಗಳಾದ ಕೆ.ಎಸ್. ಆನಂದ್, ಶ್ರೀನಿವಾಸ್, ಭದ್ರಾಕಾಡಾ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್, ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ನಿಗಮದ ಅಧ್ಯಕ್ಷ ಹರೀಶ್, ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಲಕೃಷ್ಣ, ಸುಶೀಲಮ್ಮ, ಸಿಎಂ ಮಾಧ್ಯಮ ಸಲಹೆಗಾರ ಪ್ರಭಾಕರ್ ಸೇರಿ ಹಲವರಿದ್ದರು.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರಕಾರವು 2023-24ರ ಆಯವ್ಯಯದಲ್ಲಿ 5300 ಕೋಟಿಗಳನ್ನು ಘೋಷಿಸಿತ್ತು. ಆದರೆ ಇದುವರೆಗೆ ಈ ಅನುದಾನ ನೀಡಿಲ್ಲ. ಈ ಮೂಲಕ ರಾಜ್ಯದ ಜನರಿಗೆ ಕೇಂದ್ರ ದ್ರೋಹ ವೆಸಗಿದೆ.

-ಸಿದ್ದರಾಮಯ್ಯ, ಸಿಎಂ

ರಾಜ್ಯದ ಜನರ ಹಸಿವು ನೀಗಿಸಲು ಅನ್ನಭಾಗ್ಯ ನೀಡಿದ ಧೀಮಂತ ಸಿಎಂ ಸಿದ್ದರಾಮಯ್ಯ ಅವರು. ಪಂಚ ಗ್ಯಾರೆಂಟಿಗಳನ್ನು ಜಾರಿಗೆ ತಂದು ಬಡವರ ಪಾಲಿಗೆ ಆಶಾಕಿರಣವಾಗಿದ್ದಾರೆ.

-ಟಿ.ಡಿ.ರಾಜೇಗೌಡ, ಶೃಂಗೇರಿ ಶಾಸಕ

ವಿಶ್ವವಾಣಿ

ಸಂಪಾದಕೀಯ

ಸ್ವರ ಸಾಮ್ರಾಜ್ಞಿ ಎಂದೆಂದಿಗೂ ಅಮರ

ಭಾರತೀಯ ಸಂಗೀತ ಲೋಕದ ಅದ್ಭುತ ನಾಯಕಿ, 'ಸ್ವರ ಸಾಮ್ರಾಜ್ಞಿ' ಆಶಾ ಭೋಸ್ಲೆ ಅವರ ನಿಧನವು ಕೇವಲ ಭಾರತೀಯ ಚಲನಚಿತ್ರರಂಗಕ್ಕೆ ಮಾತ್ರವಲ್ಲದೆ, ಇಡೀ ವಿಶ್ವದ ಸಂಗೀತ ಪ್ರೇಮಿಗಳಿಗೆ ತುಂಬಲಾರದ ನಷ್ಟ. ಎಂಟು ದಶಕಗಳ ಕಾಲ ತನ್ನ ಕಂಠಸಿರಿಯಿಂದ ಕೋಟ್ಯಂತರ ಹೃದಯಗಳನ್ನು ಗೆದ್ದಿದ್ದ ಆಶಾ, ಕೇವಲ ಒಬ್ಬ ಗಾಯಕಿಯಾಗಿರಲಿಲ್ಲ; ಅವರು ಛಲ ಮತ್ತು ನಿರಂತರ ಪರಿಶ್ರಮದ ಸಂಕೇತವಾಗಿದ್ದರು. ಆಶಾ ಅವರ ಜೀವನ ಸುಲಭ ಹಾದಿಯಾಗಿರಲಿಲ್ಲ, ದಂತಕಥೆ ಲತಾ ಮಂಗೇಶ್ಕರ್ ಅವರ ನೆರಳಿನಲ್ಲೇ ಬೆಳೆದರೂ, ತನ್ನದೇ ಆದ ವಿಶಿಷ್ಟ ಗುರುತನ್ನು ಕಂಡುಕೊಳ್ಳಲು ಅವರು ನಡೆಸಿದ ಹೋರಾಟ ಅಪಾರ. ಆರಂಭಿಕ ದಿನಗಳಲ್ಲಿ ಎದುರಾದ ವೈಯಕ್ತಿಕ ಜೀವನದ ಏರಿಳಿತಗಳು ಮತ್ತು ವೃತ್ತಿಜೀವನದ ಸವಾಲುಗಳನ್ನು ಅವರು ಎದುರಿಸಿದ ರೀತಿ ಸ್ಫೂರ್ತಿದಾಯಕ. ಆಶಾ ಅವರು ಶಾಸ್ತ್ರೀಯ ಸಂಗೀತ ಮತ್ತು ಗಂಭೀರ ಗೀತೆಗಳಿಗೆ ಹೆಸರಾಗಿದ್ದರೆ, ಆಶಾ ಅವರು ಪಾಪ್, ಕ್ಯಾಬರೆ, ಗಜಲ್ ಮತ್ತು ಜಾನಪದ ಗೀತೆಗಳ ಮೂಲಕ ಹೊಸ ಸಂಚಲನ ಮೂಡಿಸಿದರು. ಸಾವಿರಾರು ಹಾಡುಗಳನ್ನು ಹಾಡಿರುವ ಆಶಾ ಅವರ ಧ್ವನಿಯಲ್ಲಿ ಒಂದು ವಿಶಿಷ್ಟವಾದ 'ಮಾಂತ್ರಿಕ ಶಕ್ತಿ' ಇತ್ತು. ಆರ್.ಡಿ. ಬರ್ಮನ್ ಅವರ ಪಾಶ್ಚಾತ್ಯ ಶೈಲಿಯ ಸಂಗೀತವಿರಲಿ ಅಥವಾ ಒ.ಪಿ. ನಯ್ಯರ್ ಅವರ ಮಧುರ ಧ್ವನಿಯಿರಲಿ, ಎಲ್ಲದಕ್ಕೂ ಜೀವ ತುಂಬಿದವರು ಆಶಾ. ಕನ್ನಡದಲ್ಲಿ ಅವರು ಹಾಡಿದ್ದು ಮೂರು ಮತ್ತೊಂದು ಚಿತ್ರವಾದರೂ, ಕನ್ನಡಿಗರು ಲತಾ ಮಂಗೇಶ್ಕರ್ ಸೇರಿದಂತೆ ಮಂಗೇಶ್ಕರ್ ಸಹೋದರಿಯರನ್ನು ಬಹುವಾಗಿ ಆದರಿಸಿದರು. ಭಾಷೆಯ ಗಡಿ ಮೀರಿ ಅವರು ಹಾಡಿದ ಪ್ರತಿಯೊಂದು ಹಾಡೂ ಇಂದಿಗೂ ಇಂಪು ನೀಡುತ್ತಿವೆ. ವಯಸ್ಸು ಎಂಬುದು ಕೇವಲ ಅಂಕಿ ಎಂಬುದನ್ನು ಸಾಬೀತುಪಡಿಸಿದವರು ಆಶಾ. ಎಂಬತ್ತರ ಹರೆಯದಲ್ಲೂ ಅವರ ಕಂಠದ ಮಾಧುರ್ಯ ಕುಂದಿರಲಿಲ್ಲ. ಗಿನ್ನೆಸ್ ದಾಖಲೆ ಸೇರಿ ನೂರಾರು ಪ್ರಶಸ್ತಿಗಳು ಅವರ ಮುಡಿಗೇರಿದ್ದರೂ, ಅವರು ಸದಾ ಕಲಿಯುವ ಹಂಬಲ ಹೊಂದಿದ್ದರು. ಆಶಾ ಭೋಸ್ಲೆ ಅವರ ಭೌತಿಕ ಕಾಯ ಇಂದು ನಮ್ಮೊಂದಿಗಿಲ್ಲದಿರಬಹುದು, ಆದರೆ ಅವರು ಹಾಡಿರುವ ಅಮರ ಗೀತೆಗಳ ಮೂಲಕ ಅವರು ಎಂದೆಂದಿಗೂ ಜೀವಂತ. ಭಾರತೀಯ ಸಿನಿಮಾ ಮತ್ತು ಸಂಗೀತದ ಇತಿಹಾಸದಲ್ಲಿ 'ಆಶಾ ಯುಗ' ಸದಾ ಕಾಲ ಪ್ರಜ್ವಲಿಸುತ್ತಿರುತ್ತದೆ.

ಸೊಂಪಾದಕೀಯ

ಬೆಕ್ಕಿಗೆ ಚೆಲ್ಲಾಟ, ಮಾಲೀಕರಿಗೆ ಸಂಕಟ!

ಬೆಂಗಳೂರಿನಲ್ಲಿ ವಿಚಿತ್ರವಾದ ಹಾಸ್ಯಮಯ ಪ್ರಸಂಗವೊಂದು ನಡೆದಿದೆ. ನೆರೆಹೊರೆಯ ಮನೆಯವರು ಸಾಕಿದ್ದ ಒಂದು ಗಂಡು ಬೆಕ್ಕು ಹಾಗೂ ಒಂದು ಹೆಣ್ಣು ಬೆಕ್ಕು ಪರಸ್ಪರ ಪ್ರೀತಿಗೆ ಬಿದ್ದಿದ್ದು, ಅದರ ಪರಿಣಾಮವಾಗಿ ಆ ಹೆಣ್ಣುಬೆಕ್ಕು ನಾಲ್ಕು ಮರಿಗಳನ್ನು ಹಾಕಿದೆ. ಇದರಿಂದ ಕ್ಷುದ್ರಗೊಂಡ ಹೆಣ್ಣುಬೆಕ್ಕಿನ ಮಾಲೀಕರು ಗಂಡು ಬೆಕ್ಕಿನ ಮನೆಯವರ ಮುಂದೆ ಬಂದು ಗಲಾಟೆ ಮಾಡಿ, 'ನಿಮ್ಮ ಮನೆಯ ಬೆಕ್ಕಿನಿಂದಲೇ ನಮ್ಮ ಬೆಕ್ಕು ಗರ್ಭಿಣಿಯಾಗಿ ಮರಿ ಹಾಕಿದೆ. ಆ ಮರಿಗಳನ್ನು ನೀವೇ ಸಾಕಬೇಕು' ಎಂದು ಪಟ್ಟುಹಿಡಿದಿದ್ದಾರೆ. ಅವರ ವಾದವನ್ನು ಗಂಡುಬೆಕ್ಕಿನ ಮನೆಯವರು ಒಪ್ಪದಿದ್ದಾಗ ದೊಡ್ಡ ಜಗಳವೇ ಆಗಿದೆ. ಜಗಳ ತಾರಕಕ್ಕೆ ಹೋದಾಗ ಪೊಲೀಸರು ಮಧ್ಯಪ್ರವೇಶಿಸಬೇಕಾಗಿದೆ! ಪಾಪ.... ಆ ಬೆಕ್ಕುಗಳಿಗೇನು ಗೊತ್ತು, ತಮ್ಮ ಮಿಲನ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗುತ್ತದೆ ಅಂತ? ಹಾಗಾಗಿ, ಇನ್ನೇನೇ 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಎಂಬ ಸಾಲುಗಳನ್ನು 'ಬೆಕ್ಕಿಗೆ ಚೆಲ್ಲಾಟ ಮಾಲೀಕರಿಗೆ ಪ್ರಾಣಸಂಕಟ' ಎಂದು ಬದಲಾಯಿಸಬೇಕು. ಅಕಸ್ಮಾತ್, ಗಂಡು ಬೆಕ್ಕಿನ ಮಾಲೀಕರು ಮೊದಲೇ ತಮ್ಮ ಬೆಕ್ಕಿನಿಂದಲೇ ನಿಮ್ಮ ಹೆಣ್ಣುಬೆಕ್ಕು ಗರ್ಭಿಣಿಯಾಗಿದ್ದಂತೆ ಹೇಗೆ? ಹೇಳಿ ಅಂತ ಕೇಳಿದ್ದರೇನು ಗತಿ? ಅದಕ್ಕೊಂದು ಉಪಾಯವಿದೆ. ಆ ಬೆಕ್ಕಿನ ಮರಿಗಳ ಡಿಎನ್‌ಎ ಟೆಸ್ಟ್ ಮಾಡಿಸಬೇಕು. ಆಗ ಅಸಲೀ ತಂದೆ ಗೊತ್ತಾಗುತ್ತದೆ! ಬೇರೆಲ್ಲಾದರೂ ಇಂಥದ್ದೇ ಪ್ರಸಂಗ ಬಂದರೆ ಆಯಾ ಸಾಕುಪ್ರಾಣಿಗಳ ಮಾಲೀಕರು ಸಾರಾಸಗಟಾಗಿ ಆ ಪ್ರಾಣಿ ತಮ್ಮದಲ್ಲ ಎಂದು ನುಣುಚಿಕೊಳ್ಳಬಹುದು. ಅದಕ್ಕೂ ಒಂದು ಉಪಾಯವಿದೆ. ಸಾಕುಪ್ರಾಣಿಗಳಿಗೂ ಪ್ರತ್ಯೇಕವಾಗಿ ಆಧಾರ್ ಕಾರ್ಡ್ ಮಾಡಿಸುವಂಥ ನಿಯಮ ಬರಬೇಕು ನೋಡಿ! ಗೋವುಗಳಿಗೆ 'ಪಶು ಆಧಾರ್ ಕಾರ್ಡ್' ಮಾಡಿಸುವ ಚಿಂತನೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಅದನ್ನೇ ಸಾಕುಪ್ರಾಣಿಗಳಿಗೂ ವಿಸ್ತರಿಸಿದರಾಯ್ತು! ಇಷ್ಟೇ ಸಾಲದು, ಮನೆಗಳಲ್ಲಿ ತಯಾರಾಗುವ ಅನ್ನ ಇತ್ಯಾದಿ ಊಟ, ತಿಂಡಿಗಳನ್ನು ಸೇವಿಸುವ ಸಾಕು ನಾಯಿ, ಬೆಕ್ಕುಗಳ ಮಾಹಿತಿಯನ್ನು ಆಯಾ ಕುಟುಂಬದ ರೇಷನ್ ಕಾರ್ಡ್‌ನಲ್ಲಿ ಸೇರಿಸಬೇಕು. ಆಗ ಯಾವುದೇ ಗಂಡು ಬೆಕ್ಕಿನ, ಗಂಡು ನಾಯಿಯ ಮಾಲೀಕರು ಎಸ್ಕೇಪ್ ಆಗಲಿಕ್ಕೆ ಚಾನ್ಸೇ ಇರಲ್ಲ ನೋಡಿ!

ಸಂಪಾದಕರ ಸದ್ಯಶೋಧನೆ

ರೆಸಿಗ್ನೇಷನ್ ಸಿಂಡ್ರೋಮ್ ಎಂದರೇನು?

ನೀವು 'ರೆಸಿಗ್ನೇಷನ್ ಸಿಂಡ್ರೋಮ್' ಬಗ್ಗೆ ಕೇಳಿದ್ದೀರಾ? ಇದು ವೈದ್ಯಕೀಯ ಜಗತ್ತನ್ನು ಬೆರಗುಗೊಳಿಸಿದ ಮತ್ತು ಕಳವಳಕ್ಕೀಡು ಮಾಡಿದ ಒಂದು ವಿಶಿಷ್ಟ ಮಾನಸಿಕ ಸ್ಥಿತಿ. ಇದು ಮುಖ್ಯವಾಗಿ ನಿರಾಶ್ರಿತ ಮಕ್ಕಳಲ್ಲಿ ಕಂಡುಬರುವ ಒಂದು ನಿಗೂಢ ಕಾಯಿಲೆಯಾಗಿದೆ. ಹಾಗೆ ನೋಡಿದರೆ, ಇದು ಒಂದು ತೀವ್ರ ಸ್ವರೂಪದ 'ಡಿಪ್ರೆಸಿವ್ ಸ್ಟೂಪರ್' (Depressive Stupor) ಸ್ಥಿತಿ. ಇಲ್ಲಿ ಮಕ್ಕಳು ಹೊರಗಿನ ಪ್ರಪಂಚದಿಂದ ಸಂಪೂರ್ಣವಾಗಿ ಸಂಪರ್ಕ ಕಡಿದುಕೊಳ್ಳುತ್ತಾರೆ. ಅವರು ಮಾತನಾಡುವುದನ್ನು ನಿಲ್ಲಿಸುತ್ತಾರೆ, ಆಹಾರ ಸೇವಿಸುವುದಿಲ್ಲ, ಕಣ್ಣು ತೆರೆಯುವುದಿಲ್ಲ ಮತ್ತು ದೈಹಿಕವಾಗಿ ಯಾವುದೇ ಚಲನೆ ತೋರುವುದಿಲ್ಲ. ನೋಡಲು ಅವರು 'ಕೋಮಾ' ಸ್ಥಿತಿಯಲ್ಲಿರುವಂತೆ ಅಥವಾ 'ಜೀವಂತ ಶವ'ಗಳಂತೆ ಕಾಣುತ್ತಾರೆ. ಆದರೆ, ವೈದ್ಯಕೀಯ ಪರೀಕ್ಷೆಗಳಲ್ಲಿ ಅವರ ಮಿದುಳು ಅಥವಾ ದೇಹದಲ್ಲಿ ಯಾವುದೇ ದೈಹಿಕ ಹಾನಿ ಕಂಡುಬರುವುದಿಲ್ಲ. ಈ ವಿಚಿತ್ರ ಸ್ಥಿತಿಯು ಮೊದಲ ಬಾರಿಗೆ ಸ್ವೀಡನ್ ದೇಶದಲ್ಲಿ 1990ರ ದಶಕದ ಉತ್ತರಾರ್ಧದಲ್ಲಿ ವರದಿಯಾಯಿತು. ವಿಶೇಷವೆಂದರೆ, ಇದು ಹೆಚ್ಚಾಗಿ ಸೋವಿಯತ್ ಒಕ್ಕೂಟದಿಂದ ಅಥವಾ ಯುಗೊಸ್ಲಾವಿಯಾದಂಥ ದೇಶಗಳಿಂದ ಸ್ವೀಡನ್‌ಗೆ ಆಶ್ರಯ ಅರಸಿ ಬಂದ ನಿರಾಶ್ರಿತರ ಮಕ್ಕಳಲ್ಲಿ ಮಾತ್ರ ಕಂಡುಬಂದಿದೆ. 2003ರಿಂದ 2005ರ ಅವಧಿಯಲ್ಲಿ ಸ್ವೀಡನ್ನಲ್ಲಿ ನೂರಾರು ಇಂಥ ಪ್ರಕರಣಗಳು ದಾಖಲಾದವು. ಈ ಸಿಂಡ್ರೋಮ್ ದಿಢೀರನೆ ಬರುವುದಿಲ್ಲ. ಇದು ಹಂತಹಂತವಾಗಿ ಬೆಳೆಯುತ್ತದೆ. ಮಗುವು ಖಿನ್ನತೆಗೆ ಒಳಗಾಗುವುದು, ಆಟವಾಡುವುದನ್ನು ನಿಲ್ಲಿಸುವುದು ಮತ್ತು ಇತರರೊಂದಿಗೆ ಬೆರೆಯದೆ ಒಂಟಿಯಾಗಿರುವುದು ಇದರ ಲಕ್ಷಣಗಳು. ಹಸಿವು ಕಡಿಮೆಯಾಗುವುದು, ಮಾತು ನಿಲ್ಲಿಸುವುದು ಮತ್ತು ಸ್ಕೂಲಿಗೆ ಹೋಗಲು ನಿರಾಕರಿಸುವುದು ಸಹ ಇತರ ಲಕ್ಷಣಗಳೇ. ಮಗು ಹಾಸಿಗೆ ಹಿಡಿಯುತ್ತದೆ. ಕಣ್ಣುಗಳನ್ನು ಬಿಡುವುದಿಲ್ಲ. ನೋವು ನೀಡಿದರೂ ಪ್ರತಿಕ್ರಿಯಿಸುವುದಿಲ್ಲ. ಮಲ-ಮೂತ್ರ ವಿಸರ್ಜನೆಯ ಮೇಲೆಯೂ ಹತೋಟಿ ಇರುವುದಿಲ್ಲ. ಈ ಹಂತದಲ್ಲಿ ಮಕ್ಕಳಿಗೆ ಟ್ಯೂಬ್ ಮೂಲಕ ಆಹಾರ ನೀಡಬೇಕಾಗುತ್ತದೆ.

ಇದಕ್ಕೆ ಕಾರಣವೇನು? ವೈದ್ಯರು ಮತ್ತು ಮನೋವಿಜ್ಞಾನಿಗಳು ಇದರ ಹಿಂದೆ ಕೇವಲ ದೈಹಿಕ ಕಾರಣಗಳಲ್ಲದೇ, ಆಳವಾದ ಮಾನಸಿಕ ಮತ್ತು ಸಾಮಾಜಿಕ ಕಾರಣಗಳಿವೆ ಎಂದು ನಂಬುತ್ತಾರೆ. ಈ ಮಕ್ಕಳು ತಮ್ಮ ತಾಯ್ನಾಡಿನಲ್ಲಿ ಯುದ್ಧ, ಹಿಂಸೆ ಅಥವಾ ಕಿರುಕುಳವನ್ನು ನೋಡಿರುತ್ತಾರೆ. ಹೊಸ ದೇಶಕ್ಕೆ ಬಂದಾಗಲೂ ಅಲ್ಲಿ ಆಶ್ರಯ ಸಿಗುತ್ತದೋ ಇಲ್ಲವೋ ಎಂಬ ಅನಿಶ್ಚಿತತೆ ಕಾಡುತ್ತದೆ. ಸರಕಾರವು ಅವರ ಆಶ್ರಯದ ಅರ್ಜಿಯನ್ನು ತಿರಸ್ಕರಿಸಿದಾಗ ಅಥವಾ ಅವರ ಕುಟುಂಬವನ್ನು ದೇಶದಿಂದ ಹೊರಹಾಕುವ ಆತಂಕ ಎದುರಾದಾಗ, ಮಗುವು 'ಬದುಕುವುದರಲ್ಲಿ ಅರ್ಥವಿಲ್ಲ' ಎಂಬ ತೀರ್ಮಾನಕ್ಕೆ ಬಂದು ಪ್ರಜ್ಞಾಪೂರ್ವಕವಾಗಿ ಪ್ರಪಂಚದಿಂದ ಹಿಂದೆ ಸರಿಯುತ್ತದೆ. ಪೋಷಕರ ಆತಂಕವು ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಮಕ್ಕಳು ತಮ್ಮ ಕುಟುಂಬದ ಅಸ್ತಿತ್ವಕ್ಕೆ ಅಪಾಯವಿದೆ ಎಂದು ಅರಿತಾಗ, ಈ ಸ್ಥಿತಿಗೆ ಜಾರುತ್ತಾರೆ. ಇದು ಸ್ವೀಡನ್ನಿನಲ್ಲಿ ಹೆಚ್ಚಾಗಿ ಕಂಡುಬರುವುದರಿಂದ, ಇದನ್ನು ಒಂದು 'ಸಾಂಸ್ಕೃತಿಕವಾಗಿ ರೂಪುಗೊಂಡ ಮಾನಸಿಕ ಸ್ಥಿತಿ' ಎಂದೂ ಕರೆಯುತ್ತಾರೆ. ಈ ಕಾಯಿಲೆಗೆ ಯಾವುದೇ ಮಾತ್ರೆ ಅಥವಾ ಶಸ್ತ್ರಚಿಕಿತ್ಸೆ ಮದ್ದಲ್ಲ. ಬದಲಾಗಿ, 'ಸುರಕ್ಷತೆಯ ಭಾವನೆ' ನೀಡುವುದೇ ಏಕೈಕ ಚಿಕಿತ್ಸೆ. ಸ್ವೀಡನ್ನಿನಲ್ಲಿ ಕಂಡುಬಂದಂತೆ, ಯಾವಾಗ ಆ ಮಗುವಿನ ಕುಟುಂಬಕ್ಕೆ ಆ ದೇಶದಲ್ಲಿ ನೆಲೆಸಲು ಶಾಶ್ವತ ಅನುಮತಿ ಸಿಗುತ್ತದೆಯೋ, ಅಂದಿನಿಂದ ಮಗು ನಿಧಾನವಾಗಿ ಚೇತರಿಸಿಕೊಳ್ಳಲು ಆರಂಭಿಸುತ್ತದೆ. ಪೋಷಕರು ಮಗುವಿನೊಂದಿಗೆ ನಿರಂತರವಾಗಿ ಮಾತನಾಡುವುದು, ಅವರ ಕೈಗಳನ್ನು ಸವರುವುದು ಮತ್ತು ಭರವಸೆ ನೀಡುವುದನ್ನು ಮುಂದುವರಿಸಬೇಕು. ಈ ಸ್ಥಿತಿಯಿಂದ ಹೊರಬರಲು ಕೆಲವು ವಾರಗಳಿಂದ ಹಿಡಿದು ವರ್ಷಗಳೇ ಬೇಕಾಗಬಹುದು. ಮಗು ಮೊದಲು ಕಣ್ಣು ತೆರೆಯುತ್ತದೆ, ನಂತರ ಒಂದು ಹನಿ ನೀರು ಕುಡಿಯುತ್ತದೆ, ಬೆರಳುಗಳನ್ನು ಅಲ್ಲಾಡಿಸುತ್ತದೆ - ಹೀಗೆ ಸುದೀರ್ಘ ಪ್ರಕ್ರಿಯೆಯ ಮೂಲಕ ಸಹಜ ಸ್ಥಿತಿಗೆ ಮರಳುತ್ತದೆ. ರೆಸಿಗ್ನೇಷನ್ ಸಿಂಡ್ರೋಮ್ ಮಾನವ ಹಕ್ಕುಗಳ ಬಗ್ಗೆ ದೊಡ್ಡ ಚರ್ಚೆಯನ್ನು ಹುಟ್ಟುಹಾಕಿದೆ. ನಿರಾಶ್ರಿತರ ಮೇಲಿನ ಕಟ್ಟುನಿಟ್ಟಾದ ಕಾನೂನುಗಳು ಮಕ್ಕಳ ಮನಸ್ಸಿನ ಮೇಲೆ ಎಷ್ಟು ಆಳವಾದ ಗಾಯವನ್ನು ಮಾಡುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಸಮುದಾಯದ ನಾಯಕತ್ವಕ್ಕೆ ಕೈನಲ್ಲಿ ಪೈಪೋಟಿ!

ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್ ಸೇರಿದಂತೆ ಹಲವು ಮುಸ್ಲಿಂ ನಾಯಕರು ಸುದ್ದಿಗೋಷ್ಠಿ ನಡೆಸಿ, 'ತಮ್ಮ ಪಕ್ಷದ ಹಿರಿಯ ನಾಯಕರಿಂದಲೇ ಪಕ್ಷದ ಅಭ್ಯರ್ಥಿ ವಿರುದ್ಧ ಷಡ್ಯಂತ್ರ ನಡೆದಿದೆ' ಎಂದು ಆರೋಪಿಸಿದರು. ಈ ಸುದ್ದಿಗೋಷ್ಠಿಯ ಬೆನ್ನಿಗೆ ಅಬ್ದುಲ್ ಜಬ್ಬರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಆಗಿತ್ತು. ಇದೀಗ ನಾಸೀರ್ ಅಹ್ಮದ್ ರಾಜೀನಾಮೆಯೂ ಖಚಿತವಾಗಿದೆ ಎಂದು ಕೇಳಿಬರುತ್ತಿದೆ.

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ಪ್ರಜಾಪ್ರಭುತ್ವ ದೇಶವಾಗಿರುವ ಭಾರತದ ಸಂವಿಧಾನದ ಪೀಠಿಕೆಯಲ್ಲಿಯೇ 'ಜಾತ್ಯತೀತ' ದೇಶವೆಂದು ಒಪ್ಪಿಕೊಂಡಿದ್ದರೂ, ನಮ್ಮಲ್ಲಿ ಜಾತಿ ಮೀರಿ ಯೋಚಿಸಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯಿದೆ. ದೇಶದಲ್ಲಿ ಪ್ರತಿ ಹೆಜ್ಜೆಯಿಡುವಾಗಲೂ, ಅದಕ್ಕೆ ಜಾತಿ ಅಥವಾ ಧರ್ಮದ ನೆರಳು ಬೀರುವುದು ಸುಳ್ಳಲ್ಲ. ಅದರಲ್ಲಿಯೂ ರಾಜಕೀಯ ರಂಗದ, ಪ್ರವೇಶದಿಂದ ಹಿಡಿದು ನಿರ್ಗಮನದ ವರೆಗೆ ಈ ಲೆಕ್ಕಾಚಾರದಲ್ಲಿಯೇ ನಡೆಯುವುದು ನಿಶ್ಚಿತ. ಜಾತಿ-ಧರ್ಮ ಮೀರಿದ ಆಲೋಚನೆಗಳಿರಬೇಕೆಂದು ಉದ್ದುದ್ದ ಭಾಷಣ ಮಾಡಿದರೂ, ಅಂತಿಮವಾಗಿ 'ಇವ ಯಾವ ಜಾತಿ'ಯವನೆಂದೇ ಆಲೋಚನೆ ಮಾಡುವುದನ್ನು ನೋಡಿದ್ದೇವೆ.

ಯಾವುದೇ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯಿಂದ ಹಿಡಿದು, ಚುನಾವಣಾ ಪ್ರಚಾರದಲ್ಲಿ ಯಾರು ಭಾಗವಹಿಸಬೇಕು ಎನ್ನುವುದೂ ಸಹ ಬಹುತೇಕ ಸಮಯದಲ್ಲಿ ಇದೇ ಜಾತಿ-ಧರ್ಮದ ಮೇಲೆ ತೀರ್ಮಾನವಾಗುತ್ತದೆ. ಕೆಲ ದಿನಗಳ ಹಿಂದೆ ಮುಕ್ತಾಯಗೊಂಡ ಉಪಚುನಾವಣೆಯ ವಿಷಯದಲ್ಲಿಯೂ ಇದೇ ಜಾತಿ-ಧರ್ಮದ ವಿಷಯದಲ್ಲಿ ಶುರುವಾದ ಗದ್ದಲ, ಇದೀಗ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಜ್ವಾಲೆಯಾಗಿ ಉರಿಯುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಅದರಲ್ಲಿಯೂ ಅನುಕಂಪದ ಆಧಾರದಲ್ಲಿ 'ಸುಲಭ'ಕ್ಕೆ ಗೆಲ್ಲಬಹುದಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಭ್ಯರ್ಥಿ ಆಯ್ಕೆ ವಿಷಯದಲ್ಲಿನ ಗೊಂದಲ, ಗಲಾಟೆ, ವಿವಾದದಿಂದ ಗೆಲ್ಲುವುದು ಸಾಧ್ಯವೇ? ಎನ್ನುವ ಆತಂಕಕ್ಕೆ ಕಾಂಗ್ರೆಸ್‌ನ್ನು ದೂಡುವ ಹಂತಕ್ಕೆ ಬಂದು ನಿಂತಿದೆ.

ಹಾಗೇ ನೋಡಿದರೆ, ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶಾಮನೂರು ಶಿವಶಂಕರಪ್ಪ ಅವರು ನಿಧನಗೊಂಡ ದಿನದಿಂದಲೂ ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿಷಯದಲ್ಲಿ ಸಮಸ್ಯೆಯಾಗುತ್ತದೆ ಎನ್ನುವುದು ನಿರೀಕ್ಷಿಸಲಾಗಿತ್ತು. ಏಕೆಂದರೆ, ಶಿವಶಂಕರಪ್ಪ ಬಳಿಕ ಈ ಕ್ಷೇತ್ರಕ್ಕೆ ಮುಸ್ಲಿಂರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡಬೇಕು, ಅದರಲ್ಲಿಯೂ ಅಬ್ದುಲ್ ಜಬ್ಬರ್ ಅವರನ್ನೇ ಮಾಡಬೇಕು ಎನ್ನುವ ಹಠ ಕಾಂಗ್ರೆಸ್‌ನ ಕೆಲ ಮುಸ್ಲಿಂ ನಾಯಕರು ಹಿಡಿದಿದ್ದರು. ಆದರೆ ಹಾಲಿ ಶಾಸಕರು ಮೃತಪಟ್ಟಾಗ ನಡೆಯುವ ಉಪಚುನಾವಣೆಗೆ ಅವರ ಕುಟುಂಬದ ಸದಸ್ಯರಿಗೆ ನೀಡಬೇಕು ಎನ್ನುವ ಅಲಿಖಿತ ನಿಯಮವನ್ನು ಕಾಂಗ್ರೆಸ್ ಮಾಡಿಕೊಂಡು ಬಂದಿರುವುದರಿಂದ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ತಮ್ಮ ತಂದೆಯ ಟಿಕೆಟ್ ಮಗನಿಗೆ ಸಿಗಬೇಕು ಎಂದು ಪಟ್ಟು ಹಿಡಿದಿದ್ದರಿಂದ ಗೊಂದಲ ಶುರುವಾಯಿತು. ಆರಂಭದಲ್ಲಿ ಮುಸ್ಲಿಂ ನಾಯಕರೆಲ್ಲ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ಸಿಗಬೇಕೆಂದು ಹಠಕ್ಕೆ ಬಿದ್ದರೂ, ಸಮರ್ಥ್‌ಗೆ ಟಿಕೆಟ್ ನೀಡುತ್ತಿದ್ದಂತೆ ಜಮೀರ್ ಅಹ್ಮದ್, ನಾಸೀರ್ ಅಹ್ಮದ್ ಹಾಗೂ ಅಬ್ದುಲ್ ಜಬ್ಬರ್ ಹೊರತುಪಡಿಸಿ ಬಹುತೇಕ ಮುಸ್ಲಿಂ ನಾಯಕರು ಸಮರ್ಥ್ ಪರ ಪ್ರಚಾರಕ್ಕೆ ಇಳಿದಿದ್ದರು, ಇದೀಗ ಚುನಾವಣಾ ಮತದಾನವೂ ಮುಕ್ತಾಯವಾಗಿದೆ.

ಮತದಾನದ ಬಳಿಕ ಕಳೆದ ಶುಕ್ರವಾರ ಕೆಪಿಸಿಸಿ ಕಚೇರಿಯಲ್ಲಿ ಮುಸ್ಲಿಂ ನಾಯಕರಾದ ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್, ಯಾಸೀರ್ ಪಠಾಣ್ ಸೇರಿದಂತೆ ಹಲವು ಮುಸ್ಲಿಂ ನಾಯಕರು ಸುದ್ದಿಗೋಷ್ಠಿ ನಡೆಸಿ, 'ತಮ್ಮ ಪಕ್ಷದ ಹಿರಿಯ ನಾಯಕರಿಂದಲೇ ಪಕ್ಷದ ಅಭ್ಯರ್ಥಿ ವಿರುದ್ಧ ಷಡ್ಯಂತ್ರ ನಡೆದಿದೆ' ಎಂದು ಆರೋಪಿಸಿದರು. ಯಾವ ಹೆಸರನ್ನು ಪ್ರಸ್ತಾಪಿಸದಿದ್ದರೂ, ಈ ಆರೋಪ ನೇರವಾಗಿ ಸಚಿವ ಜಮೀರ್ ಅಹ್ಮದ್, ನಾಸೀರ್ ಅಹ್ಮದ್ ಹಾಗೂ ಅಬ್ದುಲ್ ಜಬ್ಬರ್ ವಿರುದ್ಧ ಮಾಡಿದ್ದು ಎನ್ನುವುದು ಸ್ಪಷ್ಟವಾಗಿದೆ. ಈ ಸುದ್ದಿಗೋಷ್ಠಿಯ ಬೆನ್ನಿಗೆ ಅಬ್ದುಲ್ ಜಬ್ಬರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಆಗಿತ್ತು. ಇದೀಗ ನಾಸೀರ್ ಅಹ್ಮದ್ ರಾಜೀನಾಮೆಯ ಕುರಿತು ಗುಸು-ಗುಸು ಕೇಳಿಬರುತ್ತಿದೆ. ಈ ಮೂಲಕ ಕಾಂಗ್ರೆಸ್ ಮುಸ್ಲಿಂ ನಾಯಕರಲ್ಲಿ 'ಅಸಮಾಧಾನ' ಬಹುದೊಡ್ಡ ಪ್ರಮಾಣದಲ್ಲಿ ಎನ್ನುವುದು ಸ್ಪಷ್ಟ.

ಮೇಲ್ನೋಟಕ್ಕೆ ದಾವಣಗೆರೆ ದಕ್ಷಿಣ ಕ್ಷೇತ್ರದ ವಿಷಯದಲ್ಲಿ ಶುರುವಾದ ಗೊಂದಲದ ನೆಪದಲ್ಲಿ ಕಾಂಗ್ರೆಸ್ ಮುಸ್ಲಿಂ ನಾಯಕರುಗಳ ನಡುವೆ ಕಿತ್ತಾಟ ಆರಂಭವಾಗಿದೆ. ಆದರೆ ಹಲವು ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಮುಸ್ಲಿಂ ನಾಯಕತ್ವವನ್ನು ಯಾರು ವಹಿಸಿಕೊಳ್ಳಬೇಕು ಎನ್ನುವ ವಿಷಯದಲ್ಲಿ ಈ

ಕಿತ್ತಾಟ ಇದ್ದೇ ಇದೆ. 2018ರಲ್ಲಿ ಜಮೀರ್ ಅಹ್ಮದ್ ಜೆಡಿಎಸ್‌ನಿಂದ ಕಾಂಗ್ರೆಸ್ ಬಂದಾಗಿನಿಂದ ಈ ಕಿತ್ತಾಟ ಶುರುವಾಗಿದ್ದರೂ, ಬಹಿರಂಗವಾಗಲು ಶುರುವಾಗಿದ್ದು ಇತ್ತೀಚಿನ ವರ್ಷಗಳಲ್ಲಿ. ಈ ರೀತಿ ಸಮುದಾಯದ ನಾಯಕರಲ್ಲಿಯೇ, ಕಿತ್ತಾಟಕ್ಕೆ ಕಾರಣವೇನೆಂದು ನೋಡಿದರೆ ಸಿಗುವುದು ಮಾತ್ರ 'ಮತಬ್ಯಾಂಕ್' ರಾಜಕಾರಣ.

ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದಲ್ಲಿ ಕಾಂಗ್ರೆಸ್‌ನೊಂದಿಗೆ ಈಗಲೂ ಗಟ್ಟಿಯಾಗಿ ನಿಂತಿರುವ ಸಮುದಾಯದ ಪೈಕಿ ಮುಸ್ಲಿಮರು ಮೊದಲ ಪಂಕ್ತಿಯಲ್ಲಿ ನಿಲ್ಲುತ್ತಾರೆ. ದೇಶದಲ್ಲಿ ದಿನದಿಂದ ದಿನಕ್ಕೆ ಕಾಂಗ್ರೆಸ್ ನಂಬಿಕೆ ಕಳೆದುಕೊಳ್ಳುತ್ತಿದ್ದರೂ, ಕರ್ನಾಟಕದಲ್ಲಿ ಮುಸ್ಲಿಮರು ಈಗಲೂ ಅನಿವಾರ್ಯತೆಗೆ ಸಿಲುಕಿ ಕಾಂಗ್ರೆಸ್‌ನೊಂದಿಗಿದ್ದಾರೆ. ಆದರೆ ಮುಸ್ಲಿಮರಿಂದ ಈ ಪ್ರಮಾಣದ ಬೆಂಬಲ ದೊರೆಯುತ್ತಿದ್ದರೂ ಟಿಕೆಟ್ ನೀಡುವ ವಿಚಾರ ಮಾತ್ರ, ಟಿಕೆಟ್ ನೀಡುವ ವಿಷಯದಲ್ಲಿ ಈಗಲೂ ಬಹುದೊಡ್ಡ ಸಂಖ್ಯೆಯಲ್ಲಿಲ್ಲ. ಒಂಬತ್ತು ವಿಧಾನಸಭಾ ಸದಸ್ಯರು, ನಾಲ್ಕು ವಿಧಾನಪರಿಷತ್ ಸದಸ್ಯರನ್ನು ಆಡಳಿತಾರೂಢ ಕಾಂಗ್ರೆಸ್ ಹೊಂದಿದೆ. ಆದರೆ ರಾಜಕೀಯವಾಗಿ ನೋಡುವುದಾದರೆ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯನ್ನು ಹೊರತುಪಡಿಸಿದರೆ ಮುಸ್ಲಿಮರು ಪ್ರಮುಖ ಪಾತ್ರವಹಿಸುತ್ತಾರೆ.

ಜಾತಿ ಗಣತಿಯ ಪ್ರಕಾರ ರಾಜ್ಯದಲ್ಲಿ ಸುಮಾರು ಒಂದರಿಂದ 1.10 ಕೋಟಿ ಮುಸ್ಲಿಂ ಮತದಾರರಿದ್ದಾರೆ. ರಾಜ್ಯದ 40ರಿಂದ 45 ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರವನ್ನು ಮುಸ್ಲಿಂ ಮತದಾರರು ವಹಿಸುತ್ತಾರೆ. ಆದರೆ ಇತರೆ ರಾಜ್ಯಗಳನ್ನು ಮೀರಿ, ಕರ್ನಾಟಕದಲ್ಲಿ ಮುಸ್ಲಿಂ ಮತಗಳು ಬಹುದೊಡ್ಡ ಪ್ರಮಾಣದಲ್ಲಿ ಹರಿದು ಹಂಚಿ ಹೋಗಲು ಅವಕಾಶವಿಲ್ಲ. ಏಕೆಂದರೆ, ಬಿಜೆಪಿಯೊಂದಿಗೆ ಬಹು ಮುಸ್ಲಿಮರು ಕಾಣಿಸಿಕೊಳ್ಳುವುದಿಲ್ಲ. ಇನ್ನು ಈ ಹಿಂದೆ ಜೆಡಿಎಸ್ ಮುಸ್ಲಿಂ ಮತಗಳನ್ನು ಸೆಳೆಯುವ ಆತಂಕ ಕಾಂಗ್ರೆಸ್‌ಗಿತ್ತು. ಆದರೆ, ಬಿಜೆಪಿಯೊಂದಿಗೆ ಮೈತ್ರಿ ಮಾಡಿರುವ ಕಾರಣಕ್ಕೆ ಜೆಡಿಎಸ್ ಚಿಂತೆ ಕಾಂಗ್ರೆಸ್ ನಾಯಕರಿಗೆ ಇಲ್ಲವಾಗಿದೆ. ಓವೈಸಿ, ಎಸ್‌ಡಿಪಿಐಗೆ ರಾಜ್ಯ ರಾಜಕಾರಣದಲ್ಲಿ ಬಹುದೊಡ್ಡ ಅವಕಾಶ ಸದ್ಯದ ಮಟ್ಟಿಗಂತೂ ಇಲ್ಲವಾಗಿರುವುದರಿಂದ, ಮುಂದಿನ ಎರಡು ವಿಧಾನಸಭಾ ಚುನಾವಣೆವರೆಗಾದರೂ ಕಾಂಗ್ರೆಸ್‌ಗೆ ಮುಸ್ಲಿಂ ಮತ ವಿಭಜನೆಯ ಆತಂಕವಿಲ್ಲ.

ಇಷ್ಟೆಲ್ಲ ಅನುಕೂಲವಿದ್ದರೂ, ಕರ್ನಾಟಕ ಕಾಂಗ್ರೆಸ್‌ನಲ್ಲಿ ಈಗಲೂ ಮುಸ್ಲಿಂ ಸಮುದಾಯದ ವಿಷಯದಲ್ಲಿ ಬಹುದೊಡ್ಡ ಶೂನ್ಯತೆ ಸೃಷ್ಟಿಯಾಗಿದೆ ಎಂದರೆ ಸುಳ್ಳಲ್ಲ. ಜಾಫರ್ ಶರೀಫ್, ಅವರಿದ್ದಾಗ ಇಡೀ ಸಮುದಾಯದ ನಾಯಕತ್ವವನ್ನು ಅವರು ವಹಿಸಿಕೊಂಡಿದ್ದರು. ಸದ್ಯ ಕೆ. ರೆಹಮಾನ್ ಖಾನ್ ಅವರಿದ್ದರೂ, ವಯಸ್ಸಿನ ಕಾರಣಕ್ಕೆ ಈ ಹಿಂದಿನಂತೆ ಸಮುದಾಯವನ್ನು ಸಂಘಟಿಸಲು ಸಾಧ್ಯವಾಗುತ್ತಿಲ್ಲ. ಈ ನಡುವೆ ರೋಷನ್ ಬೇಗ್ ಅವರು ಸಮುದಾಯವನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಪಾತ್ರವಹಿಸುತ್ತಿದ್ದರು. ಆದರೆ ಅವರು ಪಕ್ಷದಿಂದ ಅಂತರ ಕಾಯ್ದುಕೊಂಡ ಬಳಿಕ ಈ ಸ್ಥಾನವನ್ನು ಇನ್ಯಾರು ಏರಬೇಕು ಎನ್ನುವ ಪ್ರಶ್ನೆ ಬಂದಾಗಲೇ, ಎರಡನೇ ಹಾಗೂ ಮೂರನೇ ಹಂತದ ನಾಯಕರಲ್ಲಿ ಪೈಪೋಟಿ ಶುರುವಾಗಿರುವುದು. ಈ ಸ್ಥಾನವನ್ನು ಯಾರು ಪಡೆಯಲಿದ್ದಾರೆ ಎನ್ನುವುದಕ್ಕೆ ಹಲವು ವರ್ಷಗಳಿಂದ ಉತ್ತರ ಹುಡುಕುವ ಪ್ರಯತ್ನದಲ್ಲಿ ನಾಯಕರಿದ್ದಾರೆ.

ಕಾಂಗ್ರೆಸ್‌ನಲ್ಲಿ ಮುಸ್ಲಿಂ ನಾಯಕರಿಗೇನು ಕೊರತೆ ಇಲ್ಲ. ಆದರೆ ರಾಜ್ಯಾದ್ಯಂತ ಇಡೀ ಸಮುದಾಯವನ್ನು ತೆಗೆದುಕೊಂಡು ಹೋಗುವ ನಾಯಕ ಯಾರು ಎನ್ನುವ ಪ್ರಶ್ನೆ ಬಂದಾಗ ಸ್ಪಷ್ಟ ಉತ್ತರ ದೊರೆಯುತ್ತಿಲ್ಲ. ಈ ಹಿಂದೆ ಯು.ಟಿ. ಖಾದರ್ ಅವರನ್ನು ಮುನ್ನೆಲೆಗೆ ತರಲು ವಿಧಾನಸಭಾ ಪ್ರತಿಪಕ್ಷ ಉಪನಾಯಕರನ್ನಾಗಿ ಮಾಡಲಾಗಿತ್ತು. ಆದರೆ ಸಿಕ್ಕ ಅವಕಾಶವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವಲ್ಲಿ ಅವರು ಎಡವಿದರೂ ಎಂದರೆ ತಪ್ಪಾಗುವುದಿಲ್ಲ. ಇನ್ನು ತನ್ವೀರ್ ಸೇಠ್ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿ, ಸಂಘಟನೆಗೆ ಒತ್ತು ನೀಡುವ ಪ್ರಯತ್ನಕ್ಕೆ ಪಕ್ಷದ ಹೈಕಮಾಂಡ್ ಮುಂದಾಯಿತು. ಅವರು ಮೈಸೂರು ಜಿಲ್ಲೆಗೆ ಸೀಮಿತವಾದರು. ಈ ಎಲ್ಲದರ ನಡುವೆ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಜಮೀರ್ ಅಹ್ಮದ್, ಮುಸ್ಲಿಂ ಸಮುದಾಯದ ನಾಯಕತ್ವ ಪಡೆಯಲು ಹಲವು ರೀತಿ ಪ್ರಯತ್ನ ಮಾಡಿ, ಕೊಂಚ ಮಟ್ಟಿಗೆ ಯಶಸ್ವಿಯೂ ಆಗಿದ್ದಾರೆ. ಆದರೀಗ ದಾವಣಗೆರೆ ದಕ್ಷಿಣ ಕ್ಷೇತ್ರದ ಬಂಡಾಯದ ಮೂಲಕ ಜಮೀರ್ ಅವರನ್ನು ಹಿಂದಿಕ್ಕಿ, ಸಮುದಾಯದ ನಾಯಕತ್ವವನ್ನು ಕ್ಲೇಮ್ ಮಾಡುವ, ಈ ಮೂಲಕ ಮುಂದಿನ ದಿನದಲ್ಲಿ ಸಚಿವ ಸಂಪುಟಕ್ಕೂ 'ಸೇರ್ಪಡೆ'ಯಾಗುವ ಮುಂದಾಲೋಚನೆಯ ಫಲವೇ ರಿಜ್ವಾನ್ ಹಾಗೂ ಸಲೀಂ ಅಹ್ಮದ್ ಅವರ ಸುದ್ದಿಗೋಷ್ಠಿಯ ಬಹಿರಂಗ ಆರೋಪ ಎಂದರೆ ತಪ್ಪಾಗುವುದಿಲ್ಲ.

ಜಮೀರ್, ಅಬ್ದುಲ್ ಜಬ್ಬರ್ ಹಾಗೂ ನಾಸೀರ್ ಅಹ್ಮದ್ ಅವರ ಪರೋಕ್ಷ ಬಂಡಾಯವನ್ನೇ ಮುಂದಿಟ್ಟುಕೊಂಡು ಹೈಕಮಾಂಡ್‌ಗೆ ವರದಿ ಸಲ್ಲಿಸುವ ಕೆಲಸವನ್ನು ಈಗಾಗಲೇ ಮಾಡಲಾಗಿದೆ. ತಾವು ಹೇಳಿದವರಿಗೆ ಟಿಕೆಟ್ ನೀಡಲಿಲ್ಲವೆಂದು, ಕಾಂಗ್ರೆಸ್‌ನ ಪ್ರತಿಷ್ಠಿತ ಕ್ಷೇತ್ರದಲ್ಲಿಯೂ ಪಕ್ಷದ ಅಭ್ಯರ್ಥಿಯ ವಿರುದ್ಧವೇ ಕೆಲಸ ಮಾಡಿರುವುದು ಹೈಕಮಾಂಡ್‌ಗೂ ಇರುಸು-ಮುರುಸು ಉಂಟಾಗಿದೆ. ಜಮೀರ್ ಅಹ್ಮದ್ ಪ್ರಚಾರಕ್ಕೆ ಹೋಗದೇ, ಬಂಡಾಯ ಅಭ್ಯರ್ಥಿಗೆ ಸಹಾಯವಾಗುವಂತೆ ನೋಡಿಕೊಂಡಿದ್ದರೆ, ಇನ್ನೊಂದೆಡೆ ರಿಜ್ವಾನ್ ಹಾಗೂ ಸಲೀಂ ಅಹ್ಮದ್ ಮೊಕ್ಕಾಂ ಹೂಡಿ ಕೆಲಸ ಮಾಡಿದ್ದಾರೆ. ಒಂದು ವೇಳೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸೋತರೆ ಅದರ ನೇರ ಹೊಣೆ ಜಮೀರ್ ಹೋಗುವುದು ನಿಶ್ಚಿತ. ಗೆಲುವಾದರೆ ಶಾಮನೂರು ಕುಟುಂಬಕ್ಕೆ ಹೋಗುವುದು ಖಚಿತ. ಆದ್ದರಿಂದ ಎರಡರಲ್ಲಿ ಏನೇ ಆದರೂ, 'ನಮ್ಮ' ಶ್ರಮವಿದೆ ಎನ್ನುವ ಸಂದೇಶವನ್ನು ರವಾನಿಸುವ ಪ್ರಯತ್ನ ಭಾಗವಾಗಿ ಸುದ್ದಿಗೋಷ್ಠಿ ನಡೆಸಿದ್ದಾರೆ ಎನ್ನುವುದು ಸ್ಪಷ್ಟ.

ಸುಲಭವಾಗಿ ಗೆಲ್ಲಬಹುದಾಗಿದ್ದ ಕ್ಷೇತ್ರದಲ್ಲಿ ಅಬ್ದುಲ್ ಜಬ್ಬರ್‌ಗೆ ಟಿಕೆಟ್ ನೀಡಲಿಲ್ಲ ಎನ್ನುವ ಕಾರಣಕ್ಕೆ ಜಮೀರ್ ನಡೆ ಹೈಕಮಾಂಡ್ ಕಣ್ಣನ್ನು ಕೆಂಪಾಗಿಸಿದೆ. ಏಕೆಂದರೆ, ದೇಶದಲ್ಲೆಡೆ ಕಾಂಗ್ರೆಸ್ ನೆಲೆ ಕಳೆದುಕೊಳ್ಳುತ್ತಿದ್ದರೂ, ಪಕ್ಷ ಗಟ್ಟಿಯಾಗಿ ಕಾಣಿಸಿಕೊಳ್ಳಲು ಪ್ರಮುಖ ಕಾರಣ ಮುಸ್ಲಿಂ ಮತಬ್ಯಾಂಕ್. ಬಿಜೆಪಿ ನಾಯಕರು ಅದೆಷ್ಟೋ ಸರ್ಕಸ್ ಮಾಡಿದರೂ, ಮುಸ್ಲಿಂ ಮತಗಳನ್ನು ಸೆಳೆಯಲು ಸಾಧ್ಯವಾಗುತ್ತಿಲ್ಲ. ಇನ್ನು ಎಸ್‌ಡಿಪಿಐ, ಓವೈಸಿಯಂತಹ ಪಕ್ಷಗಳು ಮುಸ್ಲಿಂ ಮತದಾರರನ್ನೇ ನೆಚ್ಚಿಕೊಂಡಿದ್ದರೂ, ಅವುಗಳ ವ್ಯಾಪ್ತಿ ದೊಡ್ಡ ಪ್ರಮಾಣದಲ್ಲಿಲ್ಲ. ಆದ್ದರಿಂದ ಈಗಲೂ ಮುಸ್ಲಿಮರಿಗೆ ರಾಷ್ಟ್ರ ರಾಜಕಾರಣ ಎಂದಾಗ ಕಾಂಗ್ರೆಸ್ ಮೊದಲ ಆಯ್ಕೆಯಾಗಿರುತ್ತದೆ.

ಈ ಕಾರಣಕ್ಕೆ ಕಾಂಗ್ರೆಸ್ ಸಾಧ್ಯವಾದಷ್ಟು ಮುಸ್ಲಿಂ ಮತಗಳನ್ನು ಕ್ರೋಢೀಕರಿಸುವ ಪ್ರಯತ್ನದಲ್ಲಿದ್ದಾರೆ. ಆದರೆ ಕರ್ನಾಟಕದಲ್ಲಿ ಮುಸ್ಲಿಂ ನಾಯಕನೆಂದು ಕ್ಲೇಮ್ ಮಾಡುತ್ತಿರುವ ಜಮೀರ್ ಸೇರಿದಂತೆ ಇತರೆ ನಾಯಕರೇ ವೈಯಕ್ತಿಕ ಪ್ರತಿಷ್ಠೆಗೆ ಬಿದ್ದು ನಡೆದುಕೊಂಡ ರೀತಿಯು ಸುರ್ಜೇವಾಲ ಸೇರಿದಂತೆ ಹಲವು ನಾಯಕರ ಆಕ್ಷೇಪಕ್ಕೆ ಕಾರಣವಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಈ ರಾಜಕೀಯ ಮೇಲಾಟಗಳನ್ನು ಮುಂದಿಟ್ಟುಕೊಂಡು, ಪಕ್ಷದಲ್ಲಿರುವ ಮುಸ್ಲಿಂ ಸಮುದಾಯದ ಎರಡನೇ ಹಂತದ ನಾಯಕರು ಈ ಸ್ಥಾನವನ್ನು ಅಲಂಕರಿಸಲು ಇನ್ನಿಲ್ಲದ ಕಸರತ್ತು ಆರಂಭಿಸಿದ್ದಾರೆ. ಆ ಕಾರಣಕ್ಕಾಗಿಯೇ ಉಪಸಮರದಲ್ಲಿ ಕಾಂಗ್ರೆಸ್ ಗೆದ್ದರೆ ಸಮರ್ಥ್‌ಗಿಂತ ಹೆಚ್ಚಾಗಿ, ಸಲೀಂ, ರಿಜ್ವಾನ್‌ಗೆ ಲಾಭ ಎನ್ನಲಾಗುತ್ತಿದೆ. ಒಂದು ವೇಳೆ ಸೋತರೆ, ಸಮುದಾಯದ ಮೇಲೆ ಇರುವ ಹಿಡಿತ ತೋರಿಸುವಲ್ಲಿ ಜಮೀರ್ ಯಶಸ್ವಿಯಾದರೂ, ಹೈಕಮಾಂಡ್ ವಿರೋಧ ಕಟ್ಟಿಕೊಳ್ಳುವುದು ಖಚಿತ. ಸಮುದಾಯದ ಹಿಡಿತ ಸಾಧಿಸುವುದಕ್ಕೆ ಬಹಿರಂಗ ಅಖಾಡಕ್ಕೆ ಇಳಿದಿರುವ ನಾಯಕರಲ್ಲಿ ಯಾರು ಮೇಲುಗೈ ಸಾಧಿಸಲಿದ್ದಾರೆ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಇತಿಹಾಸ ತಿರುಚಿ ಅಂಬೇಡ್ಕರ್ ಆತ್ಮವನ್ನು ನೋಯಿಸದಿರಿ

ಪದಸಾಗರ
ನವೀನ್ ಸಾಗರ್
vveditoped@gmail.com

ಇಂದು ಏಪ್ರಿಲ್ ಹದಿನಾಲ್ಕು. ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮಸ್ಮರಣೆಯ ದಿನ. ದೇಶಕ್ಕೆ ಸಂವಿಧಾನ ಕೊಟ್ಟ ಅಂಬೇಡ್ಕರ್ ಇಂದು ಬದುಕಿದ್ದಿದ್ದರೆ ತಮ್ಮ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವವರನ್ನು ಕಂಡು, ತಮ್ಮ ಹೆಸರಿನಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವವರನ್ನು ಕಂಡು, ತಮ್ಮ ಮಾತುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ ದೇಶದಲ್ಲಿ ಅಶಾಂತಿ ಸೃಷ್ಟಿಸುತ್ತಿರುವವರನ್ನು ಕಂಡು ಅದೆಷ್ಟು ಮರುಗುತ್ತಿದ್ದರೋ, ಅದೆಷ್ಟು ಆಕ್ರೋಶಗೊಳ್ಳುತ್ತಿದ್ದರೋ! ಈ ದೇಶ ಅಂಬೇಡ್ಕರ್ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡಷ್ಟು ಗಾಂಧಿಯ ಹೆಸರನ್ನೂ ಮಾಡಿರಲಿಕ್ಕಿಲ್ಲ. ಯಾವುದೇ ವಿಚಾರವಿರಲಿ, ಅಂಬೇಡ್ಕರ್ ಹೆಸರು ಪ್ರಸ್ತಾಪಿಸಿಬಿಟ್ಟರೆ ಅಲ್ಲಿಗೆ ಚೆಕ್‌ಮೇಟ್ ಎಂಬಂತಾಗಿ ಹೋಗಿದೆ. ಜಾತಿನಿಂದನೆಗೆ, ಜಾತಿಲಾಭ ಪಡೆಯೋದಕ್ಕೆ, ಮತ ಸೆಳೆಯೋದಕ್ಕೆ, ಅಪರಾಧಗಳಿಂದ, ಹಗರಣಗಳಿಂದ ಬಚಾವಾಗೋದಕ್ಕೆ ಎಲ್ಲದಕ್ಕೂ ಅಂಬೇಡ್ಕರ್ ಎಂಬ ಹೆಸರೇ ಅಸ್ತ್ರ ಅಂಬೇಡ್ಕರ್ ಎಂಬ ಹೆಸರೇ ಗುರಾಣಿ! ಇದರ ಜತೆಗೆ ಅಂಬೇಡ್ಕರ್ ಹಿಂದೂ ವಿರೋಧಿಯಾಗಿದ್ದರು, ಹಿಂದೂ ಧರ್ಮದಿಂದ ರೋಸತ್ತಿದ್ದರು ಎಂದು ಬಿಂಬಿಸುವ ಶತಪ್ರಯತ್ನ. ಅವರ ಜನ್ಮಸ್ಮರಣೆಯ ಸಂದರ್ಭದಲ್ಲಿ ಒಂದಷ್ಟು ಸತ್ಯ ಹೇಳುವ ಮೂಲಕ ಅವರಿಗೆ ಗೌರವ ಸಮರ್ಪಿಸುವುದು ಈ ಬರಹದ ಉದ್ದೇಶ.

ಅಜೆಂಡಾ ಅಂದ್ರೇನು ಪ್ರಪಗ್ಯಾಂಡ ಅಂದ್ರೆ ಏನು ಅನ್ನೋದನ್ನು ನಕಲಿ ಹಿಸ್ಟಾರಿಯನ್‌ಗಳಿಂದ, ಬುದ್ಧಿಜೀವಿಗಳಿಂದ ಕಲಿಯಬೇಕು. ನಮ್ಮ ಇತಿಹಾಸದ ಪುಸ್ತಕಗಳು, ನಮ್ಮ ಲೆಫ್ಟಿಸ್ಟ್ ಮೀಡಿಯಾಗಳು, ನಮ್ಮ ಬುದ್ಧಿಜೀವಿಗಳು ಇಷ್ಟೂ ದಿನಗಳಲ್ಲಿ ಹೈಲೈಟ್ ಮಾಡ್ತಾ ಬಂದಿರೋದು ಅಂಬೇಡ್ಕರ್ ಅವರಿಗೆ ಹಿಂದುತ್ವದ ವಿರುದ್ಧ ತಕರಾರು ಇತ್ತು ಅನ್ನೋದನ್ನು ಮಾತ್ರ. ಆದರೆ, ಅಂಬೇಡ್ಕರ್ ಅವ್ರು ಇಸ್ಲಾಂ ವಿರುದ್ಧ ಆಡಿರೋ ಮಾತುಗಳನ್ನು, ಇಸ್ಲಾಂನಲ್ಲಿ ಇರೋ ಆಕ್ಷೇಪಣೆಗಳ ಬಗ್ಗೆ ಮಾತಾಡಿರೋದನ್ನು ಯಾವತ್ತಿಗೂ ಜನರೆದುರು ಇಡಲೇ ಇಲ್ಲ.

ನಾನು ಹಿಂದೂ ಆಗಿ ಹುಟ್ಟಿರೋದು ಹೌದು. ಆದರೆ ನಾನು ಹಿಂದೂ ಆಗಿ ಸಾಯೋದಿಲ್ಲ. ಒಂದ್ ವೇಳೆ ಭಾರತ ಹಿಂದೂರಾಷ್ಟ್ರ ಆಗೋದು ಅನಿವಾರ್ಯ ಅಂತಾದ್ರೆ ಅದಕ್ಕಿಂತ ದುರಂತ ಇನ್ನೊಂದಿಲ್ಲ...! ಇದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತಾಗಿತ್ತು ಅಂತಾರೆ ಸೋ ಕಾಲ್ಡ್ ಹಿಸ್ಟಾರಿಯನ್ಸ್. ನಿಜಾನಾ? ಯಾರಿಗೆ ಗೊತ್ತು? ಇತಿಹಾಸ ಏನು ಹೇಳಿದೆಯೋ ಅದನ್ನು ನಾವು ನಂಬಲೇಬೇಕಲ್ವಾ? ಇಂಥ ಮಾತುಗಳನ್ನೇ ಅಸ್ತ್ರವಾಗಿಟ್ಟುಕೊಂಡು ಹಿಂದೂ ದಲಿತರನ್ನು ಮತ್ತು ಮುಸ್ಲಿಮರನ್ನು ಒಗ್ಗೂಡಿಸೋ ಸಂಚುಗಳು ಶುರುವಾಗಿದ್ದು. ಅರ್ಥಾತ್ ಪರೋಕ್ಷ ಮತಾಂತರ. ಮೇಲ್ಜಾತಿಯ ಹಿಂದೂಗಳೆಲ್ಲರೂ ಮುಸಲ್ಮಾನರನ್ನು ಮತ್ತು ಹಿಂದೂ ದಲಿತರನ್ನು ತುಂಬ ಕೆಟ್ಟದಾಗಿ ನಡೆಸ್ಕೊಳ್ತಾ ಇದ್ದಾರೆ. ಹೀಗಾಗಿ ಹಿಂದೂ ದಲಿತರು ಮತ್ತು ಮುಸ್ಲಿಮರು ಒಂದಾಗಬೇಕು ಎಂಬ ಮಾತಿಗೆ ಪೂರಕವಾಗಿ ಹುಟ್ಟಿದ್ದೇ ಜೈ ಭೀಮ್ ಜೈ ಮೀಮ್ ಸ್ಲೋಗನ್. ಸತ್ಯಾಂಶದತ್ತ ನೋಡೋದಾದ್ರೆ, ಸ್ಕೂಲು-ಕಾಲೇಜು ಅಥವಾ ಮೀಡಿಯಾಗಳಲ್ಲಿ ನಮ್ಮ ಮನೆ ಮಕ್ಕಳಿಗೆ, ಸ್ಟೂಡೆಂಟ್‌ಗಳಿಗೆ ಓದೋಕೆ ಸಿಕ್ಕಿರೋದು ಅಂಬೇಡ್ಕರ್ ಅವರ ಪೂರ್ತಿ ವಿಚಾರ ಅಲ್ಲ, ಅಪೂರ್ಣ ವಿಚಾರಗಳು ಮಾತ್ರ.

ಇನ್ನರ್ಧದಷ್ಟು ವಿಚಾರಗಳನ್ನು ಬೇಕಂತಾನೇ ಬಚ್ಚಿಟ್ಟರು ಜಾಣ ಹಿಸ್ಟಾರಿಯನ್ಸ್. ಅವರು ಮುಚ್ಚಿಟ್ಟಿದ್ದಾದರೂ ಏನು? ಅಂಬೇಡ್ಕರ್ ಅವ್ರಿಗೆ ಇಸ್ಲಾಂ ಮತ್ತು ಮುಸ್ಲಿಂ ಸಮಾಜದ ಬಗ್ಗೆ ಇದ್ದ ಅಸಲಿ ಅಭಿಪ್ರಾಯಗಳನ್ನು. ಹೌದು. ಇದನ್ನು ಯಾವ ಪುಸ್ತಕ ಕೂಡ ತಿಳಿಸಲೇ ಇಲ್ಲ. ಆದರೆ, ಯಾವ ಸತ್ಯಗಳೂ ಶಾಶ್ವತವಾಗಿ ಬಚ್ಚಿಡಲು ಸಾಧ್ಯವಿಲ್ಲ. ಅಂದು ಬಚ್ಚಿಟ್ಟಿದ್ದ ಅಂಬೇಡ್ಕರ್ ವಿಚಾರಗಳು ಈಗ ಒಂದೊಂದಾಗಿ ಹೊರಗೆ ಬರ್ತಾ ಇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಹುಟ್ಟಿದ್ದು 1891ರಲ್ಲಿ. ಮಧ್ಯಪ್ರದೇಶದ ಮೌವ್ ಗ್ರಾಮದಲ್ಲಿ. ಅಂಬೇಡ್ಕರ್ ತಂದೆ ಹೆಸ್ರು ರಾಮ್ಜಿ ಸಕ್ ಪಾಲ್, ತಾಯಿ ಭೀಮಾಬಾಯಿ. ಅಂಬೇಡ್ಕರ್ ಹದಿನಾಲ್ಕನೇ ಮಗು. ಆ ಮನೇಲಿ ಅವ್ರೇ ಅತ್ಯಂತ ಚಿಕ್ಕವ್ರು. ಅಂಬೇಡ್ಕರ್ ಮಹಾಡ್ ಅನ್ನೋ ಸಮುದಾಯಕ್ಕೆ ಸೇರಿದವ್ರು. ಈಗ ಅದನ್ನು ದಲಿತ ಅಥವಾ ಪರಿಶಿಷ್ಟ ಜಾತಿ ಅಂತ ಪರಿಗಣಿಸಲಾಗತ್ತೆ. ಅಂಬೇಡ್ಕರ್ ಅವ್ರ ಮೇಲೆ ಜಾತಿ ಕಾರಣದಿಂದ ಸಾಕಷ್ಟು ದೌರ್ಜನ್ಯ ನಡೆದಿತ್ತು. ಶಾಲೆಯಲ್ಲಿ ಎಲ್ಲ ಮಕ್ಕಳ ಜೊತೆ ಕೂರೋಕೆ ಅವಕಾಶ ಇರ್ತಿರ್ಲಿಲ್ಲ. ಎಲ್ಲರೂ ಕುಡಿಯೋ ನೀರನ್ನು ಕುಡಿಯೋ ಹಾಗೆ ಇರ್ಲಿಲ್ಲ. ಒಂದಲ್ಲ ಎರಡಲ್ಲ.. ಹೆಜ್ಜೆ ಹೆಜ್ಜೆಗೂ ಜಾತಿ ತಾರತಮ್ಯವನ್ನು ಅನುಭವಿಸಿದ್ರು ಬಾಬಾಸಾಹೇಬ್ ಅಂಬೇಡ್ಕರ್. ಬಸ್ ಹತ್ತೋಕೆ ಅವಕಾಶ ಕೊಡ್ತಾ ಇರ್ಲಿಲ್ಲ. ಸಂಸ್ಕೃತ ಕಲಿಯೋ ಆಸೆ ಇದೆ ಅಂದ್ರೆ ಶೂದ್ರರಿಗೆ ಕಲಿಸೋದಿಲ್ಲ ಅಂತ ಅವರನ್ನು ದೂರ ಇಟ್ಟಿದ್ದರು. ಇವೆಲ್ಲವೂ ನಿಜ.

ಇಂಥ ಸಾಕಷ್ಟು ವಿಚಾರಗಳಿಂದ ನೊಂದ ಅಂಬೇಡ್ಕರಿರ್‌ಗೆ ಹಿಂದೂ ಧರ್ಮದಲ್ಲಿ ಏನೂ ಪಾಸಿಟಿವ್‌ಗಳೇ ಇಲ್ಲ ಅನ್ನೋದಕ್ಕೆ ಶುರು ಆಗಿತ್ತು. ಇದೇ ಬೇಸರದಲ್ಲಿ ಮನುಸ್ಮೃತಿಯನ್ನು ಪ್ರಶ್ನಿಸಿ ಎಂದು ಜನರನ್ನು ಪ್ರಚೋದಿಸಿದರು. ಹಿಂದೂಧರ್ಮ ತುಂಬ ಸಂಕುಚಿತ ಭಾವನೆ ಹೊಂದಿದೆ ಅನ್ನೋ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಆದರೆ, ಅಂಬೇಡ್ಕರ್ ಅವರ ಈ ವಿಚಾರಗಳನ್ನು ದೇಶಾದ್ಯಂತ ಹರಡೋ ನಕಲಿ ಚಿಂತಕರು, ಅದೇ ಅಂಬೇಡ್ಕರ್ ಅವರ ಇನ್ನೊಂದು ಬಹುಮುಖ್ಯವಾದ ಮಾತನ್ನು ಬೇಕಂತಲೇ ಮುಚ್ಚಿಟ್ಟರು. ಹಿಂದೂ ಧರ್ಮದಲ್ಲಿ ಸುಧಾರಣೆಗೆ ಅವಕಾಶ ಇದೆ. ಇಲ್ಲಿ ಬದಲಾವಣೆಗೆ ಮುಕ್ತವಾದ ವಾತಾವರಣ ಇದೆ. ಎಲ್ಲದಕ್ಕೂ ಹೊಂದಿಕೊಳ್ಳೋ ಮನೋಭಾವ ಹಿಂದೂ ಧರ್ಮದಲ್ಲಿದೆ. ಆದರೆ ಆ ವೈಶಾಲ್ಯ ಮತ್ತು ಪ್ರಬುದ್ಧತೆ ಇಸ್ಲಾಂ ಧರ್ಮದಲ್ಲಿಲ್ಲ ಅನ್ನೋ ಮಾತನ್ನು ಅಂಬೇಡ್ಕರ್ ಅವರೇ ಹೇಳಿದ್ದು. ಇತಿಹಾಸಕಾರರು ಮತ್ತು ಅನುಕೂಲಸಿಂಧು ರಾಜಕಾರಣಿಗಳು ಇದನ್ಯಾಕೆ ಮುಚ್ಚಿಡುತ್ತಾರೆ?

ಮುಸಲ್ಮಾನ ಸಮುದಾಯದಲ್ಲಿ ಇಲ್ಲಿತನಕ ಯಾರೊಬ್ರೂ ತಮ್ಮ ಧರ್ಮದಲ್ಲಿರೋ ಮೌಢ್ಯಗಳ ವಿರುದ್ಧ, ಪಿಡುಗುಗಳ ವಿರುದ್ಧ ಧ್ವನಿ ಎತ್ತಿಲ್ಲ, ಆಂದೋಲನ ಮಾಡಿಲ್ಲ. ಮಾಡೋದೂ ಇಲ್ಲ. ಅಫ್‌ಕೋರ್ಸ್ ಮಾಡೋಕೆ ಅವಕಾಶ ಸಿಗೋದೂ ಇಲ್ಲ. ಆದರೆ ಹಿಂದೂಧರ್ಮದಲ್ಲಿ ಆ ಸ್ವಾತಂತ್ರ್ಯ ಇದೆ. ಇಲ್ಲಿ ಪ್ರಶ್ನಿಸೋದಕ್ಕೆ ಅವಕಾಶ ಇದೆ. ಇಲ್ಲಿನ ತಪ್ಪುಗಳನ್ನು ಎತ್ತಿ ತೋರಿಸೋಕೆ, ತಿದ್ದೋಕೆ ಅವಕಾಶ ಇದೆ. ಆದರೆ ಇಸ್ಲಾಂನಲ್ಲಿ ಇಲ್ಲ ಎಂಬ ಮಾತನ್ನು ಅಂಬೇಡ್ಕರ್ ಹೇಳಿದ್ದರು. ಇದನ್ನು ಇಂದಿನ ಪೀಳಿಗೆಯಿಂದ ಮುಚ್ಚಿಡಲು ಕಾರಣವೇನು?

ನನ್ನ ಮೇಲೆ ಜಾತಿ ವಿಚಾರವಾಗಿ ದೌರ್ಜನ್ಯ ನಿಂದನೆ ಎಲ್ಲ ನಡೆದಿದ್ದು ನಿಜ. ಆದರೆ ಮೇಲ್ಜಾತಿಯ ಹಲವಾರು ಜನ ನನ್ನ ಜತೆ ಚೆನ್ನಾಗಿ ಕೂಡ ಇದ್ದರು. ಬ್ರಾಹ್ಮಣ ಜಾತಿಯ ಟೀಚರ್‌ಗಳೂ ಕೆಲವರು ನನ್ನನ್ನು ಚೆನ್ನಾಗಿ ನೋಡ್ಕೊಂಡಿದ್ರು. ಮಹಾದೇವ್ ಅನ್ನೋ ಬ್ರಾಹ್ಮಣ ಗುರುಗಳೊಬ್ರು ನನ್ನ ಜತೆ ಊಟ ಸಹ ಹಂಚ್ಕೊಂಡು ತಿನ್ತಾ ಇದ್ರು. ನನ್ನ ಹೆಸರನ್ನು ಅಂಬಾವಾಡೇಕರ್ ಅಂತ ಇದ್ದಿದ್ದನ್ನು ಅಂಬೇಡ್ಕರ್ ಅಂತ ಬದಲಿಸಿದ್ದೂ ಅವ್ರೇ.. ಅಂತ ಮುಕ್ತವಾಗಿ ಹೇಳ್ಕೊಂಡಿದ್ರು ಅಂಬೇಡ್ಕರ್. ಆದರೆ ಬ್ರಾಹ್ಮಣರ ವಿರುದ್ಧ ದ್ವೇಷ ಬಿತ್ತೋ ಬುದ್ಧಿಜೀವಿಗಳು ಇಂಥ ಸಾಮರಸ್ಯದ ಸತ್ಯವನ್ನು ಮುಚ್ಚಿಡ್ತಾನೇ ಬಂದ್ರು.

ಅಂಬೇಡ್ಕರ್ ಅವ್ರಿಗೆ ಬ್ರಾಹ್ಮಣರಿಂದ ಬರೀ ಅನ್ಯಾಯ ನೋವೇ ಆಗಿದ್ದು ಅಂತ ಬಿಂಬಿಸುತ್ತಾ ಬಂದರು. ಸಂಸ್ಕೃತ ಭಾಷೆಯನ್ನು, ಅದು ಬ್ರಾಹ್ಮಣರ ಭಾಷೆ ಅಂತ ಮೂಲೆಗುಂಪು ಮಾಡೋಕೆ ಟ್ರೈ ಮಾಡ್ತಾ ಇರುವ ನೀಚರಿಗೆ, ಅಂಬೇಡ್ಕರ್ ಅವ್ರು ಸಂಸ್ಕೃತವನ್ನು ರಾಷ್ಟ್ರಭಾಷೆ ಮಾಡ್ಬೇಕೆಂಬ ಅಭಿಲಾಷೆ ಹೊಂದಿದ್ರು ಎಂಬುದು ಗೊತ್ತಾ? ಗೊತ್ತಿಲ್ಲದೇ ಏನು. ಇಂಥ ಸತ್ಯಗಳನ್ನು ಉಸಿರುಗಟ್ಟಿಸಿ ಸಾಯಿಸಿದ್ದಾರಷ್ಟೆ. ಅಂಬೇಡ್ಕರ್ ಅವ್ರಿಗೆ ಬಾಲ್ಯದಲ್ಲಿ ಸಂಸ್ಕೃತ ಕಲಿಯೋ ಅವಕಾಶ ಸಿಕ್ಕಿಲ್ದೇ ಇರಬಹುದು. ಆದರೆ ಅವರು ಆ ಭಾಷೆಯನ್ನು ಪರ್ಷಿಯನ್ ಭಾಷೆಗಿಂತ ಗ್ರೇಟ್ ಅಂತ ಪರಿಗಣಿಸಿದ್ದರು. ಇಡೀ ದೇಶದಲ್ಲಿ ಸಂಸ್ಕೃತವೇ ಪ್ರಧಾನ ಭಾಷೆ ಆಗಬೇಕು ಅಂತ ಆಸೆ ಪಟ್ಟಿದ್ದರು.

ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಟ್ಟು ಹಾಕಿದ್ದು ನಿಜಾನೋ ಸುಳ್ಳೋ ಅನ್ನೋ ಪ್ರಶ್ನೆ ಇವತ್ತಿಗೂ ಇದೆ. ಸುಳ್ಳಲ್ಲ ನಿಜವೇ. ಹಿಂದೂ ಧರ್ಮದಲ್ಲಿ ಸುಧಾರಣೆ ತರಬೇಕು.. ದಲಿತರಿಗೂ ದೇವಸ್ಥಾನಗಳಲ್ಲಿ ಪ್ರವೇಶ ಸಿಗಬೇಕು ಹೀಗೆಲ್ಲ ಸುಮಾರು ವಿಚಾರಗಳನ್ನು ಆಚರಣೆಗೆ ತರೋಕೆ ಅವರು ಪ್ರಯತ್ನ ಪಟ್ಟಿದ್ದು ಹೌದು. ಆದರೆ, ಆ ಕಾಲಘಟ್ಟದಲ್ಲಿ ಅದು ಸಾಧ್ಯ ಆಗಿರಲಿಲ್ಲ. ಅದೇ ಬೇಸರದಲ್ಲಿ ಅವ್ರು 1927ರಲ್ಲಿ ಮಹಾಡ್ ಸತ್ಯಾಗ್ರಹ ಅಂತ ಶುರು ಮಾಡಿ ಮನುಸ್ಮೃತಿಯನ್ನು ಸುಟ್ಟುಹಾಕಿದ್ದು.



ಅಷ್ಟೇ ಅಲ್ಲ, ನಾನು ಹಿಂದೂ ಧರ್ಮದಿಂದ ಹೊರಗೆ ಹೋಗ್ತಾ ಇದೀನಿ ಅಂತ ಘೋಷಿಸಿದ್ದೂ ಸತ್ಯವೇ. ನಾನು ಹಿಂದೂ ಆಗಿ ಹುಟ್ಟಿರೋದು ಹೌದು. ಆದರೆ, ಹಿಂದೂ ಆಗಿ ಸಾಯೋದಿಲ್ಲ. ಅಂತ ದೊಡ್ಡ ಧ್ವನೀಲಿ ಘೋಷಿಸಿದ್ದು ಅಕ್ಷರಶಃ ಸತ್ಯ. ಅಂಬೇಡ್ಕರ್ ಅವರ ಆದರ್ಶಗಳು ಕೇವಲ ಹಿಂದುತ್ವ ವಿರೋಧಕ್ಕೆ ಮಾತ್ರ ಸೀಮಿತವಾ? ಅಂಬೇಡ್ಕರ್ ಅವರನ್ನು ಹಿಂದೂವಿರೋಧಿ ಅಂತ ಬ್ರ್ಯಾಂಡ್ ಮಾಡೋ ಇವರ ಹುನ್ನಾರ ಅರ್ಥ ಆಗ್ಬೇಕು ಅಂದರೆ ಮುಂದಿನ ಸಾಲುಗಳನ್ನು ಗಮನವಿಟ್ಟು ಓದಿ.

ಹಿಂದುತ್ವ ಜನರನ್ನು ಒಡೆಯುತ್ತೆ. ಇಸ್ಲಾಂ ಜನರನ್ನು ಬೆಸೆಯುತ್ತೆ ಅನ್ನೋ ಮಾತು ನಿಜ ಅಲ್ಲ, ಇದು ಅರ್ಧ ಸತ್ಯ ಅಂತ ನೇರವಾಗಿ ಹೇಳಿದ್ದರು ಅಂಬೇಡ್ಕರ್. ಮುಸ್ಲಿಂ ಸಮುದಾಯದಲ್ಲಿ ಹಿಂದೂ ಸಮಾಜದಲ್ಲಿರೋದಕ್ಕಿಂತ ಜಾಸ್ತಿ ಸಮಸ್ಯೆಗಳಿವೆ ಎಂಬ ಮಾತನ್ನು ಖುದ್ದು ಬಾಬಾಸಾಹೇಬರೇ ಹೇಳಿದ್ದರು. 'ಒಬ್ಬ ಮುಸ್ಲಿಂ ಯಾವತ್ತೂ ಒಬ್ಬ ಹಿಂದೂ ಪರವಾಗಿ ಹಾಗೂ ಮುಸ್ಲಿಂ ವಿರುದ್ಧ ಧ್ವನಿ ಎತ್ತೋದಿಲ್ಲ. ಬಂಡವಾಳಶಾಹಿ ವಿರೋಧಿ ಪ್ರತಿಭಟನೇಲಿ ಮುಸಲ್ಮಾನ ಕಾರ್ಮಿಕರು ಹಿಂದೂ ಕಾರ್ಮಿಕರ ಜತೆ ಕೈ ಜೋಡಿಸೋದಿಲ್ಲ. ಮುಸಲ್ಮಾನರು ಯಾವತ್ತೂ ಭಾರತವನ್ನು ತನ್ನ ತಾಯ್ನಾಡು ಎಂದು ಒಪ್ಪೋದಿಲ್ಲ. ಇಸ್ಲಾಂ ಧರ್ಮವನ್ನು ಬೆಳೆಸೋದಕ್ಕೆ ಅವ್ರು ಜಿಹಾದ್ ಮಾಡೋಕೂ ಹಿಂದುಮುಂದು ನೋಡೋದಿಲ್ಲ. ಮುಸಲ್ಮಾನರು ಪ್ರಜಾಪ್ರಭುತ್ವ, ದೇಶಭಕ್ತಿ ಇದೆಲ್ಲದ್ಕಿಂತ ಷರಿಯಾ ಕಾನೂನನ್ನೇ ಹೆಚ್ಚು ಗೌರವಿಸುತ್ತಾರೆ.'- ನಂಬಿ, ಇವೆಲ್ಲವೂ ಅಂಬೇಡ್ಕರ್ ಅವ್ರೇ ಆಡಿದ್ದ ಮಾತುಗಳು. ಬಚ್ಚಿಟ್ಟಿರೋ ಇತಿಹಾಸದ ಸಾಲುಗಳು ಅಂಬೇಡ್ಕರ್ ಅಂದು ಆಡಿದ ಮಾತುಗಳು ಇಂದಿಗೂ ಸತ್ಯ. ಇವತ್ತಿಗೂ ಮುಸ್ಲಿಮರಿಗೆ ವಂದೇ ಮಾತರಂ ಹೇಳೋದಕ್ಕೆ ಇಷ್ಟ ಇಲ್ಲ. ಭಾರತ್ ಮಾತಾಕೀ ಜೈ ಅನ್ನೋದು ಕೋಮುವಾದ ಅಂತಾರೆ ಇಲ್ಲಿರೋ ಮುಸಲ್ಮಾನರು. ವಂದೇಮಾತರಂ ಹೇಳಿದ್ರೆ ಫತ್ವಾ ಹೊರಡಿಸ್ತಾರೆ.

ಅಂಬೇಡ್ಕರ್ ಅವ್ರು ಇದೇ ಕಾರಣಕ್ಕೆ ಮುಸಲ್ಮಾನರನ್ನು ಸೇನೆಯಲ್ಲಿ ಇಟ್ಟುಕೊಳ್ಳುವ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದರು. 'ಮುಸಲ್ಮಾನರು ಯುರೋಪಿಯನ್ ದಂಡನಾಯಕನ ಮಾತನ್ನು ಬೇಕಾದರೂ ಪಾಲಿಸ್ತಾರೆ. ಆದರೆ, ಒಬ್ಬ ಹಿಂದೂ ಸೇನಾನಾಯಕನ ಮಾತಿಗೆ ತಲೆಬಾಗೋದಿಲ್ಲ. ಬೈ ಚಾನ್ಸ್ ಮುಸಲ್ಮಾನ ದೇಶಗಳೇನಾದ್ರೂ ಭಾರತದ ವಿರುದ್ಧ ದಂಡೆತ್ತಿ ಬಂದರೆ, ಯುದ್ಧ ನಡೆದರೆ, ಮುಸಲ್ಮಾನರು ಭಾರತದ ಪರ ಪ್ರಾಮಾಣಿಕವಾಗಿ ಹೋರಾಡ್ತಾರೆ ಅನ್ನೋದನ್ನು ನಂಬೋಕಾಗಲ್ಲ' ಅಂತ ಅಂಬೇಡ್ಕರ್ ತಮ್ಮ ಅನುಮಾನ ವ್ಯಕ್ತಪಡಿಸಿದ್ದರು.

ಘಜ್ನಿ ಘೋರಿ ತೈಮೂರ್ ಇವರೆಲ್ಲ ಭಾರತಕ್ಕೆ ಬಂದಿದ್ದು ಬರೀ ಲೂಟಿ ಹೊಡೆಯೋಕಲ್ಲ, ಭಾರತದಲ್ಲಿರೋ ಮುಸ್ಲಿಂ ಕಾಫೀರರನ್ನು ಕೊಲ್ಲೋದು ಅವರ ಉದ್ದೇಶ ಆಗಿತ್ತು ಹಾಗೂ ಇಸ್ಲಾಂ ಧರ್ಮವನ್ನು ಬಿತ್ತೋದು ಅವರ ಗುರಿ ಆಗಿತ್ತು ಎಂದು ಅಂಬೇಡ್ಕರ್ ಬಹಳ ಸ್ಪಷ್ಟವಾಗಿ ಹೇಳಿದ್ದರು. ವಿವಾದಿತ ಹಿಜಾಬ್ ಬಗ್ಗೆ ಕೂಡ ಅಂಬೇಡ್ಕರ್ ಆ ಕಾಲದಲ್ಲೇ ತಮ್ಮ ಬಲವಾದ ಅಭಿಪ್ರಾಯವನ್ನು ಮಂಡಿಸಿದ್ದರು. ಹಿಜಾಬ್‌ನಿಂದಾಗಿ ಮುಸಲ್ಮಾನ ಹೆಣ್ಮಕ್ಕಳು ಇನ್ನಷ್ಟು ಮತ್ತಷ್ಟು ಹಿಂದುಳಿಯೋ ಹಾಗೆ ಆಗ್ತಾ ಇದೆ. ಇದೊಂದು ಅತ್ಯಂತ ಕೆಟ್ಟ ಪದ್ಧತಿ ಎಂದು ಬಾಬಾ ಸಾಹೇಬರು ಆ ಜಮಾನದಲ್ಲೇ ಖಂಡಿಸಿದ್ದರು. ಹಿಜಾಬ್ ಹೆಣ್ಮಕ್ಕಳ ಮೇಲೆ ಸಾಮಾಜಿಕ ಪರಿಣಾಮ ಬೀರೋದು ಮಾತ್ರವಲ್ಲ ಅವರ ಆರೋಗ್ಯದ ಮೇಲೂ ಅಡ್ಡ ಪರಿಣಾಮ ಬೀರುತ್ತದೆ ಅಂದಿದ್ದರು ಅಂಬೇಡ್ಕರ್.

ಇಸ್ಲಾಂ ಮೂಲಭೂತವಾದಿಗಳ ಬಗ್ಗೆ ಕೂಡ ತುಂಬ ಗಟ್ಟಿಯಾದ ಧ್ವನೀಲಿ ಮಾತಾಡಿದ್ದು ಅಂಬೇಡ್ಕರ್ ಮಾತ್ರ. 'ಇಸ್ಲಾಂನಲ್ಲಿ ಬೇಕಂತಲೇ ಕೆಲವರು ತಮ್ಮ ಧರ್ಮದ ಜನರನ್ನು ಧರ್ಮಾಂಧತೆಯಲ್ಲೇ ಇರುವ ಹಾಗೆ ಮಾಡ್ತಾ ಇದ್ದಾರೆ. ಇಸ್ಲಾಂನಲ್ಲಿ ಗೋಹತ್ಯೆ ಮಾಡ್ಬೇಕು ಅಂತ ಎಲ್ಲೂ ಬರೆದಿಲ್ಲ. ಆದ್ರೂ ಹಿಂದೂಗಳನ್ನು ನೋಯಿಸಬೇಕು ಅಂತಾನೇ ಗೋಹತ್ಯೆಗೆ ಪ್ರಚೋದನೆ ಕೊಟ್ಟು ಮಾಡಿಸಲಾಗತ್ತೆ.' ಎಂಬ ಕಟುಸತ್ಯವನ್ನು ದಿಟ್ಟವಾಗಿ ಹೇಳಿದ್ದು ಅಂಬೇಡ್ಕರ್ ಮಾತ್ರ.

ಅಂಬೇಡ್ಕರ್ ಅವ್ರು ಹಿಂದೂ ಧರ್ಮದ ಬಗ್ಗೆ ಬೇಸರ ಬಂದು ಧರ್ಮ ತೊರೆದು ಹೋದರು ಎಂದು ಬರೆಯುವ ಇತಿಹಾಸಕಾರರು, ಅಂಬೇಡ್ಕರ್ ಯಾಕೆ ಮುಸ್ಲಿಂ ಧರ್ಮಕ್ಕೋ ಕ್ರಿಶ್ಚಿಯನ್ ಧರ್ಮಕ್ಕೋ ಹೋಗ್ಲಿಲ್ಲ ಎಂದು ತಿಳಿಸೋದಿಲ್ಲ. ಅಂಬೇಡ್ಕರ್ ಅವ್ರು ಮುಸಲ್ಮಾನ ಸಮಾಜದಲ್ಲಿರೋ ಜಾತಿಪದ್ಧತಿ ಬಗ್ಗೆ ಕ್ಲಿಯರ್ ಆಗಿ ಮಾತಾಡಿದ್ದರು. ಅಲ್ಲಿ ಕೂಡ ಅಶ್ರಫ್ ಅರ್ಜಲ್ ಅಜ್ಲಾಫ್ ಹೀಗೆ ಮೇಲ್ವರ್ಗ ಕೆಳವರ್ಗ ಅನ್ನೋ ತಾರತಮ್ಯ ಇರೋದನ್ನು ಎತ್ತಿತೋರಿಸಿದ್ದರು. ಇದೇ ಕಾರಣದಿಂದ ಅವರು ಹಿಂದೂ ಧರ್ಮವನ್ನು ಬಿಟ್ಟು ಬೌದ್ಧ ಧರ್ಮ ಸೇರಿದ್ದರು. ಇಸ್ಲಾಂ ಧರ್ಮಕ್ಕೆ ಸೇರಲು ಹೈದರಾಬಾದ್ ನಿಜಾಮನಿಂದ ಐದುಕೋಟಿ ರುಪಾಯಿಗಳ ಆಫರ್ ಕೂಡ ಬಂದಿದ್ದರೂ ಅಂಬೇಡ್ಕರ್ ಮಾತ್ರ ಇಸ್ಲಾಂ ಕಡೆಗೆ ಒಲವು ತೋರಿಸಲೇ ಇಲ್ಲ. ಏಕೆಂದರೆ ಅವರಿಗೆ ಭಾರತ ಈ ಥರ ಕನ್ವರ್ಷನ್‌ಗಳಿಂದ ಮುಸ್ಲಿಂ ರಾಷ್ಟ್ರ ಆಗುವುದು ಇಷ್ಟವಿರಲಿಲ್ಲ. ಬಾಂಗ್ಲಾ ಪಾಕಿಸ್ತಾನಗಳ ಥರ ಭಾರತ ಮತ್ತೆ ಒಡೆಯೋದು ಇಷ್ಟ ಇರಲಿಲ್ಲ.

ಅಂಬೇಡ್ಕರ್ ಅವರ ಇಂಥ ಸಾಕಷ್ಟು ವಿಚಾರಗಳನ್ನು ಬೇಕಂತಲೇ ನಮ್ಮ ಇತಿಹಾಸಕಾರರು, ಬುದ್ಧಿಜೀವಿಗಳು, ಭ್ರಷ್ಟ ಮೀಡಿಯಾಗಳು ಮುಚ್ಚಿಡುತ್ತಲೇ ಬಂದರು. ಏಕೆಂದರೆ ಅವರಿಗೆ ಹಿಂದೂಗಳನ್ನು ಜಾತಿ ಹೆಸರಲ್ಲಿ ಒಡೆಯಬೇಕಿತ್ತು. ಅದಕ್ಕೆ ಅಂಬೇಡ್ಕರ್ ಅವರು ಹೇಳಿರೋ ಮಾತುಗಳಲ್ಲಿ ತಮಗೆ ಬೇಕಾದಷ್ಟು ಮಾತ್ರ ಬಳಸಿಕೊಂಡರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರಂಥ ಮಹಾನ್ ಮಾನವತಾವಾದಿಯ, ವಿಚಾರವಾದಿಯ ಮಾತುಗಳನ್ನು ತಿರುಚುವುದು, ಅರ್ಧ ಸತ್ಯಗಳನ್ನು ಮಾತ್ರ ಇಂದಿನ ಜನರೇಷನ್‌ಗೆ ತಿಳಿಸುವುದು, ಈ ದೇಶಕ್ಕೆ ಮತ್ತು ಅಂಬೇಡ್ಕರ್‌ಗೆ ಮಾಡುವ ಘೋರ ಅಪಮಾನ.

ಭಟ್ಟರ್ ಸ್ಕಾಚ್

- **ಆಶಾ, ಮೈಸೂರು**
ಭಟ್ರೇ, ಮನೆಯಲ್ಲಿ ಅತ್ತೆ ಮಾವನ ಎದುರು ನನ್ನ ಪರವಾಗಿ ದನಿ ಏರಿಸಿ ಮಾತಾಡುವ ಯಜಮಾನರನ್ನು ಏನೆಂದು ಕರೆಯಲಿ?
– **ಆಶಾವಾದಿ ಎನ್ನಬಹುದು!**

- **ಶಾಲು, ಕಾಮನಕೊಪ್ಪಲು**
ಭಟ್ರೇ, ಹಲ್ಲಿಗೆ ಮತ್ತು ಕಳ್ಳನಿಗೆ ಇರುವ ಸಾಮ್ಯತೆ ಏನು?
– **ಇಬ್ಬರೂ ಗೋಡೆ ಹತ್ತಿಯೇ ಬರುತ್ತಾರೆ.**

- **ಸುಭದ್ರ, ಪಾಟೀಲ, ಡಾಲರ್ಸ್ ಕಾಲೋನಿ**
ಭಟ್ರೇ, ನಮಗೆ ಪರೀಕ್ಷೆಗಳು ಯಾಕೆ ಇರುತ್ತವೆ?
– **ನಮಗೆ ಏನೂ ತಿಳಿದಿಲ್ಲ ಎಂದು ನಮಗಿಂತ ಹೆಚ್ಚಾಗಿ ನಮ್ಮ ಪೋಷಕರಿಗೆ ತಿಳಿಸಲು!**

- **ಶ್ಯಾಮ ಭಟ್ಟ, ಸಕ್ರೆಬೈಲು**
ಭಟ್ರೇ, ಜೀವನದಲ್ಲಿ ಯಾವುದನ್ನು ಹಿಡಿಯಲು ಸಾಧ್ಯವಿಲ್ಲ?
– **ಹೋಗುತ್ತಿರುವ ಕಾಲ ಮತ್ತು ಕಳೆದುಹೋದ ಸಂಬಳ!**

- **ಸಂಡೂರು ಭೋಗಶೆಟ್ಟಿ, ಮೈಸೂರು**
ಭಟ್ರೇ, ಗಂಡಂದಿರು ಯಾವಾಗಲೂ ಮೌನವಾಗಿರಲು ಇಷ್ಟಪಡುವುದೇಕೆ?
– **ಯಾಕೆಂದರೆ ಮಾತನಾಡಿದ ಮೇಲೆ ಹೇಗೆ ಮಾಡಿದ್ದರೂ ಅದು ಅವರ ತಪ್ಪೇ ಆಗಿರುತ್ತದೆ!**

- **ರಾಘಣ್ಣ, ಮೈಸೂರು**
ಭಟ್ರೇ, ಯಾವ ಕೆಲಸವನ್ನು ನಾವು ಕಣ್ಣು ಮುಚ್ಚಿಕೊಂಡೇ ಮಾಡಬೇಕು?
– **ನಿದ್ದೆ!**

- **ಸುಧೀರ ಪೈ, ಬ್ರಹ್ಮಾವರ**
ಭಟ್ರೇ, ಜೀವನದಲ್ಲಿ ಯಾವುದನ್ನು ವಾಪಸ್ ಪಡೆಯಲು ಸಾಧ್ಯವಿಲ್ಲ?
– **ಹೋದ ಹಲ್ಲು, ಹೋದ ಮಾನ ಮತ್ತು ಕಳುವಾದ ಹೆಲ್ಮೆಟ್!**

- **ರಾಜೇಶ ಸಿ., ಶಿವಮೊಗ್ಗ**
ಭಟ್ರೇ, ಹಿರಿಯರು 'ಮೌನಂ ಸಮ್ಮತಿ ಲಕ್ಷಣಂ' ಎಂದು ಯಾಕೆ ಹೇಳಿದರು?
– **ಯಾಕೆಂದರೆ ಅವರಿಗೆ ಗೊತ್ತು, ಗಲಾಟೆ ಮಾಡಿದರೆ ಗೆಲ್ಲುವುದು ಕಷ್ಟ ಎಂದು!**

- **ರಾಜಿ, ಬೆಂಗಳೂರು**
ಭಟ್ರೇ, ಜೀವನದ ಅತಿದೊಡ್ಡ ರಹಸ್ಯ ಯಾವುದು?
– **ಅಡುಗೆ ಮನೆಯಲ್ಲಿ ತಾಯಿ ಇಟ್ಟಿರುವ ಸ್ನ್ಯಾಕ್ಸ್ ಡಬ್ಬ ಎಲ್ಲಿದೆ ಎಂಬುದು!**

- **ಶ್ರೀಧರ ಕಾಮತ, ಹುಬ್ಬಳ್ಳಿ**
ಭಟ್ರೇ, ಬುದ್ಧಿವಂತರು ಯಾವಾಗಲೂ ಗಂಭೀರವಾಗಿರುವುದು ಯಾಕೆ?
– **ಅವರಿಗೆ ಗೊತ್ತು, ಬಾಯಿ ಬಿಟ್ಟರೆ ತಮ್ಮ ಅಸಲಿ ಬುದ್ಧಿವಂತಿಕೆ ಜನರಿಗೆ ಗೊತ್ತಾಗಿಬಿಡುತ್ತದೆ ಎಂದು!**

ಅತ್ತ ದರಿ, ಇತ್ತ ಪುಲಿ ಹೊಸ ಬದುಕಿನ ರೀತಿ ಕಣ್ರೀ !

ಬದುಕು ಮೂರು ದಶಕದ ಹಿಂದೆ ಇದ್ದಷ್ಟು ಸರಳವಾಗಿಲ್ಲ ಎನ್ನುವುದನ್ನು ಮೊದಲು ಅರಿತುಕೊಳ್ಳಬೇಕು. ಅವತ್ತಿಗೆ ಅವಕಾಶಗಳು ಕಡಿಮೆ ಇದ್ದವು ಎನ್ನುವುದನ್ನು ಒಪ್ಪೋಣ. ಆದರೆ ಅವತ್ತಿನ ದಿನದಲ್ಲಿ ತಪ್ಪಾದರೆ ಬದುಕು ಇನ್ನೊಂದು ಅವಕಾಶವನ್ನು ಕೊಡುತ್ತಿತ್ತು. ಇವತ್ತಿನ ವೇಗದ ಬದುಕಿನಲ್ಲಿ ತಪ್ಪು ಮಾಡಿದರೆ ಬದುಕು ಮುಕ್ತಾಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಾವು ನಮ್ಮ ಮಕ್ಕಳಿಗೆ ಹೇಗಿರಬೇಕು? ಹೇಗೆ ಬದುಕಬೇಕು? ಎನ್ನುವುದರ ಬಗ್ಗೆ ಬಹಳಷ್ಟು ಕಲಿಸಿಕೊಡುವ ಪ್ರಯತ್ನ ಮಾಡುತ್ತೇವೆ. ಆದರೆ ಇಲ್ಲೊಂದು ವಿಷಯ ಬಹಳ ಮುಖ್ಯವಾಗುತ್ತದೆ. ನಮಗೇನು ಗೊತ್ತು? ನಾವೇಗೆ ಬದುಕನ್ನು ಕಟ್ಟಿಕೊಂಡೆವು ಎನ್ನುವ ಆಧಾರದ ಮೇಲೆ ಮಾತ್ರ ನಾವು ನಮ್ಮ ಮಕ್ಕಳಿಗೆ ಹೇಳುತ್ತಾ ಹೋಗುತ್ತೇವೆ. ಆದರೆ ನಾವು ಬದುಕು ಕಟ್ಟಿಕೊಂಡ ರೀತಿ ನಮಗೆ ಯಶಸ್ಸನ್ನು ತಂದು ಕೊಟ್ಟಿದ್ದೆಯೇ? ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವುದಿಲ್ಲ. ಸಮಾಜದಲ್ಲಿನ 99 ಪ್ರತಿಶತ ಜನ ಬದುಕುವುದೇ ಹೀಗೆ! ಅವರು ವೇಳೆಯನ್ನು, ಹಣವನ್ನು ಎಂದಿಗೂ ಸರಿಯಾಗಿ ಲೆಕ್ಕ ಹಾಕಿ, ವಿಂಗಡಿಸಿ ಅಂದರೆ ಬಜೆಟ್ ಮಾಡಿ ಬದುಕುವ ಗೋಜಿಗೆ ಹೋಗುವುದಿಲ್ಲ. ಹೀಗಾಗೇ ಬದುಕು ಜಾಳುಜಾಳು. ಉಳಿದೊಂದು ಪ್ರತಿಶತ ಜನರು ಎಲ್ಲವನ್ನೂ ಸರಿಯಾಗಿ ಲೆಕ್ಕಹಾಕುತ್ತಾರೆ. ಮಕ್ಕಳಿಗೆ ಅವರು ಹೇಳಿಕೊಡುವ ಬದುಕಿನ ಪಾಠ ಕೂಡ ಹೇಗಿರುತ್ತದೆ ಎಂದರೆ ಅವರು ಯಾವ ಜಾಗದಲ್ಲಿ ಬದುಕಿನ ಓಟವನ್ನು ನಿಲ್ಲಿಸುತ್ತಾರೆ ಮಕ್ಕಳು ಅಲ್ಲಿಂದ ಮುಂದಕ್ಕೆ ಅದನ್ನು ಮುನ್ನಡೆಸುವಂತೆ ಹೇಳಿಕೊಡುತ್ತಾರೆ. ಇದರರ್ಥ ಮಕ್ಕಳು ತಮ್ಮ ಸ್ವಂತ ಇಚ್ಛೆಯಿಂದ ಬದುಕನ್ನು ಕಟ್ಟಿಕೊಳ್ಳಬಾರದು ಎಂದಲ್ಲ, ಹೆತ್ತವರು ಹಾಕಿದ ದಾರಿಯಲ್ಲಿ ಮಾತ್ರ ಸಾಗಬೇಕೂ ಎಂದಲ್ಲ. ಆದರೆ ಬದುಕಿನಲ್ಲಿ ಕಂಟಿನ್ಯೂಟಿ ಅದೆಷ್ಟು ಮುಖ್ಯವಾಗುತ್ತದೆ ಎನ್ನುವುದಕ್ಕೆ ಈ ಮಾತನ್ನು ಹೇಳಬೇಕಾಯ್ತು. ಮಕ್ಕಳು ಇಂದಿಗೆ ಪ್ಯಾಷನ್, ಮನಸ್ಸಿಗೆ ಇಷ್ಟವಾದದ್ದು ಮಾಡಬೇಕು ಎನ್ನುವ ಹುಚ್ಚಿಗೆ ಬಿದ್ದು ಬಿಟ್ಟಿವೆ, ಇವತ್ತಿನ ದಿನ ಎಲ್ಲರಿಗೂ ಯುಟ್ಯೂಬರ್ ಆಗಬೇಕು, ಕಂಟೆಂಟ್ ಕ್ರಿಯೇಟರ್ ಆಗಬೇಕು ಎನ್ನುವ ಹಂಬಲ ಶುರುವಾಗಿದೆ. ಯುಟ್ಯೂಬ್ ತೆರೆದು ವಿಡಿಯೋ ಹಾಕಲು ಶುರು ಮಾಡಿದರೆ ಸಾಕು ಹಣ, ಹೆಸರು ಮತ್ತು ಯಶಸ್ಸು ಪಕ್ಕಾ ಎನ್ನುವ ಮಟ್ಟಕ್ಕೆ ಮಕ್ಕಳು ಬದಲಾಗುತ್ತಿದ್ದಾರೆ! ಇನ್ನಷ್ಟು ಮಕ್ಕಳದು ಇನ್ನೊಂದು ರೀತಿಯ ಗೋಳು. ಅವರಿಗೆ ತಾವು ಮಹಾಬುದ್ಧಿವಂತರು, ಶಾಲೆ, ಕಾಲೇಜಿನ ಓದು ನನಗಲ್ಲ ಎನ್ನುವ ಮನೋಭಾವ. ಬಿಸಿನೆಸ್ ಮಾಡಬೇಕು ಹಣ ಕೊಡು ಎಂದು ಪೋಷಕರನ್ನು ಪೀಡಿಸುತ್ತಾರೆ. ಒಂದಷ್ಟು ಪ್ರತಿಶತ ಮಕ್ಕಳು ಯುಟ್ಯೂಬ್ ವಿಡಿಯೋಗಳನ್ನು ನೋಡಿ ತಾವೇನೋ ಜ್ಞಾನಿಗಳು ಎನ್ನುವ ಅಹಂಭಾವ ಬೆಳಸಿಕೊಂಡು ಬಿಡುತ್ತಾರೆ. ಶಾಲೆಗೆ ಕಟ್ಟುವ ಫೀಸು ನನಗೆ ಕೊಡು ಅದನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಹಣ ಗಳಿಸುತ್ತೇನೆ ಎನ್ನುತ್ತಾರೆ. ಕಷ್ಟಪಟ್ಟು ಓದಿ ವಿಜ್ಞಾನಿ, ವೈದ್ಯ, ವಕೀಲ ಇತ್ಯಾದಿ ಆಗಬೇಕು ಎನ್ನುವುದು ಔಟ್ಡೇಟೆಡ್ ಎನ್ನಿಸಿಕೊಳ್ಳುತ್ತಿದೆ.

ಬದುಕು ಮೂರು ದಶಕದ ಹಿಂದೆ ಇದ್ದಷ್ಟು ಸರಳವಾಗಿಲ್ಲ ಎನ್ನುವುದನ್ನು ಮೊದಲು ಅರಿತುಕೊಳ್ಳಬೇಕು. ಅವತ್ತಿಗೆ ಅವಕಾಶಗಳು ಕಡಿಮೆ ಇದ್ದವು ಎನ್ನುವುದನ್ನು ಒಪ್ಪೋಣ. ಆದರೆ ಅವತ್ತಿನ ದಿನದಲ್ಲಿ ತಪ್ಪಾದರೆ ಬದುಕು ಇನ್ನೊಂದು ಅವಕಾಶವನ್ನು ಕೊಡುತ್ತಿತ್ತು. ಇವತ್ತಿನ ವೇಗದ ಬದುಕಿನಲ್ಲಿ ತಪ್ಪು ಮಾಡಿದರೆ ಬದುಕು ಮುಕ್ತಾಯ ಎನ್ನುವ ಮಟ್ಟಕ್ಕೆ ಬಂದು ನಿಂತಿದೆ. ಸರಿಯಾದ ಸಮಯದಲ್ಲಿ ಸಿಕ್ಕ ಅವಕಾಶಗಳಿಗೆ ಬೆನ್ನು ತೋರಿಸಿದುರ ಫಲವಾಗಿ ಇಂದಿಗೆ ತಮ್ಮ ಹಿಂದಿನ ಬದುಕಿನ ಶೈಲಿ ಉಳಿಸಿಕೊಳ್ಳಲಾಗದೆ ಹೀನಾಯ ಬದುಕನ್ನು ಬದುಕುತ್ತಿರುವರ ಸಂಖ್ಯೆ ಕೂಡ ಅಸಂಖ್ಯ. ಇವತ್ತಿಗೆ ಎಲ್ಲರಿಗೂ ರಾತ್ರಿ ಕಳೆದು ಬೆಳಗಾಗುವುದರಲ್ಲಿ ಫೇಮಸ್ ಆಗಿಬಿಡಬೇಕು ಎನ್ನುವ ಮನೋಭಾವ ಹೆಚ್ಚಾಗಿದೆ. ಒಬ್ಬ ವ್ಯಕ್ತಿ ಸಮಾಜದಲ್ಲಿ ಆ ಮಟ್ಟದ ಯಶಸ್ಸು ಪಡೆದುಕೊಳ್ಳುವುದರ ಹಿಂದೆ ಅನೇಕ ವರ್ಷಗಳ ಕಸರತ್ತು, ಪರಿಶ್ರಮ ಇರುತ್ತದೆ ಎನ್ನುವುದನ್ನು ಮಾತ್ರ ಗಮನಿಸುವುದಿಲ್ಲ. ಹೀಗಾಗುವುದಕ್ಕೆ ಕೂಡ ಕಾರಣವಿದೆ. ಇವತ್ತು ಹೇಳಿಕೇಳಿ ಡಿಜಿಟಲ್ ಯುಗ ಅದ್ಯಾವುದೋ ಹಾಡನ್ನು ಬೇರೆ ರೀತಿ ತಿರುಚಿ ಹಾಡಿದರೂ ಸಾಕು ಬಕ ಪಕ್ಷಿಗಳಂತೆ ಕಾಯುತ್ತಿರುವ ಎಲ್ಲ ಯುಟ್ಯೂಬ್ ಚಾನಲ್ ಗಳು ಕೂಡ ಅದನ್ನೇ ಮತ್ತೆ ಮತ್ತೆ ಹಾಕುತ್ತವೆ. ನೋಡುಗರಿಗೆ ಯಾವುದೇ ಹೆಚ್ಚು ಚಿಂತೆ ಮಾಡದೆ, ವಿವೇಚನೆ ಬಳಸದೆ ಕನ್ಸುಮ್ ಮಾಡಲು ಬೇಕಿರುವುದು ಕೂಡ ಇಂತಹ ಕಂಟೆಂಟುಗಳು! ಹೀಗಾಗಿ ಇಂತವು ವೈರಲ್ ಆಗುತ್ತವೆ. ಆ ವಿಡಿಯೋದಲ್ಲಿದ್ದವರು ಏಕಾಏಕಿ ಹೆಚ್ಚಿನ ಶ್ರಮವಿಲ್ಲದೆ ಪ್ರಸಿದ್ಧರಾಗಿ ಬಿಡುತ್ತಾರೆ. ಈ ಜಗತ್ತಿಗೆ ಬೇಕಿರುವುದು ಅವತ್ತಿನ ಲೆಕ್ಕಾಚಾರ ಮಾತ್ರ. ಇಂತಹ ಪ್ರಸಿದ್ಧಿಗಳು ಆ ಕ್ಷಣಕ್ಕೆ ಸಂಬಂಧಿಸಿದ್ದು ಮಾತ್ರ.

ಮೈಸೂರಿನ ಯುವ ದಸರಾದಲ್ಲಿ ಡ್ಯಾನ್ಸ್ ಮಾಡಿ ಪ್ರಸಿದ್ಧಳಾದ ಹುಡುಗಿ ಇರಬಹುದು, ಹೂವಿನ ಬಾಣದಂತೆ ಹಾಡನ್ನು ಹಾಡಿದ ಹುಡುಗಿ ಇರಬಹುದು ಅಥವಾ ಕುಂಭಮೇಳದ ತುಂಬು ಕಣ್ಣಿನ ಹುಡುಗಿ ಇರಬಹುದು, ಅದೇ ಕುಂಭಮೇಳದ ಐಐಟಿ ಬಾಬಾ ಇರಬಹುದು, ಇವೆಲ್ಲವೂ, ಇವರೆಲ್ಲರೂ ಆ ಕ್ಷಣದ ಜನರ ಸ್ಪಂದನೆಗೆ ಸಿಕ್ಕವರು. ನಿಜವಾದ ಟ್ಯಾಲೆಂಟ್ ಸದಾ ಹಸಿರಾಗಿರುತ್ತದೆ. ನಡೆಯುವ ಹಾದಿಯಲ್ಲಿ ಏರುಪೇರು ಸಹಜ. ಹಾಗೆ ನಿಜವಾದ ಟ್ಯಾಲೆಂಟ್ ಇದ್ದವರಿಗೂ ಸಂಕಷ್ಟ ಎದುರಾಗುತ್ತದೆ. ಆದರೆ ಅವೆಲ್ಲವೂ ಕ್ಷಣಿಕ. ಹೀಗೆ ಆ ಕ್ಷಣದ ಪ್ರಸಿದ್ಧಿಗೆ ಸಿಕ್ಕವರ ಬದುಕು ಇವತ್ತಿಗೆ ಏನಾಗಿದೆ ಎನ್ನುವುದನ್ನು ನಾವು ನೋಡಬೇಕು.

ಪಿಯುಸಿ ರಿಸಲ್ಟ್ ಬಂದಾಗಿದೆ. ಮಕ್ಕಳ ಮುಂದೆ, ಹೆತ್ತವರ ಮುಂದೆ ಪ್ರಶ್ನೆ ಕೂಡ ದೊಡ್ಡದಾಗಿ ಎದುರಾಗಿದೆ. ಮುಂದೇನು? ಯಾವ ಕೋರ್ಸ್ ಮಾಡಿದರೆ ಬೆಸ್ಟ್? ಎನ್ನುವುದು ಆ ಪ್ರಶ್ನೆ. ಇವತ್ತಿನ ಗದ್ದಲದಲ್ಲಿ ಯಾವುದು ಸರಿ? ಯಾವುದು ತಪ್ಪು? ಎನ್ನುವುದನ್ನು ಬೇರ್ಪಡಿಸುವುದೇ ದೊಡ್ಡ ಸವಾಲಾಗಿದೆ. ಇವತ್ತಿನ ಮಕ್ಕಳಿಗೆ ಇರುವ ಜ್ಞಾನ ಅನುಭವ ಬಂದದ್ದು ವಿಡಿಯೋಗಳ ಮೂಲಕ. ಅದು ಅವರು ಗಳಿಸಿಕೊಂಡದ್ದಲ್ಲ. ಎಲ್ಲ ಅನುಭವವನ್ನೂ ನಾವೇ ಗಳಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಒಪ್ಪುವ ಮಾತೆ ಆದರೂ, ಅವರು ವೀಕ್ಷಿಸಿದ ವಿಡಿಯೋದಲ್ಲಿನ ಸತ್ಯಸತ್ಯವನ್ನು ಅರಿತುಕೊಳ್ಳುವ ಕ್ಷಮತೆ ಕೂಡ ಅವರಿಗಿರುವುದಿಲ್ಲ ಎನ್ನುವುದನ್ನು ಮರೆಯಬಾರದು. ವಿದ್ಯಾವಂತ ಪೋಷಕರ ವಿಚಾರದಲ್ಲಿ ಒಂದಷ್ಟು ಮಾತುಕತೆಯ ನಂತರ ಮಕ್ಕಳನ್ನು ಹೇಗೋ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾರೆ. ಪೋಷಕರಿಗೆ ಹೆಚ್ಚಿನ ತಿಳುವಳಿಕೆ ಇಲ್ಲದ ಮನೆಗಳಲ್ಲಿ ಮಕ್ಕಳು ಹೇಳಿದ್ದು ನಿಜವೆಂದು ನಂಬುತ್ತಾರೆ. ಮಕ್ಕಳು ಹೇಳಿದ್ದಕ್ಕೆಲ್ಲ ಸರಿಯೆಂದು ತಲೆ ಅಲ್ಲಾಡಿಸುತ್ತಾರೆ. ಕೋಟಿ ಕೋಟಿ ಬೆಲೆ ಬಾಳುವ ಆಸ್ತಿಯನ್ನು ಮಾರಿ ಮಗನ-ಮಗಳ ಕನಸಿಗೆ ನೀರೆರೆಯುತ್ತಾರೆ. ಗೆಲುವಿನ ಪ್ರತಿಶತ ಒಂದು ಪ್ರತಿಶತಕ್ಕಿಂತ ಬಹಳ ಕಡಿಮೆ ಎನ್ನುವುದು ಅವರಿಗೆ ಗೊತ್ತಿರುವುದಿಲ್ಲ.

ಬಿಸಿನೆಸ್ ಮಾಡುತ್ತೇನೆ ಹಣ ನೀಡಿ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತೇನೆ ಹಣ ನೀಡಿ, ಕಾಲೇಜಿಗೆ ಕಟ್ಟುವ ಹಣವನ್ನು ನನಗೆ ಕೊಡಿ, ಅದರಲ್ಲಿ ವಿಡಿಯೋ ಮಾಡಲು ಬೇಕಾಗುವ ಕ್ಯಾಮರಾ ಸಹಿತ ಎಲ್ಲ ಪರಿಕರಗಳನ್ನು ಕೊಳ್ಳುತ್ತೇನೆ, ಇಂತಹ ವಿಚಿತ್ರ ಬೇಡಿಕೆಗಳು ಹೆತ್ತವರು ಮಕ್ಕಳಿಂದ ಪಡೆದುಕೊಳ್ಳುತ್ತಿದ್ದಾರೆ. ಇದು ಹೇಳಿಕೇಳಿ ಫಲಿತಾಂಶದ ಸಮಯ. ಈ ಸನ್ನಿವೇಶಗಳು ಇನ್ನಷ್ಟು ಹೆಚ್ಚಾಗುತ್ತವೆ. ಪೋಷಕರಾಗಿ ಇಲ್ಲ ಎನ್ನುವುದನ್ನು ನಮ್ಮ ಭಾರತೀಯ ಮಧ್ಯಮವರ್ಗದ ಪೋಷಕರು ಕಲಿಯಬೇಕಿದೆ. ಯಾವುದೇ ವಿಚಾರಲ್ಲೇ ಆಗಲಿ ಅನುಭವವಿಲ್ಲದೆ ಹಣವನ್ನು ಹೂಡಿಕೆ ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ಸ್ಪಷ್ಟವಾಗಿಸಬೇಕು. ಏನು ಮಾಡಬೇಕು ಎಂದು ನಿರ್ಧರಿಸಿದ್ದೀಯಾ ಅದನ್ನು ಒಂದೆರೆಡು ವರ್ಷ ಮಾಡಿ ಅನುಭವ ಗಳಿಸಿಕೊಂಡು ನಂತರ ಅದರ ಸಾಧಕ-ಬಾಧಕಗಳನ್ನು ಅರಿತುಕೊಂಡು ಹೇಳು, ಆಮೇಲೆ ನೋಡೋಣ ಎನ್ನಬೇಕು. ಮಕ್ಕಳು ಹೇಳಿದಂತೆ ಕುಣಿಯುತ್ತ ಹೋದರೆ ಅವರಿಗೆ ಭವಿಷ್ಯವಿರುವುದಿಲ್ಲ ಎನ್ನುವುದನ್ನು

ಪೋಷಕರು ಅರಿತು ಕೊಳ್ಳಬೇಕು. ಇನ್ಫ್ಯಾಕ್ಟ್ ಅವರು ಹೇಳಿದ್ದಕ್ಕೆಲ್ಲ ಯಸ್ ಎನ್ನುವುದು ನೀವು ಅವರ ಅಭ್ಯುದಯಕ್ಕೆ ಅಡ್ಡಗಾಲು ಹಾಕಿದಂತೆ ಎನ್ನುವುದನ್ನು ಕೂಡ ಪೋಷಕರು ಅರಿತುಕೊಂಡರೆ ಒಳ್ಳೆಯದು.

ವ್ಯಾಪಾರಿಯೊಬ್ಬರಿಗೆ ನಾಲ್ಕು ಜನ ಮಕ್ಕಳು. ಎರಡು ಮೂರು ವರ್ಷಗಳ ಅಂತರದಲ್ಲಿ ಜನಿಸಿದವರು. ವ್ಯಾಪಾರಿಗೆ ಮಕ್ಕಳು ತನ್ನ ವ್ಯಾಪಾರವನ್ನು ಮುಂದುವರಿಸಲಿ ಎನ್ನುವ ಹಂಬಲ. ಮಕ್ಕಳು ಬೆಳೆಯುತ್ತಾ ಬಂದಂತೆ ನನ್ನ ವ್ಯಾಪಾರವನ್ನು ಮುಂದುವರಿಸದಿದ್ದರೂ ಪರವಾಗಿಲ್ಲ, ಯಾವ ಕೆಲಸ ಮಾಡಿದರೂ ಅದರಲ್ಲಿ ಉನ್ನತಿಗೇರಲಿ. ಒಂದೊಳ್ಳೆ ಬದುಕು ಕಟ್ಟಿಕೊಳ್ಳಲಿ ಎನ್ನುವ ಮನೋಭಾವವನ್ನು ಬೆಳಸಿಕೊಳ್ಳುತ್ತಾರೆ. ಮೊದಲ ಮಗ ಹದಿನೆಂಟು ತುಂಬಿದ ತಕ್ಷಣ ವ್ಯಾಪಾರ ಮಾಡುವುದಾಗಿ ವ್ಯಾಪಾರಿಯ ಬಳಿ ಹೇಳುತ್ತಾನೆ. ವ್ಯಾಪಾರಿ ಬಹಳ ಖುಷಿಯಿಂದ ಯಾವ ವ್ಯಾಪಾರ ಮಾಡಬೇಕೆಂದು ನಿರ್ಧರಿಸಿದ್ದೀಯಾ? ಎಂದು ಕೇಳುತ್ತಾರೆ. ಪಿಜ್ಜಾ ಮಳಿಗೆಯನ್ನು ತೆರೆಯಬೇಕು ಎಂದಿದ್ದೇನೆ ಎನ್ನುವ ಮಾತನ್ನು ಮಗ ಹೇಳುತ್ತಾನೆ. ಪಿಜ್ಜಾ ವ್ಯಾಪಾರದ ಬಗ್ಗೆ ಒಂದಷ್ಟು ವಿಚಾರಗಳನ್ನು ಹೇಳು ಎನ್ನುವ ಅಪ್ಪನ ಮಾತಿಗೆ ಮಗನಲ್ಲಿ ಬೇಸರ ಉಂಟಾಗುತ್ತದೆ. ಸಾಲದ ರೂಪದಲ್ಲಿ ನನಗೆ ಹತ್ತು ಲಕ್ಷ ರೂಪಾಯಿ ನೀಡಿದರೆ ಅದಕ್ಕೆ ಬಡ್ಡಿಯನ್ನು ನೀಡುತ್ತಾ ವ್ಯಾಪಾರವನ್ನು ಕಟ್ಟಿ ಬೆಳೆಸುತ್ತೇನೆ ಎನ್ನುವ ಮಗನ ಮಾತಿಗೆ ಇಲ್ಲವೆನ್ನಲಾಗದೆ ವ್ಯಾಪಾರಿ ಹಣವನ್ನು ನೀಡುತ್ತಾರೆ.

ವ್ಯಾಪಾರಿಯ ಮಗ ತುಂಬಾ ಒಳ್ಳೆಯವನು. ಕಷ್ಟಜೀವಿ. ನಗರದ ಹೃದಯ ಭಾಗದಲ್ಲಿ ಪಿಜ್ಜಾ ಅಂಗಡಿ ತೆರೆಯುತ್ತಾನೆ. ಪಿಜ್ಜಾ ಮಾಡುವವರನ್ನು ನೇಮಿಸಿಕೊಳ್ಳುತ್ತಾನೆ. ಬೆಳಗಿನಿಂದ ರಾತ್ರಿಯವರೆಗೂ ದಿನದಲ್ಲಿ ಹದಿನಾಲ್ಕು ಗಂಟೆ ದುಡಿಯುತ್ತಾನೆ. ದೈವ ಕೃಪೆಯಿಂದ ಮೊದಲ ತಿಂಗಳಲ್ಲೇ ಒಳ್ಳೆಯ ವ್ಯಾಪಾರ ಕೂಡ ಆಗುತ್ತದೆ. ಮೊದಲ ತಿಂಗಳಿಗೆ ಇಷ್ಟೊಂದು ವ್ಯಾಪಾರವಾಗಿದೆ ಎನ್ನುವುದು ಎಲ್ಲರಿಗೂ ಅಚ್ಚರಿಯಾಗುತ್ತದೆ. ಆದರೆ ಲೆಕ್ಕಾಚಾರಕ್ಕೆ ಕುಳಿತಾಗ, ಸಂಬಳ, ಬಾಡಿಗೆ, ಪದಾರ್ಥಗಳ ವೆಚ್ಚ , ಬಡ್ಡಿ ಎಲ್ಲವನ್ನೂ ತೆಗೆದ ಮೇಲೆ ಕೈಯಲ್ಲಿ ಉಳಿದದ್ದು ಮುಖದಲ್ಲಿ ನಗು ಉಳಿಸುವುದಿಲ್ಲ. ಇಷ್ಟೆಲ್ಲಾ ಮಾಡಿದ್ದು ಈ ಹಣಕ್ಕಾಗಿಯೇ? ಎನ್ನುವ ಪ್ರಶ್ನೆ ಆತನಲ್ಲಿ ಮೂಡುತ್ತದೆ. ಆದರೂ ವ್ಯಾಪಾರ ಮುಂದುವರಿಸುತ್ತಾನೆ. ಐದಾರು ತಿಂಗಳು ಕಳೆದರೂ ಹೆಚ್ಚಿನ ಬದಲಾವಣೆ ಕಾಣುವುದಿಲ್ಲ. ವ್ಯಾಪಾರ ಹೆಚ್ಚಾದಂತೆ ಖರ್ಚು ಕೂಡ ಹೆಚ್ಚಾಗುತ್ತಿತ್ತು. ಕೈಯಲ್ಲಿ ಉಳಿಯುತ್ತಿದ್ದ ಲಾಭಂಶ ಮಾತ್ರ ಹಾಕುತ್ತಿದ್ದ ಶ್ರಮಕ್ಕೆ ತಕ್ಕನಾಗಿರಲಿಲ್ಲ. ಇದರರ್ಥ ಸರಳ. ಕೇವಲ ಹಾರ್ಡ್ ವರ್ಕ್ ಕೆಲಸಕ್ಕೆ ಬರುವುದಿಲ್ಲ. ಸಿದ್ಧತೆ, ಒಂದಷ್ಟು ಅನುಭವದ ಜತೆಗೆ ವ್ಯಾಪಾರಕ್ಕೆ ಇಳಿದಿದ್ದರೆ ಆಗ ಫಲಿತಾಂಶ ಬೇರೆಯದಿರುತ್ತಿತ್ತು. ಇದೊಂದು ಕಥೆಯಂತೆ ಕಾಣಿಸುತ್ತದೆ. ಆದರೆ, ಇಂತಹ ಕಥೆಯನ್ನು ಒಂದಲ್ಲ, ಎರಡಲ್ಲ, ನೂರಾರು ಕಂಡ ಅನುಭವದಿಂದ ಇದನ್ನು ಬರೆದಿದ್ದೇನೆ.

ಜೋಷ್‌ನಲ್ಲಿ ಕೆಲಸ, ವ್ಯಾಪಾರ ಇತ್ಯಾದಿ ಶುರು ಮಾಡಿಬಿಡಬಹುದು. ಆದರೆ ಎಷ್ಟು ಕಾಲ ನಾವು ಆ ಜೋಷ್ ಉಳಿಸಿಕೊಳ್ಳಬಹುದು? ಎಲ್ಲಿಯವರೆಗೆ ನಮ್ಮ ಜೇಬು ಭದ್ರವಾಗಿರುತ್ತದೆ? ಎಷ್ಟು ರಿಸ್ಕ್ ನಾವು ತೆಗೆದುಕೊಳ್ಳಬಹುದು? ನಾವು ಮಾಡಲಿಚ್ಚಿಸಿರುವ ವ್ಯಾಪಾರದಲ್ಲಿರುವ ಇತರರ ಪರಿಸ್ಥಿತಿಯೇನು? ಎನ್ನುವುದನ್ನು ತಿಳಿದು ಕೊಳ್ಳಬೇಕು. ಒಂದಷ್ಟು ವರ್ಷ ಇಚ್ಚಿಸಿದ ವ್ಯಾಪಾರ ಶುರು ಮಾಡುವ ಮುನ್ನ ಕೆಲಸ ಮಾಡಿ ಅನುಭವ ಪಡೆದುಕೊಳ್ಳಬೇಕು.

ವರ್ಷದಿಂದ ವರ್ಷಕ್ಕೆ ಬದುಕು ಇನ್ನಷ್ಟು ಸಂಕ್ಲಿಷ್ಟವಾಗುತ್ತಾ ಹೋಗುತ್ತಿದೆ. ಮಕ್ಕಳಿಗೆ ಮಾಹಿತಿ ಬಹಳಷ್ಟು ಸಿಗುತ್ತಿದೆ. ಅದರ ಆಧಾರದ ಮೇಲೆ ಮಹತ್ತರ ಸಾಧಿಸಿ ಬಿಡಬೇಕು ಎನ್ನುವ ಹಂಬಲ ಅವರಲ್ಲಿ ಚಿಗುರುತ್ತದೆ. ಅದಕ್ಕೆ ಹಣ ಅಥವಾ ಮಾನಸಿಕ ಬೆಂಬಲ ಮನೆಯಲ್ಲಿ ಸಿಗದೆ ಹೋದರೆ ಹೆತ್ತವರನ್ನೇ ಶತ್ರುಗಳಂತೆ ನೋಡುವ ಪರಿಪಾಟು ಹೆಚ್ಚಾಗುತ್ತಿದೆ. ಇವುಗಳ ನಡುವೆ ಆನ್ಲೈನ್ ಗೇಮಿಂಗ್, ಬೆಟ್ಟಿಂಗ್ ಭೂತಗಳು ಕೂಡ ಯುವಜನತೆಯನ್ನು ಕಾಡುತ್ತಿದೆ. ಕೇಳಿದ ಹಣ ಕೊಡಲಿಲ್ಲ ಎನ್ನುವ ಏಕೈಕ ಕಾರಣಕ್ಕೆ ಹೆತ್ತವರನ್ನು ಕೊಲ್ಲುವ ಮಟ್ಟಕ್ಕೆ ಮಕ್ಕಳು ಬದಲಾಗುತ್ತಿದ್ದಾರೆ. ಇಂತಹ ಮನಸ್ಥಿತಿ ಒಂದು ದಿನದಲ್ಲಿ ಉಂಟಾಗುವುದಿಲ್ಲ. ಮಕ್ಕಳೊಂದಿಗೆ ನಿತ್ಯ ಸಂವಹನ ನಡೆಸುತ್ತಿದ್ದರೆ ಅವರಲ್ಲಾಗುತ್ತಿರುವ ಬದಲಾವಣೆಯನ್ನು ಗಮನಿಸಬಹುದು. ಆದರೆ ಮನೆಯಲ್ಲಿ ಹೆಣ್ಣು ಗಂಡು ಇಬ್ಬರೂ ದುಡಿಯದಿದ್ದರೆ ಬದುಕಿನ ಬಂಡಿ ಸಾಗುವುದಿಲ್ಲ ಎನ್ನುವ ಈ ಕಾಲಘಟ್ಟದಲ್ಲಿ ಮಕ್ಕಳೊಂದಿಗೆ ಮಾತಾಡುವ ವ್ಯವಧಾನ ಹೆತ್ತವರಿಗೆಲ್ಲಿದೆ? ಬದಲಾಗುತ್ತಿರುವ ಸಮಯ, ಬದುಕಿನ ರೀತಿ ಉತ್ತರಕ್ಕಾಗಿ ಪರದಾಡುವಂತೆ ಮಾಡುತ್ತಿದೆ. ಇನ್ನೂ ಎಚ್ಚೆತ್ತು ಕೊಳ್ಳದಿದ್ದರೆ ಉತ್ತರಗಳಿಲ್ಲದ ಪ್ರಶ್ನೆಗಳು ಸಿದ್ಧವಾಗುತ್ತವೆ. ಎಚ್ಚರ !

ಸಂಸ್ಮರಣೆ
ಡಾ. ಡಿ.ಎಸ್.ಶ್ರೀನಿವಾಸ ಪ್ರಸಾದ್

ಮಾಧುರ್ಯದ ಮಹಾರಾಜ ಡಾ. ಪಿ.ಬಿ. ಶ್ರೀನಿವಾಸ್

Songs may end ,but it's melody lingers on. 1995–96 ಇರಬಹುದು. ಅಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜನ ಕಿಕ್ಕಿರಿದಿದ್ದರು. ಅಲ್ಲಿ ಜಯಂತಿ, ಎಸ್. ಜಾನಕಿಯವರೂ ಸೇರಿದಂತೆ ಅನೇಕ ಅತಿರಥ ಮಹಾರಥ ಚಲನಚಿತ್ರ ಕಲಾವಿದರು ವೇದಿಕೆಯ ಮೇಲಿದ್ದರು. ಸಭೆ ಇನ್ನೊಬ್ಬ ಮಹಾನ್ ಗಾನಕೋಗಿಲೆಗೆ ಕಾಯುತ್ತಿತ್ತು. ಸಹಜವಾಗಿಯೇ ಸದ್ದುಗದ್ದಲ ಅಲ್ಲಿ ಇದ್ದೇ ಇತ್ತು. ಕಾರ್ಯಕ್ರಮದ ನಿರೂಪಕಿ ಅಪರ್ಣ ಅವರು ಧ್ವನಿವರ್ಧಕದಲ್ಲಿ ನೆರೆದಿದ್ದ ಜನರಿಗೆ ನೋಡಿ ಬರ್ತಾ ಇದೆ ನಾವಾಡುವ ನುಡಿಯೇ ಕನ್ನಡ ನುಡಿ, ಕನ್ನಡ ನುಡಿ, ಗಂಧದ ಗುಡಿ ಎಂದು ಉಲಿದ ಕೋಗಿಲೆ, ದಯವಿಟ್ಟು ಎಲ್ಲರೂ ಸುಮ್ಮನಿರಿ ಅಂತಂದರು. ಊರುಗೋಲು ಹಿಡಿದು ಬಂದರು ನೋಡಿ ಗಂಧರ್ವ ಡಾ. ಪಿ.ಬಿ. ಶ್ರೀನಿವಾಸ್. ಅದುವರೆಗೂ ಗಿಜಿಗಿಜಿಗುಡುತ್ತಿದ್ದ ಜನ ಒಮ್ಮೆಲೆ ಮೌನವಾಗಿ ಆ ಅಪ್ರತಿಮ ಗಾಯಕರಾದ ಪಿಬಿಎಸ್ ಮೇಲಿನ ಅಮಿತವಾದ ಅಕ್ಕರೆ-ಅಭಿಮಾನ ಮತ್ತು ಆ ಸಾಧಕಶ್ರೇಷ್ಠರ ಕುರಿತಾದ ನಿಡುಗಾಲದ ಗೌರವಕ್ಕೆ ಅರ್ಹ ಮರ್ಯಾದೆ ಸಲ್ಲಿಸಿತು. ಬಾಯಿ ತೆರೆದ ಕ್ಷಣವೇ ಮಾಧುರ್ಯದ ಸಿಹಿ ಇಂಚರವನ್ನು ನಮ್ಮೆಲ್ಲರ ಕಿವಿ – ಹೃನ್ಮನಗಳಿಗೆ ಧಾರೆ ಎರೆದ ಪಿ.ಬಿ. ಶ್ರೀನಿವಾಸ್ ಮತ್ತು ಸಂಗೀತ ಒಟ್ಟೊಟ್ಟಿಗೆ ಅಲ್ಲಿ ಘನತೆಯ ವಿಜಯ ಸಾಧಿಸಿತ್ತು. ಸ್ವಲ್ಪ ಹೊತ್ತಾದ ಮೇಲೆ ಆ ಮಹಾನ್ ಗಾಯಕರ ಮುಂದೆ ನಾನು ನಿಂತರೂ ಆ ಸುಶ್ರಾವ್ಯಶಾರೀರದ ಹಾಡುಗಳೆಲ್ಲ ನೆನಪಾಗಿ ಮಾತನಾಡಲು ಬಾರದೆ, ನಮಸ್ಕಾರ ಹೇಳಿ ಧನ್ಯತಾಭಾವದಲ್ಲಿ ಹೊರಬಂದ ಪುಣ್ಯ ನನ್ನದಾಗಿತ್ತು.

ಚೆನ್ನೈನಲ್ಲಿ ವಾಸವಾಗಿದ್ದ ಪಿ.ಬಿ. ಶ್ರೀನಿವಾಸ್ ತಮಿಳಿನಲ್ಲಿ ಜೆಮಿನಿ ಗಣೇಶನ್‌ಗೆ ಸೂಪರ್‌ಹಿಟ್ ಗೀತೆಗಳನ್ನು ಹಾಡಿದ್ದಾರೆ ನಿಜ. ಆದರೆ, ಡಾ. ರಾಜ್-ಡಾ. ಪಿ.ಬಿ. ಶ್ರೀನಿವಾಸ್ ಶರೀರ- ಶಾರೀರದ ಜೋಡಿ ಮಾಡಿದ ಮೋಡಿ ಅವರಿಬ್ಬರ ಸಹ ಸಂಯೋಜನೆಯಲ್ಲೇ ಬಂದ ಹಾಡಾದನಿನದೇ 'ನೆನಪು ದಿನವೂ ಮನದಲ್ಲಿ...' ಎನ್ನುವ ಹಾಗೆ ಸದಾಕಾಲವೂ ಚಿರಸ್ಮರಣೀಯ ಚಿನ್ನದ ಖನಿಗಳೇ ಆಗಿ, ಒಲಿದು, ಉಲಿದು ಬಂದ ಸುಮಧುರ ಬಾಂಧವ್ಯದ ಕನ್ನಡ ನೆಲದ ಪುಣ್ಯ.

ಪಿ.ಬಿ.ಎಸ್ ಅವರ ಹಾಡುಗಳಲ್ಲಿ ಯಾವುದು ಬಹಳ ಸೊಗಸಾಗಿದೆ ಎಂಬ ನಿರ್ಧಾರಕ್ಕೆ ಬರುವುದು ಕಷ್ಟ. ಹಾಗಿರುವಾಗ ಡಾ.ರಾಜ್-ಪಿ.ಬಿ.ಎಸ್ ಅವರ ಅನುಪಮ ಜುಗಲ್ಬಂದಿಯಲ್ಲಿ ಮೂಡಿದ ಹಾಡುಗಳ ರಸಸಿಂಚನದಲ್ಲಿ ಹಾಡುಗಳ ಜ್ಯೇಷ್ಠತೆ ಇನ್ನೂ ಕಠಿಣವಾದ ಕೆಲಸ. ಓಹಿಲೇಶ್ವರದಲ್ಲೇ(1956) ಡಾ.ರಾಜ್‌ಗೆ ಶ್ರೀನಿವಾಸ್ ಅವರಿಗೆ ಹಾಡಿದ್ದರೂ ಸಹ ಇವರಿಬ್ಬರ ಜೋಡಿಯ ಯಶೋಗಾಥೆಗೆ ಮುನ್ನುಡಿಯಾದ ಚಿತ್ರ 1960ರಲ್ಲಿ ಬಂದ 'ಭಕ್ತ ಕನಕದಾಸ' ಚಿತ್ರ. ರಾಜ್ ಅಭಿನಯಕ್ಕೆ ಪಿ.ಬಿ.ಎಸ್ ಹಾಡಿದ ಹಿಂದೋಳರಾಗದ ಬಾಗಿಲನು ತೆರೆದು ಅದ್ಭುತ. ಇದೇ ಚಿತ್ರದ 'ಕುಲಕುಲಕುಲವೆಂದು', 'ಈತನೀಗ ವಾಸುದೇವನು..' ಅಂದಿಗೆ ಮಾತ್ರವಲ್ಲದೆ ಇವತ್ತಿಗೂ ಆಪಾತ ಮಧುರ. ಆದರೆ ಸ್ವತಃ ಶ್ರೀನಿವಾಸ್ ಅವರಿಗೆ ಬಹಳ ಇಷ್ಟವಾಗಿದ್ದಿದ್ದು ಇದೇ ಚಿತ್ರದ ವೆಂಕಟರಾಜು ಸಂಗೀತದ 'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು..'ಎಂಬ ಕೀರ್ತನೆ.

ಜಯತು ಜಯವಿಠಲ (ಮೋಹನ), ಹಾಡೊಂದ ಹಾಡುವೆ, (ಮಧ್ಯಮಾವತಿ) ಆಕಾಶವೇ ಬೀಳಲಿ ಮೇಲೆ (ಅಭೇರಿ), ಆಡಿಸಿ ನೋಡು ಬೀಳಿಸಿ ನೋಡು, ಹರಿ ನಾಮವೆ ಚಂದ (ಮೋಹನ) ಮನವೇ ಮಂದಿರ(ರಾಗ-ಕಲಾವತಿ)ನೀ ಜನಿಸಿದ ದಿನವೂ ಅಳುವೆ.. ನಗಬೇಡ, ನಗಬೇಡ, ನಗಬೇಡ ಒಲವೇ ಜೀವನ ಸಾಕ್ಷಾತ್ಕಾರ, ನಾವಾಡುವ ನುಡಿಯೇ, ಆಡುತಿರುವ ಮೋಡಗಳೇ, ಎಲ್ಲಿಗೇ ಪಯಣ.. ಬಾಡಿಹೋದ ಬಳ್ಳಿಯಿಂದ, ಚಿನ್ನ ಎಂದೂ ನಗುತಿರು... ನೂರಾರು ಗೀತೆಗಳ ಚಿತ್ರ- ಗಾನ ಮಂಜರಿಯೇ ನಮ್ಮೆದೆಯಲ್ಲಿ ರಿಂಗಣಿಸುತ್ತದೆ.

ಆದರೆ ಪಿ.ಬಿ.ಎಸ್ ಅವರನ್ನು ಕನ್ನಡಕ್ಕೆ ಪರಿಚಯಿಸಿದ ಕನ್ನಡ ಚಿತ್ರರಂಗದ ಭೀಷ್ಮ ಆರ್. ನಾಗೇಂದ್ರ ರಾಯರಿಗೆ ಇಡೀ ಕನ್ನಡ ಜನತೆ ಧನ್ಯಮಾನ್ಯ ನಮಸ್ಕಾರ ಸಲ್ಲಿಸಬೇಕು. ತಮ್ಮ ಜಾತಕಫಲ (1953) ಚಿತ್ರವನ್ನು ಕನ್ನಡ, ತಮಿಳು, ತೆಲುಗು ತ್ರಿಭಾಷೆಗಳಲ್ಲಿ ತೆಗೆದಾಗ ಪಿ.ಬಿ.ಎಸ್ ಅವರ ಪಾದಾರ್ಪಣೆ ಆಯಿತು. ಕನ್ನಡದಲ್ಲಿ ಜಿ.ಕೆ. ವೆಂಕಟೇಶ್ ಸಹ ಈ ಚಿತ್ರದಲ್ಲಿ ಹಾಡಿದ್ದಾರೆ. ಇಲ್ಲಿಂದ ಅವರ ಕನ್ನಡ ಚಿತ್ರರಂಗದ ಜತೆಗಿನ ಬೆಸುಗೆ ಕನ್ನಡಿಗರ ಪಾಲಿನ ಅಮೃತಘಳಿಗೆಗಳಾದವು.

ಶ್ರೀನಿವಾಸ ಒಬ್ಬ ಶಾಪಗ್ರಸ್ತ ಗಂಧರ್ವ. ದೇವಲೋಕದಲ್ಲಿ ಇರಬೇಕಾದವನು ಭೂಲೋಕಕ್ಕೆ ಇಳಿದು ಬಂದಿರುವ ಗಾಯನ ಲೋಕದ ಗಂಧರ್ವ ನಮ್ಮ ಶ್ರೀನಿವಾಸ – ಜಿ.ಕೆ. ವೆಂಕಟೇಶ್. ಜಿ.ಕೆ.ವಿ ಅವರ ಮಾತುಗಳನ್ನು ಇಲ್ಲವೆನ್ನಲು ಅಸಾಧ್ಯ. ಜಿಕೆವಿ, ಶ್ರೀನಿವಾಸ್ ಜೋಡಿಯ ಮಧುರ ಹಾಡುಗಳ ರಾಶಿಯೇ ಸಾಕ್ಷಿವೆ. ದೀನ ನಾ ಬಂದಿರುವೆ, ಕಣ್ಣಂಚಿನ ಈ ಮಾತಲಿ, ನಗುವುದೋ ಅಳುವುದೋ ನೀವೇ ಹೇಳಿ, ಆಡೋಣ ನೀನು ನಾನು, ನಿನದೇ ನೆನಪು ದಿನವೂ.. ಹೀಗೆ. ಶ್ರೀನಿವಾಸ ಅವರು ತಮ್ಮ ತಾಯಿ ಶೇಷಗಿರಿಯಮ್ಮ ಸತ್ತ ನೋವು ಅದುಮಿಟ್ಟುಕೊಂಡು ಹಾಡಿದ ಭೀಮ್ ಪಲಾಸ್/ಅಭೇರಿ ರಾಗಾ ಧಾರಿತ(ಅನ್ಯರಾಗಗಳ ಮಿಶ್ರಣವೂ ಇದೆ) ಗೀತೆಯಾದ ರವಿವರ್ಮನ ಸೊಗಸಾಗಿದೆ.

ಬಂಗಾರದ ಮನುಷ್ಯ ಚಿತ್ರದ 'ನಗುನಗುತಾ ನಲಿ ನಲಿ' ನನಗೆ ಇದೇ ಚಿತ್ರದ ಆಗದು ಎಂದು ಗೀತೆ ಬಹಳ ಇಷ್ಟ. ಎಂ. ರಂಗರಾವ್ -ಶ್ರೀನಿವಾಸರ ಜೋಡಿಯ ಮೋಡಿಯೂ ವಿಶಿಷ್ಟ. ಇವರಿಬ್ಬರ ಜೋಡಿಯಲ್ಲೂ ಅನೇಕ ಒಳ್ಳೆಯ ಗೀತೆಗಳಿವೆ. 'ಮೈಸೂರು ದಸರಾ...', 'ನಗಬೇಡ ನಗಬೇಡ ನಗಬೇಡ', ಅನೇಕ. ರಾಜನ್ ನಾಗೇಂದ್ರ, ಸತ್ಯಂ ಎಲ್ಲರ ಸಂಯೋಜನೆಯಲ್ಲಿಯೂ, ಅವರ ಗಾನ ಸುಧೆಯ ಕೊಡುಗೆ ಅಗಾಧ. ಆದರೆ ವಿಜಯ ಭಾಸ್ಕರ್, ಪಿ.ಬಿ. ಎಸ್ ಸಹಸಾಂಗತ್ಯ ಮರೆಯಲು ಸಾಧ್ಯವಾದ ಸಂಗತಿ. ಕೆಂಪು ರೋಜಾ ಮೊಗದವಳೇ, ಬೆಳ್ಳಿ ಮೋಡದ ಅಂಚಿನಿಂದ, ಪಂಚಮ ವೇದ,ಪ್ರೇಮದ ನಾದ, ಇಳಿದು ಬಾ (ಈ ಹಾಡಿಗೆ ಮತ್ತು ತೂಗುದೀಪ ಚಿತ್ರದ ವಿಜಯಭಾಸ್ಕರ್ ಅವರದ್ದೇ ಸಂಗೀತ ನಿರ್ದೇಶನದ ನಿಮ್ಮ ಮುದ್ದಿನ ಕಂದ ನಾವು ಹಾಡುಗಳಿಗೆ ಪಿ.ಬಿ.ಎಸ್ ತಾವೇ ಅಭಿನಯಿಸಿದ್ದಾರೆ) ನಾನೂ ನೀನು ಜತೆಗಿರಲು ಕಾಲದ ನೆನಪೇ ಬೇಕಿಲ್ಲ, ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಒಂದಿರಲಿ, ಕನ್ನಡನಾಡಿನ ವೀರ ರಮಣಿಯ, ಬಾರೆ ಬಾರೆ...ಬರೆದೆ ನೀನು ನಿನ್ನ ಹೆಸರ, ಕಲ್ಪನಾ ರೂಪರಾಶಿ. ಹೀಗೆ ನೂರಾರು ಗೀತೆಗಳಿವೆ.

ಭಾಗ್ಯಜ್ಯೋತಿ ಚಿತ್ರಕ್ಕೆ ತಾವೇ ರಚಿಸಿ ವಾಣಿಜಯರಾಂ ಜತೆಗೆ ಹಾಡಿದ ದಿವ್ಯ ಗಗನ ವನವಾಸಿ, ಉರ್ದು ಕಲಿತು, ತಮಿಳಿನ ನಂದು ಚಿತ್ರಕ್ಕೆ ಬರೆದು, ಭೂಪೇನ್ ಹರ್ಝಾರಿಕಾ ಹಾಡಿದ ಕುಛ್ ಕೆಹ್ ಸಖೂ, ಲಕ್ಷ್ಮಣ್ ಶ್ರುತಿ ಎಂಬ ಕಾರ್ಯಕ್ರಮದಲ್ಲಿ ಎಸ್.ಪಿ.ಬಿ, ಏಸುದಾಸರನ್ನು ಹೊಗಳಿ ಬರೆದ ಹಾಡು, ನೀಲ್ ಆರ್ಮ್ ಸ್ಟ್ರಾಂಗ್ ಸಾಧನೆಯನ್ನು ಕುರಿತು ಇಂಗ್ಲೀಷ್‌ನಲ್ಲಿ ರಚಿಸಿದ Man to Moon, Moon to God... ಎಂಟು ಭಾಷೆಗಳನ್ನು ಅರಿತಿದ್ದ ಅರಿಜೋನ ವಿವಿಯ ಡಾಕ್ಟರೇಟ್‌ಗೆ ಭಾಜನರಾಗಿದ್ದರು. ಕರುಣೆಯಿಲ್ಲದ ಕಾನೂನು ಚಿತ್ರಕ್ಕೆ ಪಿ.ಬಿ. ಅವರೇ ರಚಿಸಿ ಪ್ರಭಾಕರ್ ಅವರ ಅಭಿನಯಕ್ಕೆ ಹಾಡಿರುವ ಧೈರ್ಯವೇ ಹಿಮಾಲಯ ನನಗೆ ಬಹಳ ಮೆಚ್ಚು. ಅನಂತನಾಗ್ ಅವರಿಗೂ ಮರೆಯದ ಹಾಡು ಚಿತ್ರಕ್ಕೆ ಬಾನಲಿ ತಾರಾವೃಂದದ ನಡುವೆ ಎಂಬ ಹಿಟ್ ಹಾಗೂ ಶಂಕರನಾಗ್ ಅವರಿಗೂ ದೇವರ ಆಟ ಚಿತ್ರದಲ್ಲಿ ಮೊದಲನೆ ನೋಟಕೆ..ದಂಥ ಯಶಸ್ವೀ ಗೀತೆಗಳನ್ನು ಹಾಡಿದ್ದಾರೆ.

ಡಾ. ಪಿ.ಬಿ.ಎಸ್ ಕಲ್ಯಾಣಿರಾಗ, ಮೋಹನ, ಹಂಸಧ್ವನಿ, ಹಿಂದೋಳ, ಶಿವರಂಜಿನಿ ವಿವಿಧ ರಾಗಸಮ್ಮೇಳಗಳಲ್ಲಿ ಉಲಿದ ಗೀತೆಗಳಾಗಲಿ, ತಾವೇ ಸೃಜಿಸಿದ ರಾಗಸೃಷ್ಟಿಯ ಹಿರಿಮೆಯಾಗಲೀ ಕಡಿಮೆ ಸಾಧನೆಯಲ್ಲ. ರಾಜ್ಯೋತ್ಸವ ಪ್ರಶಸ್ತಿ, ನಾಡೋಜ, ತಮಿಳು ನಾಡಿನ ಕಲೈ ಮಾಮಣಿ ಹೀಗೆಲ್ಲ ಗೌರವಾದರಗಳಿಗೆ ಭಾಜನರಾಗಿದ್ದ ಅವರ ಸಾಧನೆ ಶಿಖರಸದೃಶ. ಅವರ 13 ನೇ ವರ್ಷದ ಸ್ಮರಣೆಯ ಏಪ್ರಿಲ್14 ರಂದು ಅವರ ಸಾಧನೆ, ಗಾನಗುಂಫನಗಳ ಮೂಲಕ ಅವರಿಗೆ ಹೀಗೊಂದು ನುಡಿ ಗಾನ ನಮನ.

ಸ್ವಾಸ್ಥ್ಯ ಇಲ್ಲದ ವಿಶ್ವಸಂಸ್ಥೆ ಜೀವಂತ ಇದೆಯೇ?

ಅರಾಜಕ ಜಗತ್ತು
ಮಿರ್ಲೆ ಚಂದ್ರಶೇಖರ
vveditoped@gmail.com

ಯುದ್ಧಗಳು ಯಾಕಾದರೂ ನಡೆಯುತ್ತವೆಯೋ ಎಂಬುದು ಜನಸಾಮಾನ್ಯರ ಚಿಂತೆ, ದುಡಿದು ತಿನ್ನುವ ವರ್ಗದವರಿಗೆ ಇದರಿಂದ ಹೆಚ್ಚು ಹೊಡೆತ, ಆಮದು ರಫ್ತುವಿನಲ್ಲಿ ಆಗುವ ವ್ಯತ್ಯಾಸದಿಂದ ದರ ಏರಿಕೆ ಗಗನಕ್ಕೆ ಮುಟ್ಟಿದೆ. ಯುದ್ಧ ಕೆಲವು ದೇಶಗಳ ನಡುವೆ ಆದರೂ ಪರಿಣಾಮ ಇಡೀ ಮಾನವ ಕುಲಕ್ಕೇ ಬರೆ ಎಳೆದುಬಿಡುತ್ತದೆ. ಯುದ್ಧಗಳಿಂದ ಆಗುವ ಲಾಭವಾದರೂ ಏನು? ಎಂಬುದು ಜನಸಾಮಾನ್ಯರ ಯಕ್ಷ ಪ್ರಶ್ನೆ. ಬೀದಿ ಜಗಳಗಳನ್ನು, ನೆರೆಹೊರೆಯ ಕಿತ್ತಾಟವನ್ನು ನಡುವೆ ಹೋಗಿ ಸಮಾಧಾನಪಡಿಸಿ ನಿಲ್ಲಿಸಬಹುದು. ಜಗಳ ವಿಕೋಪಕ್ಕೆ ತಿರುಗಿದಾಗ ಒಬ್ಬಿಬ್ಬರ ಸಾವುನೋವಿನಿಂದ ಮುಗಿಯಬಹುದು. ದೇಶಗಳ ನಡುವೆ ನಡೆಯುವ ಯುದ್ಧಗಳಲ್ಲಿ ಸಂಭವಿಸುವ ಸಾವು- ನೋವುಗಳು, ಆಸ್ತಿಪಾಸ್ತಿಗಳ ಹಾನಿ, ಪ್ರಕೃತಿ ಮೇಲಿನ ವಿಕೃತಿ, ಮುಂದಿನ ಪೀಳಿಗೆಯ ಆರೋಗ್ಯ..... ಮುಂತಾದ ಹಲವು ಬಗೆಯ ಹಾನಿಗಳನ್ನು ನಿಖರವಾಗಿ ಅಂದಾಜಿಸಲಾಗದು. ಹಾನಿಯ ಪ್ರಮಾಣ ಮಾತ್ರ ಬಹುದೊಡ್ಡದಿರುತ್ತದೆ. ಮನುಷ್ಯ ಮನುಷ್ಯನಾಗಿರದೆ ರಾಕ್ಷಸನಾಗಿ, ಭೂತಾಯಿಯ ಲಕ್ಷಾಂತರ ಜೀವರಾಶಿಗಳಲ್ಲಿ ವಿಶೇಷ ಜೀವಿಯಾಗಿ ತನ್ನನ್ನು ಪೊರೆದ ಭೂದೇವಿಗೇ ಕಂಟಕನಾಗಿಬಿಟ್ಟ! ಜಗಳ ಬಿಡಿಸಲು ಎಲ್ಲಾ ಕಡೆ ಇರುವಂತೆ ಇಲ್ಲೂ ಯಾರಾದರೂ ಇರಬೇಕಲ್ಲ? ಮಧ್ಯಸ್ಥಿಕೆ ವಹಿಸಿಕೊಂಡು ಸಮಸ್ಯೆಗಳನ್ನು ಬಗೆಹರಿಸಿ ಯುದ್ಧಗಳು ನಡೆಯದಂತೆ ಶಾಂತಿಯನ್ನು ಸ್ಥಾಪಿಸುವವರು ವಿಶ್ವದಲ್ಲಿ ಇದ್ದೂ ಇಲ್ಲವಾಗಿದ್ದಾರೆ. ಇಲ್ಲವಾದವರು ಎಂದರೆ ಬೇರೆ ಯಾರೂ ಅಲ್ಲ. ವಿಶ್ವದ ಮಹಾಸಂಸ್ಥೆ ಎನಿಸಿಕೊಂಡಿರುವ, ಹಾಲಿ ಅಸ್ವಸ್ಥರಾಗಿರುವ ವಿಶ್ವಸಂಸ್ಥೆ ಎಂಬ ಜಾಗತಿಕ ಸಂಸ್ಥೆ ಎನ್ನುವುದನ್ನು ನೀವೂ ಒಪ್ಪುತ್ತೀರಲ್ಲವೇ? ಯುದ್ಧವನ್ನು ನಿಲ್ಲಿಸಲು ಮಧ್ಯಸ್ಥಿಕೆಯನ್ನು ವಿಶ್ವಸಂಸ್ಥೆಯ ತಾತ್ಕಾಲಿಕ ಸದಸ್ಯ ರಾಷ್ಟ್ರ ಪಾಕಿಸ್ತಾನ ವಹಿಸುತ್ತದೆ ಎಂದರೆ ವಿಶ್ವಸಂಸ್ಥೆಯ ಸಾಮರ್ಥ್ಯ ಮತ್ತು ಕಾರ್ಯವೈಖರಿ ಎಲ್ಲಿಗೆ ಬಂದಿದೆ ಎನ್ನುವುದು ಪ್ರಶ್ನೆಯಾಗಿದೆ.

ವಿಶ್ವಸಂಸ್ಥೆ ಎಂಬುದು 1945ರ ಅ.24ರಂದು ರೂಪುಗೊಂಡ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ. 1939 ರಿಂದ 1945ರವರೆಗೆ ಆರು ವರ್ಷಗಳ ಕಾಲ ವಿಶ್ವದ ಎರಡು ಬಣಗಳ ನಡುವೆ ಎರಡನೇ ಮಹಾಯುದ್ಧ ನಡೆಯಿತು. ಒಟ್ಟು 70 ದೇಶಗಳ ಸೈನ್ಯವು ಭಾಗವಹಿಸಿದ್ದವು. ಆರು ಕೋಟಿಗೂ ಹೆಚ್ಚು ಜನರು ಪ್ರಾಣ ಕಳೆದುಕೊಂಡರು. ಇಂದು ಕಂಪ್ಯೂಟರ್, ತಂತ್ರಾಂಶ, ರೇಡಾರ್, ಸ್ಯಾಟಲೈಟ್, ಅಂತರ್ಜಾಲ, ಕೃತಕ ಬುದ್ಧಿಮತ್ತೆ ಮುಂತಾದ ವಿಭಾಗಗಳಲ್ಲಿ ಆಗಿರುವ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಹಲವು ರಾಷ್ಟ್ರಗಳು ಸೂಪರ್ ಪವರ್ ಹೆಸರಲ್ಲಿ ಮೆರೆಯುತ್ತಿವೆ. ಈಗ ಏನಾದರೂ ಎರಡನೇ ಮಹಾಯುದ್ಧದ ರೀತಿಯಲ್ಲಿ 70 ದೇಶಗಳು ಕೂಡಿ ಯುದ್ಧ ನಡೆಸಿದರೆ ಮಾನವರಿರಲಿ, ಇಡೀ ಭೂಮಿಯೇ ಸರ್ವನಾಶ ಆಗುವುದು ಗ್ಯಾರಂಟಿ!.

ಎರಡನೇ ವಿಶ್ವಯುದ್ಧದ ವಿಜಯಿ ದೇಶಗಳಾದ ಫ್ರಾನ್ಸ್, ಅಮೆರಿಕಾ, ಚೀನಾ, ಸೋವಿಯತ್ ಒಕ್ಕೂಟ ಮತ್ತು ಯುನೈಟೆಡ್ ಕಿಂಗ್ಡಮ್ ದೇಶಗಳ ಪ್ರತಿನಿಧಿಗಳು ವಿಶ್ವಸಂಸ್ಥೆಯ ರೂಪರೇಷೆಗಳನ್ನು ಸಿದ್ಧಪಡಿಸಿ ಸ್ಥಾಪಿಸಿದರು. ತರುವಾಯ 1945ರ ಜೂ. 29ರಂದು 51 ದೇಶಗಳು ಒಂದುಗೂಡಿ ವಿಶ್ವಸಂಸ್ಥೆಯ ಸ್ಥಾಪನೆಯನ್ನು ಅಂಗೀಕರಿಸಿದರು. ಇದರಲ್ಲಿ 193 ಸದಸ್ಯ ರಾಷ್ಟ್ರಗಳಿವೆ, ಭಾರತವು 1945ರ ಅ. 30ರಂದು ಇದರ ಸದಸ್ಯತ್ವವನ್ನು ಪಡೆದವು. ವಿಶ್ವಸಂಸ್ಥೆ ಸ್ಥಾಪನೆಯ ಉದ್ದೇಶ ಒಳ್ಳೆಯದೇ ಆಗಿದೆ. ಮೊದಲ ಮಹಾಯುದ್ಧದ ನಂತರ ಸ್ಥಾಪಿಸಲಾಗಿದ್ದ ರಾಷ್ಟ್ರಗಳ ಸಂಘ(ಲೀಗ್ ಆಫ್ ನೇಷನ್) ವಿಫಲತೆ ಕಂಡಿತು. ನಂತರ ನಡೆದ ಎರಡನೇ ಮಹಾಯುದ್ಧದ ಭೀಕರ ಪರಿಣಾಮಗಳನ್ನು ತಿಳಿದು ಮುಂದಿನ ದಿನಗಳಲ್ಲಿ ಯುದ್ಧಗಳನ್ನು ತಡೆಯುವುದು ಹಾಗೂ ವಿಶ್ವಮಟ್ಟದಲ್ಲಿ ಶಾಂತಿ ಮತ್ತು ಸುಭದ್ರತೆ ಕಾಪಾಡಿ ಮಾನವ ಜನಾಂಗದ ಜೀವನಮಟ್ಟವನ್ನು ಸುಧಾರಿಸುವ ಪ್ರಮುಖ ಉದ್ದೇಶದಿಂದ ಸ್ಥಾಪಿಸಲಾಯಿತು. ರಾಷ್ಟ್ರಗಳ ನಡುವೆ ಪರಸ್ಪರ ಸ್ನೇಹಸಂಬಂಧಗಳನ್ನು ಬೆಸೆಯುವುದು, ಜಾಗತಿಕ ಮಟ್ಟದಲ್ಲಿ ಪ್ರಕೃತಿ ವಿಕೋಪಗಳು, ಸಾಂಕ್ರಾಮಿಕ ರೋಗಗಳು ಮುಂತಾದವುಗಳಿಂದ ಅಶಾಂತಿ ಉಂಟಾದಾಗ, ದೇಶಗಳ ನಡುವೆ ಸಮನ್ವಯ ಸಾಧಿಸಿ ಸಹಾಯ ಹಸ್ತ ನೀಡುವುದಾಗಿದೆ. ಸದಸ್ಯ ರಾಷ್ಟ್ರಗಳು ಪರಸ್ಪರ ಸಮಾನತೆ, ಸೌಹಾರ್ದತೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳನ್ನು ಸಹಕಾರ ತತ್ವದ ಮೇಲೆ ಬಗೆಹರಿಸಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಯನ್ನು ನಿಯಂತ್ರಿಸುವುದು ಆ ಮೂಲಕ ಎಲ್ಲಾ ಜನಾಂಗಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಿ ಆರ್ಥಿಕ, ಸಾಮಾಜಿಕ ಪ್ರಗತಿ ಮತ್ತು ಜನತೆಯ ಜೀವನ ಮಟ್ಟವನ್ನು ಸುಧಾರಿಸುವುದಾಗಿರುತ್ತದೆ. ಈ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದಕ್ಕಾಗಿ ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ, ಧರ್ಮದರ್ಶಿ ಮಂಡಳಿ, ಅಂತಾರಾಷ್ಟ್ರೀಯ ನ್ಯಾಯಾಲಯ ಹಾಗೂ ಕಾರ್ಯಾಲಯ ಎಂಬ ಆರು ಪ್ರಧಾನ ಸಮಿತಿಗಳನ್ನು ಮತ್ತು ಹಲವು ಉಪಸಮಿತಿಗಳನ್ನು ಹೊಂದಿದೆ. ಇವುಗಳಲ್ಲದೆ ವಿಶ್ವಸಂಸ್ಥೆಗೆ ಹಲವು ಅಂಗಸಂಸ್ಥೆಗಳೂ ಇವೆ.

ಉಪಸಮಿತಿಗಳಲ್ಲಿ ವಿಶ್ವಆಹಾರ ಮತ್ತು ಕೃಷಿ ಸಂಸ್ಥೆ (ಎಫ್ಎಒ), ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ(ಯುಎನ್‌ಸಿಎಸ್‌ಇಒ- ಯುನೆಸ್ಕೊ), ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯೂಎಚ್‌ಒ), ವಿಶ್ವಕಾರ್ಮಿಕ ಸಂಸ್ಥೆ (ಐಎಲ್‌ಒ), ವಿಶ್ವಹಣಕಾಸು ಸಂಸ್ಥೆ(ಐಎಂಎಫ್), ವಿಶ್ವ ನಾಗರೀಕ ವಿಮಾನಯಾನ ಸಾರಿಗೆ ಸಂಸ್ಥೆ(ಐಸಿಎಒ), ವಿಶ್ವಅಣುಶಕ್ತಿ ಸಂಸ್ಥೆ (ಐಎಸಿಎ) ಮತ್ತು ವಿಶ್ವಬ್ಯಾಂಕ್ (ವರ್ಲ್ಡ್ ಬ್ಯಾಂಕ್) ಮುಂತಾದವುಗಳು ಕಾರ್ಯನಿರ್ವಹಿಸುತ್ತಿವೆ.

ಅಂದಿನ ಇಂಗ್ಲೆಂಡ್‌ನ ಪ್ರಧಾನಿ ಚರ್ಚಿಲ್, ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ.ರೂಸ್‌ವೆಲ್ಟ್ ಹಾಗೂ ರಷ್ಯಾದ ಅಧ್ಯಕ್ಷ ಸ್ಟಾಲಿನ್ ಅವರು ವಿಶ್ವಸಂಸ್ಥೆಯ ಸ್ಥಾಪನೆಗೆ ಪ್ರಮುಖ ರೂವಾರಿಗಳು, ಇದರ ಪ್ರಧಾನ ಕಚೇರಿಯು ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದೆ. ಎಲ್ಲಾ ಕೋನಗಳಿಂದ ಪರಾಮರ್ಶಿಸಿ, ಚರ್ಚಿಸಿ, ನಿಯಮಗಳನ್ನು ರೂಪಿಸಿಕೊಂಡು ಅಧಿಕೃತವಾಗಿ ಹಾಗೂ ವ್ಯವಸ್ಥಿತವಾಗಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಪೋರ್ಚ್‌ಗಲ್‌ನವರಾದ ಆಂಟೋನಿಯೋ ಗುಟೆರಸ್ ಅವರು, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ (ವಿಶ್ವಸಂಸ್ಥೆಗೆ ಮುಖ್ಯಸ್ಥರು) ಆಗಿದ್ದಾರೆ. ಇವರು, ವಿಶ್ವಸಂಸ್ಥೆಯ ಒಂಬತ್ತನೇ ಮಹಾ ಕಾರ್ಯದರ್ಶಿಯಾಗಿದ್ದು, ಇವರ ಅವಧಿ 2017ರ ಜನವರಿ 1ರಿಂದ ಆರಂಭವಾಗಿತ್ತು. 2022ರ ಜ. 1ರಿಂದ ಎರಡನೇ ಅವಧಿಗೆ ಮುಂದುವರಿದಿದ್ದಾರೆ. ಎಲ್ಲವೂ ಸರಿಯಾಗಿಯೇ ಇದೆ. ಆದರೆ ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಇರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಿಂದ ಕೇವಲ 360 ಕಿಮೀ ದೂರದಲ್ಲಿ ಇರುವ ವಾಷಿಂಗ್ಟನ್ ಡಿಸಿಯ ಶ್ವೇತಭವನದಲ್ಲಿ ಇರುವ ಡೊನಾಲ್ಡ್ ಟ್ರಂಪ್‌ನ್ನು ಭೇಟಿ ಮಾಡಿ ಅಮೆರಿಕಾ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ತಡೆಯಲು ಆಗಲಿಲ್ಲವೇ ಆಂಟೋನಿಯಾ ಗುಟೆರಸ್‌ರವರಿಗೆ? ಸಂಧಾನದ ನೀತಿ ನಿಯಮಗಳು ಏನಿವೆಯೋ ಕಾಣೆ. ಇಂತಹ ಪರಿಸ್ಥಿತಿಯಲ್ಲೂ ವಿಶ್ವಸಂಸ್ಥೆ ಇರುವಿಕೆಯು ಜನರಿಗೆ ಕಾಣದೇ ಇರುವುದು ಇದೂ ಕೂಡ ಮೊದಲ ಮಹಾಯುದ್ಧದ ಬಳಿಕ ಸ್ಥಾಪಿತವಾದ 'ಲೀಗ್ ಆಫ್ ನೇಷನ್ಸ್'ನಂತೆ ವಿಫಲವಾಯಿತೆ? ಎಂಬ ಅನುಮಾನವು ಮೂಡದೆ ಇರದು.

ಆರು ಪ್ರಧಾನ ಸಮಿತಿಗಳಲ್ಲಿ ಒಂದಾದ ಭದ್ರತಾ ಮಂಡಳಿಯು ಕಾರ್ಯಾಂಗದ ಮಾದರಿ ಕಾರ್ಯನಿರ್ವಹಿಸುತ್ತದೆ. ವಿಶ್ವಶಾಂತಿ ಹಾಗೂ ಭದ್ರತೆ ಕಾಪಾಡುವ ಮೂಲಕ ಮೂರನೇ ಮಹಾಯುದ್ಧ ನಡೆಯುವುದನ್ನು ತಡೆಯುವ ಜವಾಬ್ದಾರಿ ಹೊಂದಿದೆ. ಮಂಡಳಿಯಲ್ಲಿ ಐದು ಖಾಯಂ ಸದಸ್ಯ ರಾಷ್ಟ್ರಗಳು ಹಾಗೂ ಹತ್ತು ತಾತ್ಕಾಲಿಕ ಸದಸ್ಯ ರಾಷ್ಟ್ರಗಳಿವೆ, ಖಾಯಂ ಸದಸ್ಯರಿಗೆ ವಿಟೋ ಅಧಿಕಾರವಿದೆ. ಭಾರತವು ಈ ಮಂಡಳಿಯಲ್ಲಿ ಸದಸ್ಯತ್ವವನ್ನು ಹೊಂದಿಲ್ಲ. ಖಾಯಂ ಸದಸ್ಯತ್ವವನ್ನು ಪಡೆಯಲು ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳು ಬೆಂಬಲ ನೀಡಿವೆಯಾದರೂ ಭಾರತದ ಮಹತ್ವಾಕಾಂಕ್ಷೆ ಫಲಿಸಿಲ್ಲ. ಖಾಯಂ ಸದಸ್ಯತ್ವ ಪಡೆದಿರುವ ಅಮೆರಿಕಾವು ಶಾಂತಿ ಕಾಪಾಡದೆ ಅದೇ ಯುದ್ಧದಲ್ಲಿ ಮುಂಚೂಣಿಯಲ್ಲಿ ಇರುವುದು ದುರದೃಷ್ಟಕರ.

ಯುದ್ಧಗಳನ್ನು ತಡೆಯಲಾಗದೆ ಕಣ್ಣು, ಕಿವಿ ಮತ್ತು ಬಾಯಿ ಮುಚ್ಚಿ ಕುಳಿತಿರುವ ವಿಶ್ವಸಂಸ್ಥೆಯ ಕೆಲಸವಾದರೂ ಏನು? ಮೂರನೇ ಮಹಾಯುದ್ಧ ನಡೆಯುವ ಸಂಭವ ಇಲ್ಲವೇ ಇಲ್ಲ ಎನ್ನಬಹುದು. ಆಕಸ್ಮಾತ್ ನಡೆದರೆ ಸಂಭವಿಸುವ ಭೀಕರತೆ ಅತೀ ಕರಾಳವಾಗಿರುತ್ತದೆ. ಹಿಂದೆ ಮದ್ದುಗುಂಡುಗಳನ್ನು ಉಪಯೋಗಿಸಿ ಯುದ್ಧ ನಡೆಯುತ್ತಿತ್ತು, ವೈಜ್ಞಾನಿಕ ಅಭಿವೃದ್ಧಿಯ ಕಾರಣ ಹಾಗೂ ಬದಲಾದ ತಂತ್ರಜ್ಞಾನದಲ್ಲಿ ಎಲ್ಲೋ ಕುಳಿತು ಕೇವಲ ಬಟನ್ ಒತ್ತುವ ಮೂಲಕ ಯುದ್ಧಗಳು ನಡೆಯುತ್ತವೆ. ಪರಮಾಣು ಬಳಕೆ ಆಗದೆ ಇರದು ಎನ್ನುವಂತಿಲ್ಲ. ಭೀಕರವಾದ ಹೋರಾಟದಲ್ಲಿ ಜನರು ಅನ್ನ ನೀರಿಲ್ಲದೆ ಸಾಯುತ್ತಾರೆ. ಫಲವತ್ತಾದ ಭೂಮಿಯೂ ಇಲ್ಲದೆ ಆಹಾರವನ್ನು ಬೆಳೆಯಲಾಗುವುದಿಲ್ಲ. ಯುದ್ಧಗಳು ಇಡೀ ಮಾನವ ಕುಲದ ವಿನಾಶಕ್ಕೆ ಕಾರಣವಾಗುತ್ತದೆ. ಎಲ್ಲವೂ ನಾಶ, ಅಳಿದುಳಿದವರು ಇದ್ದು ಮುಂದೆ ನಾಲ್ಕನೇ ಮಹಾಯುದ್ಧ ನಡೆಯಬಹುದೆಂದು ಕಲ್ಪಿಸಿಕೊಂಡರೆ, ಕಲಿಯುಗದ ಪ್ರಾರಂಭದಲ್ಲಿ ನಡೆದಂತೆ ಯಾವೊಂದು ತಾಂತ್ರಿಕ ಆಯುಧಗಳ ಬಳಕೆ ಇಲ್ಲದೆ ಮಚ್ಚು, ದೊಣ್ಣೆ ಹಾಗೂ ಕಲ್ಲುಗಳನ್ನು ಬಳಸಿ ನಡೆಸುತ್ತಾರೆ ಎಂಬುದು ಸತ್ಯವಾದ ಮಾತು! ಮನುಷ್ಯನೊಳಗಿನ ಪೈಶಾಚಿಕ ಗುಣ ನಿರ್ಮೂಲವಾಗದ ಹೊರತು ಸುಧಾರಣೆ ಆಗದು. ವಿಶ್ವಸಂಸ್ಥೆಯಲ್ಲಿ ಕುಳಿತಿರುವವರೂ ಮನುಷ್ಯರೇ, ಶಾಂತಿಸಂಧಾನ ಮಾಡಲಾಗದೆ ನಂಬಿಕೆಗೆ ಅರ್ಹವಲ್ಲದ ಪಾಕಿಸ್ತಾನದಂತಹ ದೇಶವು ಮುಂದೆ ಬಂದಿರುವುದನ್ನು ನೋಡಿದರೆ ವಿಶ್ವಸಂಸ್ಥೆಯ ಅವಸ್ಥೆ ಹೇಗಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಶಾಂತಿಗಾಗಿ ಇಡೀ ಜಗತ್ತಿಗೆ ಕುವೆಂಪುರವರ ವಿಶ್ವಮಾನವ ಸಂದೇಶವನ್ನು ತಿಳಿಸಬೇಕಾಗಿದೆ. ವಿಶ್ವಸಂಸ್ಥೆ ಅದನ್ನಾದರೂ ಭಾಷಾಂತರಿಸಿ ಪ್ರಚಾರ ಮಾಡಿದರೆ ಒಂದಷ್ಟು ಮನಸ್ಸುಗಳು ಪರಿವರ್ತನೆ ಆದಾವು.

ಲೇಖನ ಬರೆಯುತ್ತಿರುವಾಗ ನಡುವೆ ನಾದಾನಂದನಾಥ ಸ್ವಾಮೀಜಿಯವರು ತಾವು ರಚಿಸಿದ ಕವನವನ್ನು ನನ್ನ ವಾಟ್ಸ್ಆ್ಯಪ್‌ಗೆ ಕಳುಹಿಸಿದ್ದು, ಅದರ ಕೆಲವು ಸಾಲುಗಳು ಇಲ್ಲಿಗೆ ಸೂಕ್ತವಾಗಿತ್ತು; ಯಾವ ಮನುಷ್ಯರ ಸ್ವಾರ್ಥಕ್ಕೆ ಭೂಮಿ ನಲುಗಿದೆ ಎಚ್ಚರ...!! ಸಮರಸದಿ ಬದುಕು ಕಟ್ಟು ಕನಸ ದೂರ ಬಿಟ್ಟೆವು...!! ಅಣ್ವಸ್ತ್ರಗಳ ಪೈಪೋಟಿಯೊಳಗೆ ರಣರಂಗದಿ ನಿಂತೆವು...!! ಪ್ರಕೃತಿಯೊಳಗೆ ನಾವು ಏನು ಅರ್ಥ ಮಾಡಿಕೊಳ್ಳದೆ ಹೋದೆವು...!!

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 88

ಸಮಾಚಾರ ಸಣ್ಣದಲ್ಲ

ಲಾಲೂ ವಿರುದ್ಧ ಕೇಸ್ ರದ್ದು ಇಲ್ಲ: ಸುಪ್ರೀಂ

ದೆಹಲಿ: ರಾಷ್ಟ್ರೀಯ ಜನತಾ ದಳ ಪಕ್ಷದ ಮುಖಂಡ ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ 2004-09ರ ಅವಧಿಯಲ್ಲಿ ರೈಲ್ವೆ ಸಚಿವರಾಗಿದ್ದಾಗ ಉದ್ಯೋಗ ಕೊಡಿಸುವುದಕ್ಕಾಗಿ ಭೂಮಿ ಹಸ್ತಾಂತರ ಹಗರಣ ನಡೆಸಿದ್ದರು ಎಂಬ ಆರೋಪದಡಿ ಅಪರಾಧ ಪ್ರಕರಣ ದಾಖಲಾಗಿದೆ. ಕೇಂದ್ರ ತನಿಖಾ ದಳ(ಸಿಬಿಐ) ತನಿಖೆ ನಡೆಸಿದೆ. ಈ ಪ್ರಕರಣವನ್ನು ರದ್ದು ಮಾಡುವಂತೆ ಕೋರಿ ಲಾಲೂ ಪ್ರಸಾದ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಪ್ರಕರಣ ರದ್ದುಗೊಳಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಲಾಲೂ ಪರವಾಗಿ ವಕೀಲ ಕಪಿಲ್ ಸಿಬಲ್ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದಾರೆ.

ನಕ್ಸಲ್ ಕಮಾಂಡರ್ ಮಹಿಳೆ ರೂಪಿ ಹತ

ರಾಯಪುರ: ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯ ಅರಣ್ಯದಲ್ಲಿ ಸೋಮವಾರ ನಡೆಸಲಾದ ನಕ್ಸಲ್ ನಿಗ್ರಹ ಕಾರ್ಯಾಚರಣೆಯುಲ್ಲಿ ಉನ್ನತ ನಕ್ಸಲ್ ಕಮಾಂಡರ್ ರೂಪಿ (ಮಹಿಳೆ) ಹತರಾಗಿದ್ದಾರೆ. ಟೆಬೆಥಿಯಾ-ಪತಾರ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಮಚಪಲ್ಲಿ-ಅರಾರ್ ಜೋರಾ-ಹಿದೂರ್ ಭಾಗದಲ್ಲಿ ಶಸ್ತ್ರಸಜ್ಜಿತ ನಕ್ಸಲರ ತಂಡ ಇರುವ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಮಾಹಿತಿ ಆಧರಿಸಿ ನಕ್ಸಲ್ ನಿಗ್ರಹ ಪಡೆಯ ಜಂಟಿ ತಂಡ ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ಪ್ರಾರಂಭಿಸಿತ್ತು. ಮಾಚಪಲ್ಲಿ ಪ್ರದೇಶದಲ್ಲಿ ಎದುರಾದ ನಕ್ಸಲರು ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆಯ ಪ್ರತಿದಾಳಿಯಲ್ಲಿ ಮಾವೋವಾದಿ ಕೇಡರ್ ರೂಪಿ ಹತರಾದ ಬಳಿಕ ಉಳಿದ ನಕ್ಸಲರು ಕಾಡಿನೊಳಗೆ ಮರೆಯಾದರು. ರೂಪಿ ಶವವನ್ನು ನಕ್ಸಲ್ ನಿಗ್ರಹ ಪಡೆ ವಶಕ್ಕೆ ಪಡೆದಿದೆ. 2025ರಲ್ಲಿ ಮನ್ಪುರ್-ಮೊಹ್ಲಾ ಜಿಲ್ಲೆಯಲ್ಲಿನ ಕಾರ್ಯಾಚರಣೆ ಯಲ್ಲಿ ಹತನಾದ ದಂಡಕಾರಣ್ಯ ವಿಶೇಷ ವಲಯ ಸಮಿತಿಯ ಹಿರಿಯ ನಾಯಕ ವಿಜಯ್ ರೆಡ್ಡಿಯ ಪತ್ನಿ ರೂಪಿ. ಆಕೆಗೆ ಶರಣಾಗಲು ಹಲವು ಬಾರಿ ಮನವಿ ಮಾಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಥಾಣೆ: ಲಾರಿ-ವ್ಯಾನ್ ಡಿಕ್ಕಿ: 11 ಜನ ಸಾವು

ಥಾಣೆ: ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಸೇತುವೆಯೊಂದರ ಮೇಲೆ ಸೋಮವಾರ ಬೆಳಗ್ಗೆ 10.45ರ ವೇಳೆ ಸಂಚರಿಸುತ್ತಿದ್ದ ಕಾಂಕ್ರೀಟ್ ಮಿಕ್ಸರ್ ಲಾರಿ ಮತ್ತು ಪ್ಯಾಸೆಂಜರ್ ವ್ಯಾನ್ ಮಧ್ಯೆ ಡಿಕ್ಕಿಯಾಗಿದ್ದು, ವ್ಯಾನ್‌ನಲ್ಲಿದ್ದ ಪ್ರಯಾಣಿಕರಲ್ಲಿ 11 ಜನ ಮೃತಪಟ್ಟಿದ್ದಾರೆ, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಮುರಾಬಾದ್‌ನ ಗೋವಿಲಿ ಗ್ರಾಮದ ರೈಟಾ ಸೇತುವೆ ಮೇಲೆ ಅಪಘಾತವಾಗಿದೆ. ಕಲ್ಯಾಣ್‌ನಿಂದ ಮುರಾಬಾದ್‌ಗೆ ಪ್ಯಾಸೆಂಜರ್ ವ್ಯಾನ್ ಹೋಗುತ್ತಿತ್ತು. ಎದುರಿನಿಂದ ಬರುತ್ತಿದ್ದ ಸಿಮೆಂಟ್ ಮಿಕ್ಸರ್ ಲಾರಿ ಮುಖಾಮುಖಿ ಡಿಕ್ಕಿ ಹೊಡೆದುಕೊಂಡಿವೆ ಎಂದು ಗ್ರಾಮೀಣ ಪೊಲೀಸ್ ಠಾಣೆ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮೃತರಲ್ಲಿ 8 ಪುರುಷರು, 3 ಮಹಿಳೆಯರಿದ್ದಾರೆ. ಮೃತರಲ್ಲಿ ಆರು ಜನರನ್ನು ಗುರುತಿಸಲಾಗಿದೆ. ಇಬ್ಬರು ಗಾಯಾಳುಗಳನ್ನು ಉಲ್ಲಾಸ್ ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮುರಾಬಾದ್ ತಹಸಿಲ್ದಾರ್ ಅಭಿಜಿತ್ ದೇಶಮುಖ್ ತಿಳಿಸಿದ್ದಾರೆ.

ಬಲೂಚ್‌ದಾಳಿ: ಪಾಕ್ ನೌಕಾಪಡೆಯ3 ಸಾವು

ಇಸ್ಲಾಮಾಬಾದ್: ಅರಬ್ಬಿ ಸಮುದ್ರದಲ್ಲಿ ಗಸ್ತು ನಡೆಸುತ್ತಿದ್ದ ಪಾಕಿಸ್ತಾನದ ಕರಾವಳಿ ರಕ್ಷಣಾ ಪಡೆಯ ದೋಣಿ ಮೇಲೆ ಬಲೂಚ್ ಬಂಡುಕೋರರು ಭಾನುವಾರ ದಾಳಿ ನಡೆಸಿದ್ದು, ಪಾಕ್ ಕರಾವಳಿ ಪಡೆಯ ಮೂವರು ಯೋಧರು ಹತರಾಗಿದ್ದಾರೆ. ಇದು ಬಲೂಚ್ ಬಂಡುಕೋರರ ಹೊಸ ಸಾಗರ ಕಾರ್ಯತಂತ್ರದ ಭಾಗವಾಗಿದೆ. ಬಲೂಚ್ ಬಂಡುಕೋರರು ಈಗ ಸಾಗರದಲ್ಲಿನ ಹೋರಾಟಕ್ಕೂ ಸಜ್ಜಾಗಿರುವುದರಿಂದ ಪಾಕ್‌ನ ಗ್ವಾದರ್ ಬಂದರು ಭದ್ರತೆಗೂ ಅಪಾಯ ಎದುರಾಗಿದೆ. ಬಲೂಚಿಗರ ದಾಳಿಯ ಹಿಂದೆ ಅಫ್ಘಾನಿಸ್ತಾನದ ಕೈವಾಡವಿದೆ ಎಂದು ಪಾಕಿಸ್ತಾನ ಆರೋಪಿಸಿದೆ. ಪಾಕಿಸ್ತಾನ-ಇರಾನ್ ಗಡಿ ಬಳಿಯ ಕರಾವಳಿ ಪ್ರದೇಶದಲ್ಲಿ ಪಾಕ್ ನೌಕಾಪಡೆಯ ಕರಾವಳಿ ಕಾವಲು ಪಡೆ ದೋಣಿ ಗಸ್ತು ತಿರುಗುತ್ತಿದ್ದಾಗ ದೋಣಿಯನ್ನು ಸುತ್ತುವರೆದ ಬಲೂಚ್ ಬಂಡುಕೋರರು ಗುಂಡಿನ ಮಳೆಗರೆದಿದ್ದಾರೆ. ಅನಿರೀಕ್ಷಿತ ದಾಳಿಗೆ ಬೆಚ್ಚಿನ ಗಸ್ತು ಪಡೆ ಸಿಬ್ಬಂದಿ ಚೇತರಿಸಿಕೊಳ್ಳುವಷ್ಟರಲ್ಲೇ 3 ಸೈನಿಕರು ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾರೆ.

{ **ಪೋಪ್ ಲಿಯೋ 14** } ಕ್ರೈಸ್ತ ಧರ್ಮಗುರು

ಇರಾನ್ ನಾಗರಿಕತೆಯನ್ನು ನಾಶ ಮಾಡುತ್ತೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿರುವುದು ಸ್ವೀಕಾರಾರ್ಹವಲ್ಲ. ನಾನು ರಾಜಕಾರಣಿ ಅಲ್ಲ. ಟ್ರಂಪ್ ಜತೆ ಚರ್ಚೆ ಮಾಡುವ ಉದ್ದೇಶ ನನಗಿಲ್ಲ. ನಾನು ನೀಡುವ ಸಂದೇಶ ಒಂದೇ: ಅದು ವಿಶ್ವದೆಲ್ಲೆಡೆ ಶಾಂತಿಯನ್ನು ಉತ್ತೇಜಿಸುವುದಾಗಿರುತ್ತದೆ.

'ನಾರಿಶಕ್ತಿ ವಂದನಾ ಅಧಿನಿಯಮ' ಕಾರ್ಯಕ್ರಮ | 2023ರ ಕನಸು 2029ರಲ್ಲಿ ನನಸು: ಮೋದಿ

ಹೊಸ ಇತಿಹಾಸ ಸೃಷ್ಟಿಗೆ ಸಂಸತ್ತು ಸಜ್ಜು

ದೆಹಲಿ: ಇದೇ ಗುರುವಾರ ಆರಂಭಗೊಳ್ಳಲಿರುವ ಸಂಸತ್ತಿನ 3 ದಿನಗಳ ವಿಶೇಷ ಅಧಿವೇಶನದಲ್ಲಿ ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲು ಸ್ಥಾನಗ ಳನ್ನು ಒದಗಿಸುವ 'ನಾರಿ ಶಕ್ತಿ ವಂದನ ಅಧಿನಿಯಮ'(ಮಹಿಳಾ ಮೀಸಲು ತಿದ್ದುಪಡಿ ವಿಧೇಯಕ) ಮಂಡನೆ ಆಗುತ್ತಿದೆ. ಭಾರತದ ಸಂಸತ್ತು ಸಂಸತ್ತು ಹೊಸ ಇತಿಹಾಸ ಸೃಷ್ಟಿಸಲು ಸಜ್ಜಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನಮ್ಮ ಸೋದರಿಯರಿಗೆ ಲೋಕಸಭೆ-ವಿಧಾನಸಭೆಗಳಲ್ಲಿ ಶೇ.33ರಷ್ಟು ಸ್ಥಾನಗಳನ್ನು ಮೀಸಲಾಗಿಡುವ ಕಾಯಿದೆ ರೂಪಿಸುವ ನಿಟ್ಟಿನಲ್ಲಿ 2023ರಲ್ಲಿ ಮೊದಲ ಹೆಜ್ಜೆ ಇರಿಸಲಾಗಿತ್ತು. ಈಗ 6 ವರ್ಷಗಳ ಬಳಿಕ, ಅಂದರೆ 2029ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮೀಸಲು ಕಾಯಿದೆ ಜಾರಿಗೆ ತರುವ ಪ್ರಯತ್ನ ನಡೆದಿದೆ. ಈ ದಿಶೆಯಲ್ಲಿ ಭಾರತದ ಸಂಸತ್ತು ಇನ್ನು 4-5 ದಿನಗಳಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ದೆಹಲಿಯಲ್ಲಿ ಸೋಮವಾರ ಆಯೋಜಿಸಲಾಗಿದ್ದ 'ನಾರಿಶಕ್ತಿ ವಂದನಾ ಅಧಿನಿಯಮ' ಪರಿಚಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಕಾಯಿದೆ ಜಾರಿಗೆ ತರುವ ಮೂಲಕ ದಶಕಗಳ ಕನಸನ್ನು ಸಾಕಾರಗೊಳಿಸಲಾಗುತ್ತಿದೆ. ಭವಿಷ್ಯದ ಸಂಕಲ್ಪಗಳು ಸದ್ಯದಲ್ಲೇ ಈಡೇರಲಿವೆ ಎಂದು ಹೇಳಿದರು. 'ಸಾಮಾಜಿಕ ನ್ಯಾಯ' ಎಂಬುದು ಘೋಷಣೆಯಾಗಿಯಷ್ಟೇ ಉಳಿಯದೇ ಕಾಯಿದೆಯ ಜಾರಿ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಭಾಗವಾಗಲಿದೆ. ಇದರೊಂದಿಗೆ ಭಾರತದ ಸಂಸತ್ತು ಹೊಸ ಇತಿಹಾಸ ಸೃಷ್ಟಿಯ ಹೊಸ್ತಿಲಲ್ಲಿದೆ. ಏ.16ರಿಂದ 18ರ ನಡುವಿನ 3 ದಿನಗಳಲ್ಲಿ ಆ ಕನಸು ನನಸಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2023ರಲ್ಲಿ ಮಹಿಳಾ ಮೀಸಲು ವಿಧೇಯಕ ಮಂಡಿಸಿದಾಗ ಎಲ್ಲಾ ಪಕ್ಷಗಳೂ ಸರ್ವಾನುಮತದಿಂದ ಅನುಮೋದಿಸಿದ್ದವು. 2029ರ ಸಾರ್ವತ್ರಿಕ ಚುನಾವಣೆ ವೇಳೆ ಕಾಯಿದೆಯನ್ನು ಜಾರಿಗೆ ತರಬೇಕು ಎಂಬುದು ಎಲ್ಲಾ ಪಕ್ಷಗಳ ಬೇಡಿಕೆಯೂ ಆಗಿತ್ತು ಎಂದು ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ನೆನಪಿಸಿದರು.

ದೆಹಲಿಯಲ್ಲಿ ಸೋಮವಾರ ಆಯೋಜಿಸಿದ್ದ ನಾರಿಶಕ್ತಿ ವಂದನಾ ಅಧಿನಿಯಮ ಪರಿಚಯ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ದೆಹಲಿ ಸಿಎಂ ರೇಖಾ ಗುಪ್ತಾ, ಅನ್ನಪೂರ್ಣ ಮತ್ತಿತರರಿದ್ದರು.

ಜೆಡಿಯು, ಕಾಂಗ್ರೆಸ್‌ನಿಂದಲೂ ವಿಪ್

ಇದೇ ಗುರುವಾರದಿಂದ ಆರಂಭಗೊಳ್ಳಲಿರುವ ಸಂಸತ್ತಿನ 3 ದಿನಗಳ ಅಧಿವೇಶನದಲ್ಲಿ ಶೇ.33 ಮಹಿಳಾ ಮೀಸಲು ತಿದ್ದುಪಡಿ ವಿಧೇಯಕ (ನಾರಿ ಶಕ್ತಿ ವಂದನ ಅಧಿನಿಯಮ) ಮಂಡನೆ ಆಗುತ್ತಿ ರುವು ದರಿಂದ ಪಕ್ಷದ ಎಲ್ಲಾ ಸಂಸದರೂ (ರಾಜ್ಯಸಭೆ-ಲೋಕಸಭೆ) ಉಭಯ ಸದನಗಳಲ್ಲಿ ಹಾಜರಿರಬೇಕು. ಮೂರೂ ದಿನಗಳೂ ಕಡ್ಡಾಯವಾಗಿ ಸದನ ಕಲಾಪದಲ್ಲಿ ಭಾಗಿಯಾಗಬೇಕು ಎಂದು ಎನ್‌ಡಿಎ ಮೈತ್ರಿಕೂಟ ಸರಕಾರದ ಭಾಗವಾಗಿರುವ 'ಸಂಯುಕ್ತ ಜನತಾ ದಳ'(ಜೆಡಿಯು) ಪಕ್ಷವೂ ತನ್ನ ಎಲ್ಲಾ ಸಂಸದರಿಗೂ 3 ಸಾಲಿನ ವಿಪ್ ಜಾರಿ ಮಾಡಿದೆ. ಜೆಡಿಯು ಪಕ್ಷದ 12 ಸಂಸದರು ಲೋಕಸಭೆಯಲ್ಲಿದ್ದರೆ, ರಾಜ್ಯಸಭೆಯಲ್ಲಿ ನಾಲ್ವರು ಸದಸ್ಯರಿದ್ದಾರೆ. ಕಾಂಗ್ರೆಸ್ ಪಕ್ಷವೂ ತನ್ನ ಸಂಸದರಿಗೆ ವಿಪ್ ಜಾರಿ ಮಾಡಿದ್ದು, ಮೂರೂ ದಿನಗಳೂ ಸದನದಲ್ಲಿ ಹಾಜರಿದ್ದು, ಪಕ್ಷದ ನಿಲುವನ್ನು ಸಮರ್ಥಿಸಬೇಕು ಎಂದು ವಿಪ್‌ನಲ್ಲಿ ಸೂಚಿಸಿದೆ. ಮಹಿಳಾ ಮೀಸಲು ತಿದ್ದುಪಡಿ ವಿಧೇಯಕದ ಮಂಡನೆಗಾಗಿಯೇ ಏ.16 ರಿಂದ 18ರವರೆಗೆ ಲೋಕಸಭೆ-ರಾಜ್ಯಸಭೆ ವಿಶೇಷ ಅಧಿವೇಶನ ನಡೆಯಲಿದೆ.

ಏ.16ರ ಸಂಸತ್ ವಿಶೇಷ ಅಧಿವೇಶನಕ್ಕೆ ಈ ದಿನದ ಕಾರ್ಯಕ್ರಮ ಉತ್ತಮ ತಳಹದಿಯಾಗಲಿದೆ. ವಿಜ್ಞಾನ, ಕ್ರೀಡೆ, ಉದ್ಯಮ, ಕಲೆ ಮತ್ತು ಸೇನೆ ಸೇರಿ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರನ್ನು ಒಂದೇ ವೇದಿಕೆಗೆ ತಂದಿದೆ. 2047ರ ವೇಳೆಗೆ ಅಭಿವೃದ್ಧಿಯಾದ ಭಾರತವನ್ನು ಸೃಷ್ಟಿಸುವುದರಲ್ಲಿ ಮಹಿಳಾ ಸಬಲೀಕರಣ ಮುಖ್ಯ ಉದ್ದೇಶವಾಗಿದೆ.

-ನರೇಂದ್ರ ಮೋದಿ, ಪ್ರಧಾನಿ

2029ಕ್ಕೆ ಲೋಕಸಭೆ

ಹಾಲಿ ಸದಸ್ಯ ಬಲ	543
ಕ್ಷೇತ್ರ ವಿಸ್ತರಣೆ ಬಳಿಕ	816
ಮಹಿಳೆಯರಿಗೆ ಮೀಸಲು	273

ಕ್ಷೇತ್ರ ಮರುವಿಂಗಡಣೆ ಅಪಾಯಕಾರಿ, ಸಂವಿಧಾನ ಮೇಲೆ ದಾಳಿ: ಸೋನಿಯಾ

ದೆಹಲಿ: ಇದೇ 16ರಂದು ಆರಂಭಗೊಳ್ಳಲಿರುವ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲು ತಿದ್ದುಪಡಿ ವಿಧೇಯಕ ಮಂಡಿಸುವ ಕೇಂದ್ರ ಸರಕಾರದ ನಡೆಯ ಹಿಂದಿರುವ ಅಸಲಿ ವಿಷಯ 'ಕ್ಷೇತ್ರ ಪುನರ್ ವಿಂಗಡಣೆ' ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಗಾಂಧಿ ಸೋನಿಯಾ ಗಾಂಧಿ ಅನುಮಾನ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರಗಳ ಮರು ವಿಂಗಡಣೆ ಪ್ರಸ್ತಾಪ ಅತ್ಯಂತ ಅಪಾಯಕಾರಿಯಾಗಿದೆ, ಅಷ್ಟೇ ಅಲ್ಲ ದೇಶದ ಸಂವಿಧಾನದ ಮೇಲಿನ ದಾಳಿಯೂ ಆಗಿದೆ ಎಂದು ಸೋನಿಯಾ ಗಾಂಧಿ 'ಎಕ್ಸ್' ಸಂದೇಶದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಲೋಕಸಭೆ ಬಲವರ್ಧನೆ ಒಳಗೊಂಡ ಕ್ಷೇತ್ರ ವಿಂಗಡನೆ-ವಿಸ್ತರಣೆ ಸಂಖ್ಯೆ ದೃಷ್ಟಿಯಿಂದ ಮಾತ್ರವಲ್ಲ, ರಾಜಕೀಯವಾಗಿಯೂ ಸಮಾನವಾಗಿ ರಬೇಕು ಎಂದು ಒತ್ತಿ ಹೇಳಿದ್ದಾರೆ.

ತಮಿಳುನಾಡು, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಪ್ರಚಾರ ನಡೆದಿರುವಾಗಲೇ ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಹಿಳಾ ಮೀಸಲು ವಿಧೇಯಕಕ್ಕೆ ಪ್ರತಿಪಕ್ಷಗಳ ಬೆಂಬಲ ಕೋರಿರುವುದು ಪ್ರಧಾನಿಯ ಬೇರೆಯದೇ ಲೆಕ್ಕಾಚಾರವಾಗಿದೆ ಎಂದು ಸೋನಿಯಾ ಶಂಕೆ ವ್ಯಕ್ತಪಡಿಸಿದ್ದಾರೆ.

2023ರ ಸೆಪ್ಟೆಂಬರ್‌ನಲ್ಲೇ ವಿಶೇಷ ಅಧಿವೇಶನದಲ್ಲಿ ಸಂಸತ್ತು 'ನಾರಿ ಶಕ್ತಿವಂದನಾ ಅಧಿನಿಯಮ'ವನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಸಂವಿಧಾನದಲ್ಲಿ 334 ಎ ವಿಧಿಯನ್ನೂ ಪರಿಚಯಿಸಲಾಗಿದೆ. ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ 2024ರ ಲೋಕಸಭಾ ಚುನಾವಣೆಯಿಂದಲೇ ಮೀಸಲಾತಿ ನಿಬಂಧನೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದ್ದರು. ಆದರೆ ಆಗ ಸರಕಾರ ಒಪ್ಪಲಿಲ್ಲ. ಆದರೆ, ಈಗ 2029ರಿಂದ ಮಹಿಳಾ ಮೀಸಲು ಅನ್ವಯಿಸಲು ತರಾತುರಿಯಲ್ಲಿ 334 ಎ ವಿಧಿಗೆ ತಿದ್ದುಪಡಿ ಮಾಡಲಾಗುತ್ತಿದೆ. ಪ್ರಧಾನಿ 'ಯು ಟರ್ನ್' ತೆಗೆದುಕೊಳ್ಳಲು 30 ತಿಂಗಳು ತೆಗೆದುಕೊಂಡಿದ್ದೇಕೆ? ವಿಶೇಷ ಅಧಿವೇಶನಕ್ಕಾಗಿ ಇನ್ನೂ ಕೆಲವು ವಾರ ಏಕೆ ಕಾಯಬಾರದು? ಎಂದು ಸೋನಿಯಾ ಪ್ರಶ್ನೆ ಮಾಡಿದ್ದಾರೆ.

ಮಹಿಳಾ ಮೀಸಲು ವಿಧೇಯಕ ಮುಖ್ಯ ಅಂಶಗಳು

- ನಾರಿ ಶಕ್ತಿ ವಂದನಾ ವಿಧೇಯಕದಿಂದ ಸಂಸತ್ತು, ಶಾಸಕಾಂಗದಲ್ಲಿ ಮಹಿಳೆಯರಿಗೆ ಮೀಸಲು
- ಈಗಿನ ತಿದ್ದುಪಡಿ ವಿಧೇಯಕ ಲೋಕಸಭೆಯಲ್ಲಿ ಅಂಗೀಕೃತವಾಗಲು 363 ಮತಗಳ ಅಗತ್ಯ
- ಲೋಕಸಭೆ ಎನ್‌ಡಿಎ ಸದಸ್ಯ ಬಲ 293: ಪ್ರತಿಪಕ್ಷ ಸಹಮತ ದೊರೆಯುವ ಬಗ್ಗೆ ಅನುಮಾನ
- 2023ರ ಮಹಿಳಾ ಮೀಸಲಾತಿ ಮಸೂದೆಯು 128ನೇ ಸಾಂವಿಧಾನಿಕ ತಿದ್ದುಪಡಿಯಾಗಿದೆ.
- 106ನೇ ತಿದ್ದುಪಡಿ ಕಾಯಿದೆ-2023ರಡಿ ಬರುತ್ತದೆ, ಲೋಕಸಭೆ-ವಿಧಾನಸಭೆಗೆ ಅನ್ವಯ

ಜಾರ್ಖಂಡ್: ಠಾಣೆ 28 ಪೊಲೀಸರ ಅಮಾನತು

ರಾಂಚಿ: ಜಾರ್ಖಂಡ್‌ನ ಬೊಕಾರೊ ಜಿಲ್ಲೆಯಲ್ಲಿ 9 ತಿಂಗಳ ಹಿಂದೆ ಕಾಣೆಯಾದ ಯುವತಿಯ ಶೋಧ ಮಾಡದೇ ನಿರ್ಲಕ್ಷ್ಯ ತೋರಿದ, ಆರೋಪಿಯಿಂದ ಹಣ ಪಡೆದು ಪ್ರಕರಣ ಮುಚ್ಚಿಹಾಕಲೆತ್ನಿಸಿದ ಪಿಂಡ್ರಾಜೋರಾ ಪೊಲೀಸ್ ಠಾಣೆಯ ಎಲ್ಲಾ 28 ಪೊಲೀಸ್ ಸಿಬ್ಬಂದಿಗಳೂ ಅಮಾನತಾಗಿದ್ದಾರೆ.

2025ರ ಜು.24ರಂದು ರೇಖಾ ದೇವಿ ಅವರು ಮಗಳು ಪುಷ್ಪಾ ಮಹತೋ(18) ಕಾಣೆಯಾದಳು. ಪಿಂಡ್ರಾಜೋರಾ ಪೊಲೀಸ್ ಠಾಣೆಗೆ ದೂರು ನೀಡಿದರು ತನಿಖೆ ನಡೆಸಲೇ ಇಲ್ಲ. ಪೊಲೀಸರ ನಿರ್ಲಕ್ಷ್ಯ ಕಂಡು ಅಸಮಾಧಾನಗೊಂಡ ರೇಖಾದೇವಿ ಹೈಕೋರ್ಟ್ ಮೆಟ್ಟಿಲೇರಿತು. ಹೈಕೋರ್ಟ್ ಸಮನ್ ಮೇರೆಗೆ ಡಿಜಿಪಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಟಕಟೆಯಲ್ಲಿ ನಿಲ್ಲಬೇಕಾಯಿತು. ಯುವತಿಯನ್ನು 9 ತಿಂಗಳಿಂದ ಹುಡುಕಿಲ್ಲವೇಕೆ? ಎಂದು ಹೈಕೋರ್ಟ್ ಚಾಟಿ ಬೀಸಿತು. ಆನಂತರದ 24 ಗಂಟೆಯಲ್ಲಿಯೇ ಪೊಲೀಸರು ಪ್ರಕರಣ ಭೇದಿಸಿದರು. ಪುಷ್ಪಾ ಜೀವಂತವಿಲ್ಲ. ಆಕೆಯ ಪ್ರೇಮಿಯೇ ಕೊಲೆ ಮಾಡಿದ್ದಾನೆ ಎಂದರು. ಪ್ರಿಯಕರ ದಿನೇಶ್ ಕುಮಾರ್ ಮಹತೋನನ್ನು ಬಂಧಿಸಿದರು. ನಡೆದಿದ್ದು: 3 ವರ್ಷ ಗಳಿಂದ ಪುಷ್ಪಾ-ದಿನೇಶ್ ಪ್ರೀತಿಸುತ್ತಿದ್ದರು. ಪುಷ್ಪಾ ಮದುವೆಗೆ ಒತ್ತಾಯಿಸಿದ್ದರಿಂದ ದಿನೇಶ್ 9 ತಿಂಗಳ ಹಿಂದೆಯೇ ಚಾಕುವಿನಿಂದ ಇರಿದು ಕೊಲೆ ಮಾಡಿದ್ದ. ಪ್ರಕರಣ ಮುಚ್ಚಿಹಾಕಲು ಪಿಂಡ್ರಾ ಜೋರಾ ಠಾಣೆ ಪೊಲೀಸರಿಗೆ ದಿನೇಶ್ ಹನ ಕೊಟ್ಟಿದ್ದ. ಆರೋಪಿ ಜತೆಗೇ ಪಾರ್ಟಿ ಮಾಡಿದ್ದ ಪೊಲೀಸರು, ಪುಷ್ಪಾಗಾಗಿ ಶೋಧ ನಡೆಸಲೇ ಇಲ್ಲ. ಬದಲಾಗಿ ಪ್ರಕರಣ ಮುಚ್ಚಿಹಾಕಲೆತ್ನಿಸಿದರು. ಹಾಗಾಗಿಯೇ ಠಾಣೆಯ ಎಲ್ಲಾ ಸಿಬ್ಬಂದಿಯನ್ನೂ ಅಮಾನತು ಮಾಡಲಾಗಿದೆ ಎಂದು ಬೊಕಾರೊ ಎಸ್‌ಪಿ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಉಗ್ರರ ನೆಲೆ ಎಂದು ಮಾರುಕಟ್ಟೆಗೆ ಬಾಂಬ್

ನೈಜೀರಿಯಾದ ವಾಯುಪಡೆಯ ಗುರಿ ತಪ್ಪಿದ ದಾಳಿಗೆ 100 ಬಲಿ

ಅಬುಜಾ: ನೈಜೀರಿಯಾ ವಾಯುಪಡೆಯು ಉಗ್ರರ ದಮನಕ್ಕಾಗಿ ಭಾನುವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಬಾಂಬ್‌ಗಳು ಗುರಿ ತಪ್ಪಿ ಜನರಿಂದ ಕಿಕ್ಕಿರಿದಿದ್ದ ಮಾರುಕಟ್ಟೆಯನ್ನು ಅಪ್ಪಳಿಸಿವೆ. ಪರಿಣಾಮ 100ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ.

ದೇಶದ ಬೊರ್ನೊ ಮತ್ತು ಯೋಬೆ ರಾಜ್ಯಗಳಲ್ಲಿ ಸಕ್ರಿಯರಾಗಿರುವ ಜಿಹಾದಿ ಹೋರಾಟಗಾರರನ್ನು ಸದೆಬಡಿಯಲು ನೈಜಿರಿಯ ವಾಯುಪಡೆ ಭಾನುವಾರ ದೊಡ್ಡ ಮಟ್ಟದ ಕಾರ್ಯಾಚರಣೆ ಹಮ್ಮಿಕೊಂಡಿತ್ತು. ಬೊರ್ನೊ ಮತ್ತು ಯೋಬೆ ರಾಜ್ಯಗಳ ಗಡಿ ಭಾಗದಲ್ಲಿನ ಗ್ರಾಮವೊಂದರ ಮಾರುಕಟ್ಟೆಯಲ್ಲಿ ಭಾರೀ ಪ್ರಮಾಣದಲ್ಲಿ ಜನರು ನೆರೆದು ಖರೀದಿಯಲ್ಲಿ ತೊಡಗಿದ್ದಾಗಲೇ ವೈಮಾನಿಕ ದಾಳಿ ನಡೆದಿದೆ. ಹಾಗಾಗಿ ಸಾವಿನ ಸಂಖ್ಯೆ 100ರ ಗಡಿ ದಾಟಿದೆ.

ಉಗ್ರರ ಅಡಗುತಾಣ ಎಂದು ಭಾವಿಸಿ ಬಾಂಬ್ ದಾಳಿ ನಡೆಸಲಾಯಿತು. ಆದರೆ, ಬಾಂಬ್‌ಗಳು ಗುರಿ ತಪ್ಪಿ ನೇರವಾಗಿ ಮಾರುಕಟ್ಟೆ ಮೇಲೆಯೇ ಬಿದ್ದಿವೆ. ಇದೊಂದು ಗುರಿ ತಪ್ಪಿ ನಡೆದ ದಾಳಿ(ಮಿಸ್‌ಫೈರ್) ಎಂದು ವಾಯುಪಡೆ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಈ ಪ್ರದೇಶ ದಶಕಗಳಿಂದ ಉಗ್ರರ ಹಾವಳಿಯಿಂದ ತತ್ತರಿಸಿದೆ. ಈಗ ದೇಶದ ವಾಯುಪಡೆಯೇ ಬಾಂಬ್ ಸುರಿದು ನೂರಾರು ಜನರ ಸಾವಿಗೆ ಕಾರಣವಾಗಿರುವುದು ಜನರಲ್ಲಿ ಆತಂಕ ಮೂಡಿಸಿದೆ. ಜನರು ಈಗ ಮಾರುಕಟ್ಟೆಗೆ ಹೋಗಲೂ ಭಯ ಪಡುವಂತಾಗಿದೆ. ಉಗ್ರರನ್ನು ಕೊಲ್ಲಲು ಹೊರಟು ನಾಗರಿಕರನ್ನೇ ಬಲಿ ಪಡೆದ ಈ ಘಟನೆ ನೈಜೀರಿಯಾ ಸರಕಾರಕ್ಕೆ ಭಾರಿ ಮುಜುಗರ ತಂದಿದೆ. ಸೇನೆಯ ಕಾರ್ಯವೈಖರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಟೀಕೆಗಳು ಕೇಳಿಬರುತ್ತಿವೆ.

ವೇತನ ಹೆಚ್ಚಳಕ್ಕೆ ಆಗ್ರಹ, ವಾಹನಗಳಿಗೆ ಬೆಂಕಿ

ನೊಯಿಡಾ ಕಾರ್ಮಿಕರ ಹಿಂಸಾಚಾರ

ಸಮಾಜ ವಿರೋಧಿ ಶಕ್ತಿ

ಕಾರ್ಮಿಕರ ಮುಷ್ಕರದೊಳಗೆ ಸಮಾಜ ವಿರೋಧಿ ಶಕ್ತಿಗಳು ಸೇರಿಕೊಂಡು ಹಿಂಸಾಚಾರ ಮೊದಲಿಟ್ಟಿರಬಹುದು. ಅಂತಹವರನ್ನು ಪತ್ತೆ ಮಾಡಿ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಿ ಎಂದು ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಅವರು ಆದೇಶಿಸಿದ್ದಾರೆ.

ನೊಯಿಡಾ: ಉತ್ತರ ಪ್ರದೇಶ ರಾಜ್ಯದ ನೊಯಿಡಾದಲ್ಲಿನ ಸೆಕ್ಟರ್ 60-62ರಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ಕಾರ್ಖಾನೆಯೊಂದರ ಸಾವಿರಾರು ಕಾರ್ಮಿಕರು ವೇತನ ಹೆಚ್ಚಳಕ್ಕೆ ಆಗ್ರಹಿಸಿ ಕಳೆದ 5 ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ಸೋಮವಾರ ಹಿಂಸಾಚಾರಕ್ಕೆ ತಿರುಗಿದೆ.

ಕಾರ್ಮಿಕ ಕಾನೂನು ಪ್ರಕಾರ ವೇತನ ಪ್ರಮಾಣವನ್ನು ಹೆಚ್ಚಳ ಮಾಡುವಂತೆ ಬೇಡಿಕೆ ಸಲ್ಲಿಸಿ ತಿಂಗಳುಗಳೇ ಕಳೆದಿದ್ದರೂ ಕಾರ್ಖಾನೆಯ ಆಡಳಿತ ಮಂಡಳಿ ಸ್ಪಂದಿಸಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ. ಬೇಡಿಕೆ ತಕ್ಷಣ ಈಡೇರಿಸುವಂತೆ 5 ದಿನಗಳಿಂದ ಸಾವಿರಾರು ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆ. ಪ್ರತಿಭಟನಾ ನಿರತರಲ್ಲಿ ಕೆಲವರು ಸೋಮವಾರ ಬೆಳಗ್ಗೆ ತಾಳ್ಮೆ ಕಳೆದುಕೊಂಡು ಕಲ್ಲು ತೂರಾಟ ಆರಂಭಿಸಿದ್ದಾರೆ. ಅಲ್ಲದೇ, ಕಾರ್ಖಾನೆಯ ಅಧಿಕಾರಿಗಳು ಮತ್ತು ಪೊಲೀಸರ ವಾಹನಗಳು ಸೇರಿದಂತೆ ಸಿಕ್ಕ ಸಿಕ್ಕ ವಾಹನಗಳಿಗೆಲ್ಲಾ ಬೆಂಕಿ ಇಡಲಾರಂಭಿಸಿದ್ದಾರೆ.

ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಲಾಠಿ ಪ್ರಹಾರ ನಡೆಸಿದ್ದಾರೆ. ಈ ವೇಳೆ ಮಹಿಳಾ ಕಾರ್ಮಿಕರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ನೊಯಿಡಾದಲ್ಲಿನ ಕಾರ್ಮಿಕರ ಹಿಂಸಾತ್ಮಕ ಪ್ರತಿಭಟನೆ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಪೊಲೀಸರು ಹೈಅಲರ್ಟ್ ಘೋಷಿಸಿದ್ದು, ಪ್ರಮುಖ ಸ್ಥಳಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ. ದೆಹಲಿ-ನೊಯಿಡಾ ಗಡಿ ಭಾಗದಲ್ಲಿ ಸಾವಿರಾರು ವಾಹನಗಳು ಸಿಲುಕಿಕೊಂಡಿವೆ. ಮುಂದೆ ಹೋಗಲಾಗದೇ, ಹಿಂದಕ್ಕೂ ಬರಲಾಗದೇ ಸಾವಿರಾರು ಜನರು ಸಂಕಷ್ಟಕ್ಕೀಡಾಗಿದ್ದಾರೆ.

ಜೇಮ್ಸ್ ಬಾಂಡ್ ಆಗಲೆತ್ನಿಸಿ ಸಿಕ್ಕಿಬಿದ್ದ ಡಾಕ್ಟರ್

ಹೈದರಾಬಾದ್: ತೆಲಂಗಾಣದ ರಾಜಧಾನಿ ಹೈದರಾಬಾದ್ ನಗರ ನಿವಾಸಿ ಡಾ.ಗೌತಮ್ ರೆಡ್ಡಿ 'ಜೇಮ್ಸ್ ಬಾಂಡ್ 007' ಆಗಲೆತ್ನಿಸಿ ಜ್ಯುಬಿಲಿ ಹಿಲ್ಸ್ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಡಾ.ಗೌತಮ್ ತಮ್ಮ ದುಬಾರಿ ಬೆಲೆಯ 'ಬಿಎಂಡಬ್ಲ್ಯು' ಕಾರಿನ ನಂಬರ್ ಪ್ಲೇಟನ್ನು ಜೇಮ್ಸ್‌ಬಾಂಡ್-007 ಸಿನಿಮಾದಲ್ಲಿರುವ ಆಸ್ಟನ್ ಮಾರ್ಟಿನ್ ಕಾರಿನಲ್ಲಿರುವಂತೆ ಪರಿವರ್ತಿಸಿಕೊಂಡಿದ್ದರು. ಅಂದರೆ, ಗೌತಮ್ ಮದ್ಯ ಸೇವನೆ ಮಾಡಿ ಕಾರು ಚಾಲನೆ ಮಾಡುವಾಗ ಪೊಲೀಸರು ತಡೆದು ಪರಿಶೀಲಿಸಿದರೆ ಕಾರಿನ ನಂಬರ್ ಪ್ಲೇಟ್ ಥಟ್ಟನೆ ಬದಲಾಗುವಂತೆ ಮಾಡುತ್ತಿದ್ದರು. ಅದಕ್ಕಾಗಿ ಸ್ಟೀರಿಂಗ್ ಬಳಿಯೇ ಬಟನ್ ಅಳವಡಿಸಿಕೊಂಡಿದ್ದರು. ಅದೆಷ್ಟೋ ಸಮಯದಿಂದ ಹೀಗೆ ಮಾಡುತ್ತಾ ಬಂದಿದ್ದ ಡಾ.ಗೌತಮ್‌ಗೆ ಮೊನ್ನೆ ಶನಿವಾರ ಗ್ರಹಚಾರ ಕೆಟ್ಟಿತ್ತು. ಹಾಗಾಗಿ ಜ್ಯುಬಿಲಿ ಹಿಲ್ಸ್ ಪೊಲೀಸ್ ಠಾಣೆ ಸಂಚಾರ ವಿಭಾಗದ ಇನ್‌ಸ್ಪೆಕ್ಟರ್ ಎನ್.ರವೀಂದರ್ ಕೈಗೆ ಸಾಕ್ಷಿ ಸಮೇತ ಸಿಕ್ಕಿಬಿದ್ದರು.

'ಟಿಎಸ್9 ಎಫ್‌ಕ್ಯು 9999'(ತೆಲಂಗಾಣ) ಮತ್ತು 'ಡಿಎಲ್6 ಸಿಎಂ 7097'(ದೆಹಲಿ) ನಂಬರ್ ಪ್ಲೇಟ್‌ಗಳನ್ನು ಗೌತಮ್ ಕಾರಿಗೆ ಅಳವಡಿಸಲಾಗಿದೆ. ಗೌತಮ್ ಮದ್ಯ ಸೇವಿಸಿ ಕಾರು ಚಲಾಯಿಸುವಾಗ ಪೊಲೀಸರು ತಡೆದು ಪರೀಕ್ಷೆಗೆ ಮುಂದಾದರೆ ಸ್ಟೀರಿಂಗ್ ಬಳಿ ಇರುವ ಬಟನ್ ಒತ್ತುತ್ತಿದ್ದರು. ಕಾರಿನ ಎರಡೂ ಬದಿಯ ನಂಬರ್ ಪ್ಲೇಟ್ ಥಟ್ಟನೆ ಬದಲಾಗಿಬಿಡುತ್ತಿತ್ತು. ನಕಲಿ ನಂಬರ್ ಪ್ಲೇಟ್ ಪೊಲೀಸರಿಗೆ ಕಾಣಿಸುತ್ತಿತ್ತು. ಆ ನಂಬರ್‌ನ ವಿಳಾಸಕ್ಕೆ ಪೊಲೀಸರ ಇ-ಚಲನ್ ರವಾನೆ ಆಗುತ್ತಿತ್ತು. ಹೀಗೆ ಗೌತಮ್ ಮದ್ಯ ಸೇವಿಸಿ ಕಾರು ಚಲಾಯಿಸಿದರೂ ದಂಡ ಪಾವತಿ, ಡ್ರೈವಿಂಗ್ ಲೈಸೆನ್ಸ್ ಅಮಾನತು ಕ್ರಮಗಳಿಂದ ತಪ್ಪಿಸಿಕೊಳ್ಳುತ್ತಿದ್ದರು.

ಈ ಬಾರಿ ಪರಿಶೀಲನೆ ಮಾಡಿದಾಗ ಗೌತಮ್ ಉಸಿರಿನಲ್ಲಿ ಆಲ್ಕೊಹಾಲ್ ಮಟ್ಟ 137 ಎಂಜಿ ತೋರಿದೆ(ನಿಯಮ ಪ್ರಕಾರ 30 ಎಂಜಿವರೆಗೆ ದಂಡ ಇರುವುದಿಲ್ಲ). ನಕಲಿ ನಂಬರ್ ಪ್ಲೇಟ್ ಬಹಳಷ್ಟು ಕಂಡಿದ್ದೇವೆ. ಆದರೆ, ಇದು ಜೇಮ್ಸ್ ಬಾಂಡ್ ಫಿಲಂ ರೀತಿಯದು ನಮಗೆ ಹೊಸದು. ಕಾರು ವಶಕ್ಕೆ ಪಡೆದಿದ್ದೇವೆ. ಗೌತಮ್ ವಿರುದ್ಧ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿರುವುದು, ನಕಲಿ ನಂಬರ್ ಪ್ಲೇಟ್ ಅಳವಡಿಕೆ, ಪೊಲೀಸರನ್ನು ಹಲವು ಬಾರಿ ವಂಚಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೇ, ನಕಲಿ ನಂಬರ್ ಪ್ಲೇಟ್ ಅಳವಡಿಸಲು ನೆರವಾದ ಗ್ಯಾರೇಜ್ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ ಎಂದು ರವೀಂದರ್ ಹೇಳಿದ್ದಾರೆ.

ನ್ಯಾಯಾಂಗ ಅಧಿಕಾರಿ ಒತ್ತೆ ಪ್ರಕರಣ: ಟಿಎಂಸಿ, ಕಾಂಗ್ರೆಸ್, ಎಐಎಂಐಎಂ ಪಾತ್ರ

ಮಾಲ್ಡಾ : ಕಾಂಗ್ರೆಸ್ ಅಭ್ಯರ್ಥಿ ಸೇರಿ 7 ಮಂದಿ ಸೆರೆ

ಮಾಲ್ಡಾ: ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಪಶ್ಚಿಮ ಬಂಗಾಳ ರಾಜ್ಯದ ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯ ಮೇಲುಸ್ತುವಾರಿಗೆ ತೆರಳಿದ್ದ ನೆರೆ ರಾಜ್ಯಗಳ ನ್ಯಾಯಾಂಗದ ಅಧಿಕಾರಿಗಳು ಮಾಲ್ಡಾಗೆ ತೆರಳಿದ್ದರು. ಆಗ ಆ ಪ್ರದೇಶದ ಒಂದು ಕೋಮಿನ ಜನರು ಘೇರಾವ್ ಮಾಡಿ, ಕೊಠಡಿಯಲ್ಲಿ 9 ಗಂಟೆಗಳ ಕೂಡಿ ಹಾಕಿ, ನೀರು, ಆಹಾರ, ಶೌಚಾಲಯ ಸಿಗದಂತೆ ಮಾಡಿ ಹಿಂಸಿಸಿ, ಜೀವ ಭಯ ಹುಟ್ಟಿಸಿದ್ದರು. ಈ ಪ್ರಕರಣದಲ್ಲಿ ವಕೀಲ ಮೊಫಕ್ಕರುಲ್ ಇಸ್ಲಾಂ ಸೇರಿದಂತೆ ಹಲವು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಆ ಬಳಿಕ ತನಿಖೆ ಕೈಗೆತ್ತಿಕೊಂಡಿರುವ 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಭಾನುವಾರ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿನ ಕಾಂಗ್ರೆಸ್ ಅಭ್ಯರ್ಥಿ, ಮತ್ತೊಬ್ಬ ಪಂಚಾಯತ್ ಸದಸ್ಯ ಸೇರಿದಂತೆ ಏಳು ಮಂದಿಯನ್ನು ಬಂಧಿಸಿದೆ. ಮಾಲ್ಡಾ ನಗರದ ಮಾಥಾಬರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಯೇಂ ಚೌಧುರಿಯನ್ನು ಆತ ಬೆಂಬಲಿಗರೊಂದಿಗೆ ಭಾನುವಾರ ಅಲಿನಗರ ಪಂಚಾಯತ್ ಪ್ರದೇಶದಲ್ಲಿ ಪ್ರಚಾರ ನಡೆಸುತ್ತಿದ್ದಾಗಲೇ ಬಂಧಿಸಲಾಗಿದೆ. ಜತೆಗೆ ಆತನ ಕೆಲವು ಸಹಚರರನ್ನೂ ಬಂಧಿಸಲಾಗಿದೆ ಎಂದು ಎನ್‌ಐಎ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಈ ಘೇರಾವ್ ಪ್ರಕರಣದ ಪ್ರಮುಖ ಸೂತ್ರಧಾರ, ಎಐಎಂಐಎಂ ಸದಸ್ಯ, ವಕೀಲ ಮೊಫಕ್ಕರುಲ್ ಇಸ್ಲಾಂ ಎಂಬಾತನನ್ನು ಈ ಮೊದಲೇ ರಾಜ್ಯ ಪೊಲೀಸರು ಬಂಧಿಸಿದ್ದು, ಪೊಲೀಸ್ ವಿಚಾರಣೆ ವೇಳೆ ಆರೋಪಿ ನೀಡಿದ ಮಾಹಿತಿ ಆಧರಿಸಿ 'ಐಎಸ್‌ಎಫ್' ಪಕ್ಷದ ಗ್ರಾ.ಪಂ. ಸದಸ್ಯ ಗೋಲಂ ರಬ್ಬಾನಿ ಮತ್ತು ಕಾಂಗ್ರೆಸ್ ಪಕ್ಷದ ವಿಧಾನಸಭಾ ಅಭ್ಯರ್ಥಿ ಸಯೇಂನನ್ನು ಬಂಧಿಸಲಾಗಿದೆ ಎಂದು ಅಧಿಕಾರಿ ವಿವರಿಸಿದ್ದಾರೆ. ಮಾಲ್ಡಾದಲ್ಲಿನ ನ್ಯಾಯಾಂಗದ ಅಧಿಕಾರಿಗಳ ಒತ್ತೆ-ಜೀವ ಭಯ ಪ್ರಕರಣದಲ್ಲಿ ಮೊದಲು ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕರದಷ್ಟೇ ಪಾತ್ರವಿದೆ ಎಂಬ ಆರೋಪ ಕೇಳಿಬಂದಿತ್ತು. ಈಗ ಈ ಪ್ರಕರಣದಲ್ಲಿ ಕಾಂಗ್ರೆಸ್ ಮತ್ತು ಎಐಎಂಐಎಂ ಪಕ್ಷಗಳ ಪ್ರಮುಖರೂ ಭಾಗಿಯಾಗಿರುವುದು ಭಾನುವಾರ 7 ಮಂದಿಯ ಬಂಧನದೊಂದಿಗೆ ದೃಢಪಟ್ಟಿದೆ.

ಮತ್ತೆ ಚೀನಾ ಕೀಟಲೆ: 27ಸ್ಥಳಕ್ಕೆ ಹೊಸ ಹೆಸರು

ದೆಹಲಿ: ನೆರೆಯ ಕಮ್ಯುನಿಸ್ಟ್ ದೇಶ ಚೀನಾ ಮತ್ತೆ ಕೀಟಲೆ ಮಾಡುವುದನ್ನು ಮುಂದುವರೆಸಿದೆ. ಭಾರತದ ಅವಿಭಾಜ್ಯ ಅಂಗವಾಗಿರುವ ಅರುಣಾಚಲ ಪ್ರದೇಶ ರಾಜ್ಯದ 27 ಪ್ರದೇಶಗಳ ಹೆಸರುಗಳನ್ನೇ ಬದಲಿಸುವ ದುಸ್ಸಾಹ ಮಾಡಿದೆ. 27 ಪ್ರದೇಶ, ಬೆಟ್ಟ, ನದಿಗಳಿಗೆ ಹೊಸದೇ ಹೆಸರಿಟ್ಟಿದೆ. ಚೀನಾದ ಈ ಕೀಟಲೆ ಕ್ರಮಕ್ಕೆ ಭಾರತ ತೀಕ್ಷ್ಣ ಎಚ್ಚರಿಕೆ ನೀಡಿದೆ. ಭಾರತದ ಜಾಗ, ನದಿ, ಬೆಟ್ಟಗಳಿಗೆ ಚೀನೀ ಹೆಸರಿಟ್ಟು ಸುಳ್ಳು ಹಕ್ಕು ಪ್ರತಿಪಾದಿಸಿದರೆ, ಆಧಾರ ರಹಿತ ಕಥನಗಳನ್ನು ಹೆಣೆದರೆ ಅದು ಈ ನೆಲದಲ್ಲಿ ನಡೆಯುವುದಿಲ್ಲ. ಅರುಣಾಚಲ ಪ್ರದೇಶ ಎಂದೆಂದಿಗೂ ಭಾರತದ ಅವಿಭಾಜ್ಯ ಭಾಗ ಎಂಬ ಸತ್ಯ ಬದಲಾಗುವುದಿಲ್ಲ. ಚೀನಾದ ಇಂಥ ಕಿಡಿಗೇಡಿ ಕ್ರಮಗಳೇ ಉಭಯ ದೇಶಗಳ ನಡುವಿನ ಸಂಬಂಧವನ್ನು ಹಾಳು ಮಾಡುತ್ತವೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ದೃಢವಾಗಿ ಹೇಳಿದ್ದಾರೆ. 'ಉಭಯ ದೇಶಗಳ ಸಂಬಂಧ ಸುಧಾರಣೆ ಕೆಲಸ ನಡೆಯುತ್ತಿರುವ ವೇಳೆ ಋಣಾತ್ಮಕ ಪರಿಣಾಮದ ಕೆಲಸಗಳನ್ನು ಚೀನಾ ಮಾಡಬಾರದು' ಎಂದೂ ಬುದ್ಧಿವಾದ ಹೇಳಿದ್ದಾರೆ.



ಯೇಸು ರೀತಿಯ ತಮ್ಮ ಚಿತ್ರ ಹಂಚಿಕೊಂಡ ಟ್ರಂಪ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹುಚ್ಚಾಟಗಳು ಒಂದೆರೆಡಲ್ಲ. ಕ್ಷಣಕ್ಕೊಂದು ಮಾತನಾಡುವುದು, ಒಮ್ಮೆ ಹೊಗಳಿ ಮತ್ತೊಮ್ಮೆ ತೆಗಳುವುದು, ಸುಂಕ ಏರಿಸುವುದು-ಮತ್ತೆ ಇಳಿಸುವುದು ಟ್ರಂಪ್‌ರ ಹುಚ್ಚಾಟಗಳಿಗೆ ಹಲವು ಉದಾಹರಣೆಗಳಾಗಿವೆ. ಲಾಜರ ಸ್‌ರನ್ನು ಯೇಸುಕ್ರಿಸ್ತ ಜೀವಂತಗೊಳಿಸಿದ ಬೈಬಲ್ ಘಟನೆ ತೋರಿಸುವ ಚಿತ್ರದಲ್ಲಿ ತಮ್ಮನ್ನು ಯೇಸುಕ್ರಿಸ್ತರಂತೆ ಬಿಂಬಿಸುವ ಎಐ ರಚನೆಯನ್ನು ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೇ ಚಿತ್ರದ ಹಿನ್ನೆಲೆಯಲ್ಲಿ ಅಮೆರಿಕ ಧ್ವಜ-ಯುದ್ಧ ವಿಮಾನಗಳು, ದೇವದೂತರು ಇರುವುದು ಗೋಚರಿಸುತ್ತದೆ. ಇದಕ್ಕೆ ಭಾರೀ ಟೀಕೆ ವ್ಯಕ್ತವಾಗಿವೆ. ಇದಕ್ಕೂ ಮುನ್ನ ಪೋಪ್ ಲಿಯೋ 14, ಇರಾನ್ ಯುದ್ಧ ವಿಷಯದಲ್ಲಿ ಅಮೆರಿಕ ಕ್ರಮಗಳನ್ನು ಟೀಕಿಸಿದ್ದರು. ಪ್ರತಿಯಾಗಿ ಟ್ರಂಪ್, 'ದುರ್ಬಲ ಪೋಪ್' ಎಂದು ಅಣಕಿಸಿದ್ದರು. ನೀವು ಪೋಪ್ ಆಗಲು ನಾನೇ ಕಾರಣ. ರಾಜಕಾರಣ ಬಿಟ್ಟು ಧರ್ಮಗುರುವಿನ ಕೆಲಸ ಮಾಡಿ ಎಂದು ಕುಟುಕಿದ್ದರು. ಟ್ರಂಪ್ ಹಂಚಿಕೊಂಡಿರುವ ಈ ಚಿತ್ರ ಜಾಲತಾಣದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. 'ಇದು ಕ್ರೈಸ್ತಧರ್ಮಕ್ಕೆ ಮಾಡಿದ ಅಪಮಾನ' ಎಂದು ಕ್ರಿಶ್ಚಿಯನ್ ಗುಂಪುಗಳು ಟೀಕಿಸಿವೆ. ಆದರೆ ಟ್ರಂಪ್ ಬೆಂಬಲಿಗರು, ಚಿತ್ರವನ್ನು ಮೆಚ್ಚಿ ಪ್ರಶಂಸಿಸಿದ್ದಾರೆ.



ನೆತನ್ಯಾಹು ಫೋನ್: ಶಾಂತಿ ಸಭೆ ವಿಫಲ

ದೆಹಲಿ: ಇರಾನ್-ಅಮೆರಿಕ ಮಧ್ಯೆ ಇಸ್ಲಾಮಾಬಾದ್‌ನಲ್ಲಿ 21 ಗಂಟೆಗಳಿಗೂ ಹೆಚ್ಚು ಕಾಲ ನಡೆದಿದ್ದ ಶಾಂತಿ ಮಾತುಕತೆ ಮಹತ್ವದ ಘಟ್ಟದಲ್ಲಿದ್ದಾಗಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರಿಗೆ ಮಾಡಿದ ದೂರವಾಣಿ ಕರೆಯು ಇಡೀ ಪ್ರಕ್ರಿಯೆ ಹಳಿ ತಪ್ಪುವಂತೆ ಮಾಡಿತು ಎಂದು ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಾಘ್ಚಿ ಸೋಮವಾರ ಆರೋಪ ಮಾಡಿದ್ದಾರೆ. 'ಸಭೆ ಮಧ್ಯೆ ವ್ಯಾನ್ಸ್ ಅವರಿಗೆ ಬೆಂಜಮಿನ್ ಮಾಡಿದ ದೂರವಾಣಿ ಕರೆ ಸಭೆಯ ವಿಷಯ ಇಸ್ರೇಲ್ ಹಿತಾಸಕ್ತಿಯತ್ತ ತಿರುಗುವಂತೆ ಮಾಡಿತು. ಯುದ್ಧರಂಗದಲ್ಲಿ ಸಾಧ್ಯವಾಗದ್ದನ್ನು ಅಮೆರಿಕ ಮಾತುಕತೆ ಮೇಜಿ ನಲ್ಲಿ ಸಾಧಿಸಲೆತ್ನಿಸಿತು. ಸಭೆ ವಿಫಲವಾಯಿತು' ಎಂದು ಅರಾಘ್ಚಿ 'ಎಕ್ಸ್'ಸಂದೇಶದಲ್ಲಿ ಬರೆದಿದ್ದಾರೆ. ಆದರೆ, ನೆತನ್ಯಾಹು ಅವರು ಜೆ.ಡಿ.ವ್ಯಾನ್ಸ್‌ಗೆ ಕರೆ ಮಾಡಿದ್ದರೆ ಎಂಬ ಬಗ್ಗೆ ವಾಷಿಂಗ್ಟನ್ ದೃಢಪಡಿಸಿಲ್ಲ. 2 ವಾರಗಳ ಕದನ ವಿರಾಮ ಈಗ ಹೊಸ ಒತ್ತಡಕ್ಕೆ ಒಳಗಾಗಿದೆ. ವಿರಾಮಕ್ಕೆ ಕೇವಲ 9 ದಿನಗಳು ಉಳಿದಿರುವಾಗ ಶಾಂತಿ ಮಾತುಕತೆ ವಿಫಲವಾಗಿರುವುದು ಆತಂಕಕ್ಕೆ ಕಾರಣವಾಗಿದೆ.



ಇದೇ ವೇಳೆ, ಇಸ್ಲಾಮಾಬಾದ್‌ನಲ್ಲಿನ ಶಾಂತಿ ಸಭೆಯಲ್ಲಿ ಅಮೆರಿಕ ತಳೆದಿದ್ದ ನಿಲುವು ಅಸಮರ್ಥನೀಯವಾಗಿತ್ತು ಎಂದೂ ಇರಾನ್ ನಿಯೋಗದಲ್ಲಿನ ಪ್ರತಿನಿಧಿಗಳು ವ್ಯಾಖ್ಯಾನಿಸಿದ್ದಾರೆ.

ಪ.ಬಂ. ಚುನಾವಣೆ ರದ್ದು ಅರ್ಜಿ ವಜಾ

ದೆಹಲಿ: ರಾಜ್ಯ ಮತದಾರರ ಪಟ್ಟಿಯಿಂದ ಹೆಸರು ರದ್ದಾಗಿರುವವರು ಚುನಾವಣಾ ಆಯೋಗದ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯನ್ನು ಪ್ರಶ್ನಿಸಿ ಹಾಗೂ ಏ.23-29ರಂದು ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ರದ್ದುಗೊಳಿಸಲು ಕೋರಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಸ್ವೀಕರಿಸಲು ಸೋಮವಾರ ನಿರಾಕರಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ, ನ್ಯಾ. ಜೋಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ, 'ಎಸ್‌ಐಆರ್ ಬಗ್ಗೆ ಅಸಮಾಧಾನಗೊಂಡವರು ಮೇಲ್ಮನವಿ ನ್ಯಾಯಮಂಡಳಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಸೂಚಿಸಿತು. ಚುನಾವಣೆ ರದ್ದುಕೋರಿರುವ ಈ ಅರ್ಜಿ ಅಕಾಲಿಕ ಎಂದು ಅಭಿಪ್ರಾಯಪಟ್ಟಿತು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದ 91 ಲಕ್ಷ ಮತದಾರರ ಹೆಸರು ತೆಗೆದುಹಾಕಲಾಗಿದೆ. 34 ಲಕ್ಷ ಮನವಿ ನ್ಯಾಯಮಂಡಳಿಗಳಲ್ಲಿವೆ. ತೀರ್ಮಾನಿಸಲು ಕೋಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿಗಳು, ಮಾಜಿ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ 19 ನ್ಯಾಯಮಂಡಳಿ ರಚಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಿತ್ರದುರ್ಗ: ಜಿಲ್ಲೆಯ ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳನ್ನು 2026-27ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರತಿಷ್ಠಿತ ಶಾಲೆಗಳಿಗೆ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. 5ನೇ ತರಗತಿಯಲ್ಲಿ ಕನಿಷ್ಠ ಶೇ. 60 ಅಂಕ ಗಳಿಸಿರುವ ಮತ್ತು ಕುಟುಂಬದ ವಾರ್ಷಿಕ ಆದಾಯ ರು. 2 ಲಕ್ಷದ ಒಳಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು.ಅರ್ಜಿಯೊಂದಿಗೆ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಲ್ಪಟ್ಟ ಅಂಕಪಟ್ಟಿ (ಅಂಕಗಳು ಕಡ್ಡಾಯ), ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಮೇ 4ರ ಸಂಜೆ 5 ಗಂಟೆಯೊಳಗೆ ತಾಲೂಕು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು. ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ನಡೆಯಲಿದ್ದು, ವಿದ್ಯಾರ್ಥಿಗಳ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಒಮ್ಮೆ ದಾಖಲಾದ ನಂತರ ಶಾಲಾ ಬದಲಾವಣೆಗೆ ಅವಕಾಶವಿರುವುದಿಲ್ಲ ಎಂದು ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಹರಿಹರದಲ್ಲಿ ನಿಧಿ ಆಪ್ಕೆ ನಿಕಟ್ 2.0 ಕಾರ್ಯಕ್ರಮ

ದಾವಣಗೆರೆ: ಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತಾ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ, ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಮತ್ತು ಕಾರ್ಮಿಕರಿಗೆ ಲಭ್ಯವಿರುವ ವಿವಿಧ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಸದಸ್ಯರ ಕುಂದುಕೊರತೆಗಳ ನಿವಾರಣೆಗೆ ವೇದಿಕೆಯಾಗಿಯೂ ಕೆಲಸ ಮಾಡಲಿರುವ 'ನಿಧಿ ಆಪ್ಕೆ ನಿಕಟ್ 2.0' ಕಾರ್ಯಕ್ರಮವನ್ನು ದಾವಣಗೆರೆ ಜಿಲ್ಲೆ, ಹರಿಹರದ ಮರಿಯಾ ನಿವಾಸ್ ಶಾಲೆ, ಪಿ.ಬಿ. ರಸ್ತೆ ಇಲ್ಲಿ ಏ. 27 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಉದ್ಯೋಗದಾತರು ಮತ್ತು ಉದ್ಯೋಗಿಗಳಿಗಾಗಿ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 4 ರವರೆಗೆ ನಿವೃತ್ತಿ ವೇತನದಾರರಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇಂದು ಅಂಬೇಡ್ಕರ್ ಜನ್ಮ ದಿನಾಚರಣೆ

ದಾವಣಗೆರೆ; ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ, ಈ ವರ್ಷದ ಡಾ. ಬಿ.ಆರ್. ಅಂಬೇಡ್ಕರ್ 135 ನೇ ಜನ್ಮ ದಿನಾಚರಣೆ ಸರಳವಾಗಿ ಆಚರಿಸಲು ಜಿಲ್ಲಾಡಳಿತ ನಿರ್ಧರಿಸಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.ಏ. 14 ರಂದು ಮಂಗಳವಾರ ಬೆಳಗ್ಗೆ 9 ಗಂಟೆಗೆ ಡಾ. ಬಿ.ಆರ್ ಅಂಬೇಡ್ಕರ್ ವೃತ್ತದ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ನಂತರ ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯ 'ತುಂಗಭದ್ರಾ' ಸಭಾಂಗಣದಲ್ಲಿ ಅಂಬೇಡ್ಕರ್‌ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೆರವಣಿಗೆ ಮಾರ್ಗ: ಬೆಳಗ್ಗೆ 9.00 ಗಂಟೆಗೆ ಅಂಬೇಡ್ಕರ್‌ವೃತ್ತದಿಂದ ಭಾವಚಿತ್ರದ ಮೆರವಣಿಗೆ ಆರಂಭವಾಗಲಿದ್ದು, ಹೈಸ್ಕೂಲ್ ಮೈದಾನ ಮಾರ್ಗವಾಗಿ ಮಹಾನಗರ ಪಾಲಿಕೆ, ಗಾಂಧಿ ವೃತ್ತ ಹಾಗೂ ಜಯದೇವ ವೃತ್ತದ ಮೂಲಕ ಸಾಗಿ ಪುನಃ ಅಂಬೇಡ್ಕರ್‌ವೃತ್ತಕ್ಕೆ ತಲುಪಲಿದೆ.

ಅಂಧ ಮಕ್ಕಳ ವಸತಿ ಶಾಲೆಗೆ ಅರ್ಜಿ ಆಹ್ವಾನ

ದಾವಣಗೆರೆ: ಪ್ರಸಕ್ತ ಸಾಲಿಗೆ ಅಂಧ ಮಕ್ಕಳ ಸರಕಾರಿ ಪಾಠಶಾಲೆ 1 ನೇ ತರಗತಿ (6ವರ್ಷ) ಯಿಂದ 10ನೇ ತರಗತಿ (16ವರ್ಷ) ವರೆಗೆ ಅಂಧ ಹೆಣ್ಣು ಮತ್ತು ಗಂಡು ಮಕ್ಕಳಿಗೆ ದಾಖಲಾತಿ ಪ್ರಾರಂಭವಾಗಿದೆ. ಈ ಶಾಲೆಯಲ್ಲಿ ಅಂಧ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣದ ಜತೆಗೆ ವಸತಿಯುತ ಶಾಲೆಯಾಗಿರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಿಗದಿಪಡಿಸಿರುವ ಸಾಮಾನ್ಯ ಮಕ್ಕಳಿಗೆ ನೀಡುತ್ತಿರುವ ಶಿಕ್ಷಣವನ್ನೇ ಇಲ್ಲಿಯೂ ಭೋದಿಸುವುದರ ಜತೆಗೆ ಬ್ರೈಲ್ ಲಿಪಿ ಅಳವಡಿಸಿಲಾಗಿದೆ. ಶೈಕ್ಷಣಿಕ ಅವಧಿಯಲ್ಲಿ ಅಂಧ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಾದ ಯೋಗ, ದೈಹಿಕ ಶಿಕ್ಷಣ, ಸಂಗೀತ, ಡ್ಯಾನ್ಸ್ ಚಲನ-ವಲನ ತರಬೇತಿ, ಕಂಪ್ಯೂಟರ್ ತರಬೇತಿ, ಒಳಾಂಗಣ ಹಾಗೂ ಹೊರಾಂಗಣ ಆಟಗಳು, ಬ್ರೈಲ್ ಪುಸ್ತಕಗಳು, ಶಾಲಾ ಸಮವಸ್ತ್ರ, ಕಲಿಕಾ ಉಪಕರಣಗಳು, ವೈದ್ಯಕೀಯ ತಪಾಸಣೆಗಳು, ಕರಕುಶಲ ಕಾರ್ಯ ಚಟುವಟಿಕೆ ಕಳಿಸಲಾಗುವುದು. ಸಾರ್ವಜನಿಕರು ತಮ್ಮ ವ್ಯಾಪ್ತಿಯಲ್ಲಿರುವ ದೃಷ್ಟಿ ವಿಶೇಷ ಚೇತನ ಮಕ್ಕಳು ಕಂಡು ಬಂದಲ್ಲಿ ಅವರ ಪೋಷಕರಿಗೆ ನಮ್ಮ ಶಾಲೆಯ ಬಗ್ಗೆ ಮಾಹಿತಿ ನೀಡಿ ಶೇ.40 ಕ್ಕಿಂತ ಹೆಚ್ಚಿನ ದೃಷ್ಟಿದೋಷ ಹೊಂದಿರುವ ಮಕ್ಕಳು ನಮ್ಮ ಸರಕಾರಿ ಶಾಲೆಗೆ ದಾಖಲಾಗುವಂತೆ ಮಾಡಿ ವಿಶೇಷ ಚೇತನ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕರಿಸುವಂತೆ ಹಾಗೂ ಮಾಹಿತಿಗಾಗಿ ಶಾಲೆಯ ಮುಖ್ಯೋಪಾಧ್ಯಾಯರು, ಅಧೀಕ್ಷರಾದ ಗಂಗಾಧರಪ್ಪ.ಎಚ್.ಎನ್ ಮೊ: 9984534883, 08182-250442 ಸಂಪರ್ಕಿಸಿ.

{ ಪ್ರಭು ಚವ್ಹಾಣ } ಶಾಸಕ

ರಾಜ್ಯದಲ್ಲಿರುವ ಕಾಂಗ್ರೆಸ್ ನೇತೃತ್ವದ ಜನವಿರೋಧಿ, ಗೋಮಾತೆಯ ವಿರೋಧಿಯಾಗಿದೆ. ಗೋವುಗಳು ಅಕ್ರಮವಾಗಿ ಕಸಾಯಿ ಖಾನೆಗಳಿಗೆ ಎಗ್ಗಿಲ್ಲದೇ ಸಾಗಿಸಲಾಗುತ್ತಿದೆ. ಹಿಂದೂ ವಿರೋಧಿ ಕೆಲಸ ಮಾಡುತ್ತಿದೆ. ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿವೆ. ಔರಾದ್ ಪಟ್ಟಣಕ್ಕೆ ನೀರು ಪೂರೈಸುವ ಯೋಜನೆ ಸರಿಯಾಗಿ ನಡೆಯುತ್ತಿಲ್ಲ.

ಒಂದು ಕೋಟಿ ವೆಚ್ಚದಡಿ ಅಂತಾಪುರದ ಕೆರೆ ಅಭಿವೃದ್ಧಿ ಕಾಮಗಾರಿಗೆ ಹೊಳಲ್ಕೆರೆ ಶಾಸಕ ಚಂದ್ರಪ್ಪ ಚಾಲನೆ

ರೈತರಿಗೆ ನೀರು, ವಿದ್ಯುತ್ ಸೌಲಭ್ಯಕ್ಕೆ ಆದ್ಯತೆ

ಚಿತ್ರದುರ್ಗ : ಗ್ರಾಮೀಣ ಭಾಗದ ಬಡತನ ಕುಟುಂಬಕ್ಕೆ ಸೇರಿದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಉದ್ದೇಶದಿಂದ ಕ್ಷೇತ್ರದ ಹಲವು ಕಡೆಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ನೈತಿಕ, ಸಂಸ್ಕಾರಯುವ ಶಿಕ್ಷಣ ನೀಡುವ ಉದ್ದೇಶ ಇದೆ ಎಂದು ಶಾಸಕ ಡಾ. ಎಂ. ಚಂದ್ರಪ್ಪ ತಿಳಿಸಿದರು.

ಹೊಳಲ್ಕೆರೆ ಸಮೀಪದ ಅಂತಾಪುರ ಗ್ರಾಮದಲ್ಲಿ 1 ಕೋಟಿ ರು. ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಮಾಡುವುದರ ಮೂಲಕ ಚಾಲನೆ ನೀಡಿದರು.

ಪ್ರತಿ ಗ್ರಾಮೀಣ ಭಾಗದ ಮಗುವಿಗೆ ಉತ್ತಮ ಶಿಕ್ಷಣ ಸಿಗಬೇಕು. ಅವರು ಮೌಲ್ಯಯುತವಾಗಿ ಬೆಳೆಯಬೇಕು. ಸಮಾಜದಲ್ಲಿ ಅವರು ತಲೆ ಎತ್ತಿಕೊಂಡು ಬಾಳಬೇಕು ಎಂಬುದು ನನ್ನ ಗುರಿಯಾಗಿದೆ ಎಂದರು.

ರೈತರು ಪಡುವ ಶ್ರಮ ನನಗೆ ಅರ್ಥವಾಗಿದೆ. ಆರು ವರ್ಷಗಳ ಕಾಲ ಹೊಟ್ಟೆ ಬಟ್ಟೆ ಕಟ್ಟಿ ಅಡಿಕೆ ತೋಟ ಬೆಳೆಸುತ್ತಾರೆ. ಅದು ನೀರು, ವಿದ್ಯುತ್ ಅಭಾವದಿಂದ ನಾಶವಾಗುವ ಹಂತಕ್ಕೆ ಬಂದರೆ ಅವರ ಬದುಕೇ ನಾಶವಾಗಿ ಹೋಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ಮುಖ್ಯವಾಗಿ ಬೇಕಾದ ನೀರು ಮತ್ತು ವಿದ್ಯುತ್ ನೀಡುವ ಯೋಜನೆಗಳಿಗೆ ಆದ್ಯತೆಯ ಮೇಲೆ ಕೆಲಸ ಮಾಡುತ್ತಿದ್ದೇನೆ. ಪರಿಣಾಮವಾಗಿ ಚಿಕ್ಕಜಾಜೂರು ಸಮೀಪ ಕೋಟೆಹಾಳ್ ಗ್ರಾಮದಲ್ಲಿ ದೊಡ್ಡದಾದ

ಹೊಳಲ್ಕೆರೆ ಸಮೀಪದ ಅಂತಾಪುರ ಗ್ರಾಮದಲ್ಲಿ 1 ಕೋಟಿ ರು. ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಮಾಡುವುದರ ಮೂಲಕ ಶಾಸಕ ಡಾ. ಎಂ. ಚಂದ್ರಪ್ಪ ಚಾಲನೆ ನೀಡಿದರು.

ವಿದ್ಯುತ್ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಅಲ್ಲಿಂದ ಹಲವು ಕಡೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಎಲ್ಲ ಭಾಗಕ್ಕೂ ಕೊನೆ ಪಕ್ಷ 50 ವರ್ಷಗಳ ಕಾಲ ವಿದ್ಯುತ್ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದರು.

ತಾಲೂಕಿನ ಹಲವು ಕೆರೆಗಳಿಗೆ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ನೀರು ಒದಗಿಸಲಾಗುವುದು. ವಾಣಿ ವಿಲಾಸ ಸಾಗರದಿಂದ ಶುದ್ಧ ಕುಡಿಯುವ ನೀರನ್ನು ತಂದು ಪ್ರತಿ ಮನೆಗೆ ನೀಡಲಾಗುವುದು. ಅದಕ್ಕಾಗಿ ಯೋಜನೆಯ ಕೆಲಸ ಸಾಗುತ್ತಿದೆ ಎಂದು ಶಾಸಕರು ತಿಳಿಸಿದರು.

ಅಂತಾಪುರದಲ್ಲಿ ನ್ಯಾಯಬೆಲೆ ಅಂಗಡಿಯ ಅಗತ್ಯ ಇರುವುದು ನನ್ನ ಗಮನದಲ್ಲಿದೆ. ಜಿಲ್ಲಾಧಿಕಾರಿಗಳು ಒಂದೆರಡು ತಿಂಗಳಿನಲ್ಲಿಯೇ ಜಿಲ್ಲೆಯಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ಸ್ಥಾಪಿಸಲು ಪ್ರಕಟಣೆ ಹೊರಡಿಸಲಿದ್ದಾರೆ. ಆಗ ಅಂತಾಪುರ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಿಲಾಗುವುದು ಎಂದು ಭರವಸೆ ನೀಡಿದರು.

ಜನರು ಉಪಕಾರ ಸ್ಮರಣೆಯ ಭಾವವನ್ನು ಬೆಳೆಸಿಕೊಳ್ಳಬೇಕು. ತಮ್ಮ ಕಷ್ಟ ಸುಖಗಳಲ್ಲಿ ನೆರವಾದವರನ್ನು ಮರೆಯಲಾದಂತಹ ಗುಣವನ್ನು ಬೆಳೆಸಿಕೊಳ್ಳಬೇಕು. ಅಧಿಕಾರ ಯಾರಿಗೂ ಶಾಶ್ವತವಲ್ಲ. ಇರುವ ಕಾಲದಲ್ಲಿ ಜನರು ಮೆಚ್ಚುವಂತ ಕೆಲಸ ಮಾಡಬೇಕು. ಮುಂದೊಂದು ದಿನ ಜನರು ಕ್ಷೇತ್ರದಲ್ಲಿ ಆಗಿರುವ ಕೆಲಸಗಳ ಮೂಲಕ ಅಭಿವೃದ್ಧಿ ಪರವಾಗಿ ಕೆಲಸ ಮಾಡಿದವರನ್ನು ನೆನಪು ಮಾಡಿಕೊಳ್ಳುವಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ಹೊಳಲ್ಕೆರೆ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷರಾದ ಶ್ರೀ ಸಿದ್ದೇಶ್, ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಶ್ರೀ ತಿಪ್ಪಣ್ಣ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀ ರಂಗಪ್ಪ,ಶ್ರೀ ಡಿ. ಸಿ. ಮೋಹನ್, ಶ್ರೀ ಬಸವರಾಜ್ ನಾಯ್ಕ, ಶ್ರೀ ಲೋಕೇಶ್ ,ಶ್ರೀ ತಿಪ್ಪೇಶ್ ನಾಯ್ಕ,ಶ್ರೀ ರಾಜಣ್ಣ,ಶ್ರೀ ಪರಮೇಶಣ್ಣ ಇದ್ದರು.

ರಸ್ತೆ ಕಾಮಗಾರಿಗೆ 100 ಕೋಟಿ ರು. ಅನುದಾನ

ಕ್ಷೇತ್ರದ ಎಲ್ಲ ಕಡೆಗಳಲ್ಲಿಯೂ ಸುಸಜ್ಜಿತ ರಸ್ತೆಗಳು ಆಗಿವೆ. ಅಬ್ಬಿಗೆರೆಗೆ ತಲುಪುವ ರಸ್ತೆಗೂ ಅನುದಾನ ಕೊಟ್ಟು ಅದನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡುತ್ತೇನೆ. ಸಿರಿಗೆರೆ ಸರ್ಕಲ್ಲಿಂದ ಸಾಸಲು ನಿಲ್ದಾಣದವರೆಗೆ ಅತ್ಯುತ್ತಮ ರಸ್ತೆ ಆಗುತ್ತಿದೆ. ಜನರು ಹೋಗಿ ಒಮ್ಮೆ ಆ ರಸ್ತೆ ನೋಡಿಕೊಂಡು ಬನ್ನಿ. 100 ಕೋಟಿ ರು.ಗಳ ಅನುದಾನವನ್ನು ಆ ರಸ್ತೆಗೆ ನೀಡಿದ್ದೇನೆ ಎಂದು ಶಾಸಕ ಡಾ. ಎಂ. ಚಂದ್ರಪ್ಪ ತಿಳಿಸಿದರು.

> **ರಾಜಕಾರಣಿಯಾದವನು ಚುನಾವಣೆ ವೇಳೆ ಹೀಗೆ ಬಂದ, ಮರುಳು ಮಾಡಿ ಜನರನ್ನು ನಂಬಿಸಿದ, ಓಟು ಹಾಕಿಸಿಕೊಂಡು ಗೆದ್ದ ಮೇಲೆ ಜನರ ಕಡೆ ತಿರುಗಿ ನೋಡಲಿಲ್ಲ. ಅಂತಹ ಮನೋಭಾವ ಇದ್ದರೆ ಮತದಾರರು ಒಪ್ಪುವುದಿಲ್ಲ. ಆದ್ದರಿಂದ ಕ್ಷೇತ್ರದ ಎಲ್ಲ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ. ನನಗೆ ಕ್ಷೇತ್ರದಲ್ಲಿ 493 ಎಮ್ಮೆಗಳಿವೆ, ನಾಲ್ಕಾರು ಎಮ್ಮೆಗಳು ಹಾಲು ಕೊಡದೆ ಒದ್ದುಕೊಳ್ಳುತ್ತವೆ. ಅಂತವನ್ನೂ ಸಹ ಜತೆಗೆ ಕರೆದುಕೊಂಡು ಹೋಗುವ ಕೆಲಸ ಮಾಡುತ್ತಿರುವ ಎಂದು ಸೂಚ್ಯವಾಗಿ ತಿವಿದರು.**
>
> ಡಾ. ಎಂ. ಚಂದ್ರಪ್ಪ, ಶಾಸಕ

ಗ್ಯಾರಂಟಿ ಜನರ ಮೇಲೆ ಸಾಲದ ಹೊರೆ

ಚಳ್ಳಕೆರೆ: ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ಉಚಿತ ಯೋಜನೆಗಳ ಹೆಸರಿನಲ್ಲಿ ರಾಜ್ಯದ ಪ್ರತಿಯೊಬ್ಬ ನಾಗರೀಕರ ಮೇಲೂ ಸಾಲದ ಹೊರೆ ಹಾಕುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ನವೀನ್ ಆರೋಪಿಸಿದರು.

ನಗರದ ನಾಗಗೊಂಡನಹಳ್ಳಿ ಗ್ರಾಮದ ಚಿಲುಮೆರುದ್ರಸ್ವಾಮಿ ದೇವಾಸ್ಥಾನದ ಸಭಾಂಗಣದಲ್ಲಿ ನಡೆದ ಪಂಡಿತ್ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026ರ ಚಳ್ಳಕೆರೆ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸ್ ಉಚಿತ ಪ್ರಯಾಣ, ಮಹಿಳೆಯರಿಗೆ ಆರ್ಥಿಕ ನೆರವು ಸೇರಿದಂತೆ ಹಲವು ಯೋಜನೆಗಳ ಬಗ್ಗೆ ಸರಕಾರ ಪ್ರಚಾರ ಮಾಡುತ್ತಿದೆ. ಆದರೆ ಇವು ರಾಜ್ಯದ ಆರ್ಥಿಕ ಸ್ಥಿತಿಗೆ ಹೊರೆ ಆಗುತ್ತಿವೆ ಎಂದು ಹೇಳಿದರು.

ಹಿಂದಿನ ಬೊಮ್ಮಾಯಿ ಸರಕಾರ ಹಾಗೂ ಯಡಿಯೂರಪ್ಪ ನೇತೃತ್ವದ ಆಡಳಿತದಲ್ಲಿ ಹಲವು ನೀರಾವರಿ ಯೋಜನೆಗಳನ್ನು ಜಾರಿಗೆ ತರಲಾಗಿತ್ತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ತಾಲೂಕು ಮಂಡಲ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಬಾಳೆಕಾಯಿ ರಾಮದಾಸ್, ಜಯಪಾಲಯ್ಯ, ಮಾಜಿ ಮಂಡಲ ಅಧ್ಯಕ್ಷ ಸೂರನಹಳ್ಳಿ ಶ್ರೀನಿವಾಸ್, ಅದಿತ್ಯ ಬಾಸ್ಕರ್ ಶೆಟ್ಟಿ, ಸೋಮಶೇಖರ್‌ಮಂಡಿಮಠ, ಜಿ.ಟಿ. ಸುರೇಶ್, ಜಯರಾಮಣ್ಣ, ಶಿವಪುತ್ರಪ್ಪ, ಎಸ್.ಸಿಮೋರ್ಚಾ ಜಿಲ್ಲಾಧ್ಯಕ್ಷ ಪರುಶುರಾಮ್, ಕಾರ್ಯದರ್ಶಿ ಸುರೇಶ್, ಪಾಲಯ್ಯ, ತಾಲೂಕು ಘಟಕ ಪ್ರಧಾನ ಕಾರ್ಯದರ್ಶಿ ಡಾ. ರಾಮರಾಜ್ ಇದ್ದರು.

ಚಳ್ಳಕೆರೆ ದೇವಾಸ್ಥಾನದ ಸಭಾಂಗಣದಲ್ಲಿ ನಡೆದ ಪಂಡಿತ್ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026ರ ಚಳ್ಳಕೆರೆ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ನವೀನ್ ಮಾತನಾಡಿದರು.

> **ಸಂಘಟನೆಯ ಮೂಲಕ ಪಕ್ಷವನ್ನು ಬಲಪಡಿಸಿ, ಮುಂದಿನ ದಿನಗಳಲ್ಲಿ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತರುವ ದಿಸೆಯಲ್ಲಿ ಕಾರ್ಯಕರ್ತರು ಕೆಲಸ ಮಾಡಬೇಕು, ಕೇಂದ್ರ, ಸರಕಾರದ ವಿವಿಧ ಯೋಜನೆಗಳಾದ ಉಜ್ವಲ ಯೋಜನೆ, ಜನಧನ್ ಖಾತೆ, ಸರ್ವ ಶಿಕ್ಷಣ ಅಭಿಯಾನ, ಮುದ್ರಾ ಯೋಜನೆಗಳು ರೈತರಿಗೆ, ಮಹಿಳೆಯರು ಹಾಗೂ ಯುವಕರಿಗೆ ನೆರವಾಗಿವೆ ತಲುಪುತ್ತುವೆ.**
>
> -ಕೆಟಿ. ಕುಮಾರಸ್ವಾಮಿ, ಜಿಲ್ಲಾ ಬಿಜೆಪಿ ಮಂಡಲ ಅಧ್ಯಕ್ಷ

ಜಿಎಂ ಲೀಗ್ ಸೀಸನ್-3 ಕ್ರೀಡಾಕೂಟ ಸಮಾರೋಪ

ದಾವಣಗೆರೆ: ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ದಿ. ಜಿ. ಮಲ್ಲಿಕಾರ್ಜುನಪ್ಪ ಅವರ ಹೆಸರಿನಡಿಯ ಜಿಎಂ ಲೀಗ್ ಸೀಸನ್-3 ನ ಕ್ರೀಡಾ ಪಂದ್ಯಾವಳಿಯ ಸಮಾರೋಪ ಕಂಡಿತು. ಮಾರ್ಚ್ 26 ರಿಂದ ಏ. 11 ರವರೆಗೆ ನಡೆದ ಪಂದ್ಯಾವಳಿಯಲ್ಲಿ ವಿವಿಧ ಕ್ರೀಡಾ ವಿಭಾಗಗಳಲ್ಲಿ ಕ್ರೀಡಾಪಟುಗಳು ಅಮೋಘ ಪ್ರದರ್ಶನ ನೀಡಿದರು.

ಕ್ರಿಕೆಟ್: ನೈಟ್ ವಾರಿಯರ್ಸ್ ಪಾಲು ಪುರುಷರ ಕ್ರಿಕೆಟ್ ವಿಭಾಗದಲ್ಲಿ ನೈಟ್ ವಾರಿಯರ್ಸ್ ತಂಡವು ಭರ್ಜರಿ ಜಯ ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಫೈನಲ್ ಪಂದ್ಯದಲ್ಲಿ ಕಠಿಣ ಹೋರಾಟ ನೀಡಿದ ವಿಕ್ಟರಿ ಹಂಟರ್ಸ್ ತಂಡವು ರನ್ನರ್-ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಅತ್ಯುತ್ತಮ ಬ್ಯಾಟ್ಸ್‌ಮನ್: ಆಕಾಶ್, ಅತ್ಯುತ್ತಮ ಆಲ್-ರೌಂಡರ್: ತಿಪ್ಪೇಶ್‌ಅ, ಪತ್ಯುತ್ತಮ ಬೌಲರ್: ಪಿ. ಚಂದ್ರುಅ, ಲತ್ಯುತ್ತಮ ಫೀಲ್ಡರ್: ಎಚ್. ರುದ್ರಮುನಿ , ವಾಲಿಬಾಲ್ ಮತ್ತು ಥ್ರೋಬಾಲ್ ಪುರುಷರ ವಾಲಿಬಾಲ್ ಪಂದ್ಯದಲ್ಲಿ ಸೆಟ್ ಸ್ಟಾರ್ಸ್ ತಂಡವು ವಿಜೇತರಾಗಿ ಮಿಂಚಿದರೆ, ನೆಟ್ ಡಾಮಿನೇಟರ್ಸ್ ತಂಡ ದ್ವಿತೀಯ ಸ್ಥಾನ ಪಡೆಯಿತು. ಮಹಿಳೆಯರ ಥ್ರೋಬಾಲ್ ವಿಭಾಗದಲ್ಲಿ ರೆಡ್ ಡ್ರಾಗನ್ಸ್ ತಂಡವು ವಿನ್ನರ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು, ಥಂಡರ್‌ಥ್ರೋ ತಂಡ ರನ್ನರ್-ಅಪ್ ಪಡೆಯಿತು.

ವೈಯಕ್ತಿಕ ಸಾಧನೆಗಳು: ಅತ್ಯುತ್ತಮ ಸರ್ವಿಸ್: ತೇಜಸ್ವಿನಿ ಜಿ.ಎನ್. ಅತ್ಯುತ್ತಮ ಆಟಗಾರ್ತಿ (ಥ್ರೋಬಾಲ್): ಧನುಶ್ರೀ ದೇಸಾಯಿ ಅತ್ಯುತ್ತಮ ಆಟಗಾರ (ವಾಲಿಬಾಲ್): ಮಣಿ ಎನ್.ಡಿ. ಅತ್ಯುತ್ತಮ ಅಟ್ಯಾಕರ್: ಸೂರ್ಯ ವರ್ಧನ್

ಬಹುಮಾನ ವಿತರಣೆ : ಸಮಾರೋಪ ಸಮಾರಂಭದಲ್ಲಿ ಕುಲಪತಿಗಳಾದ ಡಾ. ಎಸ್. ಆರ್. ಶಂಕಪಾಲ್ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಸಂಶೋಧನಾ ಸಲಹೆಗಾರ ಡಾ. ರಮೇಶ್ ಸಿ.ಎಸ್, ಸಿಎಫ್ ಓ ಅಶೋಕ್ ಕುಮಾರ್ ,ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ನಿರ್ದೇಶಕ ಡಾ. ಪ್ರವೀಣ್ ಜೆ., ಸಂಶೋಧನಾ ಮತ್ತು ನಾವಿನ್ಯತೆ ಡೀನ್ ಡಾ. ಕೆ.ಎನ್. ಭರತ್, ಅಸೋಸಿಯೇಟ್ ಡೀನ್ ಡಾ. ಸ್ವರೂಪ್ ಕೆ, ಪ್ಲೇಸ್ಮೆಂಟ್ ಆಫೀಸರ್‌ಗಳಾದ ಅಕ್ಷರ ಪಿ, ವಿಲಾಸ್ ವಾಟ್ವೇ, ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕ ಡಾ. ಕಿರಣ್ಕುಮಾರ್ ಎಚ್.ಎಸ್ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕ ಜಿ.ಬಿ. ಅಜ್ಜಯ್ಯ ಇದ್ದರು.

ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ದಿ. ಜಿ. ಮಲ್ಲಿಕಾರ್ಜುನಪ್ಪ ಅವರ ಹೆಸರಿನಡಿಯ ಜಿಎಂ ಲೀಗ್ ಸೀಸನ್-3 ನ ಕ್ರೀಡಾ ಪಂದ್ಯಾವಳಿಯ ಸಮಾರೋಪದಲ್ಲಿ ಬಹುಮಾನ ವಿತರಿಸಲಾಯಿತು.

ಕನ್ನಡದ ಜತೆ ಆಂಗ್ಲ ಭಾಷೆ ಕಲಿಕೆಯೂ ಅಗತ್ಯ

ಚಿತ್ರದುರ್ಗ: ಇಂದಿನ ದಿನಮಾನದಲ್ಲಿ ಮಾತೃ ಭಾಷೆಯ ಜತೆಗೆ ಆಂಗ್ಲ ಭಾಷೆಯ ಕಲಿಕೆಯೂ ಸಹ ಅಗತ್ಯವಾಗಿದೆ. ಮಾತೃ ಭಾಷೆಯನ್ನು ಕಲಿತರೆ ನಮ್ಮ ರಾಜ್ಯದಲ್ಲಿ ಮಾತ್ರ ಸೀಮಿತವಾಗುತ್ತದೆ. ಆದರೆ ಆಂಗ್ಲ ಭಾಷೆಯನ್ನು ಕಲಿತರೆ ದೇಶದ ಯಾವ ಭಾಗದಲ್ಲಿಯಾದರೂ ಸಹ ನಾವುಗಳು ಜೀವನವನ್ನು ಮಾಡಬಹುದಾಗಿದೆ ಎಂದು ಯೋಗೀಶ್ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ (ರಿ.) ಅಧ್ಯಕ್ಷ ಯೋಗೀಶ್ ಸಹ್ಯಾದ್ರಿ ತಿಳಿಸಿದರು.

ಚಿತ್ರದುರ್ಗ ನಗರದಲ್ಲಿ ಈ ವರ್ಷ ಬೇಸಿಗೆ ರಜೆಯಲ್ಲಿ ಯೋಗೀಶ್ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ (ರಿ.) ವತಿಯಿಂದ ಎಲ್ಲ ತರಗತಿಯ ವಿದ್ಯಾರ್ಥಿಗಳಿಗೆ ಬಿ.ಡಿ. ರಸ್ತೆಯ ನೂತನ ಬ್ಯಾಂಚ್‌ಲ್ಲಿ ಹಮ್ಮಿಕೊಂಡಿದ್ದ 2026ರ ಸ್ಪೋಕನ್ ಇಂಗ್ಲಿಷ್ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಂಗ್ಲ ಭಾಷೆಯನ್ನು ಬ್ರಿಟೀಷರು ಬಿಟ್ಟು ಹೋದ ಭಾಷೆ ಎಂದು ಹಲವಾರು ಜನತೆ ಆಡಿಕೊಳ್ಳುತ್ತಾರೆ ಆದರೆ ಅಂದಿನ ದಿನಮಾನದಲ್ಲಿ ಅದು ಅವರ ಮಾತೃ ಭಾಷೆಯಾಗಿತ್ತು. ಹಾಗಾಗಿ ಅವರು ಅದನ್ನು ಬಳಸುತ್ತಿದ್ದರು, ಇದರ ಹಿಂದೆ ಬಿದ್ದ ನಮ್ಮವರು ಸಹ ಈ ಭಾಷೆಯನ್ನೇ ಹೆಚ್ಚಾಗಿ ಬಳಕೆ ಮಾಡುವುದನ್ನು ಕಲಿತರು. ಇದರಿಂದ ಈ ಭಾಷೆ ವಿಶ್ವದ ಭಾಷೆಯಾಗಿ ಬೆಳೆದಿದೆ, ಇದರಿಂದ ಈ ಭಾಷೆಯನ್ನು ಕಲಿತರೆ ಎಲ್ಲಿಯಾದರೂ ಜೀವನ ಮಾಡಬಹುದಾಗಿದೆ. ನಮ್ಮ ಮಾತೃ ಭಾಷೆಯ ಜತೆಗೆ ಆಂಗ್ಲ ಭಾಷೆಯನ್ನು ಕಲಿಯುವುದರ ಮೂಲಕ ಉತ್ತಮವಾದ ಬದುಕನ್ನು ರೂಪಿಸಿಕೊಳ್ಳುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಯೋಗೀಶ್ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಚೈತ್ರ.ಸಿ ಹಾಗೂ ಪೋಷಕರಾದ ಜ್ಯೋತಿ ಶಂಕರ ಮೂರ್ತಿ, ಪಲ್ಲವಿ ರಾಜ್, ತಿಮ್ಮಯ್ಯ ಪಿ.ಜಿ, ಅಶೋಕ್. ಎಚ್, ಕಚೇರಿ ಸಿಬ್ಬಂದಿ ವಿನೋದ.ಸಿ ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಚಿತ್ರದುರ್ಗ ನಗರದಲ್ಲಿ ಈ ವರ್ಷ ಬೇಸಿಗೆ ರಜೆಯಲ್ಲಿ ಯೋಗೀಶ್ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ (ರಿ.) ವತಿಯಿಂದ ಎಲ್ಲ ತರಗತಿಯ ವಿದ್ಯಾರ್ಥಿಗಳಿಗೆ ಬಿ.ಡಿ. ರಸ್ತೆಯ ನೂತನ ಬ್ಯಾಂಚ್ನಲ್ಲಿ ಹಮ್ಮಿಕೊಂಡಿದ್ದ 2026ರ ಸ್ಪೋಕನ್ ಇಂಗ್ಲಿಷ್ ಬೇಸಿಗೆ ಶಿಬಿರವನ್ನುಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ (ರಿ.) ಅಧ್ಯಕ್ಷ ಯೋಗೀಶ್ ಸಹ್ಯಾದ್ರಿ ಉದ್ಘಾಟಿಸಿದರು.

> **ನಮ್ಮ ಸಂಸ್ಥೆಯ ವತಿಯಿಂದ ಹಲವಾರು ವರ್ಷದಿಂದ ಮಕ್ಕಳಿಗೆ ಬೇಸಿಗೆ ಸಮಯದಲ್ಲಿ ಸ್ಪೋಕನ್ ಇಂಗ್ಲಿಷ್ ಬೇಸಿಗೆ ಶಿಬಿರವನ್ನು ನಡೆಸಲಾಗುತ್ತಿದೆ. ಇದರ ಪ್ರಯೋಜನವನ್ನು ಹಲವಾರು ಮಕ್ಕಳು ಪಡೆಯುತ್ತಿದ್ದಾರೆ. ಆಂಗ್ಲ ಭಾಷೆಯನ್ನು ಸರಿಯಾದ ರೀತಿಯಲ್ಲಿ ಮಾತನಾಡಲು ಕಲಿಯವುದರ ಮೂಲಕ ಅವರ ಮುಂದಿನ ಭವಿಷ್ಯ ಉತ್ತಮವಾಗಿ ಇರಲು ಸಾಧ್ಯವಿದೆ.**
>
> ಯೋಗೀಶ್ ಸಹ್ಯಾದ್ರಿ, ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ

ಗ್ರಾಮ ಆಡಳಿತಾಧಿಕಾರಿ, ಕಂದಾಯ ಅಧಿಕಾರಿಗಳಿಗೆ ಶಾಸಕ ಗೋವಿಂದಪ್ಪ ಸೂಚನೆ

ಸರ್ವೇಯರ್ ಕರಿಯಪ್ಪನನ್ನು ಸಸ್ಪೆಂಡ್ ಮಾಡಿ

ಹೊಸದುರ್ಗ: ಸರ್ವೆಯರ್‌ಕರಿಯಪ್ಪನ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಈ ಬಗ್ಗೆ ಆತನಿಗೆ ಹಲವು ಬಾರಿ ವಾರ್ನಿಂಗ್ ಮಾಡಿದರೂ ತಿದ್ದಿಕೊಳ್ಳುತ್ತಿಲ್ಲ. ನನಗೂ ದೂರು ಕೇಳಿ, ಕೇಳಿ ಸಾಕಾಗಿದೆ ಎಂದು ಸಭೆಯಲ್ಲಿಯೇ ಜಿಲ್ಲಾಧಿಕಾರಿಗೆ ಕರೆ ಮಾಡಿ ತಕ್ಷಣದಿಂದಲೇ ತಾಲೂಕು ಸರ್ವೆಯರ್ ಕರಿಯಪ್ಪನನ್ನು ಅಮಾನತು ಮಾಡುವಂತೆ ಶಾಸಕ, ಆಹಾರ ಹಾಗೂ ನಾಗರಿಕ ಸರಬರಾಜು ನಿಗಮದ ಅಧ್ಯಕ್ಷರಾದ ಬಿ.ಜಿ. ಗೋವಿಂದಪ್ಪ ಸೂಚಿಸಿದರು.

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಸೋಮವಾರ ನಡೆದ ಬಗರ್‌ಹುಕುಂ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಗುವಳಿಗಾಗಿ ಅರ್ಜಿ ಹಾಕಲು ಬರುವ ಫಲಾನುಭವಿಗಳ ದಾರಿ ತಪ್ಪಿಸುವ ಕೆಲಸವಾಗುತ್ತಿದೆ. ವಿಎ,ಆರ್ ಐಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೇವಲ ಸಬೂಬು ಹೇಳುವುದನ್ನು ಬಿಟ್ಟು ಕೆಲಸ ಮಾಡಿ. ಬಗರ್‌ಹುಕುಂ ಅರ್ಜಿ ವಿಲೇವಾರಿಗೆ ಅರ್ಜಿ ಹಾಕಿದ ಫಲಾನು ಭವಿಗಳು ಬರುವುದನ್ನು ಕಾಯುವುದು ಸರಿಯಲ್ಲ. ಒಮ್ಮೆ ನಿಮ್ಮ ಬಳಿ ಅರ್ಜಿ ಬಂತೆಂದರೆ ಅದಕ್ಕೆ ಉತ್ತರಿಸಬೇಕಾದವರು ನೀವು ಅದನ್ನು ಬಿಟ್ಟು ಫಲಾನುಭವಿಗಳಿಗೆ ತಪ್ಪು ಮಾಹಿತಿ ನೀಡಿ ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದೀರಾ. ಅವರನ್ನು ಸುಖಾ ಸುಮ್ಮನೆ ಅಲೆದಾಡಿಸುತ್ತಿದ್ದೀರಾ. ಸಾಕಷ್ಟು ಬಾರಿ ನಿಮಗೆ ತಿಳುವಳಿಕೆ, ಎಚ್ಚರಿಕೆ ನೀಡಲಾಗಿದ್ದರೂ ಅದೇ ವ್ಯವಸ್ಥೆಯನ್ನು ಮುಂದುವರೆಸುತ್ತಿದ್ದೀರಾ. ಇದು ಸರಿಯಾದ ಬೆಳವಣಿಗೆಯಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸಣ್ಣಕಿಟ್ಟದಹಳ್ಳಿ ಗ್ರಾಮವನ್ನು 2 ಭಾಗ ಮಾಡಿ, ಪಾಣಿಕಿಟ್ಟದಹಳ್ಳಿ ಎಂದು ಹಲವು ದಾಖಲೆಗಳಲ್ಲಿ ದಾಖಲಿಸಲಾಗಿದೆ. ಪಾಣಿಕಿಟ್ಟದಹಳ್ಳಿ ಎಂಬ ಹೆಸರನ್ನು ತೆಗೆದು ಸಣ್ಣಕಿಟ್ಟದಹಳ್ಳಿ ಭಾಗ 1 ಮತ್ತು 2 ಎಂದು ನಮೂದಿಸಿ. ಇದರಿಂದ ಇಲ್ಲಿನ ಜನರಿಗೆ ತೊಂದರೆಯಾಗಿದೆ ಎಂದು ಸಾರ್ವಜನಿಕರು ದೂರಿದರು.

ಶ್ರೀರಾಂಪುರ ಹೋಬಳಿ ಭಾಗದಲ್ಲಿ ಸರಕಾರದಿಂದ ಮಂಜೂರಾಗಿದ್ದ ಕೃಷಿ ಭೂಮಿಯಲ್ಲಿ ಭದ್ರಾ ಯೋಜನೆಯ ಚಾನಲ್ ಹಾದು ಹೋಗುತ್ತಿದ್ದು ಅದರ ವಾರಸುದಾರರಿಗೆ ಪರಿಹಾರದ ಹಣ ನೀಡಲು ಮೂಲ ದಾಖಲೆಗಳಿಲ್ಲದ ಕಾರಣ ಸಾಧ್ಯವಾಗುತ್ತಿಲ್ಲ ಎಂದು ಭದ್ರಾ ಯೋಜನೆಯ ಎಇಇ ಸುರೇಶ್ ಸಭೆಗೆ ತಿಳಿಸಿದಾಗ ಇದಕ್ಕೆ ಪರಿಹಾರದ ಮಾರ್ಗ ಕಂಡು ಕೊಳ್ಳಿ ತಹಸೀಲ್ದಾರ್‌ಗೆ ಶಾಸಕರು ಸೂಚಿಸಿದರು.

ಹೊಸದುರ್ಗದ ತಾ.ಪಂ ಸಭಾಂಗಣದಲ್ಲಿ ಬಗರ್‌ಹುಕುಂ ಸಮಿತಿ ಸಭೆ ನಡೆಯಿತು.

> **ಮುಂದಿನ ಸಭೆಯೊಳಗೆ ಬಾಕಿ ಅರ್ಜಿ ವಿಲೇವಾರಿಗೆ ಕ್ರಮಕೈಗೊಳ್ಳದಿದ್ದರೆ ಗ್ರಾಮ ಆಡಳಿತಾಧಿಕಾರಿ ಹಾಗೂ ಕಂದಾಯ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುತ್ತೇನೆ.**
>
> ಬಿ.ಜಿ.ಗೋವಿಂದಪ್ಪ, ಶಾಸಕ

ಶ್ರೀಗಳು ಪೀಠ ತ್ಯಜಿಸದಿದ್ದರೆ ಕಾನೂನು ಹೋರಾಟ

ದಾವಣಗೆರೆ: ಹರಿಹರದ ವೀರಶೈವ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾದ ವಚನಾನಂದ ಶ್ರೀಗಳನ್ನು ಉಚ್ಚಾಟಿಸಲು ಅಧಿಕೃತವಾಗಿ ತೀರ್ಮಾನಿಸಲಾಗಿದೆ. ಶ್ರೀಗಳು ಗೌರವಯುತವಾಗಿ ಪೀಠ ತ್ಯಜಿಸದಿದ್ದರೆ ಕಾನೂನು ಕ್ರಮದ ಮೂಲಕ ಹೊರಹಾಕಲಾಗುವುದು ಎಂದು ಪೀಠದ ಟ್ರಸ್ಟಿಗಳಾದ ಬಾವಿ ಬೆಟ್ಟಪ್ಪ ಹಾಗೂ ಬಸವರಾಜ್ ದಿಂಡೂರು ಎಚ್ಚರಿಸಿದ್ದಾರೆ.

ಸೋಮವಾರ ಸಂಜೆ ಇಲ್ಲಿನ ಚೇತನಾ ಹೋಟೆಲ್‌ನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಗಳ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದರು.

ಶ್ರೀಗಳನ್ನು ಉಚ್ಚಾಟಿಸುವ ನಿರ್ಧಾರ ಇಂದು ಅಧಿಕೃತಗೊಂಡಿದೆ. ಈ ಕುರಿತು ಅವರಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಶೀಘ್ರದಲ್ಲೇ ಕಾನೂನುಬದ್ಧ ಆದೇಶ ಹೊರಡಿಸಲಾಗುವುದು. ಅಹಿತಕರ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲು ತಹಸೀಲ್ದಾರ್‌ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಗಿದೆ. ಮಠದೊಳಗೆ ಟ್ರಸ್ಟಿಗಳನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶ ನೀಡಬಾರದೆಂದು ಕೋರಲಾಗಿದೆ ಎಂದು ಬಸವರಾಜ್ ದಿಂಡೂರು ತಿಳಿಸಿದರು.

ಟ್ರಸ್ಟಿನ ಆರೋಪ ದ್ವಂದ್ವ ನಿಲುವು: ಹರಿಹರ ಪೀಠ ಅಥವಾ ಬೆಂಗಳೂರಿನ ಶ್ವಾಸ ಕೇಂದ್ರ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳುವಂತೆ ನೀಡಿದ್ದ ಗಡುವನ್ನು ಶ್ರೀಗಳು ನಿರ್ಲಕ್ಷಿಸಿದ್ದಾರೆ. ಸಮಾಜವನ್ನು ಒಗ್ಗೂಡಿಸುವ ಬದಲು ಗುಂಪುಗಾರಿಕೆ ಮಾಡುತ್ತಿದ್ದಾರೆ.

ಬೆಳಗಾವಿಯ ನಿಡಸೋಸಿ ಮಠದ ಜಗದ್ಗುರು ಸ್ಥಾನಕ್ಕೂ ಅರ್ಜಿ ಸಲ್ಲಿಸುವ ಮೂಲಕ ಪೀಠಕ್ಕೆ ದ್ರೋಹ ಬಗೆದಿದ್ದಾರೆ. ಮಠದ ಸ್ಥಾಪನೆಗೆ ಕಾರಣರಾದ ಹಿರಿಯರನ್ನು ಸಾರ್ವಜನಿಕ ವೇದಿಕೆಗಳಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿದರು.

ಮಠದ ಆಸ್ತಿ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಪಾರದರ್ಶಕತೆ ಇಲ್ಲ, 'ಲೆಕ್ಕ ಕೊಡಿ'' ಎಂಬ ಅಭಿಯಾನದ ಮೂಲಕ ಪ್ರತಿ ಪೈಸೆಗೂ ಉತ್ತರದಾಯಿತ್ವ ಬಯಸುತ್ತಿದ್ದೇವೆ ಎಂದು ಟ್ರಸ್ಟ್‌ಗಳು ಹೇಳಿದರು.

ಸಮಾಜದ ಮುಖಂಡ ಎಚ್.ಎಸ್. ನಾಗರಾಜ್ ಮಾತನಾಡಿ, ಸ್ವಾಮೀಜಿಗಳ ವೈಯಕ್ತಿಕ ಪ್ರತಿಷ್ಠೆಯಿಂದ ಪಂಚಮಸಾಲಿ ಸಮಾಜ ಹೋಳಾಗುತ್ತಿದೆ. ಮೀಸಲಾತಿಗಾಗಿ ಒಗ್ಗಟ್ಟಿನಿಂದ ಹೋರಾಡಬೇಕಾದ ಈ ನಿರ್ಣಾಯಕ ಸಮಯದಲ್ಲಿ ಪೀಠಗಳ ನಡುವಿನ ಕಿತ್ತಾಟದಿಂದಾಗಿ ಸಮುದಾಯಕ್ಕೆ ಸಾಮಾಜಿಕ ಹಾಗೂ ರಾಜಕೀಯವಾಗಿ ಹಿನ್ನಡೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಚಂದ್ರಶೇಖರ್‌ಪೂಜಾರ್ ,ನಾಗನಗೌಡ, ಪುಂಡಲೀಕಪ್ಪ ಮತ್ತಿತರರು ಉಪಸ್ಥಿತರಿದ್ದರು.

ಹರಿಹರದ ವೀರಶೈವ ಪಂಚಮಸಾಲಿ ಪೀಠದ ಟ್ರಸ್ಟ್‌ಗಳಾದ ಬಾವಿ ಬೆಟ್ಟಪ್ಪ ಹಾಗೂ ಬಸವರಾಜ್ ದಿಂಡೂರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ವಿಶ್ವ ಕಲಾ ದಿನಾಚರಣೆ 15ರಂದು

ದಾವಣಗೆರೆ: ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಏ. 15 ರಂದು ಬೆಳಗ್ಗೆ 11 ಗಂಟೆಗೆ ವಿಶ್ವಕಲಾ ದಿನಾಚರಣೆಯ ಪ್ರಯುಕ್ತರ ದೃಶ್ಯಾನುಭವ'' ಕಲಾ ಪ್ರದರ್ಶನ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಖ್ಯಾತ ಕಲಾವಿದ ಗಣೇಶ ದೊಡ್ಡಮನಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ವಿಶ್ವವಿಖ್ಯಾತ ಕಲಾವಿದ ಲಿಯೊನಾಡೊರ್ ಡಾ ವಿಂಚಿ ಅವರ ಜೀವನ ಮತ್ತು ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ಹಾಗೂ ಕಲಾ ಪ್ರಾತ್ಯಕ್ಷಿಕೆಯನ್ನು ನೀಡಲಿದ್ದಾರೆ. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಸತೀಶ ಕುಮಾರ್‌ಪಿ. ವಲ್ಲೇಪುರೆ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಚಾಲಕರಾಗಿ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್ ಹಾಗೂ ಸಹ ಸಂಚಾಲಕರಾಗಿ ರಂಗನಾಥ್ ಬಿ. ಕುಲಕರ್ಣಿ ಕಾರ್ಯನಿರ್ವಹಿಸಲಿದ್ದಾರೆ.

ಮಧ್ಯಾಹ್ನ 3ರಿಂದ ನಡೆಯುವ ದೃಶ್ಯಾನುಭವ ಕಲಾ ಪ್ರದರ್ಶನದಲ್ಲಿ ಮಹಾವಿದ್ಯಾಲಯದ ಎಂವಿಎ ಪೇಂಟಿಂಗ್ ಹಾಗೂ ಅನ್ವಯಿಕ ಕಲಾ ವಿಭಾಗದ ವಿದ್ಯಾರ್ಥಿಗಳಾದ ಕೀರ್ತನಾ ಎಸ್ ಎಲ್, ಕುಸುಮಾ ಬಿ ಯು, ಚಿದಾನಂದ ಸಿ ಮಠದ್, ಕೀರ್ತನಾ ಅಲ್ಲೋನ್ನಾ, ರಾಹುಲ್ ಕೆ ಮತ್ತು ಶಬನಮ್ ದೊಡ್ಡಮನಿ ಅವರ ಕಲಾಕೃತಿಗಳು ಪ್ರದರ್ಶನಗೊಳ್ಳಲಿವೆ. ಇದೇ ಸಂದರ್ಭದಲ್ಲಿ ವಿಜಯ ಕರ್ನಾಟಕ ದಿನಪತ್ರಿಕೆ ಸಹಯೋಗದೊಂದಿಗೆ ನಡೆದ ಚಿತ್ರ ರಚನಾ ಕಾರ್ಯಾಗಾರದಲ್ಲಿ ಬಹುಮಾನ ಪಡೆದ ಸಬೀನ್ ತಾಜ್, ಗಾಯಿತ್ರಿ ಪತ್ತಾರ್,ಮಾಸಪ್ಪ ಪೂಜಾರ್ ,ಸಿದ್ದಪ್ಪ ಕಾರಡಗಿ ಹಾಗೂ ವಿಠಲ್ ಎ ಬರಕಾಳೆ ಅವರಿಗೆ ಗೌರವಿಸಲಾಗುತ್ತದೆ.

ದೃಶ್ಯವಿಶ್ವ ಕಲಾ ಗ್ಯಾಲರಿಯಲ್ಲಿ ನಡೆಯಲಿರುವ ಈ ಕಲಾ ಪ್ರದರ್ಶನವು ಏಪ್ರಿಲ್ 15 ರಿಂದ 28 ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ರಿಪ್ಪನಪೇಟೆ ಗ್ರಾ.ಪಂ ಮ್ಯಾಪಿಂಗ್ ಕ್ಯಾಂಪ್

ಹೊಸನಗರ: ರಾಜ್ಯಾದ್ಯಂತ ಮತದಾರರ ಪಟ್ಟಿಯ ಮ್ಯಾಪಿಂಗ್/ ಪ್ರೋಜೆನಿ ನಡೆಯುತ್ತಿದ್ದು ಹೊಸನಗರ ತಾಲೂಕು ರಿಪ್ಪನಪೇಟೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕೆಲ ಮತಗಟ್ಟೆಗಳಲ್ಲಿ ಪ್ರಗತಿ ಕಡಿಮೆಯಾಗಿದ್ದು, ಬಾಕಿ ಉಳಿದಿರುವ ಮ್ಯಾಪಿಂಗ್/ಪ್ರೊಜೆನಿ ಪೂರ್ಣಗೊಳಿಸಿ ಪ್ರಗತಿ ಸಾಧಿಸಲು ಇಂದು ಬೆಳಗ್ಗೆ 10.30 ರಿಂದ 5 ಗಂಟೆವರೆಗೆ ರಿಪ್ಪನಪೇಟೆ ಗ್ರಾಮ ಪಂಚಾಯಿತಿಯ ಸಭಾಂಗಣದಲ್ಲಿ ಮ್ಯಾಪಿಂಗ್ ಕ್ಯಾಂಪ್ ಆಯೋಜಿಸಲಾಗಿದೆ. ಕ್ಯಾಂಪ್ ನಲ್ಲಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಎಲ್ಲಾ ಮತಗಟ್ಟೆ ಮಟ್ಟದ ಅಧಿಕಾರಿಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಜರಿರುತ್ತಾರೆ. ಮತದಾರರು ತಾವು 2002ರಲ್ಲಿ ಮತದಾರರಾಗಿರುವ ಬಗ್ಗೆ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು, ಭಾಗ ಸಂಖ್ಯೆ ಹಾಗೂ ತಮ್ಮ ಕ್ರಮ ಸಂಖ್ಯೆ ಅಥವಾ ಒಂದು ವೇಳೆ 2002ರ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲವಾದಲ್ಲಿ, ನಿಮ್ಮ ತಂದೆ-ತಾಯಿ ಕ್ರಮ ಸಂಖ್ಯೆ, ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು ಅಥವಾ ಅಜ್ಜ-ಅಜ್ಜಿ ಕ್ರಮ ಸಂಖ್ಯೆ, ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರಿನ ಮಾಹಿತಿಯೊಂದಿಗೆ ಹಾಜರಾಗಿ, ಮ್ಯಾಪಿಂಗ್ ಕ್ಯಾಂಪ್ ನ ಸದುಪಯೋಗಪಡಿಸಿಕೊಳ್ಳಬೇಕೆಂದು ತಹಸೀಲ್ದಾರ್ಭರತ್ ರಾಜ ಮನವಿ ಮಾಡಿಕೊಂಡಿದ್ದಾರೆ.

ಖಾಸಗಿ ಬಸ್ ಪಲ್ಟಿ; 12 ಮಂದಿಗೆ ಗಾಯ

ಶಿವಮೊಗ್ಗ: ಶಿವಮೊಗ್ಗದಿಂದ ಶಿಕಾರಿಪುರಕ್ಕೆ ಹೊರಟಿದ್ದ ಖಾಸಗಿ ಬಸ್ ಶಿಕಾರಿಪುರ ನಗರ ಪ್ರವೇಶ ದ್ವಾರದಲ್ಲಿ ಪಲ್ಟಿಯಾಗಿ 12 ಮಂದಿ ಪ್ರಯಾಣಿಕರು ತೀವ್ರವಾಗಿ ಗಾಯಗೊಂಡ ಘಟನೆ ಸೋಮವಾರ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಡೆದಿದೆ. ಬೈಕ್ ಸವಾರ ಬಸ್ಗೆ ಅಡ್ಡಬಂದಿದ್ದರಿಂದ ಆತನನ್ನು ಉಳಿಸಲು ಹೋದಾಗ ಬಸ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದೆ. ಬಸ್ನಲ್ಲಿ ಸುಮಾರು 25ಕ್ಕೂ ಹೆಚ್ಚು ಪ್ರಯಾಣಿಕರು ಇದ್ದು, ಅವರಲ್ಲಿ 12 ಮಂದಿಗೆ ಗಾಯಗಳಾಗಿದ್ದು ಗಾಯಾಳುಗಳನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇವರಲ್ಲಿ ಐವರಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಹಾಗೂ ಗಾಯಾಳುಗಳಲ್ಲಿ 9 ತಿಂಗಳ ಗರ್ಭಿಣಿಯೂ ಸೇರಿದ್ದಾಳೆ. ಮೆಗ್ಗಾನ್ ಆಸ್ಪತ್ರೆಗೆ ಸಂಸದ ಬಿ.ವೈ. ರಾಘವೇಂದ್ರ, ಭೇಟಿನೀಡಿ, ಗಾಯಾಳುಗಳಿಗೆ ಸಾಂತ್ವನ ಹೇಳಿದರು. ವೈದ್ಯರನ್ನು ಸಂಪರ್ಕಿಸಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡಬೇಕೆಂದು ಸೂಚಿಸಿದರು. ಗಾಯಾಳುಗಳಲ್ಲಿ ಕೆಲವರನ್ನು ಶಿವಮೊಗ್ಗದ ಸರ್ಜಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದ ಅವರು, ಸುದೈವ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಗಾಯಾಳುಗಳಲ್ಲಿ ಹೆಚ್ಚಾಗಿ ಕೂಲಿಕಾರ್ಮಿಕರಾಗಿದ್ದು ಅವರು ಚೇತರಿಸಿಕೊಳ್ಳಲು 2-3 ತಿಂಗಳು ಬೇಕಾಗುತ್ತದೆ. ಸ ರಕಾರದ ಪರಿಹಾರವನ್ನು ದೊರಕಿಸಿ ಕೊಡಲು ಪ್ರಯತ್ನಿಸಲಾಗುವುದು ಎಂದು ಸಂಸದರು ಹೇಳಿದರು.

ಏ. 27ಕ್ಕೆನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

ಶಿವಮೊಗ್ಗ: ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ವತಿಯಿಂದ ನಿಧಿ ಆಪ್ಕೆ ನಿಕಟ್ 2.0 ಕಾರ್ಯಕ್ರಮವನ್ನು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಏ. 27 ರಂದು ಆಯೋಜಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕು ಜೋಗ್ ರಸ್ತೆ ಮಲ್ನಾಡ್ ಡೆವಲಪ್ಮೆಂಟ್ ಫೌಂಡೇಷನ್, ತಾರಾಪುರ ಕ್ಯಾಂಪಸ್ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಹರಿಹರದ ಪಿ.ಬಿ.ರಸ್ತೆಯ ಮರಿಯಾ ನಿವಾಸ ಶಾಲೆಯಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ನಡೆಯಲಿದೆ. ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆ ಹಾಗೂ ಪಿಂಚಣಿದಾರರಿಗೆ ಮಧ್ಯಾಹ್ನ 2.30 ರಿಂದ ಸಂಜೆ 4 ಗಂಟೆವರೆಗೆ ನಿಧಿ ಆಪ್ಕೆ ನಿಕಟ್ ನಡೆಯಲಿದ್ದು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಸದುಪಯೋಗ ಪಡೆದುಕೊಳ್ಳುವಂತೆ ಪ್ರಾದೇಶಿಕ ಕಚೇರಿಯ ಸಹಾಯಕ ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್.ನಂ: 335/2026
ಅರ್ಜಿದಾರರು : ಕಿರಣಕುಮಾರ ಆರ್ ತಂದೆ ಹೆಚ್ ರಾಮಪ್ಪ ವಯಸ್ಸು: ಸುಮಾರು 40 ವರ್ಷ, ವಾಸ: 3ನೇ ಮೇನ್ 6ನೇ ಕ್ರಾಸ್, ಪಾಟೇಲ್ ಬಡಾವಣೆ ಹರಿಹರ, ದಾವಣಗೆರೆ ಜಿಲ್ಲೆ.
-:ವಿರುದ್ಧ: -
ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ನಗರಸಭೆ ರವರ ಕಛೇರಿ, ಹರಿಹರ
ಸಾರ್ವಜನಿಕ ನೋಟಿಸು
ಅರ್ಜಿದಾರರ ಹೆಂಡತಿಯಾದ " ಜೋತಿ ಕಿರಣ್ ಕೋಂ ಕಿರಣಕುಮಾರ ಆರ್" ಇವರು ದಿನಾಂಕ:22-06-2024ರಂದು ಹರಿಹರ 3ನೇ ಮೇನ್ 6ನೇ ಕ್ರಾಸ್, ಪಾಟೇಲ್ ಬಡಾವಣೆಯ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ಅರ್ಜಿದಾರರು ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ; 15-05-2026 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು.
ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ: 07-04-2026 ರಂದು ನೀಡಲಾಗಿದೆ.
ಸ್ಥಳ : ಹರಿಹರ
ದಿನಾಂಕ; 07-04-2026
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ & ಪ್ರದ.ನ್ಯಾದಂ. ನ್ಯಾಯಾಲಯ, ಹರಿಹರ,
ಅರ್ಜಿದರಾರ ಪರ ವಕೀಲರು
ಪ್ರಕಾಶ. ಬಿ.ಸಿ.

ಕುಂದು ಕೊರತೆಗಳ ಕುರಿತ ಸಭೆ | ಮೆಸ್ಕಾಂ ಅಧಿಕಾರಿಗೆ ಶಾಸಕ ಚನ್ನಬಸಪ್ಪ ತರಾಟೆ

ಜನರ ಮನವಿಗೂ ಮೆಸ್ಕಾಂ ಅಲಕ್ಷ್ಯ

ಶಿವಮೊಗ್ಗ: ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಸಭೆಗೆ ಆಗಮಿಸಿದ ಮೆಸ್ಕಾಂ ಅಧಿಕಾರಿಗಳನ್ನು ಶಾಸಕ ಎಸ್. ಎನ್. ಚನ್ನಬಸಪ್ಪ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ಅವರು ತಮ್ಮ ಜನಸಂಪರ್ಕ ಕಚೇರಿಯಲ್ಲಿ ಶಿವಮೊಗ್ಗ ನಾಗರಿಕ ಹಿತರಕ್ಷಣಾ ಒಕ್ಕೂಟದ ವೇದಿಕೆಯಿಂದ ಆಯೋಜಿಸಿದ್ದ ನಗರದ ಕುಂದುಕೊರತೆ ಕುರಿತ ಸಭೆಯಲ್ಲಿ ಮಾತನಾಡಿದರು. ಇಂದಿನ ಸಭೆಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಬಾರದೇ ಇದ್ದಿದ್ದರಿಂದ ಏ.17ರಂದು ಬೆಳಿಗ್ಗೆ 9.30ಕ್ಕೆ ಮತ್ತೊಮ್ಮೆ ಸಭೆ ಕರೆಯಲಾಗುವುದು. ಸಭೆಗೆ ಮೆಸ್ಕಾಂ ಅಧಿಕಾರಿಗಳು, ಪಾಲಿಕೆಯ ಕುಡಿಯುವ ನೀರು ಹಾಗೂ ಒಳಚರಂಡಿ ವಿಭಾಗದ ಅಧಿಕಾರಿಗಳನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. ಆದರೆ ಮೆಸ್ಕಾಂ ಅಧಿಕಾರಿಗಳು ಒಂದು ಗಂಟೆಗೆ ತಡವಾಗಿ ಆಗಮಿಸಿದ್ದು ಇದು ಶಾಸಕರನ್ನು ತೀವ್ರವಾಗಿ ಕೆರಳಿಸಿತ್ತು.

ನಾಗರೀಕ ಹಿತರಕ್ಷಣಾ ವೇದಿಕೆ ಒಕ್ಕೂಟದ ಪ್ರಮುಖರಾದ ಕೆ.ವಿ. ವಸಂತಕುಮಾರ್ಮಾತನಾಡಿ, ಸ್ಮಾರ್ಟ್ ಸಿಟಿ ಯೋಜನೆಯಡಿ ಆಗಬೇಕಾಗಿದ್ದ ಯು.ಜಿ. ಕೇಬಲ್ ಕಾಮಗಾರಿ ಬಗ್ಗೆ ಕಳೆದ ನವೆಂಬರ್ನಲ್ಲೇ ಸಭೆ ಕರೆಯುವುದಾಗಿ ತಿಳಿಸಿದ್ದೀರಿ. ಆದರೆ ಈಗ ಏಪ್ರಿಲ್ ಕಳೆಯುತಾ ಬಂದರೂ ಸಭೆ ಕರೆಯಲಿಲ್ಲ. ಸಭೆ ಕರೆದರೂ ಅಧಿಕಾರಿಗಳು ಬರುತ್ತಿಲ್ಲ. ನಾವು ಕೊಟ್ಟ ಮನವಿಗೂ ಮೆಸ್ಕಾಂ ಕವಡೆಕಾಸಿನ ಕಿಮ್ಮತ್ತನ್ನು ಕೊಡುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಅಭಿವೃದ್ಧಿಪಡಿಸಿದ ಆರು ಲೇಔಟ್ಗಳಲ್ಲಿ ಯುಜಿ ಕೇಬಲ್ ಕಾಮಗಾರಿ ಬಾಕಿಯಿದೆ. ಭದ್ರಾವತಿಗೆ ಹೋಗುವ ಹೆದ್ದಾರಿಯಲ್ಲಿ ಕಳೆದ ಎರಡು ವರ್ಷಗಳ ಹಿಂದೆಯೇ ವಿದ್ಯುತ್ ದೀಪ ಅಳವಡಿಸಲು ಕೋರಲಾಗಿತ್ತು. ಆದರೆ ಕಾರ್ಯರೂಪಕ್ಕೆ ಬರಲಿಲ್ಲ. ಸುಬ್ಬಯ್ಯ ಆಸ್ಪತ್ರೆ ರಸ್ತೆಗೆ ದೀಪ ಹಾಕುತ್ತೀರಿ ಇಲ್ಲಿ ಏಕೆ ಹಾಕಲಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ನಗರದ ಕನ್ಸರ್ವೆನ್ಸಿಗಳನ್ನು ಪಾರ್ಕಿಂಗ್ ವ್ಯವಸ್ಥೆಗೆ ಉಪಯೋಗಿಸಿಕೊಳ್ಳಬೇಕು. ಶೌಚಾಲಯ ಉತ್ತಮಪಡಿಸಬೇಕು. ಶಿವಮೊಗ್ಗ ಖಾಸಗಿ ಮತ್ತು ಸಾರಿಗೆ ಬಸ್ ನಿಲ್ದಾಣಗಳಲ್ಲಿ ಉಚಿತ ಶೌಚಾಲಯದ ವ್ಯವಸ್ಥೆ ಜಾರಿಗೆ ಬರಬೇಕು. ಫುಟ್ಪಾತ್ ಕಿತ್ತು ಹೋಗುತ್ತಿವೆ. ಎಂಜಿನಿಯರ್ಗಳನ್ನು ಆ ಕಡೆ ತಲೆ ಹಾಕುತ್ತಿಲ್ಲ. ಸೂಡಾ ಕಛೇರಿಯ ಸಮೀಪವಿರುವ ಅನಧಿಕೃತ ಶೆಡ್ ಇನ್ನೂ ತೆರವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗೋಪಾಲಗೌಡ ಬಡಾವಣೆಯ 'ಸಿ'ಬ್ಲಾಕ್ನಲ್ಲಿ ಚರಂಡಿ ವ್ಯವಸ್ಥೆ ಸರಿಯಿಲ್ಲದ ಕಾರಣ, ಒಂದು ಮಳೆ ಬಂದರೆ ಮನೆಗಳಿಗೆ ನೀರು ನುಗ್ಗುತ್ತದೆ ಅದನ್ನು ಸರಿಪಡಿಸಬೇಕು. ಜೈಲ್ರಸ್ತೆ, ರಾಜಾ ಕಾಲುವೆಯಲ್ಲಿಯೂ ಸಮಸ್ಯೆಯಿದೆ. ಮೀನಾಕ್ಷಿ ಭವನದ ಎದುರು ಸರಕಾರಿ ಕಾಲೇಜು ಇರುವುದರಿಂದ ಆ ರಸ್ತೆಯ ಎರಡೂ ಕಡೆ ವಿದ್ಯಾರ್ಥಿಗಳ, ಸಾರ್ವಜನಿಕರ ಅನುಕೂಲಕ್ಕಾಗಿ ಫುಟ್ಪಾತ್ ಮಾಡಬೇಕು. ಎಂಆರ್ಎಸ್ ವೃತ್ತದಲ್ಲಿ ಶೆಲ್ಟರ್ನಿರ್ಮಾಣ ಮಾಡಬೇಕು. ನಿಮ್ಮ ಅವಧಿಯಲ್ಲಾದರೂ ನಗರದಲ್ಲಿ ಮೂಲಸೌಲಭ್ಯ ಅಭಿವೃದ್ಧಿಪಡಿಸಲು ಒಂದು ಮಾಸ್ಟರ್ಪ್ಲಾನ್ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ನಾಗರಿಕ ಹಿತರಕ್ಷಣಾ ವೇದಿಕೆ ಒಕ್ಕೂಟದ ಅಧ್ಯಕ್ಷ ಗೋಪಾಲ್, ನಾಗರಾಜ್ ಶೆಟ್ಟರ್,ರಘುಪತಿ, ಸೋಮಶೇಖರ್,ಜನಮೇಜಿರಾವ್ ಮೆಸ್ಕಾಂ ಎಇಇ ಸುರೇಶ್ ಇದ್ದರು.

ಶಾಸಕ ಎಸ್.ಎನ್. ಚನ್ನಬಸಪ್ಪ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ಕಲುಷಿತ ನೀರು ಸರಬರಾಜು

ಮೊನ್ನೆ ಸುರಿ ಭಾರೀ ಮಳೆಗೆ ಪಾಲಿಕೆ ಕುಡಿಯುವ ನೀರು ಸರಬರಾಜು ಇಲಾಖೆಯಿಂದ ಕಲುಷಿತ ನೀರು ಸರಬರಾಜು ಆಗಿದ್ದು ನಿಜ. ನಮ್ಮ ಸಿಬ್ಬಂದಿ ಮಳೆ ಸುರಿಯುತ್ತಿರುವ ಸಂದರ್ಭದಲ್ಲಿ ನದಿ ನೀರಿನ ಪಂಪ್ಸೆಟ್ ಚಾಲನೆ ಮಾಡಿದ್ದೇ ಇದಕ್ಕೆ ಕಾರಣ. ಹೊಸ ಪಂಪ್ಹೌಸ್ ನಿರ್ಮಾಣಕ್ಕೆ ಪ್ರಸ್ತಾವನೆ ಮಾಡುತ್ತಿದ್ದೇವೆ ಎಂದು ತಮ್ಮಿಂದಾದ ತಪ್ಪನ್ನು ಇಲಾಖೆಯ ಎಇಇ ಜೀವನ್ ಒಪ್ಪಿಕೊಂಡರು.

ಅಧಿಕಾರಿಗಳಿಗೆ ಶಾಸಕರ ಕ್ಲಾಸ್

ನಾಗರಿಕ ಹಿತರಕ್ಷಣಾ ವೇದಿಕೆಗಳ ಒಕ್ಕೂಟ ಕೇಳಿದ ಮಾಹಿತಿಗೆ ಉತ್ತರ ಕೊಡುವ ಜ್ಞಾನ ಬೇಕು ತಾನೆ. ಇವರೇನು ದಿಲ್ಲಿಯಲ್ಲಿದ್ದಾರಾ ? ಪಾಲಿಕೆಯವರಿಗೆ ಪುರುಸೊತ್ತಿಲ್ಲ. ನಿಮಗೂ ಪುರುಸೊತ್ತಿಲ್ವೆ ? ನಿಮಗೆ ಜವಾಬ್ದಾರಿ ಇಲ್ವಾ ? 11 ಗಂಟೆಗೆ ಸಭೆ ಕರೆದಿದ್ದೆ ನೀವು ನೋಡಿದರೆ 12 ಗಂಟೆಗೆ ಬಂದಿದ್ದೀರಲ್ಲಾ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಮೆಸ್ಕಾಂ ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು.

ಪುರಾಣವನ್ನ ಜನ ಮಾನಸಕ್ಕೆ ಮುಟ್ಟಿಸಿದ್ದು ಗಮಕ ಕಲೆ

ಸಾಗರ: ನಮ್ಮ ಪುರಾಣ ಕಥಾ ಹಂದರವನ್ನು ಜನ ಮಾನಸಕ್ಕೆ ಬಿತ್ತುವಲ್ಲಿ ಗಮಕ ಕಲೆ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ ಎಂದು ಕುಮಾರವ್ಯಾಸ ಪ್ರಶಸ್ತಿ ಪುರಸ್ಕೃತ ಗಮಕ ವ್ಯಾಖ್ಯಾನಕಾರರಾದ ರಾಜಾರಾ ಮಮೂರ್ತಿ ತಿಳಿಸಿದರು.

ತಾಲೂಕಿನ ವರದಹಳ್ಳಿಯಲ್ಲಿ ಮಲೆನಾಡು ಗಮಕ ಕಲಾ ಸಂಘ ಮತ್ತು ಶ್ರೀಧರ ಸೇವಾ ಮಹಾಮಂಡಲದ ವತಿಯಿಂದ ಆಯೋಜಿಸಿದ್ದ ಸಾಗರ ಪ್ರಾಂತ್ಯ ಪ್ರಥಮ ಗಮಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಕಾವ್ಯಗಳು ಜನರ ಬಳಿಗೆ ತಲುಪುವಲ್ಲಿ, ಪುರಾಣ ಪಾತ್ರಗಳ ಬಗ್ಗೆ ಜನರು ಅರ್ಥೈಸಿಕೊಳ್ಳುವಲ್ಲಿ ಗಮಕದ ಪಾತ್ರ ಅತ್ಯಮೂಲ್ಯವಾಗಿದೆ ಎಂದರು.

ಪುರಾಣ ಕಾಲದಿಂದ ಗಮಕ ಕಲೆಯ ಪ್ರಾಮುಖ್ಯತೆಯನ್ನು ನಾವು ಗಮನಿಸಬಹುದು. ರಾಮಾಯಣದಲ್ಲಿ ಲವಕುಶರನ್ನು ಆದಿಕವಿ ವಾಲ್ಮೀಕಿ ಗಮಕಿಗಳು ಎಂದು ಚಿತ್ರಿಸಿದ್ದಾರೆ. ಬದಲಾದ ದಿನಮಾನಗಳಲ್ಲಿ ಗಮಕ ಕಲೆ ಹೆಚ್ಚು ಪ್ರಸಿದ್ಧಿಗೆ ಬರುತ್ತಿದೆ. ಹೊಸ ತಲೆಮಾರು ಗಮಕವನ್ನು ಬೆಳೆಸುವ ಕೆಲಸ ಮಾಡಬೇಕು. ಇಂತಹ ಸಮ್ಮೇಳನಗಳು ಗಮಕ ಕಲೆ ವಿಸ್ತರಿಸಲು ಸಹಕಾರಿಯಾಗಿದೆ. ಗಮಕ ಕಲೆಗೆ ಕೊಡುಗೆ ನೀಡಿದ ಎಂ.ಆರ್. ಲಕ್ಷ್ಮಿನಾರಾಯಣ ಅವರ ಸಮ್ಮೇಳನಾಧ್ಯಕ್ಷತೆಯಲ್ಲಿ ಪ್ರಥಮ ಗಮಕ ಸಮ್ಮೇಳನ ನಡೆಯುತ್ತಿರುವುದು ಸಂತೋಷ ತಂದಿದೆ ಎಂದು ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷ ಎಂ.ಆರ್. ಲಕ್ಷ್ಮಿನಾರಾಯಣ ಅಮಚಿ ಮಾತನಾಡಿ, ಗಮಕ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಎಲ್ಲರ ಪಾತ್ರವೂ ಅಗತ್ಯ. ಇಂತಹ ಸಮ್ಮೇಳನಗಳು ಗಮಕ ಕುರಿತು ಹೊಸ ವಿಷಯಗಳನ್ನು ಜನರಿಗೆ ತಿಳಿಸಲು ಸಹಕಾರಿ ಎಂದು ತಿಳಿಸಿದರು.

ವೇದಿಕೆಯಲ್ಲಿ ಡಾ. ಎಚ್.ಎಸ್. ಮೋಹನ್, ಎಂ.ಜಿ.ಕೃಷ್ಣಮೂರ್ತಿ ಉಪಸ್ಥಿತರಿದ್ದರು. ಕೆ.ಎಂ.ರವೀಂದ್ರ ಸ್ವಾಗತಿಸಿದರು. ಪ್ರೊ. ಕೆ.ಆರ್.ಕೃಷ್ಣಯ್ಯ ಪ್ರಾಸ್ತಾವಿಕ ಮಾತನಾಡಿದರು. ಬಿ.ಟಿ.ಅರುಣ ವಂದಿಸಿದರು. ಬಿ.ಜಿ.ಮಂಜಪ್ಪ ನಿರೂಪಿಸಿದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಎಚ್.ಎಂ.ತಿಮ್ಮಪ್ಪ ಕಲಸಿ, ಎಸ್.ಕೆ.ಪ್ರಭಾವತಿ, ಗಾಯತ್ರಿ ನಂಜುಂಡ, ಎನ್.ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು.

ವರದಹಳ್ಳಿಯಲ್ಲಿ ಮಲೆನಾಡು ಗಮಕ ಕಲಾ ಸಂಘ ಮತ್ತು ಶ್ರೀಧರ ಸೇವಾ ಮಹಾಮಂಡಲದ ವತಿಯಿಂದ ನಡೆದ ಸಾಗರ ಪ್ರಾಂತ್ಯ ಪ್ರಥಮ ಗಮಕ ಸಮ್ಮೇಳನವನ್ನು ಗಮಕ ವ್ಯಾಖ್ಯಾನಕಾರರಾದ ರಾಜಾರಾಮಮೂರ್ತಿ ಉದ್ಘಾಟಿಸಿದರು.

ಹಬ್ಬ ಹರಿದಿನ ಸಾಮಾಜಿಕ ಸಾಮರಸ್ಯಕ್ಕೆ ಸಾಕ್ಷಿ

ಚಂದ್ರಗುತ್ತಿ: ಗ್ರಾಮೀಣ ಭಾಗಗಳಲ್ಲಿ ಜನರು ಜಾತಿ ಮತದ ಭೇದ ಮರೆತು ಒಗ್ಗಟ್ಟಿನಿಂದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿರುವುದು ಸಾಮಾಜಿಕ ಸಾಮರಸ್ಯಕ್ಕೆ ಸಾಕ್ಷಿ ಎಂದು ತಾಪಂ ಮಾಜಿ ಸದಸ್ಯರಾದ ಸುನೀಲ್ ಗೌಡ್ರು ಅಭಿಪ್ರಾಯಪಟ್ಟರು.

ಸಮೀಪದ ಮಾವಿನಬಳ್ಳಿಕೊಪ್ಪ ಗ್ರಾಮದ ಶ್ರೀ ಶನೈಶ್ವರ ದೇವಾಲಯದಲ್ಲಿ ಸತ್ಯನಾರಾಯಣ ವ್ರತ ಹಾಗೂ ಶನೈಶ್ವರ ಮತ್ತು ಶ್ರೀ ದುರ್ಗಮ್ಮ ದೇವಿಯ ವಾರ್ಷಿಕೋತ್ಸವದ 'ಶ್ರೀ ಶನೈಶ್ವರ ಮಹಾತ್ಮೆ' ಎಂಬ ಪೌರಾಣಿಕ ಬಯಲಾಟದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾವಿನಬಳ್ಳಿಕೊಪ್ಪ ಮತ್ತು ನೆರ್ಚಿ ಭಾಗದ ರೈತರು ಎದುರಿಸುತ್ತಿರುವ ಲೋ-ವೋಲ್ಟೇಜ್ ಸಮಸ್ಯೆ ಕುರಿತು ಮಾತನಾಡಿದರು. ಈ ಭಾಗದ ರೈತರು ವಿದ್ಯುತ್ ಕೊರತೆಯಿಂದ ಅನುಭವಿಸುತ್ತಿರುವ ಕಷ್ಟದ ಬಗ್ಗೆ ಈಗಾಗಲೇ ಮೆಸ್ಕಾಂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಮುಂದಿನ 15 ದಿನಗಳಲ್ಲಿ ಪ್ರತ್ಯೇಕ ಟಿಸಿ ಅಳವಡಿಸುವ ಮೂಲಕ ಈ ಸಮಸ್ಯೆಗೆ ಶಾಶ್ವತ ಮುಕ್ತಿ ನೀಡಲಾಗುವುದು ಎಂದು ಭರವಸೆ ನೀಡಿದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಅಭೂತಪೂರ್ವ ಶಿಕ್ಷಣ ಕ್ರಾಂತಿಯಾಗುತ್ತಿದೆ. ಶಾಲಾ ಆಸ್ತಿಗಳ ರಕ್ಷಣೆಗಾಗಿ ತಂದಿರುವ ಹೊಸ ಮಸೂದೆ ಹಾಗೂ ಪಿಯುಸಿ ಫಲಿತಾಂಶದಲ್ಲಿ ಆಗಿರುವ ಗಮನಾರ್ಹ ಸುಧಾರಣೆ ಶ್ಲಾಘನೀಯ ಎಂದರು.

ಅಧ್ಯಕ್ಷತೆ ಗ್ರಾಮದ ಅಣ್ಣಪ್ಪ ವಹಿಸಿದ್ದರು, ಉದ್ಘಾಟನೆಯನ್ನು ಗ್ರಾಮದ ಹಿರಿಯ ಈಶ್ವರಪ್ಪ ನೆರವೇರಿಸಿದರು. ಪ್ರಮುಖರಾದ ಶಿವಾನಂದ ತಬಲಿ, ಉಮಪತಿ ನಾಯ್ಕ, ಮಂಜುನಾಥ್ ನಾಯ್ಕ್, ರವಿಕುಮಾರ್,ಪರಮೇಶ್ವರ್,ಕರಿಯಪ್ಪ, ಅರುಣ್, ಮಂಜಪ್ಪ, ತೇಜಸ್ವರ್ನಾಯ್ಕ, ದಯಾನಂದ್ ನಾಯ್ಕ, ಮಧು, ಕುಮಾರ್, ರಾಘವೇಂದ್ರ, ರಾಜು ನಾಯ್ಕ ಉಪಸ್ಥಿತರಿದ್ದರು.

ಮಾವಿನಬಳ್ಳಿಕೊಪ್ಪ ಗ್ರಾಮದಲ್ಲಿ ನಡೆದ ಪೌರಾಣಿಕ ಬಯಲಾಟದ ಸಭಾ ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಸುನೀಲ್ ಗೌಡ ಮಾತನಾಡಿದರು.

ತಬಲಾ ಮಾಂತ್ರಿಕ ಸಹೋದರರಿಗೆ ಅಭಿನಂದನೆ

ಶಿವಮೊಗ್ಗ: ಅದ್ಭುತವಾದ ತಬಲಾ ಮಾಂತ್ರಿಕರಾದ ಈ ಇಬ್ಬರೂ ಸಹೋದರರು ಸರಳವಂತರು. ಇಂತಹ ಕಲಾವಿದರನ್ನು ನನ್ನ ಜೀವನದಲ್ಲೇ ನೋಡಿಲ್ಲ ಎಂದು ಖ್ಯಾತ ಜಾನಪದ ಗಾಯಕ ಯುವರಾಜ್ ಹೇಳಿದರು.

ಅವರು ನಗರದ ಕುವೆಂಪು ರಂಗಮಂದಿರದಲ್ಲಿ ಭಾನುವಾರ ಕಲಾ ಬಳಗದಿಂದ ಭಾವುಸಾರ ಕ್ಷತ್ರೀಯ ಮಹಾಜನ ಸಮಾಜದ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಕಾಯಕಯೋಗಿ ಪಂ.ಆರ್. ಹನುಮಂತರಾವ್ ರಂಗಧೋಳ್ ಹಾಗೂ ಪಂ.ಆರ್. ತುಕಾರಾಮ್ರಾವ್ ರಂಗಧೋಳ್ ಇವರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಇಬ್ಬರು ಸಹೋದರರು ಶಿವಮೊಗ್ಗದ ಸಂಗೀತದ ರಿದಂ ಆಗಿದ್ದಾರೆ. ಅನೇಕ ಕಲಾವಿದರಿಗೆ ಸಂಗೀತ ಜ್ಞಾನ ಧಾರೆ ಎರೆದ ನಿಜಸಂತರು. ಕಾಯಕದ ಮೇಲೆ ಪ್ರೀತಿ ಇದ್ದವರು. ಸಹಸ್ರಾರು ಯುವಕರಿಗೆ ಸಂಗೀತದ ತಪಸ್ಸನ್ನು ಧಾರೆ ಎರೆದವರು ರಂಗಧೋಳ್ ಸಹೋದರರು ಎಂದು ಅವರು ಹೇಳಿದರು. ಖ್ಯಾತ ಗಾಯಕ ಪುತ್ತೂರು ನರಸಿಂಹನಾಯಕ್ ಮಾತನಾಡಿ, ಗಾಯಕರಿಗೆ ಹೆಚ್ಚು ಮಾತನಾಡಲು ಬರುವುದಿಲ್ಲ. ಆದರೆ ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಈ ಇಬ್ಬರು ವ್ಯಕ್ತಿಗಳ ಬಗ್ಗೆ ಮಾತನಾಡಲೇಬೇಕು.ನಾಡಿನ ಸಂಗೀತ ದಿಗ್ಗಜರುಗಳಿಗೆ ತಬಲ ಸಾಥ್ ನೀಡಿದ ಕೀರ್ತಿ ಈ ಇಬ್ಬರು ಸಹೋದರರರದ್ದಾಗಿದೆ ಎಂದರು. ಸಮಾಜದ ಪ್ರಮುಖರಾದ ಶ್ರೀಧರ್ಮೂರ್ತಿನವುಲೆ ಮಾತನಾಡಿ, ಎಷ್ಟೊಂದು ಸಾಧನೆ ಮಾಡಿದ್ದರೂ ಅವರ ಸರಳತೆ ಮತ್ತು ಮಾರ್ಗದರ್ಶನ ನಮಗೆ ಪ್ರೇರಕಶಕ್ತಿಯಾಗಿದೆ ಎಂದರು. ಸಂಗಮೇಶ್ವರ್ಗವಾಯಿ ಅಧ್ಯಕ್ಷತೆವಹಿಸಿದ್ದರು. ಇಬ್ಬರು ದಿಗ್ಗಜರನ್ನು ಅಭಿನಂದಿಸಲಾಯಿತು. ಗಾಯಕ ಪುತ್ತೂರು ನರಸಿಂಹನಾಯಕ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.



ಶರಾವತಿ ಜಾಗೃತಿಗೆ ಬೈಕ್ ಜಾಥಾ ಏ.16ರಂದು

ಶಿವಮೊಗ್ಗ : ಶರಾವತಿ ಪಂಪ್ಡ್ ಯೋಜನೆ ವಿರುದ್ಧ ಏ.16ರಂದು ಸೈಕಲ್ ಹಾಗೂ ಬೈಕುಗಳ ಜಾಥಾವನ್ನು ರಾಷ್ಟ್ರಭಕ್ತ ಬಳಗ ಮತ್ತು ಪರಿಸರಕ್ಕಾಗಿ ನಾವು ಸಂಘಟನೆಗಳಿಂದ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಸಂಚಾಲಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಕೆ. ಎಸ್.ಈಶ್ವರಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಯೋಜನೆ ವಿರುದ್ಧ ಈಗಾಗಲೇ ಹಲವು ಹೋರಾಟಗಳನ್ನು ನಡೆಸಿದ್ದುಈಗ ನಗರದಲ್ಲಿ ಈ ಯೋಜನೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ವಾಹನ ಜಾಥಾವನ್ನು ಏರ್ಪಡಿಸಲಾಗಿದೆ ಎಂದರು.

ಈ ಜಾಥಾಕ್ಕೆ ಶಿವಮೊಗ್ಗ ನಗರದ ಅಣ್ಣಾ ಹಜಾರೆ ಹೋರಾಟ ಸಮಿತಿ, ಸೈಕಲ್ ಕ್ಲಬ್, ಸಾಹಸ ಮತ್ತು ಸಾಂಸ್ಕೃತಿಕ ಅಕಾಡೆಮಿ, ತರುಣೋದಯ ಘಟಕ, ಕರ್ನಾಟಕ ರಕ್ಷಣಾ ವೇದಿಕೆ ಸಿಂಹಸೇನೆ ಸೇರಿದಂತೆ ಹಲವಾರು ಸಂಘ-ಸಂಸ್ಥೆಗಳು ಪಾಲ್ಗೊಳ್ಳುತ್ತಿದ್ದು, ಅಂದು ಬೆಳಿಗ್ಗೆ 10 ಗಂಟೆಗೆ ಫ್ರೀಡಂ ಪಾರ್ಕಿನಲ್ಲಿ ಖ್ಯಾತ ವೈದ್ಯರಾದ ಡಾ. ಶಿವರಾಮಕೃಷ್ಣ, ಡಾ.ಪಿ.ನಾರಾಯಣ್ ಉದ್ಘಾಟಿಸಿ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು.

ಕೆಪಿಸಿಎಲ್ನವರು ಈ ಯೋಜನೆಗೆ ಯಾವುದೇ ಕಾಮಗಾರಿ ಕೈಗೊಳ್ಳದಂತೆ ಹೈಕೋರ್ಟ್ ಆದೇಶಿಸಿದೆ. ಈ ಯೋಜನೆ ಜಾರಿಗೆ ಸಚಿವರೊಬ್ಬರು ಆಸಕ್ತಿ ತೋರಿದ್ದು, ಹತ್ತು ಸಾವಿರ ಕೋಟಿ ರೂ. ವೆಚ್ಚದ ಈ ಯೋಜನೆಯ ಹಣವನ್ನು ಲೂಟಿ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಈ ಯೋಜನೆ ವಿರುದ್ಧ ಸಾಕಷ್ಟು ವಿರೋಧ ಮತ್ತು ಪ್ರತಿಭಟನೆಗಳು ನಡೆದಿದ್ದು, ಹಲವಾರು ಸಂಘ ಸಂಸ್ಥೆಗಳು, ಮಠಾಧೀಶರು, ಪರಿಸರ ಹೋರಾಟಗಾರರು, ನಿವೃತ್ತ ನ್ಯಾಯಾಧೀಶರು, ವಿಷಯ ತಜ್ಞರು ಯೋಜನೆಯಲ್ಲಿನ ಲೋಪದೋಷಗಳನ್ನು ಕೆಪಿಸಿಎಲ್ಗೆ ಮನವರಿಕೆ ಮಾಡಿಕೊಟ್ಟರೂ ಸಹ ಕೆಪಿಸಿಎಲ್ನವರು ಪರಿಸರಕ್ಕೆ ಮತ್ತು ಪಶ್ಚಿಮಘಟ್ಟಗಳಿಗೆ ಮಾರಕವಾಗಿರುವ ಹಾಗೂ ಯಾವುದೇ ಆರ್ಥಿಕ ಲಾಭವನ್ನು ತರದ ಯೋಜನೆಯನ್ನು ಜಾರಿಗೊಳಿಸಲು ಹೊರಟಿರುವುದು ಪ್ರಶ್ನಾರ್ಥಕವಾಗಿದೆ ಎಂದ ಅವರು, ಯಾವುದೇ ಕಾರಣಕ್ಕೂ ಈ ಯೋಜನೆ ಕೈ ಬಿಡುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದರು.

ನಗರದ ಎರಡು ಮಾರ್ಗದಲ್ಲಿ ಸಂಚರಿಸುವ ಜಾಥಾ ಮಹಾವೀರ ವೃತ್ತದಲ್ಲಿ ಸಂಪನ್ನಗೊಳ್ಳಲಿದ್ದು, ನಂತರ ಸಮಾರೋಪ ಹಾಗೂ ಬಹಿರಂಗ ಸಭೆ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಶ್ರೀಕಾಂತ್, ಡಾ.ಶೇಖರ್ಗೌಳೇರ್,ಜನಾರ್ಧನ್ ಪೈ, ಪರಿಸರ ರಮೇಶ್, ಎಸ್.ಬಿ. ಅಶೋಕ್ಗಾಂಧಿ, ಪರಿಸರ ಪ್ರಕಾಶ್, ಹರೀಶ್ ಕಾರ್ಣಿಕ್, ಎಸ್.ವಿಶ್ವೇಶ್ವರಯ್ಯ, ಸುಬ್ರಹ್ಮಣ್ಯ, ಮಹಾದೇವಸ್ವಾಮಿ ಉಪಸ್ಥಿತರಿದ್ದರು.

ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಇನ್ನು ಮುಂದೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಛಿದ್ರ

ಶಿವಮೊಗ್ಗ : ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿದ್ದರೂ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ದಾಹದಿಂದಾಗಿ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಯುತ್ತಿಲ್ಲ. ಇನ್ನೆರಡು ತಿಂಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಬದಲಾವಣೆಗಳಾಗಲಿವೆ ಎಂದು ರಾಷ್ಟ್ರಭಕ್ತ ಬಳಗದ ಸಂಚಾಲಕ, ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಸಮಸ್ಯೆಗಳಿದ್ದರೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅಧಿಕಾರ ಉಳಿಸಿಕೊಳ್ಳಲು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ಮುಖ್ಯಮಂತ್ರಿಯಾಗಲು ಹಾಗೂ ಹಲವಾರು ಶಾಸಕರು ಸಚಿವರಾಗಲು ಹಾತೊರೆಯುತ್ತಿದ್ದು, ಇನ್ನು ಮುಂದೆ ಕಾಂಗ್ರೆಸ್ ಪಕ್ಷ ಛಿದ್ರವಾಗಲಿದೆ ಎಂದರು.

ದಾವಣಗೆರೆ ಉಪಚುನಾವಣೆಯಿಂದ ಮುಸ್ಲಿಂ ನಾಯಕರಲ್ಲಿಯೇ ಕಚ್ಚಾಟವಾಗುತ್ತಿದೆ. ಮುಸ್ಲಿಂರ ಓಟಿಗಾಗಿ ಕಾಂಗ್ರೆಸ್ ಪಕ್ಷ ಇಲ್ಲಿಯವರೆಗೆ ನೆಚ್ಚಿಕೊಂಡಿದ್ದು, ಆದರೆ ಈಗ ಆ ಓಟು ಬ್ಯಾಂಕ್ ಎಲ್ಲಿ ಕೈ ಬಿಡುತ್ತದೋ ಎಂಬ ಬಗ್ಗೆ ಚಿಂತೆಯಾಗಿದೆ. ಅದು ನಿಂತರೆ ಕಾಂಗ್ರೆಸ್ ಪಕ್ಷವೇ ರಾಜ್ಯದಲ್ಲಿ ಮರೆಯಾಗುತ್ತದೆ ಎಂದು ಲೇವಡಿ ಮಾಡಿದರು.

ಕೇಂದ್ರದ ಶಿಕ್ಷಣ ನೀತಿ ಕ್ರಾಂತಿಕಾರಕ

ಹೊಸನಗರ: ಕೇಂದ್ರ ಸರಕಾರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿರುವುದು ಮುಂಬರುವ ದಿನಗಳಲ್ಲಿ ದೇಶದ ಶೈಕ್ಷಣಿಕ ಪ್ರಗತಿಯಲ್ಲಿ ಕ್ರಾಂತಿಕಾರಕ ಹೆಜ್ಜೆಯಾಗಿದೆ ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದರು.

ತಾಲೂಕಿನ ಮೇಲಿನಬೆಸಿಗೆಯ ಪಿಎಂಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೇಂದ್ರ ಸರಕಾರ ಶಾಲೆಗಳ ಪ್ರಗತಿಯಾಗಿ ಪಿಎಂಶ್ರೀ ಯೋಜನೆಯಡಿ ವಿಶೇಷ ಅನುದಾನ ನೀಡುತ್ತಿದೆ. ಈ ಯೋಜನೆಯ ಸದುಪಯೋಗ ಪಡಿಸಿಕೊಂಡಲ್ಲಿ ಶಾಲೆಗಳ ಉನ್ನತೀಕರಣ ಸಾಧ್ಯ. ಹಳೆ ವಿದ್ಯಾರ್ಥಿಗಳು, ಪೋಷಕರು ಸಹಕಾರದಿಂದ ಎಷ್ಟೋ ಸರಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಉತ್ತಮ ಸಾಧನೆ ಮಾಡಿರುವುದುಗಮನಾರ್ಹ. ಶಿಕ್ಷಣದಲ್ಲಿ ನೈತಿಕತೆಇಲ್ಲದಿದ್ದಲ್ಲಿಅಂತಹ ಶಿಕ್ಷಣ ಪಡೆಯುವುದು ವ್ಯರ್ಥಎಂದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಶಾಸಕ ಬೇಳೂರು ಗೋಪಾಲಕೃಷ್ಣ, ಶಾಲೆಗಳ ಅಭಿವೃದ್ಧಿಗೆ ಸಹಕಾರ ನೀಡಲು ತಾವು ಸದಾ ಸಿದ್ಧ. ಮಕ್ಕಳು ಶಿಕ್ಷಣ ವಂಚಿತರಾಗಬಾರದು. ಶಿಕ್ಷಣ ನೀಡುವ ಶಕ್ತಿ ಬೇರೆ ಯಾವ ಮಾರ್ಗದಿಂದಲೂ ಪಡೆಯಲು ಸಾಧ್ಯವಿಲ್ಲ ಎಂದರು.

ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಂಡಿ ಸೋಮಶೇಖರ್,ಗ್ರಾಮ ಪಂಚಾಯತಿ ಮಾಜಿ ಸದಸ್ಯರಾದಜ್ಯೋತಿ ನಾಗರಾಜ್, ಲಕ್ಷ್ಮಣಗೌಡ, ಶಾಂತ ಪಾಂಡು, ನಾಗರಾಜ್, ಪೂರ್ಣಿಮ ಸೋಮಶೇಖರ್,ಕ್ಷೇತ್ರ ಶಿಕ್ಷಣಾಧಿಕಾರಿ ವೈ. ಗಣೇಶ್ ಶಿಕ್ಷಣ ಸಂಯೋಜಕಕರಿಬಸಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಆರ್.ಸುರೇಶ್ ಶಾಲಾ ಸಮಿತಿ ಉಪಾಧ್ಯಕ್ಷೆ ನಾಗರತ್ನ,ಶಾಲಾ ಸಮಿತಿ ಅಧ್ಯಕ್ಷ ಬಿ.ಕೆ.ಸುರೇಶ್, ಮುಖ್ಯ ಶಿಕ್ಷಕ ಗುರುಮೂರ್ತಿ. ಧರ್ಮಪ ಉಪಸ್ಥಿತರಿದ್ದರು.

ಹೊಸನಗರ ತಾಲೂಕು ಮೇಲಿನಬೆಸಿಗೆ ಗ್ರಾಮದ ಪಿಎಂಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವದಲ್ಲಿ ಶಾಸಕ ಆರಗ ಜ್ಞಾನೇಂದ್ರ ಮಾತನಾಡಿದರು.

ಅಲ್ಪಸಂಖ್ಯಾತರ ವಾರ್ಡಿಗೆ ಸೌಲಭ್ಯ ಕಲ್ಪಿಸಲು ಆಗ್ರಹ

ಶಿವಮೊಗ್ಗ: ನಗರದ ಅಲ್ಪಸಂಖ್ಯಾತರ ವಾರ್ಡುಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದಿಂದ ಡಿಸಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು. ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳಲ್ಲಿ ಮೂಲ ಸೌಲಭ್ಯ ತೀವ್ರ ಕೊರತೆ ಉಂಟಾಗಿ, ಅನೇಕ ಸಮಸ್ಯೆ ಸಾರ್ವಜನಿಕರು ಎದುರಿಸುತ್ತಿದ್ದಾರೆ. ವಿಶೇಷವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ಸ್ವಚ್ಛತೆ, ದೀಪ ದೀಪಗಳು, ರಸ್ತೆ, ಯುಜಿಡಿ ವ್ಯವಸ್ಥೆ ಇಲ್ಲದೆ ಸಾರ್ವಜನಿಕರ ದೈನಂದಿನ ಜೀವನಕ್ಕೆ ತೊಂದರೆ ಉಂಟಾಗಿದೆ ಎಂದು ಮನವಿಯಲ್ಲಿ ದೂರಲಾಗಿದೆ. ಪಾಲಿಕೆಯ ನೀರು ಸರಬರಾಜು ಇಲಾಖೆಯಿಂದ ಕುಡಿಯುವ ನೀರು ಕಲುಷಿತವಾಗಿ ಸರಬರಾಜಾಗುತಿದ್ದು ಆದ್ದರಿಂದ ಈ ಸಮಸ್ಯೆ ಬಗ್ಗೆ ಕೂಡಲೇ ಗಮನ ಹರಿಸಿ, ಶುದ್ಧಕುಡಿಯುವ ನೀರನ್ನು ಪೂರೈಸಬೇಕೆಂದು ಆಗ್ರಹಿಸಲಾಯಿತು. ಚರಂಡಿಗಳ ಸ್ವಚ್ಛತೆ ಇಲ್ಲದ ಕಾರಣ ಸೊಳ್ಳೆ, ಕೀಟಗಳು ಹೆಚ್ಚಾಗುತ್ತಿದ್ದು ಚರಂಡಿ ನಿರ್ವಹಣೆ ಸರಿಯಾಗಿ ಮಾಡದಿದ್ದರೆ ಮಳೆಯ ನೀರು ಮನೆಯೊಳಗೆ ನುಗ್ಗುವ ಸಾಧ್ಯತೆಯಿದೆ. ಮೂಲ ಸೌಲಭ್ಯಗಳನ್ನು ಕೂಡಲೇ ಕಲ್ಪಿಸುವಂತೆ ಒತ್ತಾಯಿಸಲಾಗಿದೆ. ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷ ಸೈಯದ್ ವಾಹಿದ್ (ಅಡ್ಡು) ವಹಿಸಿದ್ದು, ಪ್ರಮುಖರಾದ ರಿಯಾಜ್ ಅಹ್ಮದ್, ಮಹಮ್ಮದ್ ಶಫಿ, ಮುನಾಫ್, ಸ್ಟೆಲ್ಲಾ ಮಾರ್ಟಿನ್, ಸಿಂಧ್ಯಾ ರಾಣಿ, ಜಾನ್ ಡಿಸೋಜಾ, ಸೈಯದ್ ಜಮೀನ್, ಜಕಾವುಲ್ಲಾ, ಸೈಯದ್ ಜುಬೇರ್,ಸೈಯದ್ ಮುಜೀಬ್ ಉಪಸ್ಥಿತರಿದ್ದರು.

ಮಲೆನಾಡಿನ ಜೀವನದ ತಲ್ಲಣ ವಿವರಿಸುವ ಪುಸ್ತಕ

ಉಂಬ್ಳೇಬೈಲು ಮೋಹನ್ ಕುರಿತ ಅಭಿನಂದನಾ ಗ್ರಂಥ ಸಾರ್ಥಕ ಬಿಡುಗಡೆ | ಪಿಜಿಆರ್ ಸಿಂಧ್ಯಾ

ಶಿವಮೊಗ್ಗ : ಸಹಕಾರಿ ಧುರೀಣ ಉಂಬ್ಳೇಬೈಲು ಮೋಹನ ಅವರ ಇಡೀ ಜೀವನವೇ ಜನಸಾಮಾನ್ಯರ ಜೊತೆ ಬೆರೆತಿದ್ದು, ಅವರ ಜೀವನದ ಬಗ್ಗೆ ಬರೆದ ಈ ಕೃತಿ ಹೆಸರಿಗೆ ತಕ್ಕಂತೆ 'ಸಾರ್ಥಕ'ವಾಗಿದ್ದು, ಅವರ ವ್ಯಕ್ತಿತ್ವವನ್ನು ಎತ್ತಿ ಹಿಡಿದಿದೆ ಎಂದು ಮಾಜಿ ಸಚಿವ ಡಾ.ಪಿ.ಜಿ.ಆರ್ . ಸಿಂಧ್ಯಾ ಹೇಳಿದ್ದಾರೆ.

ಅವರು ನಗರದ ಕುವೆಂಪು ರಂಗಮಂದಿರದಲ್ಲಿ ಉಂಬ್ಳೇಬೈಲು ಮೋಹನ್ರವರ ಅಭಿನಂದನಾ ಸಮಿತಿ ಮತ್ತು ಅಸ್ಮಿತೆ ಫೌಂಡೇಷನ್ ಕರ್ನಾಟಕ ವತಿಯಿಂದ ಡಾ.ಸಚಿನ್ ಬಿ.ಎಸ್. ಅವರ ಸಂಪಾದಕತ್ವದ ಉಂಬ್ಳೇಬೈಲು ಮೋಹವರ ''ಸಾರ್ಥಕ'' ಬದುಕಿನ ಪಯಣದ ಅಭಿನಂದನಾ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೆ.ಹೆಚ್.ಪಟೇಲ್, ಕಾಗೋಡು ತಿಮ್ಮಪ್ಪ, ಡಿ.ಬಿ. ಚಂದ್ರೇಗೌಡ, ಬಿ.ಎಲ್.ಶಂಕರ್,ಎಸ್.ಬಂಗಾರಪ್ಪ, ಅವರ ಜತೆ ಹತ್ತಿರದ ಒಡನಾಟ ಇದ್ದವರು. ಉಂಬ್ಳೇಬೈಲು ಮೋಹನ್. ಯುವ ಪೀಳಿಗೆ ಈ ಪುಸ್ತಕ ಓದಬೇಕು. ಈ ಪುಸ್ತಕದಲ್ಲಿ ಮಲೆನಾಡಿನ ವಿಶೇಷತೆ, ಮುಳುಗಡೆ ಪ್ರದೇಶದ ಕುಟುಂಬಗಳ ತಲ್ಲಣ , ಆ ಕಾಲಘಟ್ಟದಲ್ಲಿ ಪಟ್ಟ ಸಂಕಷ್ಟಗಳ ವಿವರಣೆ ಇದೆ. ಯೋಜನೆಗಳಿಂದ ಲಾಭವೂ ಆಗಿದೆ, ಸಾವಿರಾರು ಜನರಿಗೆ ನಷ್ಟವೂ ಆಗಿದೆ ಎಂದರು.

ತಾರುಣ್ಯದ ವಯಸ್ಸಿನಲ್ಲೇ ಪತ್ನಿಯನ್ನು ಕಳೆದುಕೊಂಡ ಮೋಹನ್ರವರ ಮಾನಸಿಕ ಸ್ಥಿತಿ ಸಾಮಾಜಿಕ ಕಳಕಳಿ, ಅವರ ಬದ್ಧತೆ, ಕ್ರಿಯಾಶೀಲತೆ ಅವರು ಗ್ರಾ.ಪಂ. ಅಧ್ಯಕ್ಷರಾಗಿ ವಿವಿಧ ಸಂಘ- ಸಂಸ್ಥೆ ಪದಾಧಿಕಾರಿಯಾಗಿ ಹಿರಿಯ ಸಹಕಾರಿಯಾಗಿ, ಅವರು ಮಾಡಿದ ಕಾರ್ಯಗಳ ಬಗ್ಗೆ ವಿವರಣೆ ಇದೆ. ಇಂತಹ ಸುಸಂಸ್ಕೃತ ವ್ಯಕ್ತಿಗಳನ್ನು ಗುರುತಿಸಿ ಅಭಿನಂದಿಸುವುದು ಒಂದು ಗೌರವಪೂರ್ಣ ಕೆಲಸ ಎಂದರು.

ಅಭಿನಂದನಾ ಗ್ರಂಥ ''ಸಾರ್ಥಕ'' ಬಿಡುಗಡೆಗೊಳಿಸಿದ ಮಾಜಿ ಸಭಾಪತಿ ಬಿ.ಎಲ್. ಶಂಕರ್ಮಾತನಾಡಿ, ನನಗೆ ಇಂದು ಎನ್ಆರ್ಪುರದಲ್ಲಿ ಸಿಎಂ ಕಾರ್ಯಕ್ರಮವಿತ್ತು. ಆದರೆ ಅಧಿಕಾರ ಇದ್ದಾಗ ಸಿಎಂ ಜೊತೆಗೆ ಬಹಳ ಜನ ಇರುತ್ತಾರೆ. ಅದಕ್ಕಿಂತ ಅಧಿಕಾರ ಇಲ್ಲದ ಗೆಳೆಯನ ಕುರಿತು ಗ್ರಂಥ ಬಿಡುಗಡೆಯೇ ಶ್ರೇಷ್ಠ ಎಂದು ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಇಲ್ಲಿ ನೆರೆದ ಮಾಜಿ ರಾಜಕಾರಣಿಗಳು, ನಾಯಕರು, ಮೋಹನ್ ಅವರ ಬಗ್ಗೆ ಅವರಿಗೆ ಇರುವ ಪ್ರೀತಿಯೇ ಸಾಕ್ಷಿಯಾಗಿದೆ. ಸಾರ್ಥಕ ಜೀವನ ನಡೆಸಿದ ಆತ್ಮತೃಪ್ತಿ ಅವರಿಗಿದೆ. ಪರಿಸ್ಥಿತಿಯ ಪಿತೂರಿಗೆ ಬಲಿಯಾದ ಪಿಜಿಆರ್ಸಿಂಧ್ಯಾ, ನಾನು, ಕೆ.ಎಸ್. ಈಶ್ವರಪ್ಪ ಸೇರಿದಂತೆ ಅನೇಕರಿದ್ದಾರೆ. ಕೆಲವರ ನಿರ್ಧಾರಗಳಿಂದ ಸಭ್ಯರು ಅಸಭ್ಯರಿಂದ ಆಳಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ ಎಂದು ನೂರಾರು ವರ್ಷ ಹಿಂದೆಯೇ ಪ್ಲೇಟೋ ಹೇಳಿದ್ದರು. ಅದು ಈಗ ನಿಜವಾಗುತ್ತಿದೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ಒಬ್ಬ ಹಿರಿಯ ಸಹಕಾರಿ ಧುರೀಣರಾಗಿ ಸಾಧನೆಯ ಸಾರ್ಥಕತೆಯ ಜೀವನ ನಡೆಸಿ ಸರಳತೆಯ ಪ್ರತೀಕವಾಗಿ ಸರ್ವಪಕ್ಷಗಳಲ್ಲೂ ಅಭಿಮಾನಿಗಳನ್ನು ಹೊಂದಿದ ಬದ್ಧತೆಯಿಂದ ಸ್ಥಳೀಯ ಮಟ್ಟದಲ್ಲಿ ಕೆಲಸ ಮಾಡಿದ ಮೋಹನ್ರವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಎಸ್. ಈಶ್ವರಪ್ಪ ವಹಿಸಿದ್ದರು. ಪುಸ್ತಕದ ಸಂಪಾದಕ ಡಾ.ಸಚಿನ್ ಬಿ.ಎಸ್. ಕೃತಿಯ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಉಂಬ್ಳೇಬೈಲು ಮೋಹನ್ರವರನ್ನು ಅಭಿನಂದಿಸಲಾಯಿತು.



ಉಂಬ್ಳೇಬೈಲು ಮೋಹನ್ ಅವರ ಅಭಿನಂದನಾ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಸಮಾಚಾರ ಸಣ್ಣದಲ್ಲ

ಸೌಮ್ಯ ಶೆಟ್ಟಿಗೆ 14 ದಿನ ನ್ಯಾಯಾಂಗ ಬಂಧನ

ಉಡುಪಿ : ಸುದೀಪ್ ಶೆಟ್ಟಿ ಆತ್ಮಹತ್ಯೆ ಸಂಬಂಧ ಬಂಧಿತಳಾಗಿರುವ ಆತನ ಪತ್ನಿ ಸೌಮ್ಯ ಶೆಟ್ಟಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಸುದೀಪ್ ಶೆಟ್ಟಿ ತಂದೆ ಕಾರ್ಕಳ ಪೊಲೀಸ್ ಠಾಣೆಗೆ ನೀಡಿರುವ ದೂರಿನ ಹಿನ್ನೆಲೆಯಲ್ಲಿ ಉಡುಪಿಯಲ್ಲಿ ಬಂಧಿತಳಾಗಿದ್ದ ಸೌಮ್ಯಳನ್ನು ಎ. 11ರಂದು ಕಾರ್ಕಳ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ. ಸೌಮ್ಯ ಶೆಟ್ಟಿಯನ್ನು ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ರವಾನಿಸಲಾಗಿದೆ.

ನಿತ್ಯಶ್ರೀ ಬಿ.ವಿ.ಗೆ ಪಿಎಚ್ .ಡಿ., ಪದವಿ

ಮಂಗಳೂರು : ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ಯೆನೆಪೋಯ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ನಿತ್ಯಶ್ರೀ ಬಿ.ವಿ. ಇವರು ' ಮಂಗಳೂರಿನ ಆಯ್ದ ಶಾಲೆಗಳ ಹದಿಹರೆಯದ ಬಾಲಕಿಯರಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಉದ್ದೇಶದಿಂದ ಅರಿವು, ದೃಢವಾದ ನಡವಳಿಕೆ ಮತ್ತು ಸ್ವಾಭಿಮಾನವನ್ನು ಹೆಚ್ಚಿಸುವ ಸಾಮರ್ಥ್ಯವರ್ಧನಾ ಕಾರ್ಯಕ್ರಮದ ಪರಿಣಾಮಕಾರಿತ್ವ' ಕುರಿತು ನಡೆಸಿದ ಸಂಶೋಧನಾ ಪ್ರಬಂಧಕ್ಕೆ ಯೆನೆಪೋಯ ಪರಿಗಣಿತ ವಿ.ವಿ. ಪಿಎಚ್ ಡಿ ಪದವಿ ನೀಡಿದೆ. ಯೆನೆಪೋಯ ನರ್ಸಿಂಗ್ ಕಾಲೇಜಿನ ಡೀನ್ ಡಾ. ಲೀನಾ ಕೆ.ಸಿ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಪೂರೈಸಿದ್ದರು. ಯೆನೆಪೋಯ ಪರಿಗಣಿತ ವಿ.ವಿ.ಯ ಯೂತ್ ರೆಡ್ಕ್ರಾಸ್ ನೋಡಲ್ ಅಧಿಕಾರಿ ನಿತ್ಯಶ್ರೀ ಬಿ.ವಿ. ಇವರು ಸುಳ್ಯದ ನಿವೃತ್ತ ಸರ್ವೆ ಮೇಲ್ವಿಚಾರಕ ವಿಠಲ ಬಿ.ಕೆ.– ರುಕ್ಮಿಣಿ ಬಿ.ವಿ. ದಂಪತಿ ಪುತ್ರಿ .ಗಣೇಶ್ ಮಾಣಿಬೆಟ್ಟು ಅವರ ಪತ್ನಿ ಆಗಿದ್ದಾರೆ.

ಡಿಜಿಟಲ್ ಜನಗಣತಿ: ಸ್ವಯಂ ನಮೂದಿಸಿ

ಮಂಗಳೂರು: ಭಾರತದ ಮೊದಲ ಡಿಜಿಟಲ್ ಜನಗಣತಿ ಕಾರ್ಯ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದು, ಸಾರ್ವಜನಿಕರು ಆನ್ಲೈನ್ ಮೂಲಕ ತಮ್ಮ ಮನೆಯ ವಿವರಗಳನ್ನು ಸ್ವಯಂ ದಾಖಲಿಸಲು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ. ಏಪ್ರಿಲ್ 15ರವರೆಗೆ ಸಾರ್ವಜನಿಕರಿಗೆ ಈ ಅವಕಾಶವಿದ್ದು, ವೆಬ್ಸೈಟ್ಗೆ ಭೇಟಿ ನೀಡಿ 15-20 ನಿಮಿಷಗಳಲ್ಲಿ ಮಾಹಿತಿ ಭರ್ತಿ ಮಾಡಬಹುದು. ವಿವರ ಸಲ್ಲಿಸಿದ ನಂತರ ದೊರೆಯುವ ''ಎಸ್ಇ ಐಡಿ'' (ಖಉ ಐಈ) ಅನ್ನು ಗಣತಿದಾರರು ಮನೆಗೆ ಭೇಟಿ ನೀಡಿದಾಗ ಒದಗಿಸಬೇಕು. ಜಿಲ್ಲೆಯಲ್ಲಿ ಇದುವರೆಗೆ 57,466 ಮನೆಗಳ ಸ್ವಯಂ ಗಣತಿ ಕಾರ್ಯ ಪೂರ್ಣಗೊಂಡಿದೆ. ನಾಗರಿಕರ ಮಾಹಿತಿಗಳನ್ನು ಗೌಪ್ಯವಾಗಿ ಇರಿಸಲಾಗುವುದು ಮತ್ತು ಇದನ್ನು ಯಾವುದೇ ತೆರಿಗೆ ಅಥವಾ ಪರಿಶೋಧನಾ ಉದ್ದೇಶಗಳಿಗೆ ಬಳಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಸಂತ್ರಸ್ತರಿಗೆ ಆರೋಗ್ಯ ತಪಾಸಣಾ ಶಿಬಿರ ನಾಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ವಿವಿಧೆಡೆ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ. ಖಾಸಗಿ ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ಈ ಶಿಬಿರಗಳು ನಡೆಯಲಿವೆ. ಎ. 15ರಂದು ಬೆಳ್ತಂಗಡಿಯ ಕೊಕ್ಕಡ, ಎ.18ರಂದು ಪುತ್ತೂರಿನ ಪಾಣಾಜೆಯಲ್ಲಿ ಶಿಬಿರ ನಡೆಯಲಿದೆ. ಎ.21ರಂದು ಬೆಳ್ತಂಗಡಿಯ ಕಣಿಯೂರು, ಪುತ್ತೂರಿನ ಕೊಯಿಲ, ಉಪ್ಪಿನಂಗಡಿ ಹಾಗೂ ಸುಳ್ಯದ ಬೆಳ್ಳಾರೆ ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳು ನಡೆಯಲಿವೆ. ಸಂತ್ರಸ್ತರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

'ತುಳು ಐಸಿರೊ-2026' ಅಂತರ ಕಾಲೇಜು ಸ್ಪರ್ಧೆ

ಮಂಗಳೂರು: ಇಂದಿನ ಸಾಮಾಜಿಕ ಮಾಧ್ಯಮ ಹಾಗೂ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ತುಳು ಭಾಷೆ ಮತ್ತು ಸಂಸ್ಕೃತಿಯನ್ನು ಯುವಜನತೆಗೆ ಪರಿಚಯಿಸುವ ಕಾರ್ಯಕ್ರಮಗಳು ಸಾಂಸ್ಕೃತಿಕ ಸಂರಕ್ಷಣೆಯ ದೃಷ್ಟಿಯಿಂದ ಅತ್ಯಂತ ಅಗತ್ಯ ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ವಿಶ್ವನಾಥ ಬದಿಕಾನ ಹೇಳಿದರು. ಇಲ್ಲಿನ ರಥಬೀದಿಯ ಡಾ. ಪಿ. ದಯಾನಂದ ಪೈ – ಪಿ. ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತುಳು ವಿಭಾಗ ಮತ್ತು ಸಾಂಸ್ಕೃತಿಕ ವೇದಿಕೆ ಆಯೋಜಿಸಲಾಗಿದ್ದ 'ತುಳು ಐಸಿರೊ-2026' ಅಂತರ ಕಾಲೇಜು ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

{ಬಿ.ಎಲ್.ಶಂಕರ್} ಮಾಜಿ ಸಭಾಪತಿ

ರಾಜಕೀಯ ಪರಿಸ್ಥಿತಿಯ ಪಿತೂರಿಗೆ ಬಲಿಯಾದ ಪಿಜಿಆರ್‌ಸಿಂಧ್ಯಾ, ನಾನು, ಕೆ.ಎಸ್. ಈಶ್ವರಪ್ಪ ಸೇರಿದಂತೆ ಅನೇಕರಿದ್ದಾರೆ. ಕೆಲವರ ನಿರ್ಧಾರಗಳಿಂದ ಸಭ್ಯರು ಅಸಭ್ಯರಿಂದ ಆಳಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ ಎಂದು ಪ್ಲೇಟೋ ಹೇಳಿದ್ದರು. ಅದು ಈಗ ನಿಜವಾಗುತ್ತಿದೆ.

'ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು' ಕುರಿತ ಕಾರ್ಯಾಗಾರ | ಹೈಕೋರ್ಟ್‌ನ ನ್ಯಾಯಮೂರ್ತಿ ಸಂದೇಶ್

ಮೌಲ್ಯ ಉಳಿಸುವ ವಕೀಲ ವೃತ್ತಿಗೆ ಅಗ್ರಸ್ಥಾನ

ವಿಶ್ವವಾಣಿ ಸುದ್ದಮನೆ ಮೂಡುಬಿದಿರೆ:

ಸಮಾಜದಲ್ಲಿ ನ್ಯಾಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಈ ಕರ್ತವ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ನೆರವೇರಿಸಲು ಸಾಧ್ಯವಾಗುವ ವೃತ್ತಿಗಳಲ್ಲಿ ವಕೀಲ ವೃತ್ತಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ವಕೀಲರು ಕೇವಲ ನ್ಯಾಯಾಲಯಗಳಲ್ಲಿ ವಾದ ಮಂಡಿಸುವವರಷ್ಟೇ ಅಲ್ಲ. ಅವರು ಸಮಾಜದ ನ್ಯಾಯದ ಕಾವಲುಗಾರರು, ಹಕ್ಕುಗಳ ರಕ್ಷಕರು ಮತ್ತು ಜನ ಸೇವೆಯ ನಿಜವಾದ ಪ್ರತಿನಿಧಿಗಳು ಎಂದು ಹೈಕೋರ್ಟಿನ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ನುಡಿದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ಕಾನೂನು ವಿದ್ಯಾರ್ಥಿಗಳನ್ನು ಸಾಮಾಜಿಕ ನ್ಯಾಯದ ಪರಿವರ್ತನೆಗೆ ಪ್ರೇರಕ ಶಕ್ತಿಯಾಗಿಸುವ ಉದ್ದೇಶದಿಂದ 'ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು'' ಎಂಬ ವಿಷಯದ ಮೇಲೆ ನಡೆದ ದ್ವಿತೀಯ ವಲಯ ಕಾರ್ಯಾಗಾರವನ್ನು ಆಳ್ವಾಸ್ನ ಕೃಷಿಸಿರಿ ವೇದಿಕೆಯಲ್ಲಿ ಉದ್ಘಾಟಿಸಿ ಮಾತನಾಡಿದರು.

ಕಾನೂನು ವಿದ್ಯಾರ್ಥಿಗಳು ಸಮಾಜದಲ್ಲಿ ನ್ಯಾಯ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಬೇಕು ಎಂದು ಕರೆ ನೀಡಿದ ಅವರು, ಜೀವನದಲ್ಲಿ ಯಶಸ್ಸು ಸಾಧಿಸಲು ಛಲ ಅತ್ಯಂತ ಮುಖ್ಯ. ಕೆಲವರು ಕಾನೂನು ಪದವಿಯನ್ನು ಸ್ವತಃ ಆಯ್ಕೆ ಮಾಡದೇ, ಸಂದರ್ಭದ ಪರಿಣಾಮವಾಗಿ ಪ್ರವೇಶಾತಿ ಪಡೆದಿರಬಹುದು. ಚಾನ್ಸ್ನಿಂದ ಬಂದ ಲಾ ಕೋರ್ಸ್‌ನ್ನು ಚಾಯ್ಸ್ ಆಗಿ ರೂಪಿಸಿಕೊಂಡು, ಅದನ್ನು ಜನಸೇವೆಯ ಮಾರ್ಗವನ್ನಾಗಿ ಮಾಡಿದರೆ, ನಮ್ಮ ಜೀವನಕ್ಕೂ ಸಮಾಜಕ್ಕೂ ಅರ್ಥಪೂರ್ಣವಾದ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಶಿಸ್ತು, ಶ್ರಮ, ಸಮಯಪ್ರಜ್ಞೆ, ಆತ್ಮವಿಶ್ವಾಸ ಮತ್ತು ನಿರ್ಭಯತೆ ಎಂಬ ಐದು ಮಹತ್ವದ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರಾಮಾಣಿಕತೆ ಇದ್ದಲ್ಲಿ ಧೈರ್ಯ ಸಹಜವಾಗಿ ಮೂಡುತ್ತದೆ.

ದೇಶವನ್ನು ಕಾಡುತ್ತಿರುವ ಜಾತಿ ವ್ಯವಸ್ಥೆ, ಅಪರಾಧ ಹಾಗೂ ಭ್ರಷ್ಟಾಚಾರವನ್ನು ನಿವಾರಿಸಲು ಕಾನೂನು ವೃತ್ತಿಯವರು ಮಹತ್ವದ ಪಾತ್ರವಹಿಸಬೇಕು. ನ್ಯಾಯದ ಮಾರ್ಗದಲ್ಲಿ ನಿಷ್ಠೆಯಿಂದ ನಡೆಯುವುದು ಪ್ರತಿಯೊಬ್ಬ ವಕೀಲನ ಧರ್ಮ. ಜನರ ನೋವನ್ನು ಅರ್ಥಮಾಡಿಕೊಂಡಾಗ ಮಾತ್ರ ಬ್ಲಾಕ್ ಕೋಟ್ ಧರಿಸಿರುವುದಕ್ಕೆ ಸಾರ್ಥಕತೆ ಲಭಿಸುತ್ತದೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಜಯಕರ ಶೆಟ್ಟಿ ಎಂ ಮಾತನಾಡಿ, ''ಕಾನೂನು ವೃತ್ತಿ ಒಂದು ಮಹತ್ವದ ಮತ್ತು ಗೌರವಾನ್ವಿತ ಸೇವಾ ಕ್ಷೇತ್ರವಾಗಿದೆ. ಇಂದಿನ ದಿನಗಳಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅಭ್ಯಾಸ ಮಾಡಿದವರೂ ಸಹ ಕಾನೂನು ಶಿಕ್ಷಣದತ್ತ ಮುಖ ಮಾಡುತ್ತಿದ್ದಾರೆ. ಬದುಕನ್ನು ಸಮರ್ಪಕವಾಗಿ ಸಾಗಿಸಲು ಕಾನೂನಿನ ಜ್ಞಾನ ಅತ್ಯಂತ ಅಗತ್ಯ. ಕಾನೂನು ಓದುವುದನ್ನು ಕೇವಲ ವೃತ್ತಿಯಾಗಿ ಪರಿಗಣಿಸದೆ, ಜೀವನಜ್ಞಾನದ ಭಾಗವಾಗಿ ಸ್ವೀಕರಿಸಬೇಕು ಎಂದು ಹೇಳಿದರು.

ಇನ್ನೂ, ''ಕೆಲವರಿಗೆ ಕಾನೂನು ಪದವಿ ಸ್ವಯಂ ಆಯ್ಕೆಯಾಗಿರದೇ, ಸಂದರ್ಭದ ಪರಿಣಾಮವಾಗಿ ಬಂದಿರಬಹುದು. ಆದರೆ ಆ ಮನೋಭಾವವನ್ನು ಬದಲಾಯಿಸಬೇಕು. ಏಕೆಂದರೆ ಕಾನೂನು ಕ್ಷೇತ್ರವು ಜನಸೇವೆಗೆ ಅತ್ಯುತ್ತಮ ವೇದಿಕೆ. ಸಮಾಜದಲ್ಲಿ ನೊಂದವರಿಗೆ ಧ್ವನಿಯಾಗಲು, ಅನ್ಯಾಯಕ್ಕೊಳಗಾದವರ ಪರವಾಗಿ ನಿಲ್ಲಲು ಈ ಕ್ಷೇತ್ರವು ಅಪಾರ ಅವಕಾಶಗಳನ್ನು ಒದಗಿಸುತ್ತದೆ ಎಂದರು.

ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಸಿ. ಬಸವರಾಜು, ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಮಧುಕರ್‌ಪಿ. ಭಾಗವತ್, ಪ್ರಾಚಾರ್ಯ ಡಾ ಮಹಾಂತೇಶ್‌ಉ ಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಸವರಾಜ್ ಸ್ವಾಗತಿಸಿ, ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನಿಸಾ ವಂದಿಸಿ, ಸದಸ್ಯ ಕಾರ್ಯದರ್ಶಿ,ಎಚ್. ಶಶಿಧರ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪನ್ಯಾಸಕ ವೇಣುಗೋಪಾಲ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕರ್ನಾಟಕದ ವಿವಿಧ ಕಾನೂನು ಕಾಲೇಜುಗಳಿಂದ 700ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆಳ್ವಾಸ್ನ ಕೃಷಿಸಿರಿ ವೇದಿಕೆಯಲ್ಲಿ 'ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ' ಕುರಿತ ಕಾರ್ಯಾಗಾರ ವನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್. ಪಿ. ಸಂದೇಶ್‌ಉದ್ಘಾಟಿಸಿದರು.

ಕಾನೂನು ವಿದ್ಯಾರ್ಥಿಗಳಿಗೆ ಕೇವಲ ಪಠ್ಯ ಜ್ಞಾನವಷ್ಟೇ ಸಾಲದು

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಮಾತನಾಡಿ, ಕಾನೂನು ಕ್ಷೇತ್ರದ ವಿದ್ಯಾರ್ಥಿಗಳು ಕೇವಲ ಪಾಠ್ಯ ಜ್ಞಾನವಷ್ಟೇ ಅಲ್ಲದೆ, ಇತಿಹಾಸದ ಅರಿವು, ವಿಮರ್ಶಾತ್ಮಕ ಚಿಂತನೆ ಬೆಳೆಸಿಕೊಳ್ಳಬೇಕು. ಕಾನೂನು ಯಾವ ಸಂದರ್ಭಗಳಲ್ಲಿ, ಯಾವ ಸವಾಲುಗಳ ನಡುವೆ ರೂಪುಗೊಂಡಿತು ಎಂಬ ಅರಿವು ನಿಮ್ಮಲ್ಲಿ ಇದ್ದಾಗ ಮಾತ್ರ ನೀವು ಸಮರ್ಥ ಕಾನೂನು ವೃತ್ತಿಪರರಾಗಲು ಸಾಧ್ಯ .ಕಾನೂನು ಇಲ್ಲದೆ ಸಮಾಜದ ವ್ಯವಸ್ಥಿತ ಬದುಕು ಸಾಧ್ಯವಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಜ್ಞಾನ ವಿಸ್ತರಿಸಿಕೊಂಡು, ಸಮಗ್ರ ದೃಷ್ಟಿಕೋನ ಬೆಳೆಸಿಕೊಳ್ಳುವುದು ಅಗತ್ಯ ಎಂದು ಸಲಹೆ ನೀಡಿದರು.

ಮಸ್ತಕಾಭಿಷೇಕ ಕಾರ್ಯಾಲಯ ಚಾಲನೆ ಎ.19ಕ್ಕೆ

ಉಡುಪಿ : ವಿಶ್ವವಿಖ್ಯಾತ ಕಾರ್ಕಳದ ಬಾಹುಬಲಿ ಸ್ವಾಮಿಯ 2027ರ ಮಹಾಮಸ್ತಕಾಭಿಷೇಕ ಮಹೋತ್ಸವದ ದಿನಾಂಕ ಘೋಷಣೆ ಮತ್ತು ಸಮಿತಿಯ ಕಾರ್ಯಾಲಯ ಉದ್ಘಾಟನಾ ಸಮಾರಂಭ ಎ. 19ರಂದು ಬೆ. 10.30ಕ್ಕೆ ಕಾರ್ಕಳದ ದಾನಶಾಲೆ ಭಗವಾನ್ ಬಾಹುಬಲಿ ಪ್ರವಚನ ಮಂದಿರದಲ್ಲಿ ನಡೆಯಲಿದೆ ಎಂದು ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷ ಡಾ. ಎಂ. ಎನ್. ರಾಜೇಂದ್ರ ಕುಮಾರ್‌ತಿಳಿಸಿದರು.

ಕಾರ್ಕಳದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾರ್ಕಳ ದಾನಶಾಲೆ ಶ್ರೀ ಜೈನ ಮಠದ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಪಾವನ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ. ಸಮಿತಿಯ ಅಧ್ಯಕ್ಷರು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಹೋತ್ಸವದ ದಿನಾಂಕವನ್ನು ಅಧಿಕೃತವಾಗಿ ಘೋಷಿಸಲಿದ್ದಾರೆ ಎಂದರು.

ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಅವರು ಸಮಿತಿಯ ಕಾರ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಯೋಜನೆ ಮತ್ತು ಸಾಂಖಿಕ ಇಲಾಖೆ ಸಚಿವ ಹಾಗೂ ಸಮಿತಿಯ ಗೌರವ ಸಂರಕ್ಷಕ ಡಿ. ಸುಧಾಕರ್‌ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಡಾ. ಎಂ. ಎನ್. ರಾಜೇಂದ್ರ ಕುಮಾರ್‌ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ವಿ. ಸುನಿಲ್ ಕುಮಾರ್,ಅದಾನಿ ಗ್ರೂಪ್ ಕರ್ನಾಟಕದ ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್‌ಆಳ್ವ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಹಾಗೂ ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಉದಯ ಕುಮಾರ್‌ಶೆಟ್ಟಿ ಮುನಿಯಾಲು ಭಾಗವಹಿಸಲಿದ್ದಾರೆ.

ಅನುದಾನ: ಮಹೋತ್ಸವಕ್ಕಾಗಿ ಒಟ್ಟು ರೂ. 82,37,52,000 ವೆಚ್ಚದ ಅಂದಾಜು ಪಟ್ಟಿ ಸಲ್ಲಿಸಲಾಗಿದೆ. ಈಗಾಗಲೇ ಸರಕಾರ ಮೊದಲ ಕಂತಾಗಿ 1,19,25,000 ರು. ಬಿಡುಗಡೆಗೊಳಿಸಿದ್ದು, ಇದರಿಂದ ಅಟ್ಟಳಿಗೆ ನಿರ್ಮಾಣ, ತ್ಯಾಗಿ ಭವನ, ಮಾತಾಜಿ ಭವನ ಹಾಗೂ ಸಭಾಂಗಣ ನವೀಕರಣ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ರಾಜೇಂದ್ರ ಕುಮಾರ್‌ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಸಮಿತಿ ಕಾರ್ಯದರ್ಶಿ ಪುಷ್ಪರಾಜ್ ಜೈನ್, ಕೋಶಾಧಿಕಾರಿ ಎ. ಮೋಹನ್ ಪಡಿವಾಳ್, ಸಮಿತಿಯ ಪ್ರಮುಖರಾದ ಪ್ರಭಾತ್ ಕುಮಾರ್,ಅನಂತರಾಜ ಪೂವಣಿ, ಸಂಪತ್ ಸಾಮ್ರಾಜ್ಯ, ಸುಧೀರ್‌ಪಡಿವಾಳ್, ಕೆ. ಜಯಕೀರ್ತಿ ಕಡಂಬ, ಹೇಮಚಂದ್ರ ಜೈನ್, ಸುನಿಲ್ ಕುಮಾರ್‌ಬಜಗೋಳಿ, ಮಹಾವೀರ ಹೆಗ್ಡೆ, ಭರತ್ ಕುಮಾರ್‌ಜೈನ್, ಶೀತಲ್ ಜೈನ್, ಸುಭಾಷ್ಚಂದ್ರ, ಚೌಟ, ಶಾಂತಿರಾಜ ಜೈನ್, ಮಹೇಂದ್ರ ವರ್ಮ ಜೈನ್, ಶಿಶುಪಾಲ ಜೈನ್ ಉಪಸ್ಥಿತರಿದ್ದರು.

ಕಾರ್ಕಳದಲ್ಲಿ ಸುದ್ದಿಗೋಷ್ಠಿ ನಡೆಸಿ ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷ ಡಾ. ಎಂ. ಎನ್. ರಾಜೇಂದ್ರ ಕುಮಾರ್‌ಮಾತನಾಡಿದರು.

ಬಾವಿಗೆ ಬಿದ್ದ ಕಾಡಾನೆ, ಇಲಾಖೆಯಿಂದ ರಕ್ಷಣೆ

ಸುಳ್ಯ : ಸುಳ್ಯ ಸಮೀಪ ಪೆರಾಜೆ ಬಳಿ ಕಲ್ಚರ್ಪೆಯಲ್ಲಿ ಬಾವಿಗೆ ಬಿದ್ದ ಕಾಡಾನೆಯನ್ನು ಅರಣ್ಯ ಇಲಾಖೆಯು ಕಾರ್ಯಾಚರಣೆಯ ಮೂಲಕ ರಕ್ಷಣೆ ಮಾಡಲಾಗಿದೆ. ಅಂದಾಜು 20 ವರ್ಷ ಪ್ರಾಯದ ಗಂಡಾನೆಯೊಂದು ಪೆರಾಜೆ ಸಮೀಪ ಕಲ್ಚರ್ಪೆಯಲ್ಲಿ ಬಾವಿಗೆ ಭಾನುವಾರ ರಾತ್ರಿ 11.30ರ ವೇಳೆಗೆ ಬಾವಿಗೆ ಬಿದ್ದಿದೆ.

ಕಾಡಿನಿಂದ ನಾಡಿಗೆ ಬಂದ ಆನೆ ಅರಣ್ಯದಂಚಿನ ತೋಟದ ಬದಿಯಲ್ಲಿಯ ಪಾಳು ಬಿದ್ದ ಬಾವಿಗೆ ಆಯ ತಪ್ಪಿ ಬಿದ್ದಿದೆ. ವಿಷಯ ತಿಳಿದ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಸೋಮವಾರ ಬೆಳಗ್ಗಿನಿಂದ ಆನೆಯ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು.

ಸುಮಾರು 5-6 ಗಂಟೆಯ ಕಾರ್ಯಾಚರಣೆಯ ಬಳಿಕ ಆನೆಯನ್ನು ರಕ್ಷಣೆ ಮಾಡಿ ಕಾಡಿಗೆ ಅಟ್ಟಲಾಗಿದೆ. ಬಾವಿಯ ಒಂದು ಬದಿಯಿಂದ ಹಿಟಾಚಿ ಬಳಸಿ ಆಳ ಮಾಡಿ ದಾರಿ ಮಾಡಿ ಕೊಡಲಾಯಿತು. ಆನೆಯು ಆ ದಾರಿಯ ಮೂಲಕ ಮೇಲಕ್ಕೆ ಬಂತು. ಘೀಳಿಡುತ್ತಾ ಮೇಲೆ ಬಂದ ಸಲಗ ಕೆಳಕ್ಕೆ ಓಡಿತು. ಆನೆಯು ತೋಟದ ಕೆಳ ಭಾಗಕ್ಕೆ ಓಡಿದ್ದು ಕೆಲ ಕಾಲ ಆತಂಕ ಸೃಷ್ಟಿಸಿತು. ಬಾವಿಯಿಂದ ಮೇಲೆ ಬಂದಾಗ ಎದುರಿಗಿದ್ದ ಹಿಟಾಚಿಗೆ ಹಾದುಕೊಂಡು ಕೆಳ ಭಾಗಕ್ಕೆ ನುಗ್ಗಿತು. ಅರಣ್ಯ ಇಲಾಖೆಯ ಸಿಬ್ಬಂದಿ ಪಟಾಕಿ ಸಿಡಿಸಿ ಆನೆಯನ್ನು ದೂರಕ್ಕೆ ಸರಿಸಿತು. ಕೆಳ ಭಾಗಕ್ಕೆ ಓಡಿದ ಆನೆ ಸುತ್ತಾಡಿ ಬಳಿಕ ಹಿಂತಿರುಗಿ ಬಂದು ಪೂಮಲೆ ಕಾಡಿನತ್ತ ಸಾಗಿತ್ತು. ಸುಮಾರು 6 ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಆನೆಯನ್ನು ಯಶಸ್ವಿಯಾಗಿ ರಕ್ಷಣೆ ಮಾಡಿ ಕಾಡಿಗೆ ಬಿಡಲಾಯಿತು.

ಸುಳ್ಯ ಸಮೀಪ ಪೆರಾಜೆ ಬಳಿ ಕಲ್ಚರ್ಪೆಯಲ್ಲಿ ಬಾವಿಗೆ ಬಿದ್ದ ಕಾಡಾನೆಯನ್ನು ಅರಣ್ಯ ಇಲಾಖೆಯು ಕಾರ್ಯಾಚರಣೆಯ ಮೂಲಕ ರಕ್ಷಣೆ ಮಾಡಲಾಯಿತು.

ಡಿಕ್ಕಿ : ಬೈಕ್ ಸವಾರ ಸಾವು

ಮಂಗಳೂರು: ಅತೀ ವೇಗ ಹಾಗೂ ಓವರ್ಟೇಕ್ ಮಾಡುವ ಭರದಲ್ಲಿ ಬೈಕ್ ಸವಾರನೊಬ್ಬ ನಿಯಂತ್ರಣ ತಪ್ಪಿ ಟಿಪ್ಪರ್ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟ ಘಟನೆ ನಂತೂರು ತಾರಾಯಿತೋಟ ಎಂಬಲ್ಲಿ ನಡೆದಿದೆ.

ಧರ್ಮಸ್ಥಳದ ಕನ್ಯಾಡಿ ನಿವಾಸಿ ಗೋಪಾಲಕೃಷ್ಣ (27) ಮೃತಪಟ್ಟವರು. ಗುರುಪುರದಲ್ಲಿ ಚಿಪ್ಸ್ ತಯಾರಿಕಾ ಘಟಕವೊಂದರಲ್ಲಿ ಕೆಲಸ ಮಾಡುತ್ತಿದ್ದು, ಕೆಲಸ ಮುಗಿಸಿ ಜಪ್ಪಿನಮೊಗರಿನ ತನ್ನ ಬಾಡಿಗೆ ಕೊಠಡಿಗೆ ತೆರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ನಂತೂರು ಬಳಿ ಗೋಪಾಲಕೃಷ್ಣ ತನ್ನ ಬೈಕ್ನಲ್ಲಿ ಮುಂದೆ ಹೋಗುತ್ತಿದ್ದ ಸ್ಕೂಟರ್ ಅನ್ನು ಓವರ್ಟೇಕ್ ಮಾಡಲು ಯತ್ನಿಸಿದ್ದಾನೆ. ಈ ವೇಳೆ ಸ್ಕೂಟರ್ಗೆ ಬೈಕ್ ತಾಗಿ ನಿಯಂತ್ರಣ ತಪ್ಪಿದ ಸವಾರ, ಎದುರಿನಿಂದ ಬರುತ್ತಿದ್ದ ಲಾರಿಗೆ ಬಡಿದು ರಸ್ತೆಗೆ ಎಸೆಯಲ್ಪಟ್ಟಿದ್ದಾನೆ. ತೀವ್ರ ಸ್ವರೂಪದ ಪೆಟ್ಟು ಬಿದ್ದಿದ್ದರಿಂದ ಗೋಪಾಲಕೃಷ್ಣ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಇದೇ ಅಪಘಾತದಲ್ಲಿ ಸ್ಕೂಟರ್ ಚಲಾಯಿಸುತ್ತಿದ್ದ ಮಧ್ಯವಯಸ್ಕ ಭಾ ಯಾ ಗ್ರಾ ಹ ಕ ರೊ ಬ್ಬ ರ ು ಗಂಭೀರವಾಗಿ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು ಸದ್ಯ ಅವರ ಸ್ಥಿತಿ ಚಿಂತಾಜನಕವಾಗಿದೆ. ಈ ಭೀಕರ ಅಪಘಾತದ ದೃಶ್ಯ ಟೆಂಪೋವೊಂದರ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಶ್ರೀ ಸುಬ್ರಹ್ಮಣ್ಯ ಜಾತ್ರೆ ಇಂದಿನಿಂದ

ಮಂಗಳೂರು : ನಗರದ ಕೋಡಿಕಲ್ನ ಶ್ರೀ ಕುರುಅಂಬಾ ರಾಜರಾಜೇಶ್ವರೀ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಎ.14ರಿಂದ 26ರವರೆಗೆ ಬ್ರಹ್ಮಶ್ರೀ ದೇರೆಬೈಲು ವಿಠಲದಾಸ ತಂತ್ರಿವರ್ಯರ ನೇತೃತ್ವದಲ್ಲಿ ನಡೆಯಲಿದೆ.

ಎ.13ರಂದು ರಾತ್ರಿ 8ಕ್ಕೆ ಸಾಮೂಹಿಕ ಶ್ರೀ ದೇವತಾ ಪ್ರಾರ್ಥನೆ, ತೋರಣ ಮುಹೂರ್ತ,ವಾಸ್ತುಪೂಜೆ, ರಾಕ್ಷೋಘ್ನ ಹೋಮ, ದಿಕ್ಪಾಲ ಬಲಿ ನೆರವೇರಲಿದೆ. ಎ.14ರಂದು ಬೆಳಗ್ಗೆ 9ರಿಂದ ನವಕ ಕಲಶ, ಪ್ರಧಾನ ಹೋಮ, ಶ್ರೀದೇವಿಗೆ ಹಾಗೂ ಸುಬ್ರಹ್ಮಣ್ಯ ದೇವರಿಗೆ ಕಲಶಾಭಿಷೇಕ, ಸುಬ್ರಹ್ಮಣ್ಯ ದೇವರಿಗೆ ಹೂವಿನ ಪೂಜೆ, ಮಧ್ಯಾಹ್ನ 12ಕ್ಕೆ ಧ್ವಜಾರೋಹಣ, 1.30ಕ್ಕೆ-ಮಹಾಪೂಜೆ, ಅನ್ನ ಸಂತರ್ಪಣೆ, ಸಾಯಂಕಾಲ 6ಕ್ಕೆ ಶ್ರೀ ರಾಜರಾಜೇಶ್ವರೀ ದೇವರಿಗೆ ಹೂವಿನ ಪೂಜೆ, ಉತ್ಸವ ಬಲಿ, ರಾತ್ರಿ ಪೂಜೆ, ಭೂತಬಲಿ, ಎ.15ರಂದು ಪ್ರಾತಃಕಾಲ 4.30ಕ್ಕೆ ಶ್ರೀ ರಾಜರಾಜೇಶ್ವರೀ ದೇವರಿಗೆ ದೀಪದ ಬಲಿ , ಬೆಳಗ್ಗೆ 9ಕ್ಕೆ ನವಕ ಪ್ರಧಾನ ಹೋಮ, ಕಲಶಾಭಿಷೇಕ, 10ಕ್ಕೆ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 6ಕ್ಕೆಉತ್ಸವ ಬಲಿ, ಪೇಟೆ ಸವಾರಿ, ಕಟ್ಟೆಪೂಜೆ, ರಾತ್ರಿ ಪೂಜೆ, ಶ್ರೀಭೂತ ಬಲಿ, ಕವಾಟಬಂಧನ, ಶಯನೋತ್ಸವ, ಎ.16ರಂದು ಬೆಳಗ್ಗೆ 7ಕ್ಕೆ ಕವಾಟೋದ್ಘಾಟನೆ, ವಿವಿಧ ಅಭಿಷೇಕಗಳು, ನವಕ ಪ್ರಧಾನ ಹೋಮ, ಅಭಿಷೇಕ, 9ಕ್ಕೆ ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 6ಕ್ಕೆ ಜಳಕದ ಬಲಿ, ಓಕುಳಿ ಬಲಿ, ಸಾಗರ ಕೋರ್ಟ್ ಕಲ್ಬಾವಿ ಕೆರೆಯಲ್ಲಿ, ಅವಭೃತ ಸ್ನಾನ, ಚಾಮುಂಡಿ ದೈವದ ಭೇಟಿ, ತೂಟೆದಾರ, ದರ್ಶನ ಬಲಿ, ಧ್ವಜಾವರೋಹಣ, ಬಟ್ಟಲು ಕಾಣಿಕೆ ನೆರವೇರಲಿದೆ ಎಂದು ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ಮೋಹನ್ ಶೆಟ್ಟಿ ತಿಳಿಸಿದ್ದಾರೆ.

ಕಾ.ನಿ.ಪತ್ರಕರ್ತರ ಸಂಘದ ರಾಜ್ಯ ಸಮಿತಿಗೆ ಟೆಲೆಕ್ಸ್‌ರವಿ ನೇಮಕ

ಶಿವಮೊಗ್ಗ : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ನಿರ್ದೇಶಕರಾಗಿ ಹಿರಿಯ ಪತ್ರಕರ್ತ,ಶಿವಮೊಗ್ಗ ಟೆಲೆಕ್ಸ್ ಪತ್ರಿಕೆ ಸಂಪಾದಕರಾದ ಎನ್.ರವಿಕುಮಾರ್‌ನೇಮಕ ಗೊಂಡಿದ್ದಾರೆ.

ಬೀದರ್ನ 40ನೇ ರಾಜ್ಯ ಸಮ್ಮೇಳನದಲ್ಲಿ ನಡೆದ ಕಾರ್ಯಕಾರಿ, ನಂತರ ನಡೆದ ಸರ್ವಸದಸ್ಯರ ಸಭೆಯಲ್ಲಿ ಈ ವಿಷಯವನ್ನು ಸಂಘದ ರಾಜ್ಯ ಅಧ್ಯಕ್ಷರಾದ ಶಿವಾನಂದ ತಗಡೂರು ಘೋಷಿಸಿದ್ದಾರೆ.

ಈ ಹಿಂದೆ ಸಂಘದ ಜಿಲ್ಲಾ ಶಾಖೆಯ ಅಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ರಾಜ್ಯ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರಲ್ಲದೇ ಇತ್ತೀಚೆಗೆ ಸಂಘದ ರಾಜ್ಯ ಚುನಾವಣಾಧಿಕಾರಿಯಾಗಿಯೂ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದರು.

ಅಭಿನಂದನೆ: ನೂತನವಾಗಿ ರಾಜ್ಯಸಮಿತಿ ಸದಸ್ಯರಾಗಿ ನೇಮಕ ಗೊಂಡ ಎನ್. ರವಿಕುಮಾರ್‌ರವರನ್ನು, ಪತ್ರಕರ್ತ ಸಂಘದ ಜಿಲ್ಲಾಧ್ಯಕ್ಷ ವೈದ್ಯನಾಥ್, ರಾಜ್ಯ ಸಮಿತಿ ನಿರ್ದೇಶಕ ಕೆ. ವಿ. ಶಿವಕುಮಾರ್,ಪ್ರಧಾನ ಕಾರ್ಯ ದರ್ಶಿ ಆರ್. ಎಸ್. ಹಾಲಸ್ವಾಮಿ, ಕಾರ್ಯಕಾರಿ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಕುತ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ ಎಂಆರ್ಪಿಎಲ್ನ ಗ್ರೂಪ್ ಮ್ಯಾನೇಜರ್‌ಮತ್ತು ಬಿಎಎಸ್‌ಎಫ್ನ ನಿರ್ದೇಶಕ ಶ್ರೀನಿವಾಸ ಪ್ರಾಣೇಶ್ ಇವರನ್ನು ಶಾಲಾಭಿವೃದ್ಧಿ ಸಮಿತಿ ವತಿಯಿಂದ ಮಂಗಳೂರಿನ ಪತ್ರಿಕಾ ಭವನದಲ್ಲಿ ಸನ್ಮಾನಿಸಲಾಯಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕನಕವರ್ಮ ಜೈನ್, ಉಪಾಧ್ಯಕ್ಷೆ ಶ್ವೇತಾ ಜಗದೀಶ್, ಸದಸ್ಯರಾದ ಗಾಯತ್ರಿ, ಹರ್ಷಿತ್, ದ.ಕ. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್.ಬಿ.ಎನ್, ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಉಪಸ್ಥಿತರಿದ್ದರು.

ಯುಗಾದಿ ಪ್ರಕೃತಿ ಜತೆ ನಂಟು ಸಾರುವ ಹಬ್ಬ

ಮಂಗಳೂರು : ಅಖಿಲ ಭಾರತೀಯ ಸಾಹಿತ್ಯ ಪರಿಷತ್, ತಾಲೂಕು ಸಮಿತಿ ಮತ್ತು ಥಿಯೊಸೊಫಿಕಲ್ ಸೊಸೈಟಿ ವತಿಯಿಂದ ಯುಗಾದಿ ಸಂಭ್ರಮ ಕಾರ್ಯಕ್ರಮ ನಗರದ ಕೊಡಿಯಾಲ್ಬೈಲ್ನ ಥಿಯೊಸೊಫಿಕಲ್ ಸೊಸೈಟಿ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಥಿಯೊಸೊಫಿಕಲ್ ಸೊಸೈಟಿ ಅಧ್ಯಕ್ಷ ವಿದ್ವಾನ್ ತುಪ್ಪೆಕಲ್ಲು ನರಸಿಂಹ ಶೆಟ್ಟಿ ಮಾತನಾಡಿ 'ಯುಗಾದಿ ಹಬ್ಬ ಪ್ರಕೃತಿಯೊಂದಿಗೆ ಮನುಷ್ಯನ ಸಂಬಂಧವನ್ನು ಗಟ್ಟಿಗೊಳಿಸುವ ಸಾಂಪ್ರದಾಯಿಕ ಆಚರಣೆಯಾಗಿದೆ. ಬೇವು ಬೆಲ್ಲ ಸವಿಯುವ ಮೂಲಕ ಜೀವನದ ಸುಖ, ದುಃಖ ಸಮಾನವಾಗಿ ಸ್ವೀಕರಿಸುವ ಸಂದೇಶ ಯುಗಾದಿ ಆಚರಣೆಯಿಂದ ಸಾರಲಾಗುತ್ತಿದೆ ಎಂದರು.

ಥಿಯೊಸೊಫಿಕಲ್ ಸೊಸೈಟಿ ಕಾರ್ಯದರ್ಶಿ ಪ್ರೊ.ಕೃಷ್ಣಾನಂದ ಶೆಣೈ ಮಾತನಾಡಿ, ಕೃಷಿ ಚಟುವಟಿಕೆಗಳಿಗೆ ಆರಂಭ ನೀಡುವ ಯುಗಾದಿ ಆಚರಣೆ ನಮ್ಮ ಸಂಸ್ಕೃತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ ಎಂದರು,

ಅಭಾಸಾಪ ಜಿಲ್ಲಾ ಸಮಿತಿ ಸದಸ್ಯ ಪಿ.ಬಿ.ಹರೀಶ್ ರೈ ಮುಖ್ಯ ಅತಿಥಿಯಾಗಿದ್ದರು. ದಿವಾನ್ ಕೇಶವ ಭಟ್, ಅಭಾಸಾಪ ಜಿಲ್ಲಾ ಕಾರ್ಯದರ್ಶಿ ಲತೇಶ್ ಬಾಕ್ರಬೈಲ್ ಉಪಸ್ಥಿತರಿದ್ದರು. ಅಭಾಸಾಪ ತಾ.ಅಧ್ಯಕ್ಷೆ ಡಾ.ಮೀನಾಕ್ಷಿ ರಾಮಚಂದ್ರ ಸ್ವಾಗತಿಸಿ, ಚಂದ್ರಪ್ರಭಾ ದಿವಾಕರ್ ವಂದಿಸಿದರು, ಪ್ರೊ. ಶೈಲಜಾ ಪುದುಕೋಳಿ ಕಾರ್ಯಕ್ರಮ ನಿರೂಪಿಸಿದರು.

ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಥಿಯೊಸೊಫಿಕಲ್ ಸೊಸೈಟಿ ಅಧ್ಯಕ್ಷ ವಿದ್ವಾನ್ ತುಪ್ಪೆಕಲ್ಲು ನರಸಿಂಹ ಶೆಟ್ಟಿ ಮಾತನಾಡಿದರು.

ಕೈಗಾರಿಕಾಪ್ರದೇಶಕ್ಕೆ ಹೆದ್ದಾರಿ ಸಂಪರ್ಕ ರಸ್ತೆ ಕಾಮಗಾರಿ

ಸುರತ್ಕಲ್ : ಬೈಕಂಪಾಡಿ ಕೈಗಾರಿಕಾಪ್ರದೇಶಕ್ಕೆ ಸಂಪರ್ಕಿಸುವ ಹೆದ್ದಾರಿ ಬದಿಯ ರಸ್ತೆಯ ಕಾಂಕ್ರೀಟ್ ಕಾಮಗಾರಿ ಹಾಗೂ ಟ್ರಕ್ ಯಾರ್ಡ್ ಗುರುವಾರದಿಂದ ಆರಂಭವಾಗಲಿದ್ದು, 11 ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಾಣವಾಗಲಿದೆ.ಎನ್ ಎಂ ಪಿ ಎ ಇದಕ್ಕೆ ಅನುದಾನ ನೀಡಲಿದೆ.

ಶಾಸಕ ಡಾ. ಭರತ್ ಶೆಟ್ಟಿ ಅವರು ಎನ್ ಎಂ ಪಿ ಎ ಗೆ ಮನವಿ ಮಾಡಿದ ಮೇರೆಗೆ ಬಂದರು ಅನುದಾನ ಬಿಡುಗಡೆ ಮಾಡಿದೆ. ಈ ಕುರಿತು ಸೋಮವಾರ ಶಾಸಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾಮಗಾರಿ ಅವಧಿ, ಸಂಚಾರ ಸಮಸ್ಯೆ ಕುರಿತು ಚರ್ಚೆ ನಡೆಸಲಾಯಿತು. ಕಾಮಗಾರಿ ಸುಗಮವಾಗಿ ನಡೆಯುವ ಉದ್ದೇಶದಿಂದ ಸಂಬಂಧಿತ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲು ಪೊಲೀಸರು ಆದೇಶ ಹೊರಡಿಸಲಿದ್ದು ಪರ್ಯಾಯ ಸಂಚಾರ ಅವಕಾಶ ಮಾಡಿಕೊಡಲಾಗುವುದು.ಂ ವಿಶೇಷವಾಗಿ ಭಾರೀ ವಾಹನಗಳ ಓಡಾಟ ಹೆಚ್ಚಿರುವ ಈ ಪ್ರದೇಶದಲ್ಲಿ ಸಂಚಾರ ನಿಯಂತ್ರಣ ಕ್ರಮಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ.ಬೈಕಂಪಾಡಿ ಕೈಗಾರಿಕಾ ಪ್ರದೇಶ ಪ್ರಮುಖ ಉದ್ಯಮ ವಲಯವಾಗಿದ್ದು ರಸ್ತೆ ದುರಸ್ತಿ ಹಾಗೂ ಕಾಂಕ್ರೀಟ್ ನಿರ್ಮಾಣದ ಬೇಡಿಕೆ ಕೇಳಿಬರುತ್ತಿತ್ತು. ಈಗ ಸ್ಥಳೀಯ ಉದ್ಯಮಿಗಳು, ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ಇನ್ನು ಎರಡು ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸಲು ಸಂಬಂಧಿತ ಅಧಿಕಾರಿಗಳಿಗೆ ಶಾಸಕ ಡಾ. ಭರತ್ ಶೆಟ್ಟಿ ಸೂಚನೆ ನೀಡಿದ್ದಾರೆ. ಸಭೆ ಯಲ್ಲಿ ಬಂದರು ಪ್ರಾಧಿಕಾರ, ಟ್ರಾಫಿಕ್, ಕೆ ಐ ಎ ಡಿ ಬಿ ಅಧಿಕಾರಿಗಳು ಉಪಸ್ಥಿತರಿದ್ದರು.

ಹೊಸ ಆಲೋಚನೆ ಉಳ್ಳವರೇ ಯುವಕರು

ಮಂಗಳೂರು: ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಯುವ ಶಾಸಕರನ್ನು ಕೇವಲ ವಯಸ್ಸಿನ ಆಧಾರದ ಮೇಲೆ ವ್ಯಾಖ್ಯಾನಿಸುವುದು ಸರಿಯಲ್ಲ. ಹೊಸ ಆಲೋಚನೆ ಹಾಗೂ ನವೀನ ದೃಷ್ಟಿಕೋನ ಹೊಂದಿರುವವರೇ ನಿಜವಾದ ಯುವಕರು ಎಂದು ವಿಧಾನಸಭೆಯ ಸ್ಪೀಕರ್‌ಯು.ಟಿ. ಖಾದರ್‌ಅಭಿಪ್ರಾಯಪಟ್ಟರು.

ಗೋವಾದ ಪಣಜಿಯಲ್ಲಿ ನಡೆದ ಕಾಮನ್ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಭಾರತ ವಲಯ-8ರ ಪ್ರಥಮ ಸಮ್ಮೇಳನದಲ್ಲಿ ಅವರು ಮಾತನಾಡುತ್ತಿದ್ದರು. ಕಾರ್ಪೊರೇಟ್ ನಾಯಕರಂತೆ ಶಾಸಕರಿಗೂ ಕೃತಕ ಬುದ್ಧಿಮತ್ತೆ , ಸೈಬರ್‌ಭದ್ರತೆ, ಡೇಟಾ ಆಡಳಿತದಂತಹ ಕ್ಷೇತ್ರಗಳಲ್ಲಿ ನಿರಂತರ ತರಬೇತಿ ಅಗತ್ಯವಿದೆ. ಕೃತಕ ಬುದ್ಧಿಮತ್ತೆ ಕೇವಲ ತಂತ್ರಜ್ಞಾನವಾಗಿ ನೋಡದೆ ಮೂಲಸೌಕರ್ಯವಾಗಿ ಪರಿಗಣಿಸಬೇಕು. ಬಜೆಟ್ ಹಂಚಿಕೆಗಳು ಊಹೆಗಳ ಬದಲಿಗೆ ನಿಖರ ಡೇಟಾ ಆಧಾರಿತವಾಗಿರಬೇಕು ಎಂದು ಅವರು ತಿಳಿಸಿದರು. ಲೋಕಸಭಾ ಸ್ಪೀಕರ್‌ಓಂ ಬಿರ್ಲಾ ಉದ್ಘಾಟಿಸಿದ ಈ ಸಮ್ಮೇಳನದಲ್ಲಿ ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಮುಖ್ಯಮಂತ್ರಿ ಪ್ರಮೋದ್ ಸಾವಂತ್, , ವಿವಿಧ ರಾಜ್ಯಗಳ ಸ್ಪೀಕರ್ ಪಾಲ್ಗೊಂಡಿದ್ದರು.

===============ಫೋಟೋ

ಗೋವಾದ ಪಣಜಿಯಲ್ಲಿ ನಡೆದ ಕಾಮನ್ವೆಲ್ತ್ ಪಾರ್ಲಿಮೆಂಟರಿ ಸಮ್ಮೇಳನ
ಯು.ಟಿ. ಖಾದರ್‌ಪಾಲ್ಗೊಂಡಿದ್ದರು.

ಪಂಚರಾಜ್ಯ ಪವರ್ ವಾರ್

vishwavani.news

ಪಶ್ಚಿಮ ಬಂಗಾಳದಲ್ಲಿ 1977ರಿಂದ ಆರಂಭಗೊಂಡು 34 ವರ್ಷಗಳ ಕಾಲವಿದ್ದ ಎಡಪಕ್ಷಗಳ ಕೆಂಪುಕೋಟೆಯನ್ನು ನಾಶಮಾಡಿ, ರಾಜ್ಯದ ಮುಖ್ಯಮಂತ್ರಿಯಾಗಿ ಗದ್ದುಗೆ ಏರಿದ್ದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ತಮ್ಮ ರಾಜಕೀಯ ಜೀವನದ ಅತಿ ಸವಾಲಿನ ಚುನಾವಣೆ ಎದುರಿಸುತ್ತಿದ್ದಾರೆ. ಯಾವುದೇ ರಾಜ್ಯದಲ್ಲಿ, ಯಾವುದೇ ಸರಕಾರವಿರಲಿ, 15 ವರ್ಷಗಳ ದರ್ಬಾರಿನ ನಂತರ ಆಡಳಿತ-ವಿರೋಧಿ ಅಲೆ ಎದುರಿಸುವುದು ಸಹಜ. ಮಮತಾ ದೀದಿಗೂ ಈ ಸವಾಲು ಎದುರಾಗಿದೆ. ಎಡಪಕ್ಷಗಳ ಭದ್ರಕೋಟೆ ಭೇದಿಸಿ, ಒಂದೂವರೆ ದಶಕದಿಂದ ಆಡಳಿತ ನಡೆಸಿರುವ ಸಿಎಂ ಮಮತಾ, ಮೋದಿ-ಶಾ ಜೋಡಿಗೆ ಮತ್ತೊಮ್ಮೆ ಮಣ್ಣು ಮುಕ್ಕಿಸುತ್ತೇವೆ ಎನ್ನುತ್ತಿದ್ದರೂ, ಹೊಸ ರಣನೀತಿಗಳೊಂದಿಗೆ ಬಿಜೆಪಿ ಚುನಾವಣಾ ಯುದ್ಧಭೂಮಿಯಲ್ಲಿ ಸೆಣಸಾಟಕ್ಕೆ ಸಜ್ಜಾಗಿದೆ. ಈ ಹಿನ್ನೆಲೆಯಲ್ಲಿ ಬಂಗಾಳದಲ್ಲಿ ಚುನಾವಣಾ ಪ್ರವಾಸ ಕೈಗೊಂಡು, ಮತದಾರನ ಮನಸ್ಥಿತಿ, ರಾಜಕೀಯ ಪರಿಸ್ಥಿತಿ, ಗ್ರಾಮೀಣ ಭಾಗದ ನಾಡಿಮಿಡಿತ, ನಗರವಾಸಿಗಳ ಮನದಾಳ, ಲೆಕ್ಕಾಚಾರ ಸೇರಿದಂತೆ ಕುತೂಹಲಕಾರಿ ಅಂಶಗಳತ್ತ ಬೆಳಕು ಚೆಲ್ಲುವ ಯತ್ನವನ್ನು ವಿಶ್ವವಾಣಿ ಮಾಡಲಿದ್ದು, ಪತ್ರಿಕೆಯ ವಿಶೇಷ ಪ್ರತಿನಿಧಿ ರಾಘವ ಶರ್ಮ ನಿಡ್ಲೆ ಇಂದಿನಿಂದ ಬಂಗಾಳ ಚುನಾವಣೆಯ ಗ್ರೌಂಡ್ ರಿಪೋರ್ಟ್ ನೀಡಲಿದ್ದಾರೆ.

ದೀದಿ ಭದ್ರಕೋಟೆ ಭೇದಿಸುವರೇ ಮೋದಿ?

ಉತ್ತರ ದಿಕ್ಕಿನಲ್ಲಿ ಪ್ರಾದೇಶಿಕ ಪಕ್ಷಗಳು ಆಡಳಿತದಲ್ಲಿರುವ ಬಹುತೇಕ ರಾಜ್ಯಗಳಲ್ಲಿ ರಾಜಕೀಯ ನೆಲೆ ವಿಸ್ತರಣೆ ಮಾಡಿ, ಚುನಾವಣೆ ಗೆದ್ದಿರುವ ಬಿಜೆಪಿ, ಪಶ್ಚಿಮ ಬಂಗಾಳದಲ್ಲಿ ಅಧಿಕಾರದ ಗದ್ದುಗೆ ಏರಲು ಇನ್ನೂ ಸಾಧ್ಯವಾಗಿಲ್ಲ. ಹರಿಯಾಣ, ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ದೆಹಲಿ, ಮಹಾರಾಷ್ಟ್ರ, ಒಡಿಶಾ ರಾಜ್ಯಗಳಲ್ಲಿ ಅಧಿಕಾರ ಸ್ಥಾಪಿಸಿರುವ ಬಿಜೆಪಿಗೆ ಮಮತಾ ದೀದಿಯ ರಾಜಕೀಯ ಭದ್ರಕೋಟೆಯನ್ನು ಪೂರ್ತಿ ಭೇದಿಸಲು ಸಾಧ್ಯವಾಗಿಲ್ಲ, ಬಿಜೆಪಿಯ ಹಿಂದುತ್ವ ಪ್ರೇರಿತ ರಾಜಕಾರಣವನ್ನು ಇಲ್ಲಿನ ಜನ ಈಗಲೂ ಪೂರ್ಣ ಪ್ರಮಾಣದಲ್ಲಿ ಸ್ವೀಕರಿಸಿಲ್ಲ.



2019ರಿಂದ ಟಿಎಂಸಿ ವಿರೋಧಿ ಧ್ವನಿಗಳು ನಿಧಾನವಾಗಿ ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, 2026ರ ಚುನಾವಣೆ ರಾಜ್ಯದಲ್ಲಿ ಹೊಸ ರಾಜಕೀಯ ಇತಿಹಾಸ ನಿರ್ಮಾಣ ಮಾಡಲಿದೆ ಎನ್ನುವುದು ಬಿಜೆಪಿಯ ಪ್ರತಿಪಾದನೆ. 2019ರ ಲೋಕಸಭೆ ಮತ್ತು 2021ರ ವಿಧಾನಸಭೆ ಚುನಾವಣೆ ವರದಿಗಾಗಿ ನಾನು ರಾಜ್ಯ ಪ್ರವಾಸ ಮಾಡಿದ್ದಾಗ, ಬಿಜೆಪಿಯ ನೆಲೆ ವಿಸ್ತರಿಸುವ ಲಕ್ಷಣಗಳು ಕಂಡುಬಂದಿದ್ದವು. 2019ರ ಲೋಕಸಭೆ ಫಲಿತಾಂಶವಂತೂ (42ರಲ್ಲಿ 18 ಸೀಟು ಗೆದ್ದಿತ್ತು) ಬಿಜೆಪಿಯ ಮನೋಬಲವನ್ನು ವೃದ್ಧಿಸಿ, 2021ರ ವಿಧಾನಸಭೆ ಚುನಾವಣೆ ಗೆದ್ದೇ ಬಿಡುತ್ತೇವೆ ಎಂಬ ಹುಮ್ಮಸ್ಸಿನಲ್ಲಿ ಬಿಜೆಪಿ ಇತ್ತು. ಆದರೆ, ಟಿಕೆಟ್ ಹಂಚಿಕೆ ಗೊಂದಲ, ದಿಲ್ಲಿಯಿಂದ ಬಂದ ಕೆಲ ನಾಯಕರ ರಣನೀತಿಯಲ್ಲಿನ ವೈಫಲ್ಯದ ಲಾಭ ಪಡೆದುಕೊಂಡ ಟಿಎಂಸಿ, ಬಿಜೆಪಿಯನ್ನು 76ಕ್ಕೆ (ಒಟ್ಟು 294 ವಿಧಾನಸಭೆ ಸೀಟು) ಸೀಮಿತಗೊಳಿಸಿತು. 2016ರ ವಿಧಾನಸಭೆ ಚುನಾವಣೆಯಲ್ಲಿ ಬರೀ 3 ಸೀಟು ಗೆದ್ದಿದ್ದ ಪಕ್ಷ 5 ವರ್ಷಗಳ ನಂತರ 76 ಸೀಟುಗಳನ್ನು ಬಾಚಿಕೊಂಡದ್ದು ಗಮನಾರ್ಹ ಸಾಧನೆಯಾಗಿತ್ತಾದರೂ, ಸಿಎಂ ಮಮತಾ ಬ್ಯಾನರ್ಜಿಯವರ ಅಬ್ಬರವನ್ನು (213 ಸೀಟು) ತಗ್ಗಿಸಲು ಮೋದಿ-ಶಾ ಜೋಡಿಗೆ ಸಾಧ್ಯವಾಗಲಿಲ್ಲ.

ಹಾಗಂತ, 2014ರ ಲೋಕಸಭೆ ಚುನಾವಣೆಯಲ್ಲಿ ಶೇ.17ರಷ್ಟು ಮತಗಳಿಸಿದ ಬಿಜೆಪಿ, 2021ರ ವಿಧಾನಸಭೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಈ ಪ್ರಮಾಣವನ್ನು ಶೇ.38ಕ್ಕೆ ಏರಿಸಿಕೊಂಡು ರಾಜ್ಯದ ನಂ.2 ಪಕ್ಷವಾಗಿ ರೂಪುಗೊಂಡಿರುವುದು ಅಸಾಮಾನ್ಯ ಸಾಧನೆಯೇ ಸರಿ.

ಎಡಪಕ್ಷಗಳ ಕುಸಿಯುವಿಕೆಯಿಂದ ಸೃಷ್ಟಿಯಾದ ಖಾಲಿ ಸ್ಥಾನವನ್ನು ಭರ್ತಿ ಮಾಡಿದ ಬಿಜೆಪಿ, ಕೋಲ್ಕತ್ತಾದ ಗಿಜಿಗುಡುವ ಟೀ ಅಂಗಡಿಗಳಿಂದ ಹಿಡಿದು ಬಾಂಗ್ಲಾದೇಶ ಗಡಿ ಭಾಗದ ಮುರ್ಷಿದಾಬಾದ್, ಮಾಲ್ಡಾ ಜಿಲ್ಲೆಗಳ ಗ್ರಾಮೀಣ ಭಾಗಗಳತ್ತಲೂ ನೆಲೆ ವಿಸ್ತರಿಸುತ್ತಿದೆ. ಬಾಂಗ್ಲಾ ಗಡಿ ನುಸುಳುವಿಕೆ ವಿಷಯಗಳನ್ನು ಪ್ರಸ್ತಾಪಿಸುತ್ತಾ, ರಾಷ್ಟ್ರವಾದದ ನರೇಟಿವ್ ಅನ್ನು ಬಿಗಿಗೊಳಿಸುತ್ತಿದೆ. ಹಿಂದುತ್ವ, ಟಿಎಂಸಿ ವಿರೋಧಿ ನರೇಟಿವ್, ಅಭಿವೃದ್ಧಿ ಮಂತ್ರದ ಜತೆಗೆ ಆರ್‌ಎಸ್‌ಎಸ್‌ನ ಸಂಘಟನಾ ಬಲದೊಂದಿಗೆ ರಾಜ್ಯ ರಾಜಕೀಯದ ಭೂದೃಶ್ಯವನ್ನೇ ಬಿಜೆಪಿ ಮರುವಿನ್ಯಾಸಗೊಳಿಸಿದೆ. 2021ರಲ್ಲಿ ನಂದಿಗ್ರಾಮದಲ್ಲಿ ಸಿಎಂ ಮಮತಾರನ್ನು ಸೋಲಿಸಿದ್ದಂತೂ ಐತಿಹಾಸಿಕ ಬೆಳವಣಿಗೆ. ನಂತರ ದೀದಿ ಕೋಲ್ಕತ್ತಾದ ಭವಾನಿಪುರ ಉಪಚುನಾವಣೆ ಗೆದ್ದು ವಿಧಾನಸಭೆಯನ್ನು ಅಧಿಕೃತವಾಗಿ ಪ್ರವೇಶಿಸಬೇಕಾಯಿತು.

ಮತಗಳಿಕೆ

ವಿಧಾನಸಭೆ 2021

» ಟಿಎಂಸಿ	48%
» ಬಿಜೆಪಿ	38%
» ಎಡಪಕ್ಷಗಳು	4%
» ಕಾಂಗ್ರೆಸ್	3%

ಲೋಕಸಭೆ 2024

» ಟಿಎಂಸಿ	46%
» ಬಿಜೆಪಿ	38%
» ಎಡಪಕ್ಷಗಳು	6%
» ಕಾಂಗ್ರೆಸ್	5%



ಕಳೆದ 5 ವರ್ಷಗಳಲ್ಲಿ ಕೋಲ್ಕತ್ತಾದ ಹೂಗ್ಲಿ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. 2021ರಲ್ಲಿ ಎಸಗಿದ್ದ ಪ್ರಮಾದ, ಲೋಪಗಳನ್ನು ಬಿಜೆಪಿ ಸರಿಪಡಿಸಿಕೊಂಡಂತೆ ಕಾಣುತ್ತಿದೆ. ಗ್ರಾಮೀಣ ಭಾಗದಲ್ಲಿ ಬಿಜೆಪಿ ಜನಪ್ರಿಯತೆ ಹೆಚ್ಚಿರುವ ಚರ್ಚೆಯಾಗುತ್ತಿದೆ. 15 ವರ್ಷಗಳಿಂದ ರಾಜ್ಯದಲ್ಲಿ ಅಧಿಕಾರದಲ್ಲಿರುವ ಟಿಎಂಸಿ ಮತದಾರ ಪಟ್ಟಿಯ ತೀವ್ರ ಪರಿಷ್ಕರಣೆ, ಕಾನೂನು – ಸುವ್ಯವಸ್ಥೆ ವೈಫಲ್ಯ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ನಡುವೆಯೂ ಜನರ ಮಧ್ಯೆ ಮುನ್ನುಗ್ಗಿ ಪ್ರಚಾರ ಮಾಡುತ್ತಾ, ನಾಲ್ಕನೇ ಬಾರಿ ರಾಜ್ಯದಲ್ಲಿ ಸರಕಾರ ರಚಿಸುವ ಕನಸು ಕಾಣುತ್ತಿದೆ. ನಂದಿಗ್ರಾಮದ ಬಿಜೆಪಿ ಶಾಸಕ, ಒಂದೊಮ್ಮೆ ಮಮತಾ ಬ್ಯಾನರ್ಜಿ ಯವರ ಅತ್ಯಾಪ್ತರಾಗಿದ್ದ ಸುವೇಂದು ಅಧಿಕಾರಿ ಈಗ ಬಿಜೆಪಿಯ ಮುಂಚೂಣಿ ನಾಯಕರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ತಮ್ಮ ಹಿಂದಿನ ಜಾತ್ಯತೀತ ರಾಜಕಾರಣದ ಶೈಲಿ ಬದಲಿಸಿ, ಬಿಜೆಪಿಯ ಹಿಂದುತ್ವ ಮಂತ್ರ ಜಪಿಸುತ್ತಾ, ಟಿಎಂಸಿ ವಿರೋಧಿ ವಾತಾವರಣ ರೂಪಿಸಲು ಹಿಂದೂ ಮತಗಳ ಪ್ರಬಲ ಕ್ರೋಢೀಕರಣಕ್ಕೆ ಮುಂದಾಗಿದ್ದಾರೆ. ಟಿಎಂಸಿ ಸರಕಾರದಲ್ಲಿ ಹಲವು ವರ್ಷಗಳ ಕಾಲ ಮಂತ್ರಿಯಾಗಿ, ಪಕ್ಷದ ಹಿರಿಯ ನಾಯಕರಾಗಿದ್ದ ಸುವೇಂದು ಅಧಿಕಾರಿ ಬಿಜೆಪಿಯ ಇತರೆ ರಾಜ್ಯ ನಾಯಕರಿಗಿಂತ ಹೆಚ್ಚು ಇಲ್ಲಿನ ರಾಜಕಾರಣವನ್ನು ಅರಿತವರೂ, ಟಿಎಂಸಿಯ ಒಳ-ಹೊರಗನ್ನು ತಿಳಿದುಕೊಂಡವರೂ ಆಗಿದ್ದಾರೆ.

2019ರ ಲೋಕಸಭಾ ಚುನಾವಣೆ ಫಲಿತಾಂಶದ ನಂತರದಿಂದ ಬದಲಾದ ಬಂಗಾಳ ರಾಜಕಾರಣದಿಂದಾಗಿ, 2021ರ ವಿಧಾನಸಭೆ ಮತ್ತು 2024ರ ಲೋಕಸಭೆ ಚುನಾವಣೆಗಳು ಬಿಜೆಪಿ-ಟಿಎಂಸಿ ನಡುವಿನ ಹೋರಾಟಕ್ಕೆ ಅನೇಕ ಕಡೆ ಸಾಕ್ಷಿಯಾದವು. 2024ರಲ್ಲಿ ಬಿಜೆಪಿಯ ಲೋಕಸಭೆ ಸೀಟು 18ರಿಂದ 12ಕ್ಕೆ ಇಳಿದರೂ ಮತಗಳಿಕೆ ತಗ್ಗಲಿಲ್ಲ. ಈಗ, ಮತದಾರ ಪಟ್ಟಿ ಪರಿಷ್ಕರಣೆ, ಬಾಂಗ್ಲಾ ಹಿಂದೂ ಹತ್ಯೆಗಳು, ರಾಜಕೀಯ ಧ್ರುವೀಕರಣದ ಜತೆಗೆ ಬಿಜೆಪಿಯ ಅಗ್ರೆಸಿವ್ ಹಿಂದುತ್ವ ಪ್ರತಿಪಾದನೆಯಿಂದಾಗಿ, 2026ರ ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಬಂಗಾಳದ ಚುನಾವಣಾ ಯುದ್ಧಭೂಮಿ (ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳನ್ನು ಹೊರತುಪಡಿಸಿ) ಸಂಪೂರ್ಣ 'ಬಿಜೆಪಿ ವರ್ಸಸ್ ಟಿಎಂಸಿ' ಎಂಬಂತೆ ಗೋಚರಿಸುತ್ತಿದೆ. ಎಡಪಕ್ಷಗಳ ಜತೆ ಕಾಂಗ್ರೆಸ್ ಈಗ ಪ್ರಸ್ತುತತೆ ಕಳೆದುಕೊಂಡಿದೆ. ಜನರ ಮಧ್ಯೆ ಟಿಎಂಸಿ-ಬಿಜೆಪಿ ಬಗ್ಗೆ ಚರ್ಚೆಯಾಗುತ್ತಿದೆಯೇ ವಿನಾ ಕಾಂಗ್ರೆಸ್ ಮತ್ತು ಎಡಪಕ್ಷಗಳ ಬಗ್ಗೆ ಜನ ತಲೆಕೆಡಿಸಿಕೊಳ್ಳುತ್ತಿಲ್ಲ.

ಹತ್ತಾರು ರಾಜಕೀಯ ಹಿಂಸಾಚಾರ ಘಟನೆಗಳು, ಕೋಲ್ಕತ್ತಾದ ಆರ್.ಜಿ. ಕರ್ ಮೆಡಿಕಲ್ ಕಾಲೇಜು ಅತ್ಯಾಚಾರ ಪ್ರಕರಣ, ಸೌತ್ ಕೋಲ್ಕತ್ತಾ ಲಾ ಕಾಲೇಜು ಗ್ಯಾಂಗ್ ರೇಪ್ ಕೇಸು, ಮುರ್ಷಿದಾಬಾದ್ ನಲ್ಲಿನ ಕೋಮು ಗಲಭೆ ಸೇರಿ ಹಲವು ಘಟನೆಗಳು ಸರಕಾರದ ವಿರುದ್ಧದ ಜನಾಕ್ರೋಶವನ್ನು ಹೆಚ್ಚಿಸಿ, ಟಿಎಂಸಿಯ ಆಡಳಿತ ವೈಫಲ್ಯಗಳನ್ನು ಎತ್ತಿ ತೋರಿಸಿದ್ದರೂ, ಇದನ್ನು ಮತಗಳಾಗಿ ಪರಿವರ್ತಿಸುವಲ್ಲಿ ಬಿಜೆಪಿ ಯಶಸ್ವಿಯಾಗುವುದೇ ಎನ್ನುವುದು ಪ್ರಶ್ನೆ.

ಫ್ರೀ ಸ್ಕೀಮ್‌ನ ಬಲ

ಮಹಿಳೆಯರ ಆರ್ಥಿಕ ಬಲ ವೃದ್ಧಿಸಲು ಮಮತಾ ಬ್ಯಾನರ್ಜಿಯವರ ಸರಕಾರ ಮಹಿಳೆಯರ ಖಾತೆಗಳಿಗೆ 1500 ರು. (ಎಸ್‌ಸಿ-ಎಸ್‌ಟಿಗಳಿಗೆ 1700 ರು.) ಸಹಾಯಧನವನ್ನು 'ಲಕ್ಷ್ಮಿ ಭಂಡಾರ್' ಯೋಜನೆ ಮೂಲಕ ಪ್ರತಿ ತಿಂಗಳು ಜಮೆ ಮಾಡುತ್ತಿದೆ. ಉಚಿತ ಗ್ಯಾರಂಟಿ ಯೋಜನೆಗಳನ್ನು ಜನ ಮುಗಿಬಿದ್ದು ಸ್ವೀಕರಿಸುತ್ತಿರುವ ಮತ್ತು ಅವು ಮತ ಕೀಳುವ ತಂತ್ರಗಳಾಗಿ ಬದಲಾಗಿರುವ ಇಂದಿನ ಕಾಲಘಟ್ಟದಲ್ಲಿ ಫಲಾನುಭವಿ ಮಹಿಳೆಯರು (ಮುಖ್ಯವಾಗಿ, ಬಡ ಮತ್ತು ಮಧ್ಯಮ ವರ್ಗದವರು) ದೀದಿಯ ವಿರುದ್ಧ ಮತ ಚಲಾಯಿಸುತ್ತಾರಾ? ಎಂಬ ಸಂಶಯ ಬಿಜೆಪಿಯಲ್ಲೂ ಇದೆ.

ಎಸ್‌ಐಆರ್-ವಿರೋಧಿ ನರೇಟಿವ್

ದೀದಿಗೆ ಈಗ ವಯಸ್ಸಾದಂತೆ ಕಂಡರೂ, ಅವರ ಹೋರಾಟ ಗುಣ, ಛಲ ಮತ್ತು ದಿಟ್ಟತನ ಇನ್ನೂ ತಗ್ಗಿಲ್ಲ. 'ಬಂಗಾಳಿ ಭದ್ರಲೋಕ್'ಗಳು (ಮಧ್ಯಮ ಮತ್ತು ಮೇಲ್ಮಧ್ಯಮ ಸಮುದಾಯದ ಚಿಂತಕ, ಬುದ್ಧಿಜೀವಿ ವರ್ಗ-ಕುಟುಂಬ) ಈಗಲೂ ದೀದಿಯನ್ನೇ ನೆಚ್ಚಿಕೊಂಡಂತಿದೆ. ಕೇಂದ್ರ ಸರಕಾರದ ಶಕ್ತಿಗಳ ಜತೆ ಬಂಗಾಳ ಪ್ರವೇಶಿಸಿರುವ ಮೋದಿ-ಶಾ ಜೋಡಿಯನ್ನು ಏಕಾಂಗಿಯಾಗಿ ಎದುರಿಸುತ್ತಿರುವ ಮಮತಾ ಬ್ಯಾನರ್ಜಿಗೆ ಮತಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ತಲೆನೋವು ತಂದಿರುವುದು ಸುಳ್ಳಲ್ಲ. ಮತದಾರ ಪಟ್ಟಿಯ ತೀವ್ರ ಪರಿಷ್ಕರಣೆಯ ಹೆಸರಲ್ಲಿ ಸುಮಾರು 94 ಲಕ್ಷ ಮತದಾರರ ಹೆಸರನ್ನು ಅಳಿಸಿ ಹಾಕಲಾಗಿದ್ದು, ಇದನ್ನೇ ಟಿಎಂಸಿ ಈ ಚುನಾವಣೆಯ ಅತಿದೊಡ್ಡ ವಿಷಯವನ್ನಾಗಿ ಪರಿವರ್ತಿಸಿ, 'ರಾಜ್ಯದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ' ಎಂಬ ನರೇಟಿವ್ ಹಬ್ಬಿಸಿದೆ. ಬಿಜೆಪಿ ವಿರುದ್ಧ ಜನಾಕ್ರೋಶವನ್ನು ದುಪ್ಪಟ್ಟುಗೊಳಿಸುವ ತಂತ್ರ ಮಾಡಿದೆ. ಸಂತ್ರಸ್ತ ಮತದಾರರನ್ನು ಸೇರಿಸಿಕೊಂಡು, ಈ ಅನ್ಯಾಯಕ್ಕೆ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡಿ ಎಂಬ ಕರೆ ನೀಡುತ್ತಿದೆ.

ಸದಾ ಸಂಘರ್ಷಮಯ

2021ರಲ್ಲಿ ಪ್ರವಾಸ ಮಾಡಿದ್ದಾಗ ರಾಜಕೀಯ ಸಂಘರ್ಷಕ್ಕೆ ಬಲಿಯಾಗಿದ್ದ ಸಂತ್ರಸ್ತೆಯರನ್ನು ಭೇಟಿ ಮಾಡಿದ್ದೆ. ಬಿಜೆಪಿಯನ್ನು ಬೆಂಬಲಿಸಬೇಕೆಂದಿದ್ದ ಅನೇಕ ಮಹಿಳೆಯರು ಬಹಿರಂಗವಾಗಿ ಮಾತನಾಡಲು ಹಿಂದೇಟು ಹಾಕುತ್ತಿದ್ದರು. ಬಿಜೆಪಿಯ ಪ್ರಚಾರ ರ್‍ಯಾಲಿಗಳಲ್ಲಿ ಪಾಲ್ಗೊಂಡ ಕಾರಣಕ್ಕಾಗಿ ಲೈಂಗಿಕ ದೌರ್ಜನ್ಯಕ್ಕೀಡಾದ ಮಹಿಳೆಯರು, ''ನಾವು ಮಾಧ್ಯಮಕ್ಕೆ ಮಾತನಾಡಿದರೆ, ಎದುರಾಳಿ ಪಕ್ಷದವರು ಹುಡುಕಿ ಬಂದು ಹಲ್ಲೆ ಮಾಡುತ್ತಾರೆ. ರಾತ್ರಿ ಮನೆಗಳಿಗೆ ಕಲ್ಲುಗಳು ಬೀಳುತ್ತವೆ. ಪೊಲೀಸರು ದೂರು ಸ್ವೀಕರಿಸುವುದಿಲ್ಲ'' ಎಂದೇ ಆತಂಕ ಹೊರಹಾಕುತ್ತಿದ್ದರು. 5 ವರ್ಷಗಳಲ್ಲಿ ಈ ಪರಿಸ್ಥಿತಿ ಕೊಂಚ ಮಟ್ಟಿಗೆ ಬದಲಾಗಿದೆ ಮತ್ತು ಟಿಎಂಸಿ ವಿರೋಧಿಗಳು ಧೈರ್ಯದಿಂದ ಮಾತನಾಡಲು ಶುರುಮಾಡಿದ್ದಾರೆ ಎಂಬ ವರದಿಗಳಿವೆ. ಯಾರೇನೇ ಹೇಳಲಿ, ರಾಜ್ಯ ರಾಜಕೀಯ ಸಂಘರ್ಷದ ಕಹಿ ವಾಸ್ತವವು, ನೈಜತೆಯನ್ನು ಅರಿಯಲು ಇಲ್ಲಿಗೆ ಭೇಟಿ ನೀಡಿದ್ದಾಗ ಗೊತ್ತಾಗಿತ್ತು. ಅಕ್ಷರಮಟ್ಟಿಗೆ, ರಾಜಕೀಯ ಸಂಘರ್ಷ-ಬಡಿದಾಟಗಳು ರಾಜ್ಯದಲ್ಲಿ ಬೇರೂರಿಬಿಟ್ಟಿದೆ. ಬಂಗಾಳದ ಬಗ್ಗೆ ಯಾರು ಏನೇ ಹೇಳಿದರೂ, ಎಡಪಕ್ಷಗಳಿದ್ದಾಗ ನಡೆಯುತ್ತಿದ್ದ ರಾಜಕೀಯ ಸಂಘರ್ಷಗಳು ಮಮತಾ ಆಡಳಿತದಲ್ಲೇನೂ ಕಡಿಮೆಯಾಗಲಿಲ್ಲ. ವಾಸ್ತವದಲ್ಲಿ ಅದು ಮತ್ತಷ್ಟು ಹೆಚ್ಚಿತು.

ಮೆಲುಕು

ಹೀಗೊಬ್ಬ ಗಟ್ಟಿಗಿತ್ತಿ

ಅದು 2000ನೇ ಇಸವಿ. ತಾನ್ಸಿ ಭೂ ಹಗರಣದಲ್ಲಿ ಜಯಲಲಿತಾರಿಗೆ ಮದ್ರಾಸ್ ಹೈಕೋರ್ಟ್ 2 ವರ್ಷಗಳ ಜೈಲುಶಿಕ್ಷೆಯನ್ನು ವಿಧಿಸಿತು. ಶಿಕ್ಷೆಗೊಳಗಾದ ಕಾರಣ ತಮ್ಮ ನಾಮಪತ್ರಗಳು ತಿರಸ್ಕೃತವಾಗುತ್ತವೆ ಎಂಬುದು ಗೊತ್ತಿದ್ದರೂ, 2001ರ ವಿಧಾನಸಭಾ ಚುನಾವಣೆ ವೇಳೆ ಆಂಡಿಪಟ್ಟಿ ಮತ್ತು ಕೃಷ್ಣಗಿರಿ ಕ್ಷೇತ್ರಗಳಿಂದ ಜಯಲಲಿತಾ ನಾಮಪತ್ರ ಸಲ್ಲಿಸಿದರು. ಸಾಲದೆಂಬಂತೆ ಮತ್ತು ವಿಷಯವನ್ನು ಇನ್ನಷ್ಟು ಜಟಿಲಗೊಳಿಸುವ ರೀತಿಯಲ್ಲಿ, ಭುವನಗಿರಿ ಮತ್ತು ಪುದುಕೊಟ್ಟೈ ಕ್ಷೇತ್ರಗಳಿಂದಲೂ ಜಯಲಲಿತಾ ನಾಮಪತ್ರವನ್ನು ಸಲ್ಲಿಸಿದ್ದುಂಟು; ಅಭ್ಯರ್ಥಿಯೊಬ್ಬರು ಎರಡಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸುವ ಕಾನೂನು ಇದ್ದುದರ ಹೊರತಾಗಿಯೂ ಅವರು ಇಂಥ 'ಭಂಡಹೆಜ್ಜೆ' ಇಟ್ಟಿದ್ದರು! ಚುನಾವಣೆಯಲ್ಲಿ ಸ್ಪರ್ಧಿಸಲಾಗದಿದ್ದರೂ ಪಕ್ಷವನ್ನು ಗೆಲುವಿನತ್ತ ಕೊಂಡೊಯ್ದ ಜಯಲಲಿತಾ ಮುಖ್ಯಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕರಿಸಿಯೇಬಿಟ್ಟರು. ಆದರೆ, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಅನುಸಾರ ಅವರು ಪದತ್ಯಾಗ ಮಾಡಬೇಕಾಯಿತು. 2001ರ ಡಿಸೆಂಬರ್‌ನಲ್ಲಿ ತಾನ್ಸಿ ಭೂ ಹಗರಣ ಪ್ರಕರಣದಲ್ಲಿ ಖುಲಾಸೆಗೊಂಡ ಜಯಲಲಿತಾ, ನಂತರ 2002ರಲ್ಲಿ ವಿಧಾನಸಭೆಗೆ ಆಯ್ಕೆಯಾದರು.

ಚುನಾವಣಾ ಚುರುಮುರಿ

ಸೆಲೆಬ್ರಿಟಿ ಸೆಂಥಿಲ್!

ಜೆ. ಜಯಲಲಿತಾ ಅವರು ಆರು ಬಾರಿ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದು ಗೊತ್ತಿರುವ ಸಂಗತಿಯೇ. ಈ ಪೈಕಿ 2011-2016ರ ಅಧಿಕಾರಾವಧಿಯಲ್ಲಿ ಅವರ ಸಚಿವ ಸಂಪುಟದ ಕಿರಿಯ ಸದಸ್ಯರಲ್ಲಿ ಒಬ್ಬರೆನಿಸಿಕೊಂಡಿದ್ದವರು ವಿ. ಸೆಂಥಿಲ್ ಬಾಲಾಜಿ. ತಮ್ಮ ಸಂಘಟನಾ ಕೌಶಲದ ಮೂಲಕ ಹೀಗೆ ಜಯಲಲಿತಾರ ವಿಶ್ವಾಸ ಗಳಿಸಿದ್ದ ಸೆಂಥಿಲ್, ಭ್ರಷ್ಟಾಚಾರದ ಆರೋಪದ ಹಿನ್ನೆಲೆಯಲ್ಲಿ 2015ರಲ್ಲಿ ತಮ್ಮ ಸಚಿವ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು. ಇಷ್ಟಾಗಿಯೂ 2016ರ ಚುನಾವಣೆಯಲ್ಲಿ ಅವರಿಕೆ ಟಿಕೆಟ್ ನೀಡಲಾಯಿತು. ಜಯಲಲಿತಾರ ಮರಣದ ನಂತರ, ವಿ.ಕೆ. ಶಶಿಕಲಾ ಅವರ ಸೋದರಳಿಯ ಟಿ.ಟಿ.ವಿ. ದಿನಕರನ್ ಅವರ 'ಎಎಂಎಂಕೆ' ಪಕ್ಷದೊಂದಿಗೆ ಬಾಲಾಜಿ ಕೈಜೋಡಿಸಿದರು; ಹೀಗಾಗಿ ಅಂದಿನ ಸ್ಪೀಕರ್ ಪಿ. ಧನಪಾಲರು ಸೆಂಥಿಲ್‌ರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿದರು. 2018ರಲ್ಲಿ ಡಿಎಂಕೆ ಪಕ್ಷವನ್ನು ಸೇರಿಕೊಂಡು ಮುಖ್ಯಮಂತ್ರಿ ಸ್ಟಾಲಿನ್ ಅವರ ನಂಬಿಕಸ್ಥ ಸೇನಾನಿಯಾಗಿ ಹೊರಹೊಮ್ಮಿದರು ಸೆಂಥಿಲ್. ಆದರೆ, ಕೆಲ ವರ್ಷಗಳ ಹಿಂದಿನ ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಜಾರಿ ನಿರ್ದೇಶನಾಲಯವು ಅವರನ್ನು ಬಂಧಿಸಿ ನ್ಯಾಯಾಂಗ ಬಂಧನದಲ್ಲಿ ಇರಿಸಿತು. ಈ ನಡುವೆ ತೀವ್ರ ಎದೆನೋವಿನ ಕಾರಣ ಸೆಂಥಿಲ್ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಆಗ ಅವರನ್ನು ನೋಡಲೆಂದು ಮುಖ್ಯಮಂತ್ರಿ ಸ್ಟಾಲಿನ್ ಮತ್ತು ಅವರ ಸಚಿವ ಸಂಪುಟದ ಬಹುತೇಕ ಸದಸ್ಯರು ಆಸ್ಪತ್ರೆಗೆ ಧಾವಿಸಿದ್ದುಂಟು; ಇದು ಡಿಎಂಕೆ ವಲಯದಲ್ಲಿ ಸೆಂಥಿಲ್ ಅವರಿಗಿದ್ದ ಮಹತ್ವವನ್ನು ಒತ್ತಿಹೇಳುತ್ತದೆ. ಪ್ರಸ್ತುತ ತಮ್ಮ ತವರು ಜಿಲ್ಲೆ ಕರೂರಿನಿಂದ ದೂರದಲ್ಲಿರುವ ಕೊಯಮತ್ತೂರು (ದಕ್ಷಿಣ) ಕ್ಷೇತ್ರದಿಂದ ಡಿಎಂಕೆ ವತಿಯಿಂದ ಸ್ಪರ್ಧಿಸುವ ಮೂಲಕ ತಮ್ಮ ರಾಜಕೀಯ ಎದುರಾಳಿಗಳಾದ ಎಐಎಡಿಎಂಕೆ- ಬಿಜೆಪಿಗಳ ಭದ್ರಕೋಟೆಗೆ ಸೆಂಥಿಲ್ ಬಾಲಾಜಿ ನೇರವಾಗಿ ಲಗ್ಗೆ ಹಾಕಿದ್ದಾರೆ. ಮತದಾರರ ಕೃಪಾಕಟಾಕ್ಷವಿದ್ದಲ್ಲಿ ಅವರು ಮತ್ತೊಮ್ಮೆ ಮಿಂಚುವುದರಲ್ಲಿ ಸಂದೇಹವಿಲ್ಲ ಎನ್ನುತ್ತಾರೆ ಬಲ್ಲವರು.

ಭಯಬಿದ್ದ ವಿಜಯ್

ತಮಿಳುನಾಡು ವಿಧಾನಸಭಾ ಚುನಾವಣೆಯ ಕಣವು ರಂಗೇರುತ್ತಿದ್ದು, ಏಪ್ರಿಲ್ 23ರಂದು ಮತದಾನ ನಡೆಯಲಿದೆ. ವಿವಿಧ ರಾಜಕೀಯ ಪಕ್ಷಗಳ ನಾಯಕರು ಪ್ರಚಾರ ಚಟುವಟಿಕೆಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ಈ ಬಾರಿ 'ಕಿಂಗ್ ಮೇಕರ್' ಆಗಲಿದೆ ಎನ್ನಲಾಗುವ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ನಾಯಕ ವಿಜಯ್ ಕೂಡ ಇದಕ್ಕೆ ಹೊರತಾಗಿಲ್ಲ. ಚುನಾವಣಾ ಪ್ರಚಾರ ಕಾರ್ಯದ ಭಾಗವಾಗಿ ಇತ್ತೀಚೆಗೆ ಹೆದ್ದಾರಿಯೊಂದರಲ್ಲಿ ಸೈಕಲ್ ರ್‍ಯಾಲಿ ಕೈಗೊಂಡಿದ್ದ ವಿಜಯ್ ಕೆಲ ಕಾಲ ಭಯಭೀತರಾದ ಘಟನೆ ಜರುಗಿದೆ. ಭಾರಿ ಪ್ರಮಾಣದಲ್ಲಿ ಜನರು ಸೇರಿದ್ದ ಈ ರ್‍ಯಾಲಿಯಲ್ಲಿ ವಿಜಯ್ ಏಕಾಂಗಿಯಾಗಿ ಸೈಕಲ್ ಸವಾರಿ ಮಾಡುತ್ತಿದ್ದರು. ಆಗ ತಮ್ಮ ಅಭಿಮಾನಿಯೊಬ್ಬ ಎಸೆದ ಹೂಗುಚ್ಛವನ್ನು 'ಫ್ಲವರ್ ಬಾಂಬ್' ಎಂದು ತಪ್ಪಾಗಿ ಭಾವಿಸಿದ ವಿಜಯ್, ತಕ್ಷಣವೇ ಸೈಕಲ್ ಬಿಟ್ಟು ಓಡಿ ಪ್ರಚಾರ ವಾಹನವನ್ನೇರಿದರು. ಈ ವಿಡಿಯೋ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, 'ವಿಜಯ್ ಅವರ ಸ್ಟಂಟ್ ಏನಿದ್ದರೂ ಸಿನಿಮಾಗಳಲ್ಲಿ ಮಾತ್ರವೇ' ಎಂದು ಅದರಲ್ಲಿ ಕೆಲವರು ವ್ಯಂಗ್ಯವಾಡಿದ್ದರೆ, 'ಭದ್ರತಾ ಲೋಪಕ್ಕೆ ಕಾರಣವಾಗುವಂಥ ಈ ರೀತಿಯ ತೋರಿಕೆಯ ಪ್ರಚಾರ ಬೇಕೇ?' ಎಂದು ಮತ್ತೆ ಕೆಲವರು ತಿವಿದಿದ್ದಾರೆ.

ಕೋಟ್ ಆಫ್ ದ ಡೇ



ನಮ್ಮ ಹೋರಾಟ ಬಿಜೆಪಿಯ ವಿರುದ್ಧವಲ್ಲ, ಬದಲಿಗೆ ವ್ಯವಸ್ಥೆಯಲ್ಲಿರುವ ದೋಷಗಳ ವಿರುದ್ಧ. ನನ್ನ ಸ್ವಂತ ಕ್ಷೇತ್ರದಲ್ಲೇ ನನ್ನ ವಿರುದ್ಧ ಎರಡು ಸುಳ್ಳು ಅಫಿಡವಿಟ್‌ಗಳನ್ನು ಸಲ್ಲಿಸಿ ನಾಮಪತ್ರವನ್ನು ರದ್ದುಗೊಳಿಸಲು ಯತ್ನಿಸಿದರೂ ಅವರು ಯಶಸ್ವಿಯಾಗಲಿಲ್ಲ.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಘೇರಾವ್ ಪ್ರಕರಣ 6 ಮಂದಿ ಬಂಧನ

ಮಾಲ್ಡಾ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವೇಳೆ ಮತದಾರರ ಹೆಸರನ್ನು ತೆಗೆದುಹಾಕಿದ್ದರ ವಿರುದ್ಧ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ ನ್ಯಾಯಾಂಗದ ಅಧಿಕಾರಿಗಳನ್ನು ಘೇರಾವ್ ಮಾಡಿದರೆಂಬ ಆರೋಪದ ಮೇರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಏಳು ಮಂದಿಯನ್ನು ವಶಕ್ಕೆ ಪಡೆದು, ಪಂಚಾಯತ್ ಸದಸ್ಯರೊಬ್ಬರನ್ನು ಬಂಧಿಸಿದೆ.

ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಘೇರಾವ್ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿರುವ ಎನ್‌ಐಎ, ಮಾಲ್ಡಾದ ಮಥಾಬಾರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಯೀಮ್ ಚೌಧರಿ ಅವರನ್ನು, ಅವರು ಪ್ರಚಾರ ನಡೆಸುತ್ತಿದ್ದ ವೇಳೆ ಸಹಚರರೊಂದಿಗೆ ವಶಕ್ಕೆ ಪಡೆದಿದೆ ಎಂದು ತಿಳಿದುಬಂದಿದೆ. ರಾಜ್ಯ ಪೊಲೀಸರಿಂದ ಮೊದಲು ಬಂಧಿತರಾಗಿದ್ದ ಎಐಎಂಐಎಂ ಪಕ್ಷದ ಸದಸ್ಯ ಮೊಫಕ್ಕರುಲ್ ಇಸ್ಲಾಂ ಅವರ ವಿಚಾರಣೆಯ ಬಳಿಕ ದಕ್ಕಿದ ಸುಳಿವುಗಳನ್ನು ಆಧರಿಸಿ, ಐಎಸ್‌ಎಫ್ ಪಕ್ಷದ ಗ್ರಾಮ ಪಂಚಾಯತ್ ಸದಸ್ಯ ಗೋಲಂ ರಬ್ಬಾನಿ ಎಂಬುವವರನ್ನು ಬಂಧಿಸಲಾಗಿದೆ. ಎನ್‌ಐಎ ಮೂಲಗಳ ಪ್ರಕಾರ ಇವರನ್ನು ಕೋಲ್ಕತ್ತಾಗೆ ಕರೆತಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ವಿಚಾರಣೆಗೆ ಒಳಪಡಿಸಿ, ಈ ಘಟನೆಗೆ ಸಂಬಂಧಿಸಿದ ಮಹತ್ವದ ಮಾಹಿತಿಯನ್ನು ಪಡೆಯುವ ಸಾಧ್ಯತೆಯಿದೆ.

ಚುನಾವಣೆ ರದ್ದು ಕೋರಿದ್ದ ಅರ್ಜಿ ವಜಾ

ದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 23 ಮತ್ತು 29ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮುನ್ನ ನಡೆದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಪಟ್ಟಿಯಿಂದ ಹೆಸರುಗಳು ತೆಗೆಯಲ್ಪಟ್ಟ ಮತದಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ಈ ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಲು ನ್ಯಾಯಾಲಯ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡಿರುವ ದ್ವಿಸದಸ್ಯ ನ್ಯಾಯಪೀಠವು ಈ ಅರ್ಜಿಯನ್ನು 'ಅಕಾಲಿಕ' ಎಂದು ಕರೆದು, ಈಗಾಗಲೇ ಸ್ಥಾಪಿತವಾಗಿರುವ ಮೇಲ್ಮನವಿ ನ್ಯಾಯಮಂಡಳಿಗಳನ್ನು ಸಂಪರ್ಕಿಸುವಂತೆ ಅಸಮಾಧಾನಗೊಂಡ ಪಕ್ಷಸ್ಥರಿಗೆ ಸೂಚಿಸಿದೆ.

- 90 ಲಕ್ಷಕ್ಕೂ ಹೆಚ್ಚು ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ.
- ಸದ್ಯ ಸುಮಾರು 34 ಲಕ್ಷ ಮನವಿಗಳು ವಿವಿಧ ನ್ಯಾಯಮಂಡಳಿಗಳ ಸಮ್ಮುಖದಲ್ಲಿವೆ.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗಿರುವವರ ಪೈಕಿ 13 ಮಂದಿಯ ಪರವಾಗಿ ಸಲ್ಲಿಸಲಾಗಿದ್ದ ಈ ಅರ್ಜಿಯಲ್ಲಿ, 'ಚುನಾವಣಾ ಆಯೋಗವು ಕಾನೂನುಬದ್ಧ ವಿಧಾನಗಳನ್ನು ಅನುಸರಿಸದೆ, ಹೆಸರುಗಳನ್ನು ತುರ್ತಾಗಿ ಅಳಿಸುತ್ತಿದೆ ಮತ್ತು ಆ ಪ್ರಕ್ರಿಯೆಗಳ ವಿರುದ್ಧ ಸಲ್ಲಿಸಲಾದ ಮನವಿಗಳ ವಿಚಾರಣೆ ಸಮಯಕ್ಕೆ ಸರಿಯಾಗಿ ನಡೆಯುತ್ತಿಲ್ಲ' ಎಂದು ಆರೋಪಿಸಲಾಗಿತ್ತು.

'ಅರ್ಜಿದಾರರು ಈಗಾಗಲೇ ಮೇಲ್ಮನವಿ ನ್ಯಾಯಮಂಡಳಿಗಳ ಮೊರೆಹೋಗಿರುವುದರಿಂದ, ಅರ್ಜಿಯಲ್ಲಿ ವ್ಯಕ್ತಪಡಿಸಿರುವ ಆತಂಕಗಳು ಅಕಾಲಿಕವಾಗಿವೆ ಎಂಬುದು ನಮ್ಮ ಅಭಿಪ್ರಾಯ. ಈ ಅರ್ಜಿಯನ್ನು ಅನುಮೋದಿಸಿದರೆ, ಅಗತ್ಯವಾದ ಪರಿಣಾಮಗಳು ಸ್ವಯಂಪ್ರೇರಿತವಾಗಿ ಉಂಟಾಗುತ್ತವೆ' ಎಂದು ಪೀಠವು ತನ್ನ ಆದೇಶದಲ್ಲಿ ತಿಳಿಸಿದೆ. ಜತೆಗೆ, 'ನ್ಯಾಯಾಂಗದ ಹಸ್ತಕ್ಷೇಪದ ಉದ್ದೇಶವು ಚುನಾವಣೆಯನ್ನು ಉತ್ತೇಜಿಸುವುದೇ ವಿನಾ, ತಡೆಯುವುದಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ ಹಾಗೂ 'ಅರ್ಜಿದಾರರು ಮೊದಲು ಮೇಲ್ಮನವಿ ನ್ಯಾಯಮಂಡಳಿಗಳ ಮುಂದೆ ಲಭ್ಯವಿರುವ ಎಲ್ಲಾ ಪರಿಹಾರ ಮಾರ್ಗಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು' ಎಂದು ಮುಖ್ಯ ನ್ಯಾಯಮೂರ್ತಿಗಳು ಒತ್ತಿಹೇಳಿದ್ದಾರೆ. ವಿವಾದಾತ್ಮಕ 'ಎಸ್‌ಐಆರ್' ಪ್ರಕ್ರಿಯೆಯ ನಂತರ ಬಂಗಾಳದ ಮತದಾರರ ಪಟ್ಟಿಯಿಂದ 90 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದ್ದು, ಈ ಸಂಬಂಧವಾಗಿ ಸದ್ಯ ಸುಮಾರು 34 ಲಕ್ಷ ಮನವಿಗಳು ವಿವಿಧ ನ್ಯಾಯಮಂಡಳಿಗಳ ಸಮ್ಮುಖದಲ್ಲಿ ಬಾಕಿಯಿವೆ. ಈ ಅರ್ಜಿಗಳ ಇತ್ಯರ್ಥಕ್ಕೆ 19 ನ್ಯಾಯಮಂಡಳಿಗಳನ್ನು ರಚಿಸಲಾಗಿದೆ ಎಂಬುದನ್ನಿಲ್ಲಿ ಸ್ಮರಿಸಬಹುದು.

ಜನನಾಯಗನ್ ಸಿನಿಮಾ ಸೋರಿಕೆ: 6 ಆರೋಪಿಗಳ ಬಂಧನ

ಚೆನ್ನೈ: 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ನಾಯಕ ಹಾಗೂ ಚಿತ್ರನಟ ವಿಜಯ್ ಅಭಿನಯದ 'ಜನನಾಯಗನ್' ಚಲನಚಿತ್ರದ ದೃಶ್ಯಗಳನ್ನು ಸೋರಿಕೆ ಮಾಡಿದ ಪ್ರಕರಣದಲ್ಲಿ ತಮಿಳುನಾಡು ಸೈಬರ್ ಕ್ರೈಮ್ ವಿಭಾಗವು ಆರು ಮಂದಿ ಆರೋಪಿಗಳನ್ನು ಬಂಧಿಸಿದೆ. ಅವರಿಂದ ಡಿಜಿಟಲ್ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳಲಾಗಿದ್ದು, 300ಕ್ಕೂ ಹೆಚ್ಚು ಪೈರಸಿ ಲಿಂಕ್‌ಗಳನ್ನು ಅಳಿಸಿಹಾಕಲಾಗಿದೆ ಎಂದು ತಿಳಿದುಬಂದಿದೆ.

ಬಂಧಿತರು 'ಕ್ಲೌಡ್ ಸ್ಟೋರೇಜ್' ವೇದಿಕೆಗಳ ಮೂಲಕ ಸಿನಿಮಾದ ದೃಶ್ಯಗಳನ್ನು ಅಪ್‌ಲೋಡ್ ಮಾಡಿ, ಲಿಂಕ್‌ಗಳನ್ನು ಹಂಚಿಕೆ ಮಾಡುತ್ತಿದ್ದರು ಎನ್ನಲಾಗಿದ್ದು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.



ಸೈಬರ್ ಅಪರಾಧ ವಿಭಾಗದ ಮುಖ್ಯ ಕಚೇರಿಯು ನೀಡಿರುವ ಮಾಹಿತಿಯ ಪ್ರಕಾರ, ಡಿಜಿಟಲ್ ಪೈರಸಿಯ ವಿಶ್ಲೇಷಣೆ ನಡೆಸಿ, ವಿಡಿಯೋ ಹಂಚಿಕೆಯನ್ನು ಪತ್ತೆ ಹಚ್ಚಲು ಹಲವು ವಿಶೇಷ ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ಸಾಮಾಜಿಕ ಜಾಲತಾಣಗಳು ಮತ್ತು ಫೈಲ್ ಹಂಚಿಕೆ ಸೇವೆಗಳ ಮೇಲೆ ನಿಗಾ ಇರಿಸಿ, ಸೋರಿಕೆಯಾದ ದೃಶ್ಯಗಳ ಹರಡುವಿಕೆಯನ್ನು ತಡೆಗಟ್ಟುವಲ್ಲಿ ವ್ಯಸ್ತವಾಗಿವೆ ಎಂದು ತಿಳಿದುಬಂದಿದೆ. 'ಜನನಾಯಗನ್' ಸಿನಿಮಾದ ದೃಶ್ಯಗಳನ್ನು ಒಳಗೊಂಡ 5 ನಿಮಿಷ ಅವಧಿಯ ವಿಡಿಯೋ ಕ್ಲಿಪ್ ಒಂದು ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸೋರಿಕೆಯಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಸೈಬರ್ ಅಪರಾಧ ತನಿಖಾ ಕೇಂದ್ರವು ಆರೋಪಿಯನ್ನು ಬಂಧಿಸಿದೆ.

'ಜನನಾಯಗನ್' ಚಲನಚಿತ್ರವು ಜನವರಿ 9ರಂದು ಬಿಡುಗಡೆಯಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ಅದು ವಿಳಂಬವಾಗುತ್ತಲೇ ಇದೆ ಎಂಬುದನ್ನಿಲ್ಲಿ ಸ್ಮರಿಸಬಹುದು.

ಬೆದರಿಸುವ ಕೆಲಸ: ಶಾ ಆರೋಪ

ಮಯೂರೇಶ್ವರ: ಪಶ್ಚಿಮ ಬಂಗಾಳ ರಾಜ್ಯದ ಬಹುಸಂಖ್ಯಾತರನ್ನು ಭಯಭೀತರನ್ನಾಗಿಸುವ ಕೆಲಸವನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾಡುತ್ತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆರೋಪಿಸಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿರ್‌ಭೂಮ್ ಜಿಲ್ಲೆಯ ಮಯೂರೇಶ್ವರದಲ್ಲಿ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದ ಅವರು, ''ಪಶ್ಚಿಮ ಬಂಗಾಳದ ಜನರು ಬಾಂಬ್‌ಗಳಿಗೆ ತಮ್ಮ ಮತಗಳ ಮೂಲಕ ಉತ್ತರಿಸಲಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಮತದಾರರು ಬಿಜೆಪಿಗೆ ಮತಹಾಕಲಿರುವುದರಿಂದ ರಾಜ್ಯದಲ್ಲಿ ಡಬಲ್ ಎಂಜಿನ್ ಸರಕಾರ ರಚನೆಯಾಗಲಿದೆ'' ಎಂದು ಭರವಸೆಯನ್ನು ವ್ಯಕ್ತಪಡಿಸಿದರು. ಮಾತು ಮುಂದುವರಿಸಿದ ಅವರು, ''ದೇಶ ಮತ್ತು ರಾಜ್ಯದಲ್ಲಿರುವ ಅಕ್ರಮ ನುಸುಳುಕೋರರನ್ನು ಹೊರದಬ್ಬಲೆಂದೇ ಈ ಚುನಾವಣೆ ನಡೆಯುತ್ತಿದೆ. ತೃಣಮೂಲ ಕಾಂಗ್ರೆಸ್ ಪಕ್ಷದ ಗೂಂಡಾಗಳು ಮತದಾನದ ದಿನದಂದು ಮನೆಯೊಳಗೇ ಇರಬೇಕು, ಇಲ್ಲದಿದ್ದರೆ ಮೇ 4ರ ನಂತರ ಅವರನ್ನು ಜೈಲಿಗಟ್ಟಲಾಗುತ್ತದೆ'' ಎಂದು ಅಬ್ಬರಿಸಿದರು.

ಲೆಕ್ಕ ನೀಡಲು ವಿಳಂಬವೇಕೆ?

ಆಯೋಗಕ್ಕೆ ಕಾಂಗ್ರೆಸ್, ಸಿಪಿಎಂ ಪ್ರಶ್ನೆ

ತಿರುವನಂತಪುರಂ: 140 ಸದಸ್ಯ ಬಲದ ಕೇರಳ ವಿಧಾನಸಭೆಗೆ ಏ.9ರಂದು ನಡೆದ ಚುನಾವಣೆಯಲ್ಲಿನ ಮತದಾನದ ಸಮಗ್ರ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಲು ಚುನಾವಣಾ ಆಯೋಗವು ವಿಳಂಬ ಮಾಡುತ್ತಿರುವುದೇಕೆ? ಎಂದು ಕಾಂಗ್ರೆಸ್ ಮತ್ತು ಸಿಪಿಎಂ ಪಕ್ಷಗಳು ಪ್ರಶ್ನಿಸಿವೆ. ಹಿರಿಯ ಕಾಂಗ್ರೆಸ್ಸಿಗ ವಿ.ಡಿ. ಸತೀಶನ್ ಅವರು ಈ ಕುರಿತು ಆಯೋಗಕ್ಕೆ ಬರೆದಿರುವ ಪತ್ರದಲ್ಲಿ, ''ಮತದಾನ ಮುಗಿದು ಸಾಕಷ್ಟು ದಿನಗಳಾಗಿದ್ದರೂ ಆಯೋಗದ ಜಾಲತಾಣದಲ್ಲಿ ಈ ಕುರಿತು ಮಾಹಿತಿ ಲಭ್ಯವಾಗಿಲ್ಲ. ಕ್ಷೇತ್ರವಾರು ಮತದಾನದ ಅಂಕಿ-ಅಂಶ, ಶೇಕಡಾವಾರು ಮತದಾನ, ಅಂಚೆ ಪತ್ರಗಳ ಮತದಾನದ ದತ್ತಾಂಶಗಳ ವಿವರಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಚುನಾವಣಾ ಪ್ರಕ್ರಿಯೆಯಲ್ಲಿ ನಂಬಿಕೆ ಉಳಿಯುವಂತಾಗಲು ಪಾರದರ್ಶಕತೆಯನ್ನು ಕಾಪಾಡಿಕೊಳ್ಳಬೇಕಾದ್ದು ಮುಖ್ಯ'' ಎಂದು ಉಲ್ಲೇಖಿಸಿದ್ದಾರೆ ಎಂದು ತಿಳಿದುಬಂದಿದೆ. ಸಿಪಿಎಂ ನಾಯಕ ಹಾಗೂ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಅವರು, ''ಮತದಾನ ಮುಗಿದು ನಾಲ್ಕು ದಿನಗಳಾಗಿದ್ದರೂ ಆಯೋಗವು ದತ್ತಾಂಶವನ್ನು ಬಿಡುಗಡೆ ಮಾಡದಿರುವುದು ಅಸಹಜ ನಡೆ. ಇವಿಎಂನಲ್ಲಿ ದಾಖಲಾದ ಮತಗಳು, ಅಂಚೆ ಮತಗಳು, ಸೇವಾ ಮತಗಳು ಸೇರಿದಂತೆ, ಮತದಾನದ ಸಮಗ್ರ ಲೆಕ್ಕವನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ತಂತ್ರಜ್ಞಾನದ ಯುಗದಲ್ಲೂ ಹೀಗೆ ವಿಳಂಬವಾಗುತ್ತಿರುವುದು ಆಯೋಗದ ಪಾರದರ್ಶಕತೆ ಅನುಮಾನಿಸುವುದಕ್ಕೆ ಕಾರಣವಾಗುತ್ತದೆ'' ಎಂದಿದ್ದಾರೆ.

ವಿಶ್ವವಾಣಿ ಬೆಂಗಳೂರು 14-04-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಹನಿಗವನಗಳು

● ಎಚ್. ಪ್ರಹ್ಲಾದ ರಾವ್, ಬೆಂಗಳೂರು

ಹೃದಯಕ್ಕೊಂದು ಅಸಿಸ್ಟೆಂಟು!

ಸಾವಿರಾರು ಜೀವಗಳ ಉಳಿಸಿರುವರು
ಹೃದಯ ತಜ್ಞರು ಉಪಯೋಗಿಸಿ ಸ್ಟೆಂಟು
ಭಗವಂತ ಸೃಷ್ಟಿಸಿದ ಹೃದಯದೊಳಗೆ
ಇದೊಂದು ಮಾನವ ನಿರ್ಮಿತ ಅಸಿಸ್ಟೆಂಟು!

ಹರಿ ಕೊಟ್ಟ ರಕ್ತ!

ಸೃಷ್ಟಿಸಿದಾಗ ಭಗವಂತ
ಈ ದೇಹದೊಳಗೆ ಹರಿಬಿಟ್ಟ
ಸಾಕಷ್ಟು ಜೀವದ್ರವ- ರಕ್ತ.
ರಕ್ತಸ್ರಾವವಾಗಿ ಹೀನತೆ
ಬಂದಾಗ ವೈದ್ಯರ ಚಾಕಚಕ್ಯತೆ
ರಕ್ತವ ಸೇರಿಸುವರು ದೇಹದೊಳಗೆ ಮತ್ತೆ!

ಉಸಿರಿರುವವರೆಗೆ!

ದೇವರಿಟ್ಟ ದೇಹದೊಳಗೆ ಪ್ರಾಣ
ಕೊಟ್ಟ ಒಳಗಿರುವ ಕಣಕಣಕ್ಕೂ ತ್ರಾಣ
ಅಂಗಾಂಗ ವೈಫಲ್ಯವಾದಾಗ ವೈದ್ಯರಿಗೆ ಶರಣ
ಪ್ರಾರ್ಥಿಸುತ್ತ- 'ದೇವರೇ ಬಾರದಿರಲಿ ಮರಣ'!

● ನಾರಾಯಣ ಪೊಸ್ಥಿತ್ಲು

ಇಡ್ಲಿ ವಡೆಗೆ..!

ಕೆಲವರು ತೂಕ ಕಳೆಯಲು
ದಿನವೂ ಮಾಡುವರು
ಗಂಟೆಗಟ್ಟಲೆ ವೇಗದ ನಡಿಗೆ
ಏನು ಮಾಡೋದು
ಮತ್ತೆ ಮತ್ತೆ ಮನಸೋಲುವರು
ಹೋಟೆಲಿನ ಇಡ್ಲಿ ವಡೆಗೆ..!!

ಪ್ರೇಮಯಾನ ಎಂಬ ಭಾವಯಾನ ಇಲ್ಲಿ ಮೌನವೇ ಶ್ರೇಷ್ಠ ಭಾಷೆ

● ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

ಭಾಷೆ ಎನ್ನುವುದು ಭಾವನೆಗಳ ಅಭಿವ್ಯಕ್ತಿಗೆ ಇರುವ ಒಂದು ಸಾಧನವಷ್ಟೇ. ಆದರೆ, ಪ್ರೀತಿಯೆಂಬ ಅತೀಂದ್ರಿಯ ಲೋಕದಲ್ಲಿ ಅಕ್ಷರಗಳು ಸೋಲುವ ಕ್ಷಣಗಳೇ ಹೆಚ್ಚು. ಹೃದಯದ ಆಳದ ಕಂಪನಗಳನ್ನು ಹಿಡಿದಿಡಲು ವರ್ಣಮಾಲೆಗಳಿಗೆ ಶಕ್ತಿಯಿಲ್ಲದಿದ್ದಾಗ, ಅಲ್ಲಿ ಮೌನವೇ ಒಂದು ಪರಿಪೂರ್ಣ ಭಾಷೆಯಾಗಿ ಅವತರಿಸುತ್ತದೆ. ಅಕ್ಷರಗಳಾಚೆಗಿನ ಈ ಅನುರಾಗದಲ್ಲಿ, ಮಾತಿಗೆ ಸಿಗದ ಭಾವಗಳೆಲ್ಲವೂ ಮೌನದ ಮಡಿಲಲ್ಲಿ ಅಂತಿಮ ನಿಲ್ದಾಣವನ್ನು ಕಂಡುಕೊಳ್ಳುತ್ತವೆ.

● **ಭಾವಗಳ ಅಂತರ್ಮುಖಿ ಪಯಣ**

ನಮ್ಮೊಳಗಿನ ಪ್ರೀತಿ ಯಾವಾಗಲೂ ಬಹಿರ್ಮುಖಿಯಾಗಬೇಕಿಲ್ಲ. ಕೆಲವೊಮ್ಮೆ ಮೌನವಾಗಿ ಬೆಳೆಯುವ ಪ್ರೀತಿಯು ಆಳವಾದ ಬೇರುಗಳನ್ನು ಹೊಂದಿರುತ್ತದೆ. ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದೆಂದರೆ ಅವರೊಂದಿಗೆ ಸದಾ ಮಾತನಾಡುತ್ತಿರುವುದಲ್ಲ; ಬದಲಾಗಿ ಅವರ ಮೌನವನ್ನು ಓದಲು ಕಲಿಯುವುದು. ಈ ಅಂತರ್ಮುಖಿ ಪಯಣದಲ್ಲಿ ನಾವೆಲ್ಲರೂ ಅನ್ವೇಷಕರು. ಇಲ್ಲಿ ಶಬ್ದಗಳು ಗದ್ದಲದಂತೆ ಭಾಸವಾಗುತ್ತವೆ.

ಯಾವಾಗ ಹೃದಯವೊಂದು ಮತ್ತೊಂದು ಹೃದಯದೊಂದಿಗೆ ಮೌನದ ಸಂಕೇತಗಳ ಮೂಲಕ ಸಂಭಾಷಿಸುತ್ತದೆಯೋ, ಅಲ್ಲಿ ಸುಳ್ಳಿಗೆ ಆಸ್ಪದವಿಲ್ಲ. ಕಣ್ಣಿನ ರೆಪ್ಪೆಗಳ ಅಲುಗಾಟ, ಉಸಿರಾಟದ ಲಯ ಮತ್ತು ಜತೆಗಿರುವ ಆ ಹಿತವಾದ ನಿಶ್ಶಬ್ದ- ಇವೇ ಪ್ರೀತಿಯ ನಿಜವಾದ ವ್ಯಾಕರಣಗಳು. ಅಕ್ಷರಗಳು ಕೇವಲ ಅರ್ಥವನ್ನು ನೀಡಿದರೆ, ಮೌನವು ಅನುಭೂತಿಯನ್ನು ನೀಡುತ್ತದೆ.

● **ವಿರಹ ಸಾಗರದಿ ಮೌನದೋಣಿ**

ವಿರಹವೆನ್ನುವುದು ಪ್ರೀತಿಯ ಅಗ್ನಿಪರೀಕ್ಷೆ. ಪ್ರೀತಿಸುವ ಜೀವ ದೂರವಾದಾಗ ಉಂಟಾಗುವ ಆ ಶೂನ್ಯತೆಯನ್ನು ತುಂಬಲು ಯಾವ ಪದಗಳೂ ಸಾಲುವುದಿಲ್ಲ. ವಿರಹದ ಸಮಯದಲ್ಲಿ ನಾವು ನಡೆಸುವ ಸಂಭಾಷಣೆಗಳೆಲ್ಲವೂ ಸ್ವಗತಗಳು. ನೆನಪುಗಳ ಸುಳಿಯಲ್ಲಿ ಸಿಲುಕಿದಾಗ ಮಾತುಗಳು ಮರೆಯಾಗಿ ಕಣ್ಣೀರು ಮತ್ತು ಮೌನವಷ್ಟೇ ಉಳಿಯುತ್ತವೆ.

ಈ ವಿರಹದ ಮೌನವು ಶಾಪವಲ್ಲ, ಅದೊಂದು ತಪಸ್ಸು. ದೂರವಿರುವ ಸಂಗಾತಿಯ ಬಗ್ಗೆ ಮೌನವಾಗಿ ಯೋಚಿಸುವುದು, ಅವರ ಇರುವಿಕೆಯನ್ನು ಶೂನ್ಯದಲ್ಲಿ ಹುಡುಕುವುದು ಮತ್ತು ಆ ಮೌನದಲ್ಲೇ ಅವರ ಧ್ವನಿಯನ್ನು ಆಲಿಸುವುದು ವಿರಹದ ಪರಮಾವಧಿ. ಇಲ್ಲಿ ಮೌನವು ನೋವನ್ನು ನುಂಗುವ ಸಾಧನವೂ ಹೌದು, ನೆನಪುಗಳನ್ನು ಮರುಕಳಿಸುವ ಕನ್ನಡಿಯೂ ಹೌದು.

● **ನಿಶ್ಶಬ್ದದ ನಾದ**

ಸುದೀರ್ಘ ವಿರಹದ ನಂತರದ ಮಿಲನವು ಪದಗಳ ಅಬ್ಬರದಿಂದ ಕೂಡಿರುವುದಿಲ್ಲ. ಬದಲಾಗಿ, ಅದು ಮೌನದ ಪರಾಕಾಷ್ಠೆ. ಇಬ್ಬರು ವ್ಯಕ್ತಿಗಳು ಮುಖಾಮುಖಿಯಾದಾಗ, ಹೇಳಬೇಕಾದ ಸಾವಿರಾರು ಮಾತುಗಳು ಗಂಟಲಲ್ಲೇ ಸಿಲುಕಿ ಮೌನವಾಗಿ ಹೊರಬರುತ್ತವೆ. ಆ ಕ್ಷಣದ ಆಲಿಂಗನದಲ್ಲಿ ಅಥವಾ ಕೇವಲ ದೃಷ್ಟಿ ಸಂಯೋಜನೆಯಲ್ಲಿ ಪ್ರಪಂಚದ ಎಲ್ಲಾ ಕವಿತೆಗಳೂ ಅಡಗಿರುತ್ತವೆ.

ಮಿಲನದ ಸಮಯದಲ್ಲಿ ಮೌನವು ಅತ್ಯಂತ ಶ್ರೇಷ್ಠ ಸಂಭಾಷಣೆಯಾಗುತ್ತದೆ, ಏಕೆಂದರೆ ಅಲ್ಲಿ ಭಾವನೆಗಳು ಅಕ್ಷರಗಳ ಹಂಗಿಲ್ಲದೆ ನೇರವಾಗಿ ಸಂವಹನಗೊಳ್ಳುತ್ತವೆ. ಮೌನವು ಇಲ್ಲಿ ಪೂರ್ಣವಿರಾಮವಲ್ಲ, ಅದೊಂದು ನಿರಂತರವಾಗಿ ಹರಿಯುವ ಒಲವಿನ ಪ್ರವಾಹ.

● **ಮೌನದಲ್ಲಿ ಅರಳುವ ಆತ್ಮಸಾಕ್ಷಾತ್ಕಾರ**

ಪ್ರೀತಿಯ ಈ ಪಯಣ ಕೇವಲ ಇಬ್ಬರು ವ್ಯಕ್ತಿಗಳ ನಡುವಿನ ಪಯಣವಲ್ಲ; ಇದು ಪ್ರತಿಯೊಬ್ಬ ಪ್ರೇಮಿಯ ಆತ್ಮದೊಳಗಿನ ಆಳವಾದ ಅನ್ವೇಷಣೆ. ಅಕ್ಷರಗಳ ಹಂಗು ತೊರೆದಾಗ ಮಾತ್ರ ಹೃದಯದ ನಿಜವಾದ ದನಿಯು ಕೇಳಿಸಲು ಸಾಧ್ಯ. ಈ ಮೌನದ ಕಣಿವೆಯಲ್ಲಿ ಅಹಂಕಾರವು ಕರಗಿಹೋಗುತ್ತದೆ ಮತ್ತು ಕೇವಲ ಅನುರಾಗ ಎಂಬ ಸತ್ವ ಮಾತ್ರ ಉಳಿಯುತ್ತದೆ. ನಾವು ಶಬ್ದಗಳ ಮೂಲಕ ಜಗತ್ತನ್ನು ವಂಚಿಸಬಹುದು, ಆದರೆ ಮೌನದ ಮೂಲಕ ಸುಳ್ಳು ಹೇಳಲು ಸಾಧ್ಯವಿಲ್ಲ. ಹೀಗಾಗಿ, ಪ್ರೀತಿಯಲ್ಲಿ ಮೌನವು ಸತ್ಯದ ಪರಮೋಚ್ಚ ರೂಪವಾಗಿ ನಿಲ್ಲುತ್ತದೆ. ಅದು ನಮ್ಮನ್ನು ನಾವು ಅರಿಯುವಂತೆ ಮಾಡುವುದಲ್ಲದೆ, ಎದುರಿಗಿರುವ ಜೀವದ ಮೌನಕ್ಕೂ ಅರ್ಥ ನೀಡುವ ಸಂವೇದನೆಯನ್ನು ಜಾಗೃತಗೊಳಿಸುತ್ತದೆ.

● **ಪ್ರೀತಿಯ ಅಂತಿಮ ನಿಲ್ದಾಣ**

ಬದುಕಿನ ಅಂತ್ಯದಲ್ಲಿ ಅಥವಾ ಪ್ರೀತಿಯ ಉತ್ತುಂಗದಲ್ಲಿ ನಮಗೆ ಅರಿವಾಗುವುದು ಒಂದೇ; ಅಂತಿಮವಾಗಿ ಉಳಿಯುವುದು ಮೌನ ಮಾತ್ರ. ಮಡಿಲ ಮೌನವೆಂದರೆ ಅದು ಸುರಕ್ಷತೆಯ ಭಾವ. ಪ್ರೀತಿಪಾತ್ರರ ಮಡಿಲಲ್ಲಿ ತಲೆ ಇಟ್ಟು ಮೌನವಾಗಿರುವಾಗ ಸಿಗುವ ನೆಮ್ಮದಿ ಕೋಟಿ ಪದಗಳಿಗೂ ಸಿಗಲಾರದು. ಇದು ಪ್ರೀತಿಯ ಅಂತಿಮ ನಿಲ್ದಾಣ. ಇಲ್ಲಿ ಯಾವುದೇ ಗೊಂದಲವಿಲ್ಲ, ಯಾವುದೇ ಸ್ಪಷ್ಟನೆಯ ಅಗತ್ಯವಿಲ್ಲ. ಈ ಸ್ಥಿತಿಯಲ್ಲಿ ಮೌನವು ದೈವಿಕವಾಗುತ್ತದೆ. ರೂಪಕಗಳ ಮೂಲಕ ಹೇಳುವುದಾದರೆ, ನದಿಯು ಸಮುದ್ರವನ್ನು ಸೇರಿದಾಗ ತನ್ನ ಅಬ್ಬರವನ್ನು ನಿಲ್ಲಿಸಿ ಮೌನವಾಗುವಂತೆ, ಪರಿಪೂರ್ಣ ಪ್ರೀತಿಯು ಮೌನದಲ್ಲಿ ಲೀನವಾಗುತ್ತದೆ.

● **ಮೌನದ ಮಹಾಕಾವ್ಯ**

ಸಾಗರದ ಆಳದಲ್ಲಿ ಅಲೆಗಳ ಆರ್ಭಟವಿಲ್ಲದಿದ್ದರೂ ಅತೀವ ಶಾಂತಿಯಿರುವಂತೆ, ಪ್ರೀತಿಯ ಅಂತಿಮ ಹಂತವು ಈ ಮಡಿಲ ಮೌನದಲ್ಲೇ ಇರುತ್ತದೆ. ಇಲ್ಲಿ ವಿರಹ ಮತ್ತು ಮಿಲನಗಳು ಎರಡು ವಿರುದ್ಧ ಧ್ರುವಗಳಂತೆ ತೋರುವುದಿಲ್ಲ; ಬದಲಾಗಿ ಒಂದು ಸುಂದರ ವೃತ್ತದ ಎರಡು ಪಾರ್ಶ್ವಗಳಂತೆ ಭಾಸವಾಗುತ್ತವೆ. ಈ ಹಂತ ತಲುಪಿದಾಗ ಬದುಕಿನ ಜಂಜಾಟಗಳೆಲ್ಲವೂ ಗೌಣವಾಗಿ, ಕೇವಲ ಭಾವಗಳ ತನ್ಮಯತೆ ಮಾತ್ರ ಸ್ಥಾಯಿಯಾಗಿ ಉಳಿಯುತ್ತದೆ. ಈ ನಿಶ್ಶಬ್ದದ ಪಿಸುಮಾತುಗಳಲ್ಲಿ ಒಂದು ಯುಗದ ಕಥೆಯನ್ನೇ ಹೇಳಬಹುದು. ಈ ಮೌನವು ಶೂನ್ಯವಲ್ಲ, ಅದು ತುಂಬಿ ತುಳುಕುವ ಪೂರ್ಣತೆ. ಭಾವಗಳ ಈ ಅಂತಿಮ ನಿಲ್ದಾಣದಲ್ಲಿ ಮಾತು ಮೌನಕ್ಕೆ ಶರಣಾದಾಗಲೇ ಪ್ರೀತಿ ಅಮರತ್ವವನ್ನು ಪಡೆಯುತ್ತದೆ.

● **ಮೌನವೇ ಶ್ರೇಷ್ಠ ಸಂಭಾಷಣೆ**

'ಮಾತು ಬೆಳ್ಳಿ, ಮೌನ ಬಂಗಾರ' ಎಂಬ ಗಾದೆಯನ್ನು ಪ್ರೀತಿಗೆ ಅನ್ವಯಿಸಿದಾಗ ಅಕ್ಷರಶಃ ಸತ್ಯವೆನಿಸುತ್ತದೆ. ಅಕ್ಷರಗಳು ಮನುಷ್ಯ ನಿರ್ಮಿತ, ಆದರೆ ಮೌನವು ಪ್ರಕೃತಿದತ್ತ. ವಿರಹದ ನೋವಿಗೆ ಮದ್ದು ನೀಡಲು, ಮಿಲನದ ಸುಖವನ್ನು ಅನುಭವಿಸಲು ಮತ್ತು ಪ್ರೀತಿಯ ಆಳವನ್ನು ಅಳೆಯಲು ಮೌನಕ್ಕಿಂತ ಮಿಗಿಲಾದ ಭಾಷೆ ಮತ್ತೊಂದಿಲ್ಲ. ಯಾವಾಗ ಪದಗಳು ಸೋಲುತ್ತವೆಯೋ ಅಲ್ಲಿ ಪ್ರೀತಿ ಆರಂಭವಾಗುತ್ತದೆ; ಯಾವಾಗ ಪ್ರೀತಿ ಪಕ್ವವಾಗುತ್ತದೆಯೋ ಅಲ್ಲಿ ಮೌನವೇ ಅಂತಿಮ ಸಂಭಾಷಣೆಯಾಗುತ್ತದೆ.

ಹೀಗೆ, ಅಕ್ಷರಗಳ ಸೀಮಿತ ಚೌಕಟ್ಟನ್ನು ಮೀರಿದ ಈ ಅನುರಾಗದ ಮಹಾಪಯಣವು, ಮೌನದ ಮಡಿಲಲ್ಲಿ ತನ್ನ ಪರಮ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಶಬ್ದಗಳು ಮಂಕಾಗುವ ಈ ಭಾವಯಾನದಲ್ಲಿ, ಬದುಕು ಮತ್ತು ಬಾಂಧವ್ಯಗಳ ನಡುವೆ ಈ ನಿಶ್ಶಬ್ದವೇ ಒಂದು ಸುಂದರ ಸೇತುವೆಯಾಗಿ, ಎರಡು ಭಿನ್ನ ಅಸ್ತಿತ್ವಗಳನ್ನು ಏಕಾಗ್ರತೆಯ ಅತೀಂದ್ರಿಯ ಲೋಕದಲ್ಲಿ ಬೆಸೆಯುತ್ತದೆ....

ಗುರುತಿನ ಹೊರೆ ಬದಲಾಗಲಿ

● ಡಾ. ರವಿಶಂಕರ್ ಎ.ಕೆ.

ಶಿಕ್ಷಣದ ಮೂಲ ಉದ್ದೇಶ ಬಂಧನಗಳಿಂದ ಬಿಡುಗಡೆಗೊಳಿಸುವುದು. ಅಲ್ಲಿಯೇ ಹಲವು ಬಂಧನಗಳು ಮೂಡಿದರೆ, ಶಿಕ್ಷಣಕ್ಕೆ ಮೌಲ್ಯ ಬರುವುದಿಲ್ಲ. ಅಂಥ ಒಂದು ಸಾಧನವಾದ 'ಐಡಿ ಕಾರ್ಡ್' ಕುರಿತಾದ ಆಲೋಚನೆ ಇದು. ಆದರೆ, ಇಂದು ನಾವು ಮಗುವಿನ ಅಸ್ತಿತ್ವಕ್ಕೆ ಗುರುತಿನ ಸಂಕೇತವಾಗಿ ಐಡಿ ಕಾರ್ಡ್ ನೀಡುತ್ತಿದ್ದೇವೆ. ಶಾಲೆಗೆ ಹೋಗುವ ಪುಟ್ಟ ಮಗುವಿನ ಕುತ್ತಿಗೆಯಲ್ಲಿ ನೇತಾಡುವ ಆ ಅಗಲವಾದ ಪಟ್ಟಿ ಮತ್ತು ಭಾರವಾದ ಪ್ಲಾಸ್ಟಿಕ್ ಗುರುತಿನ ಚೀಟಿ, ಇದು ನಮ್ಮ ವ್ಯವಸ್ಥೆಯು ಮಗುವಿನ ಮೇಲೆ ಹೇರುತ್ತಿರುವ ಒಂದು ಅನಗತ್ಯ ಶಿಸ್ತಿನ ಸಂಕೇತದಂತೆ ಕಾಣುತ್ತಿದೆ. ಗುರುತು ಮುಖ್ಯ, ಆದರೆ ಅದು ಮಗುವಿನ ಸ್ವಾಭಾವಿಕ ಚಲನೆಗೆ ಮತ್ತು ಸುಕೋಮಲ ಶರೀರಕ್ಕೆ ಹೊರೆಯಾಗಬಾರದು. ಅಸ್ತಿತ್ವದ ಗುರುತು ಅಂತರಂಗದ ಸಂಸ್ಕಾರವಾಗಬೇಕೇ ಹೊರತು, ಹೊರಗಿನ ಅಬ್ಬರದ ಪ್ರದರ್ಶನವಾಗಬೇಕಿಲ್ಲ.

● **ಆರೋಗ್ಯ ಸಂವೇದನೆ**

ಈ ವಿಷಯದಲ್ಲಿ ವೈಜ್ಞಾನಿಕವಾಗಿ ಗಮನಿಸಿದರೆ, ಐದಾರು ವರ್ಷದ ಮಗುವಿನ ಕುತ್ತಿಗೆಯ ಸ್ನಾಯುಗಳು ಅತ್ಯಂತ ಮೃದುವಾಗಿರುತ್ತವೆ. ದಿನದ ಐದಾರು ಗಂಟೆಗಳ ಕಾಲ ಭಾರವಾದ ಪ್ಲಾಸ್ಟಿಕ್

ಕಾರ್ಡ್ ಮತ್ತು ದಪ್ಪನೆಯ ನೈಲಾನ್ ಪಟ್ಟಿಯನ್ನು ಧರಿಸಿದಲ್ಲಿ ಅದು ಮಗುವಿನ ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಈ ಪಟ್ಟಿಗಳು ಚರ್ಮದ ಕಿರಿಕಿರಿಗೂ ಕಾರಣವಾಗಬಹುದು. ಪ್ರತಿ ಮಗುವೂ ಅತ್ಯಂತ ಕ್ರಿಯಾಶೀಲವಾಗಿರುತ್ತದೆ. ಇಂಥ ವಿಶೇಷ ಲಗತ್ತುಗಳು ಮಗುವಿನಲ್ಲಿ ಶಿಸ್ತನ್ನು ಬೆಳೆಸುವ ಬದಲು ಕ್ರಿಯಾಶೀಲತೆಯನ್ನು ಕಳಚುತ್ತಿವೆ; ಇದನ್ನು ನಾವು ಗಮನಿಸುತ್ತಿಲ್ಲ. ನಮ್ಮ ಚಿಂತನೆಗಳು ಸದಾ ಮಗುವಿನ ಹಿತವನ್ನು ಕೇಂದ್ರವಾಗಿಟ್ಟುಕೊಂಡಿರಬೇಕು. ಆ ಹಿನ್ನೆಲೆಯಲ್ಲಿ ಆಲೋಚನೆಗಳು ಕೆಲಸಮಾಡಬೇಕು.

● **ಜಾಗತಿಕ ಮಾದರಿಗಳು**

ವಿಶ್ವದ ಹಲವು ಮುಂದುವರಿದ ದೇಶಗಳಲ್ಲಿ

ಶಾಲಾ ಮಕ್ಕಳ ಗುರುತಿನ ಚೀಟಿಯ ಪರಿಕಲ್ಪನೆಯು ಅತ್ಯಂತ ಸರಳ ಮತ್ತು ವೈಜ್ಞಾನಿಕವಾಗಿದೆ. ಜಪಾನ್ ದೇಶದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ Meifuda ಎಂಬ ಸಣ್ಣ ಬ್ಯಾಡ್ಜ್‌ಗಳನ್ನು ಬಳಸಲಾಗುತ್ತದೆ. ಇವುಗಳನ್ನು ಮಗುವಿನ ಸಮವಸ್ತ್ರಕ್ಕೆ ಸಣ್ಣದಾದ ಪಿನ್ ಅಥವಾ ಕ್ಲಿಪ್ ಮೂಲಕ ಅಳವಡಿಸಲಾಗುತ್ತದೆ. ಇವು ಅತ್ಯಂತ ಹಗುರವಾಗಿರುತ್ತವೆ. ಜಪಾನಿನ ಶಿಕ್ಷಣ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ, ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ, ಕುತ್ತಿಗೆಗೆ ನೇತುಹಾಕುವ ಪಟ್ಟಿಗಳಿಗಿಂತ ಬಟ್ಟೆಗೆ ಅಂಟಿಸುವ ಬ್ಯಾಡ್ಜ್‌ಗಳೇ ಉತ್ತಮ ಎನ್ನಲಾಗಿದೆ. ಫಿನ್ಲೆಂಡ್‌ನ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಐಡಿ ಕಾರ್ಡ್‌ಗಳ ಪದ್ಧತಿ ತೀರಾ ಕಡಿಮೆ. ಮಕ್ಕಳನ್ನು ನಂಬಿಕೆಯ ಆಧಾರದ ಮೇಲೆ ಮತ್ತು ವೈಯಕ್ತಿಕ ಪರಿಚಯದ ಮೂಲಕ ಗುರುತಿಸಲಾಗುತ್ತದೆ. ಅಲ್ಲಿನ ಶಾಲೆಗಳಲ್ಲಿ ಮಕ್ಕಳ ಸಹಜ ಚಲನೆಗೆ ಆದ್ಯತೆ ನೀಡಲಾಗುತ್ತದೆ. ಬ್ರಿಟನ್‌ನ ಹಲವು ಶಾಲೆಗಳಲ್ಲಿ Health and Safety Executive (HSE) ಮಾರ್ಗಸೂಚಿಗಳ ಅನ್ವಯ, ಸಣ್ಣ ಮಕ್ಕಳು ಕುತ್ತಿಗೆಗೆ ಪಟ್ಟಿ ಧರಿಸುವಂತಿಲ್ಲ. ಆದರೆ, ಅನೇಕ ಶಾಲೆಗಳು ಈಗ ಬಟ್ಟೆಯ ಮೇಲೆ ಮುದ್ರಿತವಾಗುವ ಅಥವಾ ಕ್ಲಿಪ್-ಆನ್ ಕಾರ್ಡ್‌ಗಳನ್ನೇ ಬಳಸುತ್ತಿವೆ.

● **ದೊಡ್ಡವರ ಜವಾಬ್ದಾರಿ**

ಪ್ರತಿನಿತ್ಯ ಮಗುವಿಗೆ ಈ ಐಡಿ ಕಾರ್ಡ್ ತೊಡಿಸುವಾಗ ಎಲ್ಲಾ ಪೋಷಕರು ಇದೊಂದು ಸರಿಯಿಲ್ಲದ ಕ್ರಮ ಎಂದು ಆಲೋಚಿಸಿರುತ್ತಾರೆ. ಆದರೆ, ಆ ಕುರಿತು ಬದಲಾವಣೆಗಾಗಿ ಕಾಳಜಿ ವಹಿಸುವುದಿಲ್ಲ. ಪೋಷಕರು ಕೂಡ ಕೇವಲ ಶಿಸ್ತಿನ ಹೆಸರಿನಲ್ಲಿ ಮಗುವಿನ ಅಸ್ವಸ್ಥತೆಯನ್ನು ನಿರ್ಲಕ್ಷಿಸಬಾರದು. 'ನನ್ನ ಮಗುವಿಗೆ ಇದು ಆರಾಮದಾಯಕವೇ?' ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಪೋಷಕರೂ ಕೇಳಿಕೊಳ್ಳಬೇಕಿದೆ.

ಶಿಕ್ಷಣ ಸಂಸ್ಥೆಗಳು ಕೇವಲ ಶಾಲೆಯ ಹೆಸರಿನಲ್ಲಿ ದೊಡ್ಡ ದೊಡ್ಡ ಲೋಗೋಗಳಿರುವ ಭಾರಿ ಪಟ್ಟಿಗಳನ್ನು ಮಕ್ಕಳಿಗೆ ನೀಡುವುದನ್ನು ನಿಲ್ಲಿಸಬೇಕಿದೆ. ಶಾಲೆಯ ಹೆಸರು ಮಗುವಿನ ಜ್ಞಾನದ ಮೂಲಕ ಪ್ರದರ್ಶನವಾಗಬೇಕು, ಈ ಅನಗತ್ಯ ಜಾಹೀರಾತುಗಳ ಮೂಲಕವಲ್ಲ. ಯಾವ ಶಾಲೆಯು ಮಗುವಿನ ಬೌದ್ಧಿಕತೆಯನ್ನು ಶಾಶ್ವತ ಚಿಂತನೆಗಳ ಮೂಲಕ ಆಲೋಚಿಸುತ್ತದೆಯೋ ಅಂಥ ಶಾಲೆಗೆ ಸುದೀರ್ಘ ಭವಿಷ್ಯವಿರುತ್ತದೆ.

● **ಪರ್ಯಾಯ ಆಲೋಚನೆಗಳು**

ನಮ್ಮ ದೇಶದ ಹವಾಮಾನ ಮತ್ತು ಸಂಸ್ಕೃತಿಗೆ ಒಪ್ಪುವಂಥ ಪರ್ಯಾಯಗಳನ್ನು ನಾವು ಕಂಡುಕೊಳ್ಳಬೇಕಿದೆ. ಹತ್ತಿ ಅಥವಾ ಖಾದಿ ಬಟ್ಟೆಯ ಸಣ್ಣ ತುಂಡಿನ ಮೇಲೆ ಮಗುವಿನ ವಿವರಗಳನ್ನು ಮುದ್ರಿಸಿ ಸಮವಸ್ತ್ರದ ಭಾಗವಾಗಿಸಬಹುದು. ಪ್ಲಾಸ್ಟಿಕ್ ಬದಲಿಗೆ ಮೃದುವಾದ ಬಟ್ಟೆಯ ಮೇಲೆ ಸುಂದರವಾದ ವಿನ್ಯಾಸದೊಂದಿಗೆ ಗುರುತಿನ ಮಾಹಿತಿ ಅಳವಡಿಸಬಹುದು. ಇಂದಿನ ಡಿಜಿಟಲ್ ಯುಗದಲ್ಲಿ, ಸಮವಸ್ತ್ರದ ತೋಳಿನ ಮೇಲೆ ಸಣ್ಣದಾದ ಕ್ಯೂಆರ್ ಕೋಡ್ ಅನ್ನು ಹೊಲಿಯಬಹುದು. ಅಗತ್ಯವಿದ್ದಾಗ ಮಾತ್ರ ಅದನ್ನು ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಲು ಅನುಕೂಲವಾಗುತ್ತದೆ.

ಗುರುತು ಎಂಬುದು ವ್ಯಕ್ತಿಯ ಅಸ್ತಿತ್ವದ ಭಾಗವೇ ಹೊರತು ಅದು ಹೊರಗಿನಿಂದ ಹೇರುವ ಹೊರೆಯಾಗಬಾರದು. ನಾವು ಶಾಲಾ ಬ್ಯಾಗಿನ ಭಾರದ ಬಗ್ಗೆ ಮಾತನಾಡುತ್ತೇವೆ, ಆದರೆ ಕುತ್ತಿಗೆಯ ಮೇಲಿರುವ ಈ ಪುಟ್ಟ ಪ್ಲಾಸ್ಟಿಕ್ ಹೊರೆಯ ಬಗ್ಗೆ ಮೌನ ವಹಿಸಿದ್ದೇವೆ. ನಗರದ ವ್ಯಾಮೋಹದಿಂದ ಹಳ್ಳಿಯ ಸಂಸ್ಕೃತಿಯವರೆಗೆ ಹರಡಿರುವ ಈ 'ಗುರುತಿನ ಮೌಢ್ಯ' ಕೊನೆಯಾಗಬೇಕಿದೆ. ಸತ್ಯವೇನೆಂದರೆ, ಮಗುವಿನ ನಗು ಮತ್ತು ಅದರ ಕಲಿಕೆಯ ಉತ್ಸಾಹವೇ ಆ ಮಗುವಿನ ನಿಜವಾದ ಗುರುತು. ಗುರುತಿನ ಚೀಟಿಯ ಬದಲಾವಣೆಯು ಒಂದು ಸಣ್ಣ ವಿಷಯದಂತೆ ಕಂಡರೂ, ಇದು ನಾವು ಮಗುವನ್ನು ದೃಷ್ಟಿಯಲ್ಲಿರಿಸಿ ಆಲೋಚಿಸಬೇಕಾದ ದೃಷ್ಟಿಕೋನದ ಸಂಕೇತವಾಗಿದೆ. ಮಗು ಎಂದರೆ ಕೇವಲ ದಾಖಲಾತಿ ಸಂಖ್ಯೆಯಲ್ಲ. ಅದೊಂದು ಅರಳುತ್ತಿರುವ ಹೂವು. ಹೂವಿನ ಮೇಲೆ ಭಾರವನ್ನು ಹೇರಬಾರದು, ಬದಲಿಗೆ ಅದು ಸುಗಂಧವನ್ನು ಹರಡಲು ಪೂರಕವಾದ ಪರಿಸರವನ್ನು ನಿರ್ಮಿಸಬೇಕು. ಪ್ರತಿ ಮಗುವು ಕೂಡ ಈ ಸಮಾಜದ ಜವಾಬ್ದಾರಿಯಾಗಿದೆ ಎಂಬುದನ್ನು ಮರೆಯದಿರೋಣ...

ಶಿಕ್ಷೆಯಿಲ್ಲದ ಶಿಕ್ಷಣದಿಂದ ಕಾರ್ಯಸಾಧನೆ ಆದೀತೇ?

● ರಂಗನಾಥ್ ಗುಡಿಮನಿ

ವೇಗವಾಗಿ ಬೆಳೆದು ಬದಲಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಎಲ್ಲರೊಂದಿಗೂ, ಎಲ್ಲದಕ್ಕೂ ಹೊಂದಿಕೊಂಡು ಮುನ್ನಡೆಯಲು ಶಿಕ್ಷಣ ತುಂಬಾ ಅತ್ಯವಶ್ಯಕ. ಶಿಕ್ಷೆ, ಶಿಕ್ಷಣ, ಶಿಕ್ಷಕ ಇವು ಕಲಿಕೆಯ ತ್ರಿಭುಜದ ಮೂರು ಬಾಹುಗಳು. ಕಲಿಕಾ ವಿಷಯಕ್ಕೆ ಸಂಬಂಧಿಸಿದಂತೆ ಇವೆಲ್ಲವೂ ಒಂದಕ್ಕೊಂದು ಅವಿನಾಭಾವ ಸಂಬಂಧಗಳನ್ನು ಹೊಂದಿವೆ. ಶಿಕ್ಷೆ ಇರುವಲ್ಲಿ ಶಿಸ್ತು ಇರುತ್ತದೆ. ಶಿಸ್ತು ಇದ್ದಲ್ಲಿ ಶಿಕ್ಷಣವು ಬಳುವಳಿಯಾಗಿ ಬರುತ್ತದೆ. ಶಿಕ್ಷೆ ಇಲ್ಲದ ಶಿಕ್ಷಣ ಫಲಕಾರಿಯಾಗದು. ಅದು ಎಂದಿಗೂ ಸಾರ್ಥಕತೆಯನ್ನು ಪಡೆದುಕೊಳ್ಳದು. ಶಿಕ್ಷಣವು ಹುಟ್ಟಿನಿಂದ ಸಾಯುವವರೆಗೂ ಸಾಗಿಬರುವ ನಿರಂತರ ಪ್ರಕ್ರಿಯೆ. ಇದರ ಬೇರು ಕಹಿಯಾಗಿದ್ದರೂ, ಫಲ ಮಾತ್ರ ಯಾವತ್ತೂ ಸಿಹಿಯಾಗಿರುತ್ತದೆ!

ಪ್ರತಿಯೊಬ್ಬರ ಬದುಕಿನ ದಾರಿದೀಪವೇ ಶಿಕ್ಷಣ. ಇದರಲ್ಲಿ ಕ್ಷಿಪ್ರ ಹಾಗೂ ಪರಿಣಾಮಕಾರಿ ಕ್ರಾಂತಿಯನ್ನು ಕಾಣಲು ಶಿಕ್ಷೆಯು ಇರಲೇಬೇಕು. ಶಿಕ್ಷೆ ಇಲ್ಲದೇ ಹೋದರೆ ಶಿಕ್ಷಣವೇ ಇಲ್ಲ. ಆದರೆ ಶಿಕ್ಷೆಯೇ ಶಿಕ್ಷಣವಾಗಬಾರದು. ಇಂಥ ಶಿಕ್ಷಣವು ಮಕ್ಕಳ ಕಲಿಕೆಗೆ, ಸಮಾಜಕ್ಕೆ ಮಾರಕ. ಶಿಕ್ಷೆಯು ಮಕ್ಕಳ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತೆ ಇರಬಾರದು. ಶಿಕ್ಷಕರು ದೈಹಿಕ ದಂಡನೆ ನೀಡದೇ ಪ್ರೀತಿ, ಆಪ್ತ ಸಮಾಲೋಚನೆಗಳ ಮೂಲಕವೇ ಶಿಕ್ಷಣ ನೀಡಬೇಕಾಗಿದೆ. ಅಂದಿನ ಶಿಕ್ಷಣ ಪದ್ಧತಿಗೂ, ಇಂದಿನ ಶಿಕ್ಷಣ ಪದ್ಧತಿಗೂ ಅಗಾಧ ವ್ಯತ್ಯಾಸವಿದೆ. ಅಂದು ಕಲಿಕೆಯಲ್ಲಿ ಯಾರೇ ತಪ್ಪಿದರೂ ತಕ್ಷಣವೇ ಶಿಕ್ಷಕರು ನಿರ್ದಾಕ್ಷಿಣ್ಯವಾಗಿ ಶಿಕ್ಷೆ ನೀಡುತ್ತಿದ್ದರು. ಆದರೂ ಅವರ ಮೇಲೆ ಎಳ್ಳಷ್ಟೂ ಕೋಪವಿರುತ್ತಿರಲಿಲ್ಲ; ಭಯ, ಭಕ್ತಿ, ಗೌರವಗಳು ಹೇರಳವಾಗಿದ್ದವು. ಆದರೆ ಇಂದು ವಿದ್ಯಾರ್ಥಿಗಳದ್ದು ತಪ್ಪಿದ್ದಲ್ಲಿ ಶಿಕ್ಷೆ ನೀಡಿದ ಶಿಕ್ಷಕರನ್ನು ಆಜನ್ಮ ವೈರಿಯಂತೆ ದೂರತಳ್ಳಿ, ಅವರ ಮೇಲೆ ಹಲ್ಲುಮಸೆಯಲಾಗುತ್ತದೆ. ಇಂಥವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಗುರು-ಶಿಷ್ಯರ ಮಹತ್ತರ ಸಂಬಂಧವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ, ಸಮಾಜದ ಸ್ವಾಸ್ಥ್ಯವೇ ಹಾಳಾಗುತ್ತಿದೆ.

'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ'? ಎನ್ನುವ ಗಾದೆಮಾತಿನಂತೆ ಶಿಕ್ಷಕರು ಮಕ್ಕಳಿಗೆ ಅವರು ಎಳೆಯರಿದ್ದಾಗಲೇ ಕಲಿಕೆಯ ಜತೆ ಜತೆಗೆ ಉತ್ತಮ ಚಾರಿತ್ರ್ಯ, ಸಂಸ್ಕಾರಗಳನ್ನು ಧಾರೆಯೆರೆಯಬೇಕು. ಇದು ಅವರ ಆದ್ಯ ಕರ್ತವ್ಯ. ಆದರೆ ಇಂದಿನ ಶಿಕ್ಷಣದ ಮುಖ್ಯ ಉದ್ದೇಶವೇ ಅಂಕಗಳಿಕೆಯಾಗಿಬಿಟ್ಟಿದೆ. ಇದರ ಭರಾಟೆಯಲ್ಲಿ ಪ್ರತಿಯೊಂದು ಶಾಲೆ, ಕಾಲೇಜು, ಶಿಕ್ಷಣ ಸಂಸ್ಥೆಗಳು ಯಾವುದೇ ರೀತಿಯ ಶಿಕ್ಷೆ ನೀಡದೇ ಕೇವಲ ಕಾಂಚಾಣಕ್ಕಾಗಿ ಸತ್ವರಹಿತ ಮತ್ತು ಕಾಟಾಚಾರದ ಶಿಕ್ಷಣ ನೀಡುತ್ತಿರುವುದು ನಿಜಕ್ಕೂ ದುರದೃಷ್ಟಕರ ಸಂಗತಿ.

ಜಗತ್ತಿನ ಅತ್ಯಂತ ಶಕ್ತಿಶಾಲಿ ಆಯುಧ ಎಂದರೆ ಶಿಕ್ಷಣ. ಮಕ್ಕಳಿಗೆ ವಾಸ್ತವ ಪ್ರಪಂಚವನ್ನು ಅರ್ಥಮಾಡಿಸಿ, ಮಾನವೀಯತೆ ಬೆಳೆಸುವ ಶಿಕ್ಷಣ ಇಂದು ಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲರೊಂದಿಗೆ ಒಂದಾಗಿ, ಚೆಂದಾಗಿ ಬಾಳುವುದನ್ನು ಹೇಳಿಕೊಡುವ ಕಲಿಕೆ ಪ್ರಸ್ತುತ ತುಂಬಾ ಅವಶ್ಯವಿದೆ. ಶಿಕ್ಷೆ ನೀಡುವುದು ನಮ್ಮ ಒಳಿತಿಗೇ ಹೊರತು, ಕೆಡುಕಿಗೆ ಅಲ್ಲ. ಶಿಕ್ಷೆಯ ಅಲ್ಪಸ್ವಲ್ಪ ಭಯದ ಕಾರಣದಿಂದ ಕಲಿಕೆಯಲ್ಲಿ ಆಸಕ್ತಿ ಹೆಚ್ಚಿ, ಪ್ರಮಾದಗಳ ಸಂಖ್ಯೆ ಕಡಿಮೆಯಾಗುತ್ತದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೋಸ್ಕರ ಶಿಕ್ಷಣದಲ್ಲಿ ಶಿಕ್ಷೆಯ ಅಸ್ತಿತ್ವ ಇರಲೇಬೇಕು. ನಮ್ಮ ನಿರೀಕ್ಷೆಗೂ ಮೀರಿದ ಬದಲಾವಣೆ, ಉತ್ತಮ ಫಲಿತಾಂಶಗಳನ್ನು ಪಡೆಯಲು ಶಿಕ್ಷಣದಲ್ಲಿ ಶಿಕ್ಷೆಯು ಬೇಕೇ ಬೇಕು. ಇಲ್ಲದೇ ಹೋದರೆ ಶಿಕ್ಷಣ ತನ್ನ ಗಟ್ಟಿತನವನ್ನು ಕಳೆದುಕೊಂಡು, ನಮ್ಮ ಬದುಕನ್ನು ಅಸ್ತವ್ಯಸ್ತವಾಗಿಸುವುದು.

ಹಾಸ್ಯ-ಲಾಸ್ಯ...

ಸದ್ಯ, ಬಚಾವಾದೆ!

ಸರ್ದಾರ್ಜಿಯ ಮಗ ಶಾಲೆಯೆಡೆಗೆ ಹೆಜ್ಜೆಹಾಕುತ್ತಾ ಇದ್ದ. ಮಾರ್ಗಮಧ್ಯದಲ್ಲಿ ಆತನಿಗೆ ಕಪ್ಪು ಬಣ್ಣದ ಅದೇನೋ ವಸ್ತು ಕಾಣಿಸಿತು. ಹತ್ತಿರ ಹೋಗಿ ನೋಡಿದ, ಅದೇನು ಅಂತ ಗೊತ್ತಾಗಲಿಲ್ಲ. ಆ ವಸ್ತು ಹಸಿಹಸಿಯಾಗಿತ್ತು, ಅದನ್ನೊಮ್ಮೆ ಹಿಸುಕಿ ನೋಡಿದ. ಆಗಲೂ ಅದೇನು ಅಂತ ಗೊತ್ತಾಗಲಿಲ್ಲ. ಒಮ್ಮೆ ರುಚಿ ನೋಡಿದರೆ ಗೊತ್ತಾಗಬಹುದು ಅಂದುಕೊಂಡು ಬಾಯಲ್ಲಿ ಚಪ್ಪರಿಸಿದ. ನಂತರ ಇದ್ದಕ್ಕಿದ್ದಂತೆ, ''ಅಯ್ಯೋ, ಥೀ, ಇದು ಸಗಣಿ'' ಎಂದು ಉದ್ಗರಿಸಿ, ''ಸದ್ಯ, ಇದನ್ನು ತುಳೀಲಿಲ್ಲ, ಬಚಾವಾದೆ'' ಎಂದು ಗೊಣಗುತ್ತಾ ತನ್ನನ್ನು ತಾನೇ ಸಮಾಧಾನ ಮಾಡಿಕೊಂಡ!

ಮಿನಿ ಕಥೆ

ಬೀರಪ್ಪ ಡಿ. ಡಂಬಳಿ, ಕೋಹಳ್ಳಿ

ಪ್ರೇಮವು ಸ್ನೇಹವಾದಾಗ..!

ಅವಳಿಗೆ ಅವನು ಹೇಗೆ ಪರಿಚಯವಾದನೋ ಗೊತ್ತಿಲ್ಲ, ನೋಡನೋಡುತ್ತಿದ್ದಂತೆ ಅಷ್ಟೇ ಹತ್ತಿರವಾದನು. ಮನೋವೇದನೆ ಪ್ರೀತಿಗೆ ತಿರುಗಿತ್ತು. ಎಲ್ಲವೂ ಸಾಮಾನ್ಯ. ಅದೇ ಫೋನ್ ಕರೆಗಳು ಮತ್ತು ಸಂದೇಶಗಳ ಆರ್ಭಟ ಜೋರಾಗಿತ್ತು. ಆದರೆ ಅವಳ ಪ್ರೀತಿಯನ್ನು ಆ ಹುಡುಗ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ ಎಂಬುದೂ ಅಷ್ಟೇ ಸತ್ಯ. ಏಕೆಂದರೆ ಆ ಹುಡುಗ ಬೇರೆ ಒಬ್ಬಳಿಗೆ ಹತ್ತಿರವಾಗಿ ಮದುವೆಯ ಹೊಸ್ತಿಲಲ್ಲಿದ್ದ. ಹುಡುಗಿಯನ್ನು ನಿರಾಸೆಯ ಕಾರ್ಮೋಡ ಆವರಿಸಿತು. ಆದರೂ ಅವಳು ಪ್ರಬುದ್ಧೆ. ಆ ಜೋಡಿಗೆ ಹಾರೈಸಿ, 'ಇಷ್ಟೇ ಜೀವನ' ಅಂದುಕೊಂಡಳು. ತನ್ನ ಪ್ರೀತಿಯನ್ನು ಸ್ನೇಹವಾಗಿ ಪರಿವರ್ತಿಸಿದ ಸ್ನೇಹದಾತೆಯಾದಳು, ದೇವತೆಯಾದಳು...

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ವಿನೋದ ಅಥವಾ ಅಣಕವು ಕೊನೆಗೆ ಅನುಸ್ವಾರದೊಂದಿಗೆ ಬಂದಿದೆ (4)
3. ಎಲ್ಲದಕ್ಕಿಂತ ಶ್ರೇಷ್ಠವಾದದ್ದು ತಾಯಿನೆಲ (4)
4. ನಗ ತರುವಾಗ ನೋಡಿದ ಆಕಾಶ (3)
5. ದಿಕ್ಕು ತಪ್ಪಿಸಿ ಬಂದಿರುವ ಮದುವೆಯ ಗಂಡು (4)
7. ಚತುರ್ವೇದಗಳಲ್ಲಿ ಮೂರನೆಯದು (4)
11. ಪ್ರಾಚೀನ ಕಾಲದ ಅವಶೇಷವನ್ನು ಹೀಗೆನ್ನಬಹುದು (5)
14. ಮನಸ್ಸಿನ ಅಭಿಪ್ರಾಯ (4)
16. ಕಸ ಎತ್ತುವುದಲ್ಲ, ದೈಹಿಕ ವ್ಯಾಯಾಮ (4)
17. ಮಾಲತಿಯ ಬೆಕ್ಕು (3)
18. ಅಭಿಗೆ ಉಂಟಾದ ಬಯಕೆ (4)
19. ಹಣ ಎಣಿಸಲು ಪ್ರಯತ್ನಿಸು (4)

ಮೇಲಿಂದ ಕೆಳಕ್ಕೆ

2. ಎರಡು ನದಿಗಳು ಸೇರುವ ಸ್ಥಳ (3)
3. ಕೊನೆಗೆ ದೀರ್ಘವಾಗಿರುವ ಹಿಮಾಲಯದಲ್ಲಿರುವ ಒಂದು ಸರೋವರ (3)
5. ನೇಣು ಹಾಕಿ ಜಾರಿಗೊಳಿಸುವ ಮರಣದಂಡನೆ ಶಿಕ್ಷೆ (2)
6. ಕೆಟ್ಟ ಉದ್ದೇಶಕ್ಕೆ ಬಳಸಿಕೊಳ್ಳುವುದು (5)
8. ಗೃಹದಲ್ಲಿ ಮಾಡುವ ಕಾರ್ಯ (5)
9. ನಿಧಾನವಾಗಿ ಕೇಳಿದ ಸ್ವರ (2)
10. ಹೊಡೆಯಲು, ಕೆಲಸ ಮಾಡಲು ಬಳಸುವ ಸಾಧನ (3)
12. ಎರಡಕ್ಷರದ ಮತ್ತೊಂದು ಯಜ್ಞ (2)
13. ಅಮಲು ಎನ್ನುವ ಇನ್ನೊಂದು ಪದ (2)
15. ಆಶೆಯಿಂದ ಮಾಡಿದ ಹಾಸ್ಯ (3)
16. ಹಲವರ ನಡುವಿನ ಜಗಳ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ಪರಿಹಾಸಂ 3.ಮಾತೃಭೂಮಿ 4.ಗಗನ 5. ಗಮದುಮ 7.ಸಾಮವೇದ 11.ಪಳೆಯುಳಿಕೆ 14. ಮನೋಗತ 16.ಕಸರತ್ತು 17.ಮಾರ್ಜಾಲ 18.ಅಭಿಲಾಷೆ 19.ಹವಣಿಸು

ಮೇಲಿಂದ ಕೆಳಕ್ಕೆ: 2.ಸಂಗಮ 3.ಮಾನಸಾ 5.ಗಲ್ಲು 6.ದುರುಪಯೋಗ 8.ಮನೆಕೆಲಸ 9.ದನಿ 10.ಆಯುಧ 12.ಹೋಮ 13.ಮತ್ತು 15.ತಮಾಷೆ 16.ಕಲಹ

ರಾಮಚರಿತ ಮಾನಸ: ಹನುಮಂತನಿಗೆ ಸುರಸಾ ಪರೀಕ್ಷೆ

ನಮ್ಮ ಗುರಿಯತ್ತ ಸಾಗುವಾಗ ಕೇವಲ ಶಕ್ತಿಯಿದ್ದರೆ ಸಾಲದು, ಸಂದರ್ಭಕ್ಕೆ ತಕ್ಕಂತೆ ಬಳಸುವ ವಿವೇಚನೆ ಮತ್ತು ಬುದ್ಧಿವಂತಿಕೆಯೂ ಅತಿ ಮುಖ್ಯ. 'ಸುಂದರಕಾಂಡ'ದ ಈ ಪ್ರಸಂಗವು, ಅಹಂಕಾರವನ್ನು ಸೋಲಿಸಲು ವಿನಯ ಮತ್ತು ಯುಕ್ತಿ ಹೇಗೆ ಸಹಕಾರಿಯಾಗುತ್ತವೆ ಎಂಬುದನ್ನು ನಮಗೆ ತಿಳಿಸಿಕೊಡುತ್ತದೆ.

ಮೂಲ ಶ್ಲೋಕ (ಚೌಪಾಯಿ):

ಜೋಜನ ಭರಿ ತೆಹಿಂ ಬದನು ಪಸಾರಾ । ಕಪಿ ತನು ಕೀನ್ಹ ದುಗುನ ಬಿಸ್ತಾರಾ ॥
ಸೋಲಹ ಜೋಜನ ಮುಖ ತೆಹಿಂ ಭಯವೂ ।
ತುರತ ಪವನಸುತ ಬತ್ತಿಸ ಭಯವೂ ॥
ಸತ ಯೋಜನ ಮುಖ ತೇಹಿಂ ತಬ ಕೀನ್ಹಾ । ಅತಿ ಲಘು ರೂಪ ಧರಹಿಂ ಹನುಮಾನಾ ॥

ಹನುಮಂತನು ಶ್ರೀರಾಮನ ಕಾರ್ಯಕ್ಕಾಗಿ ಸಾಗರವನ್ನು ದಾಟಲು ಆಕಾಶಮಾರ್ಗದಲ್ಲಿ ಹಾರುತ್ತಿದ್ದಾಗ, ಅವನ ಬಲ ಮತ್ತು ಧೈರ್ಯವನ್ನು ಪರೀಕ್ಷಿಸಲು ದೇವತೆಗಳು ನಿರ್ಧರಿಸುತ್ತಾರೆ. ಈ ಪರೀಕ್ಷೆಗಾಗಿ ಅವರು ನಾಗಗಳ ಮಾತೆಯಾದ ಸುರಸಾ ಎಂಬ ದೇವತೆಯನ್ನು ಕಳುಹಿಸುತ್ತಾರೆ. ಹನುಮಂತನು ವೇಗವಾಗಿ ಸಾಗುತ್ತಿರುವಾಗ, ಸುರಸೆಯು ವಿರಾಟ ರೂಪವನ್ನು ಧರಿಸಿ ದಾರಿಯನ್ನು ಅಡ್ಡಗಟ್ಟುತ್ತಾಳೆ. ಅವಳು ಅಬ್ಬರಿಸುತ್ತಾ, ''ಎಲೈ ವಾನರನೇ, ಇಂದು ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ನೀಡಿದ್ದಾರೆ. ನೀನು ನನ್ನ ಬಾಯಿಯೊಳಗೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪ್ರವೇಶಿಸಲೇಬೇಕು'' ಎಂದು ಬೆದರಿಸುತ್ತಾಳೆ. ಹನುಮಂತನು ಮೊದಲು ಅತ್ಯಂತ ವಿನಯದಿಂದ

ಕೈಮುಗಿದು, ''ತಾಯಿ, ನಾನು ಪ್ರಭು ಶ್ರೀರಾಮನ ಕಾರ್ಯದ ನಿಮಿತ್ತ ಸೀತಾದೇವಿಯನ್ನು ಹುಡುಕಲು ಹೋಗುತ್ತಿದ್ದೇನೆ. ಆ ಕಾರ್ಯ ಮುಗಿಸಿ ಹಿಂದಿರುಗಿದ ಮೇಲೆ ನಾನೇ ಬಂದು ನಿನ್ನ ಆಹಾರವಾಗುತ್ತೇನೆ, ಅಲ್ಲಿಯವರೆಗೆ ದಯವಿಟ್ಟು ನನಗೆ ದಾರಿ ಬಿಡು'' ಎಂದು ಪ್ರಾರ್ಥಿಸುತ್ತಾನೆ. ಆದರೆ ಸುರಸೆಯು ಹಠ ಹಿಡಿಯುತ್ತಾಳೆ, ತನ್ನ ಬಾಯಿಯನ್ನು ತೆರೆದು ನುಂಗಲು ಮುಂದಾಗುತ್ತಾಳೆ.

ಇಲ್ಲಿಂದ ಹನುಮಂತ ಮತ್ತು ಸುರಸೆಯ ನಡುವೆ ಒಂದು ವಿಚಿತ್ರವಾದ ಪೈಪೋಟಿ ಆರಂಭವಾಗುತ್ತದೆ. ಸುರಸೆಯು ತನ್ನ ಬಾಯಿಯನ್ನು ಒಂದು ಯೋಜನದಷ್ಟು (ಸುಮಾರು ಎಂಟು ಮೈಲಿ) ಅಗಲವಾಗಿ ತೆರೆದಾಗ, ಹನುಮಂತನು ತನ್ನ ಶರೀರವನ್ನು ಎರಡು ಪಟ್ಟು ಅಂದರೆ ಎರಡು ಯೋಜನಗಳಷ್ಟು ಬೆಳೆಸುತ್ತಾನೆ. ಅವಳು ತನ್ನ ಬಾಯಿಯನ್ನು ಹದಿನಾರು ಯೋಜನಗಳಷ್ಟು ವಿಸ್ತರಿಸಿದಾಗ, ಹನುಮಂತನು ತಕ್ಷಣವೇ ಮೂವತ್ತೆರಡು ಯೋಜನದಷ್ಟು ಬೃಹದಾಕಾರವಾಗಿ ಬೆಳೆಯುತ್ತಾನೆ. ಸುರಸೆಯು ತನ್ನ ಗಾತ್ರವನ್ನು ಹೆಚ್ಚಿಸಿದಂತೆಲ್ಲಾ, ಹನುಮಂತನು ಅವಳಿಗಿಂತ ದುಪ್ಪಟ್ಟು ಗಾತ್ರವನ್ನು ತಳೆದು ನಿಲ್ಲುತ್ತಾನೆ.

ಕೊನೆಗೆ ಸುರಸೆಯು ಅಹಂಕಾರದಿಂದ ತನ್ನ ಬಾಯಿಯನ್ನು ನೂರು ಯೋಜನಗಳಷ್ಟು ಭೀಕರವಾಗಿ ಹರಡುತ್ತಾಳೆ. ಆ ವಿಶಾಲವಾದ ಬಾಯಿ ಸಾಗರವನ್ನೇ ನುಂಗುವಂತೆ ಕಾಣುತ್ತಿರುತ್ತದೆ. ಆಗ ಹನುಮಂತನು ತನ್ನ ಬಲಪ್ರದರ್ಶನದಿಂದ ಪ್ರಯೋಜನವಿಲ್ಲವೆಂದು ಅರಿತುಕೊಳ್ಳುತ್ತಾನೆ. ಆ ಕ್ಷಣದಲ್ಲೇ ತನ್ನ ಬೃಹತ್ ರೂಪವನ್ನು ಸಂಕುಚಿತಗೊಳಿಸಿ, ಒಂದು ಸಣ್ಣ ಸೊಳ್ಳೆಯಷ್ಟು (ಅತಿ ಲಘುರೂಪ) ರೂಪವನ್ನು ಧರಿಸುತ್ತಾನೆ. ಸುರಸೆಯು ಕಣ್ಣು ಮಿಟುಕಿಸುವಷ್ಟರಲ್ಲಿ ಅವಳ ಅಗಾಧವಾದ ಬಾಯಿಯೊಳಗೆ ಪ್ರವೇಶಿಸಿ, ಹಾಗೆಯೇ ಹೊರ ಬಂದು ಆಕೆಯ ಮುಂದೆ ವಿನಯದಿಂದ ನಿಲ್ಲುತ್ತಾನೆ.

''ತಾಯಿ, ನಿನ್ನ ಷರತ್ತಿನಂತೆ ನಾನು ನಿನ್ನ ಬಾಯಿಯೊಳಗೆ ಹೋಗಿ ಬಂದಿದ್ದೇನೆ. ನಿನ್ನ ಆಹಾರವಾಗುವ ಶಾಪವೂ ವಿಮೋಚನೆಯಾಯಿತು, ನನ್ನ ಕಾರ್ಯವೂ ಬಾಕಿಯಿದೆ'' ಎಂದು ನಗುತ್ತಾ ಹೇಳುತ್ತಾನೆ. ಹನುಮಂತನ ಈ ಅದ್ಭುತ ಸಮಯಪ್ರಜ್ಞೆ ಮತ್ತು ಯುಕ್ತಿಯನ್ನು ಕಂಡು ಸುರಸೆಯು ಬೆರಗಾಗುತ್ತಾಳೆ. ಅವಳು ತನ್ನ ನಿಜರೂಪಕ್ಕೆ ಬಂದು, ''ಹನುಮಂತಾ, ದೇವತೆಗಳು ನಿನ್ನ ಬುದ್ಧಿಶಕ್ತಿಯನ್ನು ಪರೀಕ್ಷಿಸಲು ನನ್ನನ್ನು ಕಳುಹಿಸಿದ್ದರು. ಬಲವೊಂದೇ ಸಾಲದು, ಬುದ್ಧಿಯೂ ಬೇಕು ಎಂಬುದನ್ನು ನೀನು ಸಾಬೀತುಪಡಿಸಿದೆ. ನಿನ್ನ ಕಾರ್ಯ ಯಶಸ್ವಿಯಾಗಲಿ'' ಎಂದು ಮನಸಾರೆ ಹರಸಿ ದಾರಿಬಿಡುತ್ತಾಳೆ.

ಬದುಕಿನಲ್ಲಿ ಅನೇಕ ಬಾರಿ ನಮಗೆ ವಿಪತ್ತುಗಳು ಎದುರಾದಾಗ ಪ್ರತಿ ಬಾರಿಯೂ ಶಕ್ತಿಯಿಂದ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿರುವುದಿಲ್ಲ. ಅನೇಕ ಬಾರಿ ಶಕ್ತಿಗಿಂತ ಯುಕ್ತಿ ಬೇಕಾಗುತ್ತದೆ. ಹೀಗಾಗಿಯೇ ಸಾಮಾನ್ಯರು ಕೂಡ ಅಸಾಮಾನ್ಯರನ್ನು ಸೋಲಿಸಿ ಮುನ್ನುಗ್ಗುತ್ತಾರೆ. ಇಂಥ ಸಮಯಪ್ರಜ್ಞೆ ನಮಗಿದ್ದಾಗ ಬದುಕಲ್ಲಿ ಎಂಥ ಪರಿಸ್ಥಿತಿ ಬಂದರೂ ನಿಭಾಯಿಸುವ ಆತ್ಮಸ್ಥೈರ್ಯ ನಮಗೆ ಸಿಗುತ್ತದೆ...

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಆರ್‌ಸಿಬಿ ನಮ್ಮ ಸಿಂಹಗಳು: ಮಲ್ಯ

ಲಂಡನ್: ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾದರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸಾಧಿಸಿದ ಅದ್ಭುತ ಗೆಲುವಿನ ಬಗ್ಗೆ ಆರ್‌ಸಿಬಿ ಮಾಜಿ ಮಾಲೀಕ ವಿಜಯ್ ಮಲ್ಯ ಪ್ರತಿಕ್ರಿಯಿಸಿ, ಮುಂಬೈನಲ್ಲಿ ತಂಡದ ಪ್ರದರ್ಶನವನ್ನು ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತಾಗಿ ಪ್ರತಿಕ್ರಿಯೆ ನೀಡಿದ ಮಲ್ಯ, 'ಆರ್‌ಸಿಬಿ ನಮ್ಮ ಸಿಂಹಗಳು' ಎಂದು ಶ್ಲಾಘಿಸುತ್ತಾ, ಮುಂಬೈ ಇಂಡಿಯನ್ಸ್ ತವರಿನಲ್ಲಿ ಜಯ ಸಾಧಿಸಲು ಬ್ಯಾಟ್ ಮತ್ತು ಚೆಂಡಿನೊಂದಿಗೆ ಜೋರಾಗಿ ಗರ್ಜಿಸಿದ ಬೆಂಗಳೂರಿನ ಸಿಂಹಗಳು ಎಂದು ಪೋಸ್ಟ್ ಮಾಡಿದ್ದಾರೆ. ಮಾರ್ಚ್ 2016ರಲ್ಲಿ ಭಾರತವನ್ನು ತೊರೆದ ಮಲ್ಯ, ಪ್ರಸ್ತುತ ಇಂಗ್ಲೆಂಡ್‌ನಲ್ಲಿ ನೆಲೆಸಿದ್ದು ಇಂಗ್ಲೆಂಡ್ ಮತ್ತು ವೇಲ್ಸ್‌ನಿಂದ ಹೊರಹೋಗದಂತೆ ಅವರಿಗೆ ನಿರ್ಬಂಧ ಇದೆ. ಸಾವಿರಾರು ಕೋಟಿ ಮೊತ್ತದ ಸಾಲ ಮರುಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ಆರೋಪಗಳನ್ನು ಎದುರಿಸುತ್ತಿದ್ದು 2019ರ ಜನವರಿಯಲ್ಲಿ ಹಣ ವರ್ಗಾವಣೆ ತಡೆ ಕಾಯ್ದೆಯಡಿಯಲ್ಲಿ ಪರಾರಿಯಾದ ಆರ್ಥಿಕ ಅಪರಾಧಿ ಎಂದು ಘೋಷಿಸಲ್ಪಟ್ಟಿದ್ದರು. ದೇಶ ತೊರೆದ ಹೊರತಾಗಿಯೂ ಅವರು ಆರ್‌ಸಿಬಿಯನ್ನು ಬೆಂಬಲಿಸುತ್ತಲೇ ಬಂದಿದ್ದಾರೆ.



ನಾಳೆಯ ಪಂದ್ಯಕ್ಕೆ ವಿರಾಟ್ ಕೊಹ್ಲಿ ಲಭ್ಯ

ಬೆಂಗಳೂರು: ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಆರ್‌ಸಿಬಿ ತಂಡದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಗಾಯಗೊಂಡಿದ್ದರು, ಹಾಗಾಗಿ ಅವರು ಫೀಲ್ಡಿಂಗ್ ಮಾಡಿರಲಿಲ್ಲ. ಇದೀಗ ಅವರ ಗಾಯದ ಬಗ್ಗೆ ಮಾಹಿತಿ ದೊರೆತ್ತಿದ್ದು, ಅವರೀಗ ಆರಾಮಾಗಿದ್ದು, ಕೊಹ್ಲಿಗೆ ಆಗಿರುವ ಗಾಯದ ಸಮಸ್ಯೆಯು ಗಂಭೀರವಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟಿದಾರ್ ಹೇಳಿದ್ದಾರೆ. ಆರ್‌ಸಿಬಿ ತನ್ನ ಮುಂದಿನ ಪಂದ್ಯವನ್ನು ಏಪ್ರಿಲ್ 15 ರಂದು ಲಖನೌ ವಿರುದ್ಧ ಆಡಲಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಕೊಹ್ಲಿ ಯಾವುದೇ ಸಮಸ್ಯೆ ಇಲ್ಲದೆ ಕಣಕ್ಕಿಳಿಯುವ ಸುದ್ದಿ ಅವರ ಅಭಿಮಾನಿಗಳಲ್ಲಿ ಸಂತಸ ತರಿಸಿದೆ.

ಕ್ರೀಡಾಂಗಣದ ಸಿಬ್ಬಂದಿಗೆ ₹ 25 ಲಕ್ಷ ಬಹುಮಾನ

ದೆಹಲಿ: ಗುವಾಹಟಿಯ ಬರ್ಸಪರ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಕ್ಯುರೆಟರ್ ಹಾಗೂ ಅಂಗಣದ ಸಿಬ್ಬಂದಿಗೆ ಅವರ ಕಠಿಣ ಸೇವೆಯನ್ನು ಗುರುತಿಸಿ 25 ಲಕ್ಷ ರು.ನಗದು ಬಹುಮಾನವನ್ನು ಅಸ್ಸಾಂ ಕ್ರಿಕೆಟ್ ಅಸೋಸಿಯೇಷನ್ (ಎಸಿಎ) ಘೋಷಿಸಿದೆ. ನಿರಂತರ ಮಳೆಯ ನಡುವೆಯೂ ಇಲ್ಲಿ ನಡೆದ ಐಪಿಎಲ್ ಟೂರ್ನಿಯ ಪಂದ್ಯಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಅವರು ನಿರ್ವಹಿಸಿದ ಕಠಿಣ ಪ್ರಯತ್ನಗಳನ್ನು ಗೌರವಿಸುವ ಸಲುವಾಗಿ ಈ ನಗದು ಬಹುಮಾನ ನೀಡಲಾಗಿದೆ ಎಂದು ಎಸಿಎ ತನ್ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಹೈದರಾಬಾದ್ ನಾಯಕ ಇಶಾನ್ ಕಿಶನ್ ಅಬ್ಬರದ ಬ್ಯಾಟಿಂಗ್

ರಾಜಸ್ಥಾನಕ್ಕೆ 217 ರನ್ ಗುರಿ

ಹೈದರಾಬಾದ್: ನಾಯಕ ಇಶಾನ್ ಕಿಶನ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಅತಿಥೇಯ ಸನ್‌ರೈಸರ್ಸ್ ಹೈದರಾಬಾದ್ ತಂಡವು ಬಲಿಷ್ಠ ರಾಜಸ್ಥಾನ ರಾಯಲ್ಸ್‌ಗೆ 217 ರನ್‌ಗಳ ಸವಾಲಿನ ಗುರಿ ನೀಡಿದೆ.

ಮೊದಲು ಬ್ಯಾಟಿಂಗ್ ಮಾಡಿದ ಅತಿಥೇಯ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 216 ರನ್ ಗಳಿಸುವಲ್ಲಿ ಯಶಸ್ವಿಯಾಯಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಸನ್ ರೈಸರ್ಸ್ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಸ್ಫೋಟಕ ಶೈಲಿಯ ಬ್ಯಾಟರ್ ಅಭಿಷೇಕ್ ಶರ್ಮಾ ಮೊದಲ ಎಸೆತದಲ್ಲೇ ವಿಕೆಟ್ ಒಪ್ಪಿಸಿದರು. ವೇಗಿ ಜೋಫ್ರಾ ಆರ್ಚರ್ ಎಸೆತವನ್ನು ಬಿರುಸಾಗಿ ಬಾರಿಸಿದ ಶರ್ಮಾ, ಬೌಂಡರಿ ಗೆರೆ ಬಳಿ ಇದ್ದ ರವಿ ಬಿಷ್ಣೋಯಿಗೆ ಕ್ಯಾಚ್ ನೀಡಿ ಕ್ರೀಸ್‌ನಿಂದ ನಿರ್ಗಮಿಸಿದರು.

ನಂತರ ಕ್ರೀಸ್‌ಗೆ ಇಳಿದ ನಾಯಕ ಇಶಾನ್ ಕಿಶನ್, ಲೀಲಾಜಾಲವಾಗಿ ಬ್ಯಾಟ್ ಬೀಸಿದರು. ಆರಂಭಿಕ ಆಘಾತವನ್ನೂ ಲೆಕ್ಕಿಸದ ಆಡಿದ ಅವರು, ಅನುಭವಿ ಆಟಗಾರ ಟ್ರಾವಿಸ್ ಹೆಡ್ (18 ರನ್) ಜತೆಗೂಡಿ 2ನೇ ವಿಕೆಟ್‌ಗೆ 55 ರನ್ ಸೇರಿಸಿದರು. ಹೆಡ್ ಪರಾಗ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದ್ದರು.

ನಂತರ ಹೆನ್ರಿಚ್ ಕ್ಲಾಸೆನ್ ಜೊತೆ ಮೂರನೇ ವಿಕೆಟ್‌ಗೆ ಇಶಾನ್ ಕಿಶನ್ 88 ರನ್ ಸೇರಿಸಿದರು. ಕೇವಲ 44 ಎಸೆತಗಳನ್ನು ಎದುರಿಸಿದ್ದ ಕಿಶನ್, 8 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ 91 ರನ್ ಗಳಿಸಿದ್ದಾಗ ಶತಕದ ಹೊಸ್ತಿಲಲ್ಲಿ ವಿಕೆಟ್ ಕಳೆದುಕೊಂಡರು. ಸಂದೀಪ್ ಶರ್ಮಾ ಅವರ ಬೌಲಿಂಗ್‌ನಲ್ಲಿ ಕಾಟ್ ಆ್ಯಂಡ್ ಬೌಲ್ಡ್ ಆದರು. ಕ್ಲಾಸೆನ್ 40 ರನ್ ಗಳಿಸಿ ಔಟಾದರು. ದೇಶ್‌ಪಾಂಡೆ ಬೌಲಿಂಗ್‌ನಲ್ಲಿ ಅವರು ಪರಾಗ್‌ಗೆ ಕ್ಯಾಚ್ ನೀಡಿ ದರು. ನಿತೀಶ್ ಕುಮಾರ್ ರೆಡ್ಡಿ (28) ಆರ್ಚರ್ ಬೌಲಿಂಗ್‌ನಲ್ಲಿ ಔಟ್ ಆದರು. ಸಲೀಲ್ ಆರೋರಾ (24 ಅಜೇಯ) ಸಮಯೋಚಿತವಾಗಿ ಆಟವಾಡಿದರು. ಹೀಗಾಗಿ ಹೈದರಾಬಾದ್ ತಂಡದ ಮೊತ್ತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 216ಕ್ಕೆ ತಲುಪಿತು. ರಾಜಸ್ಥಾನ್ ರಾಯಲ್ಸ್ ಪರ ವೇಗಿ ಜೋಫ್ರಾ ಆರ್ಚರ್ ಎರಡು ವಿಕೆಟ್ ಪಡೆದರೆ, ಸಂದೀಪ್ ಶರ್ಮಾ, ತುಷಾರ್ ದೇಶಪಾಂಡೆ ಮತ್ತು ನಾಯಕ ರಿಯಾನ್ ಪರಾಗ್ ತಲಾ ಒಂದು ವಿಕೆಟ್ ಪಡೆದರು.

ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್.

ಅಭಿಷೇಕ್ ಅನಗತ್ಯ ದಾಖಲೆ

ಟಿ20 ವಿಶ್ವಕಪ್‌ನಲ್ಲಿ ಕಳಪೆ ಪ್ರದರ್ಶನದಿಂದ ಬಳಲಿದ್ದ ಅಭಿಷೇಕ್ ಶರ್ಮಾ ಪ್ರಸ್ತುತ ಐಪಿಎಲ್‌ನಲ್ಲೂ ಅದೇ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಐಪಿಎಲ್‌ನಲ್ಲಿ ಸನ್ ರೈಸರ್ಸ್ ಹೈದರಾಬಾದ್ ಪರ ಆಡುತ್ತಿರುವ ಅಭಿಷೇಕ್ ಶರ್ಮಾ ಶೂನ್ಯಕ್ಕೆ ಅತೀ ಹೆಚ್ಚು ಬಾರಿ ಔಟ್ ಆಗಿದ್ದಾರೆ. ಸೋಮವಾರ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಮೊದಲ ಎಸೆತದಲ್ಲೇ ಔಟಾಗುವ ಮೂಲಕ ಅನಗತ್ಯ ದಾಖಲೆಯನ್ನು ತಮ್ಮ ಖಾತೆಗೆ ಹಾಕಿಕೊಂಡಿದ್ದಾರೆ. ಈ ಪಂದ್ಯದಲ್ಲಿ ಗೋಲ್ಡನ್ ಡಕ್‌ಗೆ ಬಲಿಯಾದ ಅಭಿಷೇಕ್ ಸತತ ಒಂಬತ್ತನೇ ಐಪಿಎಲ್ ಸೀಸನ್‌ನಲ್ಲಿ ಐದನೇ ಬಾರಿಗೆ ಡಕ್‌ಗೆ ಔಟಾದರು. 79 ಇನ್ನಿಂಗ್ಸ್‌ಗಳ ಅವರ ಒಟ್ಟು ಐಪಿಎಲ್ ವೃತ್ತಿಜೀವನದಲ್ಲಿ ಅಭಿಷೇಕ್ ಗೋಲ್ಡನ್ ಡಕ್‌ಗೆ ಔಟಾಗಿದ್ದು ಇದೇ ಮೊದಲು. ಈ ಆವೃತ್ತಿಯಲ್ಲಿ ಅಭಿಷೇಕ್ ಎರಡನೇ ಬಾರಿಗೆ ಡಕ್ ಆಗಿದ್ದಾರೆ. ಆದರೆ ಹಿಂದಿನ ಬಾರಿ ಎರಡು ಎಸೆತಗಳನ್ನು ಆಡಿ ಶೂನ್ಯಕ್ಕೆ ಔಟಾಗಿದ್ದರು.

ಪ್ರಫುಲ್ ದಾಖಲೆ

ಹೈದರಾಬಾದ್ ನೀಡಿದ ಗೆಲುವಿನ ಗುರಿಯನ್ನು ಬೆನ್ನಟ್ಟಿದ ರಾಜಸ್ಥಾನವು ಆರಂಭಿಕ ಕುಸಿತ ಕಂಡಿದೆ. ಎಸ್‌ಎಚ್ ಆರ್ ತಂಡದ ಪರ ಚೊಚ್ಚಲ ಪಂದ್ಯವನ್ನಾಡಿದ ಪ್ರಫುಲ್ ಐಪಿಎಲ್ ಇತಿಹಾಸದಲ್ಲೇ ಯಾವ ಆಟಗಾರನೂ ಮಾಡಿರದ ಮತ್ತು ಮುಂದೆ ಮಾಡಲು ಸಾಧ್ಯವಾಗದ ದಾಖಲೆಯೊಂದನ್ನು ನಿರ್ಮಿಸಿದ್ದಾರೆ.

ಪದಾರ್ಪಣೆ ಮಾಡಿದ ಪ್ರಫುಲ್ ತಾವು ಬೌಲ್ ಮಾಡಿದ ಮೊದಲ ಓವರ್‌ನಲ್ಲೇ ಮೂರು ವಿಕೆಟ್‌ಗಳನ್ನು ಉರುಳಿಸಿದರು, ಇದರಲ್ಲಿ ವಿಶೇಷತೆ ಅಂದರೆ ಈ ಮೂವರು ಬ್ಯಾಟ್ಸ್ ಮನ್‌ಗಳಿಗೆ ಖಾತೆ ತೆರೆಯಲೂ ಸಾಧ್ಯವಾಗಲಿಲ್ಲ.

ಎರಡೂ ತಂಡಗಳಿಗೂ ಪಂದ್ಯ ಗೆಲ್ಲುವ ಅನಿವಾರ್ಯತೆ

ಇಂದು ಚೆನ್ನೈ-ಕೋಲ್ಕತ್ತಾ ಕದನ

ಚೆನ್ನೈ: ಇಂದು ಇಲ್ಲಿನ ಚಿದಂಬರಂ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ.

ಈಗಾಗಲೇ 4 ಪಂದ್ಯಗಳನ್ನು ಆಡಿರುವ ಋತುರಾಜ್ ಗಾಯಕ್ವಾಡ್ ನಾಯಕತ್ವದ ಚೆನ್ನೈ ತಂಡವು ಕೇವಲ 1 ಪಂದ್ಯದಲ್ಲಿ ಗೆದ್ದು 3ರಲ್ಲಿ ಸೋತು ಅಂಕಪಟ್ಟಿಯಲ್ಲಿ 1 ಅಂಕ ಸಂಪಾದಿಸಿದೆ. ಆಡಿರುವ 4 ಪಂದ್ಯಗಳ ಪೈಕಿ 3 ಪಂದ್ಯ ಸೋತಿರುವ ಕೋಲ್ಕತ್ತಾ ತಂಡಕ್ಕೆ ಮಳೆಯಿಂದಾಗಿ 1 ಪಂದ್ಯ ರದ್ದಾಗಿರುವ ಕಾರಣ 1 ಅಂಕ ಮಾತ್ರ ಗಳಿಸುವಲ್ಲಿ ಸಫಲವಾಗಿದೆ.

ತನ್ನ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ರಾಜಸ್ಥಾನ ತಂಡದ ವಿರುದ್ಧ ಸೋತರೆ, 2ನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಪರಾಜಯ ಎದುರಿಸಿತು. 3ನೇ ಪಂದ್ಯದಲ್ಲಿ ಚೆನ್ನೈ ತಂಡವು ಆರ್‌ಸಿಬಿ ವಿರುದ್ಧ ಸೋತರೆ, 4ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 23 ರನ್‌ಗಳ ಗೆಲುವನ್ನು ಪಡೆದಿತ್ತು.

ಅಜಿಂಕ್ಯಾ ರಹಾನೆ ನಾಯಕತ್ವದ ಕೋಲ್ಕತ್ತಾ ತಂಡವು ಈ ಐಪಿಎಲ್ ಆವೃತ್ತಿಯ ತನ್ನ ಮೊದಲ ಪಂದ್ಯದಲ್ಲಿ ಮುಂಬೈ ವಿರುದ್ಧ ಸೋತರೆ, 2ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಪರಾಜಯ ಎದುರಿಸಿತು. ಪಂಜಾಬ್ ವಿರುದ್ಧದ ತನ್ನ 3ನೇ ಪಂದ್ಯ ಮಳೆಯಿಂದಾಗಿ ರದ್ದುಗೊಂಡ ಕಾರಣ ಕೇವಲ 1 ಅಂಕ ಗಳಿಸಿತು. ಕಳೆದ ಗುರುವಾರ ನಡೆದ 4ನೇ ಪಂದ್ಯದಲ್ಲಿ ಕೋಲ್ಕತ್ತಾ ತಂಡವು ಲಖನೌ ವಿರುದ್ಧ ಸೋಲನ್ನೆದುರಿಸಿತ್ತು.

ಚೆನ್ನೈ ಮತ್ತು ಕೋಲ್ಕತ್ತಾ ತಂಡಗಳು ಈ ಆವೃತ್ತಿಯಲ್ಲಿ ಇಲ್ಲಿಯ ವರೆಗೂ ತೀರಾ ಕಳಪೆ ಪ್ರದರ್ಶನವನ್ನು ನೀಡುತ್ತಾ ಬಂದಿವೆ. 3 ಪಂದ್ಯಗಳಲ್ಲಿ ಸತತವಾಗಿ ವಿಫಲರಾಗಿದ್ದ ಸಂಜು ಸ್ಯಾಮ್ಸನ್ ಕಳೆದೊಂದು ಪಂದ್ಯದಲ್ಲಿ ಮಿಂಚಿ ಗೆಲುವಿಗೆ ಕಾರನಕರ್ತರಾದರು. ನಾಯಕ ಋತುರಾಜ್ ಗಾಯಕ್ವಾಡ್ ಹೇಳಿಕೊಳ್ಳುವ ಉತ್ತಮ ಇನ್ನಿಂಗ್ಸ್ ಆಡಿಲ್ಲ. ಅದೇ ರೀತಿ ಆಯುಷ್ ಮ್ಹಾತ್ರೆ, ಶಿವಂ ದುಬೆ ಕೂಡಾ ಇಲ್ಲಿಯವರೆಗೂ ಮಿಂಚಿಲ್ಲ. ಅದೇ ರೀತಿ ವಿದೇಶಿ ಆಟಗಾರರೂ ಇಲ್ಲಿಯವರೆಗೂ ತಂಡದ ಕೈ ಹಿಡಿದಿಲ್ಲ.

ಕೋಲ್ಕತ್ತಾ ತಂಡದ ಆಟಗಾರರಿಂದಲೂ ಈ ಆವೃತ್ತಿಯಲ್ಲಿ ಉತ್ತಮ ಪ್ರದರ್ಶನ ಮೂಡಿಬಂದಿಲ್ಲ. ರಚಿನ್ ರವೀಂದ್ರ, ಕ್ವಿಂಟನ್ ಡಿ ಕಾಕ್ ಇನ್ನೂ ಫಾರ್ಮಿಗೆ ಮರಳದಿರುವುದು ತಂಡದ ಮ್ಯಾನೇಜ್‌ಮೆಂಟ್‌ನ ಚಿಂತೆಗೆ ಕಾರಣವಾಗಿದೆ. ವಿದೇಶಿ ಆಟಗಾರರಾದ ಫಿನ್ ಅಲೆನ್ ಮತ್ತು ಕ್ಯಾಮರೂನ್‌ರನ್ನು ಮುಖ್ಯವಾಗಿ ಆಶ್ರಯಿಸಿದೆ. ಎರಡು ದುರ್ಬಲ ತಂಡಗಳ ನಡುವಿನ ಹಣಾಹಣಿಯಲ್ಲಿ ಮಂಗಳವಾರ ಯಾರ ಕೈ ಮೇಲಾಗುತ್ತದೆ ಎಂಬುದೇ ಕ್ರಿಕೆಟ್‌ಪ್ರೇಮಿಗಳ ಕುತೂಹಲವಾಗಿದೆ.

ಇಂದಿನ ಪಂದ್ಯ

ಚೆನ್ನೈ VS ಕೋಲ್ಕತ್ತಾ

ತಾಣ	: ಚಿದಂಬರಂ ಸ್ಟೇಡಿಯಂ, ಚೆನ್ನೈ
ಸಮಯ	: ರಾ. 7 ಗಂಟೆ
ನೇರ ಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ಡಗೌಟ್‌ನಲ್ಲಿ ಫೋನ್ ಬಳಕೆ: ರಾಜಸ್ಥಾನ ತಂಡ ಸ್ಪಷ್ಟನೆ

ಗುವಾಹಟಿ: ಇಲ್ಲಿ ಭಾನುವಾರ ನಡೆದ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡ ಭರ್ಜರಿ ಗೆಲುವು ಸಾಧಿಸಿದರೂ, ಮೈದಾನದ ಹೊರಗಿನ ಒಂದು ಘಟನೆ ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. ರಾಜಸ್ಥಾನ ರಾಯಲ್ಸ್ ತಂಡದ ವ್ಯವಸ್ಥಾಪಕ ರೋಮಿ ಭಿಂದರ್ ಡಗೌಟ್‌ನಲ್ಲಿ ಕುಳಿತಿದ್ದಾಗ ಮೊಬೈಲ್ ಫೋನ್ ಬಳಸುತ್ತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಐಪಿಎಲ್ ನಿಯಮಗಳ ಪ್ರಕಾರ, ಪಂದ್ಯ ನಡೆಯುತ್ತಿರುವಾಗ ಡಗೌಟ್‌ನಲ್ಲಿ ಮೊಬೈಲ್ ಫೋನ್ ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದ್ದಂತೆ, ಭ್ರಷ್ಟಾಚಾರ ನಿಗ್ರಹ ಮತ್ತು ಭದ್ರತಾ ಘಟಕ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸ್ಪಷ್ಟನೆ ನೀಡಲು ಆದೇಶಿಸಿತ್ತು. ಕೆಲವು ತಿಂಗಳ ಹಿಂದೆಯಷ್ಟೇ ಅವರ ಎರಡೂ ಶ್ವಾಸಕೋಶಗಳಿಗೆ ತೀವ್ರ ಹಾನಿಯಾಗಿದ್ದು, ಸುಮಾರು ಒಂದು ವಾರ ವೆಂಟಿಲೇಟರ್‌ನಲ್ಲಿ ಕಳೆದಿದ್ದರು. ಸುಮಾರು ಒಂದು ತಿಂಗಳ ಕಾಲ ನಾಗ್ಪುರದ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದಿದ್ದರು. ಸುರಕ್ಷತಾ ಕಾರಣಗಳಿಗಾಗಿ ಚೇತರಿಸಿಕೊಳ್ಳುವವರೆಗೆ ಫೋನ್ ಅನ್ನು ಹತ್ತಿರದಲ್ಲಿಟ್ಟುಕೊಳ್ಳಲು ಅವರಿಗೆ ಸೂಚನೆ ನೀಡಲಾಗಿತ್ತು, ಹಾಗಾಗಿ ಈ ಪ್ರಕರಣ ವಿವಾದಮುಕ್ತವಾಯಿತು ಎಂದು ತಂಡದ ಮೂಲಗಳು ತಿಳಿಸಿದೆ.

ಟಿಮ್ ಡೇವಿಡ್, ಪಾಂಡ್ಯಗೂ ದಂಡ

ಮುಂಬೈ: ಆರ್‌ಸಿಬಿ ಹಾಗೂ ಮುಂಬೈ ಇಂಡಿಯನ್ಸ್ ನಡುವೆ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅಂಪೈರ್‌ಗಳ ಸೂಚನೆಯನ್ನು ಉಲ್ಲಂಘಿಸಿದ ಆರ್‌ಸಿಬಿ ಬ್ಯಾಟ್ಸ್‌ಮನ್ ಟಿಮ್ ಡೇವಿಡ್‌ಗೆ ದಂಡ ವಿಧಿಸಲಾಗಿದೆ. ಇನ್ನು ಅದೇ ಪಂದ್ಯದಲ್ಲಿ ನಿಧಾನಗತಿಯಲ್ಲಿ ಬೌಲ್ ಮಾಡಿದ್ದಕ್ಕೆ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯಗೂ ದಂಡವನ್ನು ಹಾಕಲಾಗಿದೆ. ಟಿಮ್ ಡೇವಿಡ್ ಅವರಿಗೆ ಶಿಸ್ತು ಉಲ್ಲಂಘನೆಗೆ ಸಂಬಂಧಿಸಿದ ಲೆವೆಲ್ 1 ಅಪರಾಧಕ್ಕಾಗಿ ಪಂದ್ಯದ ಶುಲ್ಕದ 25 ಶೇಕಡಾ ದಂಡ ಹಾಗೂ ಒಂದು ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ. ಅವರು ಅಂಪೈರ್‌ಗಳ ಸೂಚನೆಗಳನ್ನು ಎರಡು ಬಾರಿ ಪಾಲಿಸದೆ, ಆರ್‌ಸಿಬಿ ಇನ್ನಿಂಗ್ಸ್ ವೇಳೆ ಚೆಂಡನ್ನು ಹಿಂತಿರುಗಿಸುವ ಕುರಿತು ನೀಡಿದ ನಿರ್ದೇಶನಗಳನ್ನು ಉಲ್ಲಂಘಿಸಿದ ಕಾರಣ ಐಸಿಸಿ ನಿಯಮಗಳ ಕಲಂ 2.4 ಅನ್ನು ಉಲ್ಲಂಘಿಸಿದ್ದಾರೆ. ಮುಂಬೈ ತಂಡದ ನಾಯಕ ಹಾರ್ದಿಕ್ ಪಾಂಡ್ಯ ನಿಧಾನಗತಿಯ ಓವರ್ ರೇಟ್ ಕಾಯ್ದುಕೊಂಡ ಕಾರಣ ದಂಡಕ್ಕೆ ಒಳಗಾಗಿದ್ದಾರೆ. ಇದು ಐಪಿಎಲ್ ನಡವಳಿಕೆ ಸಂಹಿತೆಯ ಕಲಂ 2.22ರ ಅಡಿಯಲ್ಲಿ ತಂಡದ ಈ ಆವೃತ್ತಿಯ ಮೊದಲ ಪ್ರಮಾದವಾಗಿರುವುದರಿಂದ, ಅವರಿಗೆ 12 ರು.ಲಕ್ಷ ದಂಡ ವಿಧಿಸಲಾಗಿದೆ.

ಜೂನ್ 12ರಿಂದ ಮಹಿಳಾ ವಿಶ್ವಕಪ್: ಬಹುಮಾನ ಮೊತ್ತ ಏರಿಕೆ

ಲಂಡನ್: ಜೂನ್ 12ರಂದು ಐಸಿಸಿ ಮಹಿಳಾ ಟಿ20 ವಿಶ್ವಕಪ್ ಆರಂಭವಾಗಲಿದ್ದು, ಮೊದಲ ಬಾರಿಗೆ 12 ತಂಡಗಳು ಭಾಗವಹಿಸುತ್ತಿವೆ. ಈ ಬಾರಿ ಇಂಗ್ಲೆಂಡ್ ಮತ್ತು ವೇಲ್ಸ್ ಈ ಟೂರ್ನಿಯನ್ನು ಆಯೋಜಿಸಲಿವೆ.

ಉದ್ಘಾಟನಾ ಪಂದ್ಯವು ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ಮಧ್ಯೆ ನಡೆಯಲಿದೆ. ಜೂನ್ 14ರಂದು ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್‌ನಲ್ಲಿ ಪಾಕಿಸ್ತಾನ ವಿರುದ್ಧ ವಿಶ್ವಕಪ್ ಚಾಂಪಿಯನ್ ಭಾರತ ತನ್ನ ಮೊದಲ ಪಂದ್ಯವನ್ನು ಆಡಲಿದೆ.

ಮಹಿಳಾ ಟಿ20 ವಿಶ್ವಕಪ್ 2026ರ ಟೂರ್ನಿಗೆ ತಲಾ ಆರು ತಂಡಗಳ ಎರಡು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರತಿ ತಂಡವು ತಮ್ಮ ಗುಂಪಿನಲ್ಲಿರುವ ಇತರ ತಂಡಗಳ ವಿರುದ್ಧ ಒಂದು ಪಂದ್ಯವನ್ನು ಆಡಲಿದೆ. ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ. ಫೈನಲ್ ಪಂದ್ಯವು ಜುಲೈ 5ರಂದು ಲಾರ್ಡ್ಸ್‌ನಲ್ಲಿ ನಡೆಯಲಿದೆ.

ಮಹಿಳಾ ವಿಶ್ವಕಪ್ ಬಹುಮಾನ ಮೊತ್ತ: ಯುಎಇಯಲ್ಲಿ ನಡೆದ ಕೊನೆಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು ಬಹುಮಾನದ ಮೊತ್ತ 7,958,077 (ಸುಮಾರು 74 ಕೋಟಿ ರು.) ಡಾಲರ್ ಆಗಿತ್ತು. ಈಗ 8,764,615ಗೆ (ಸುಮಾರು 82 ಕೋಟಿ ರು) ಏರಿದ್ದು, ಇದು 2024ರ ಆವೃತ್ತಿಗಿಂತ ಶೇಕಡಾ 10ರಷ್ಟು ಹೆಚ್ಚಳವಾಗಿದೆ. ಈ ಆವೃತ್ತಿಯಲ್ಲಿ ಚಾಂಪಿಯನ್ ತಂಡ 2,340,000 ಅಮೆರಿಕನ್ ಡಾಲರ್ (ಸುಮಾರು 21.8 ಕೋಟಿ ರು.) ಪಡೆಯಲಿದ್ದು, ರನ್ನರ್ ಅಪ್ ತಂಡವು 1,170,000 ಅಮೆರಿಕನ್ ಡಾಲರ್ (ಸುಮಾರು 10 ಕೋಟಿ ರು.) ಪಡೆಯಲಿದೆ.

ಸೆಮಿಫೈನಲ್ ಹಂತದಲ್ಲಿ ಸ್ಥಾನ ಪಡೆಯುವ ತಂಡಗಳು 675,000 ಅಮೆರಿಕನ್ ಡಾಲರ್ (ಸುಮಾರು 6.29 ಕೋಟಿ ರು.) ಪಡೆಯಲಿವೆ. ಗುಂಪು ಹಂತದ ಪ್ರತಿ ಗೆಲುವಿಗೆ 31,154 ಅಮೆರಿಕನ್ ಡಾಲರ್ (ಸುಮಾರು 29 ಲಕ್ಷ ರು.) ಬಹುಮಾನವಾಗಿ ನೀಡಲಾಗುವುದು. ಟೂರ್ನಿಯಲ್ಲಿ ಭಾಗವಹಿಸುವ ಎಲ್ಲಾ 12 ತಂಡಗಳು ಕನಿಷ್ಠ 247,500 ಅಮೆರಿಕನ್ ಡಾಲರ್ (ಸುಮಾರು 2.06 ಕೋಟಿ ರು.) ನಗದು ಬಹುಮಾನವನ್ನು ಪಡೆಯಲಿವೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ವಿಟಾಕೀಸ್

ರಶ್ಮಿಕಾ ದಾಖಲೆ ಸಂಭಾವನೆ

ಭಾರತೀಯ ಚಿತ್ರರಂಗದಲ್ಲಿ ಬೇಡಿಕೆಯ ನಟಿಯಾಗಿರುವ ರಶ್ಮಿಕಾ ಮಂದಣ್ಣ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಟಾಲಿವುಡ್, ಬಾಲಿವುಡ್, ಕಾಲಿವುಡ್ ಸಿನಿಮಾಗಳಲ್ಲಿಯೂ ನಟಿಸಿರುವ ರಶ್ಮಿಕಾ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಪುಷ್ಪಾ ಸಿನಿಮಾದಲ್ಲಿ ನಟಿಸಿ ಮನಗೆದ್ದ ರಶ್ಮಿಕಾ ದಾಂಪತ್ಯಕ್ಕೆ ಕಾಲಿಟ್ಟಿದ್ದಾರೆ. ಈಗ ರಣಬಾಲಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅದರ ಜತೆಗೆ ಅಲ್ಲು ಅರ್ಜುನ್ ಅಭಿನಯದ ರಾಕಾ ಸಿನಿಮಾದಲ್ಲಿ ರಶ್ಮಿಕಾ ಬಣ್ಣಹಚ್ಚುತ್ತಿದ್ದಾರೆ. ಪುಷ್ಪಾ ಚಿತ್ರದ ಬಳಿಕ ಮತ್ತೆ ಅಲ್ಲು ಜತೆಗೆ ನಟಿಸುತ್ತಿರುವ ರಶ್ಮಿಕಾ ಈ ಸಿನಿಮಾದಲ್ಲಿ ನೆಗೆಟಿವ್ ಪಾತ್ರದಲ್ಲಿ ಕಾಣಿಸಿ ಕೊಳ್ಳುತ್ತಿ ದ್ದಾರೆ. ಇದು ಚಿಕ್ಕ ಪಾತ್ರವಾದರೂ ಪವರ್ ಫುಲ್ ಪಾತ್ರವಾಗಿದೆ. ವಿಶೇಷ ಎಂದರೆ ಈ ಚಿತ್ರಕ್ಕಾಗಿ ರಶ್ಮಿಕಾ ಬರೋಬ್ಬರಿ ಏಳು ಕೋಟಿ ಸಂಭಾವನೆ ಪಡೆದಿದ್ದಾರೆ. ಪುಷ್ಪಾ ಚಿತ್ರಕ್ಕಾಗಿ ಹತ್ತು ಕೋಟಿ ಸಂಭಾವನೆ ಪಡೆದಿದ್ದ ಸ್ಯಾಂಡಲ್ ವುಡ್ ಸಾನ್ವಿ, ಸಲ್ಮಾನ್ ಖಾನ್ ಅಭಿನಯದ ಸಿಕಂದರ್ ಸಿನಿಮಾಕ್ಕಾಗಿ ಹದಿಮೂರು ಕೋಟಿ ಸಂಭಾವನೆ ಪಡೆದಿ ದ್ದರು. ಬಳಿಕ ಪುಷ್ಪಾ 2 ಚಿತ್ರಕ್ಕಾಗಿ ಬರೋಬ್ಬರಿ ಇಪ್ಪತ್ತು ಕೋಟಿಗೆ ಸಂಭಾವನೆ ಹೆಚ್ಚಿಸಿ ಕೊಂಡಿದ್ದರು. ಮುಂದಿನ ಸಿನಿಮಾಗೆ ಇನ್ನೂ ಒಂದಷ್ಟು ಸಂಭಾವನೆ ಹೆಚ್ಚಿಸಿಕೊಂಡರೂ ಅಚ್ಚರಿ ಇಲ್ಲ. ರಾಕಾ ಚಿತ್ರದಲ್ಲಿ ಅಲ್ಲು ಅರ್ಜುನ್ ಬಲು ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಿ ದ್ದಾರೆ. ಅಟ್ಲಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ರಾಕಾ ಹಾಲಿವುಡ್ ರೇಂಜ್ ನಲ್ಲಿ ಮೂಡಿಬರುತ್ತಿದ್ದೆ. ಹಾಲಿವುಡ್ ತಂತ್ರಜ್ಞರೇ ಚಿತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಈ ಸಿನಿಮಾದ ಮತ್ತೊಂದು ವಿಶೇಷ. ದೀಪಿಕಾ ಪಡುಕೋಣೆ ಕೂಡ ಸಿನಿಮಾದಲ್ಲಿ ಅಭಿನಯಿಸುತ್ತಿದ್ದು ಇದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

ಕೆಡಿಗೆ ಸೆನ್ಸಾರ್ ಸಂಕಷ್ಟ

ಕೆವಿಎನ್ ಪ್ರೊಡಕ್ಷನ್ಸ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾದ ಜನನಾಯಗನ್ ಚಿತ್ರ ಸೆನ್ಸಾರ್ ಅಂಗಳಕ್ಕೆ ಹೋಗಿ ಅಲ್ಲೇ ಸಂಕಷ್ಟಕ್ಕೆ ಸಿಲುಕಿತ್ತು. ಅಂತೆಯೇ ಈಗ ಕೆವಿಎನ್ ಪ್ರೊಡಕ್ಷನ್ ನಲ್ಲಿ ನಿರ್ಮಾಣವಾಗಿರುವ ಕೆಡಿ ಚಿತ್ರಕ್ಕೂ ಸೆನ್ಸಾರ್ ಸಂಕಷ್ಟ ಎದಿರಾಗಿದೆ. ಕೆಡಿ ಈ ಹಿಂದೆಯೇ ಸೆನ್ಸಾರ್ ಅಂಗಳಕ್ಕೆ ಹೋಗಿತ್ತು. ಇದು ಭೂಗತ ಲೋಕದ ಕಥೆಯ ಸಿನಿಮಾವಾಗಿದ್ದು ಸಿನಿಮಾದಲ್ಲಿ ರಕ್ತಪಾತ ಹೆಚ್ಚಾಗಿದೆ ಎಂದು ಸೆನ್ಸಾರ್ ಮಂಡಳಿ ಚಿತ್ರಕ್ಕೆ 'ಎ' ಪ್ರಮಾಣ ಪತ್ರ ನೀಡಲಾಗಿತ್ತು. ಜತೆಗೆ ಹಾಡಿನಲ್ಲಿ ಅಶ್ಲೀಲ ಸಾಹಿತ್ಯವಿದ್ದು ಅದರ ಕೆಲವು ಸಾಲನ್ನು ಕಡಿತ ಮಾಡುವಂತೆ ತಿಳಿಸಲಾಗಿತ್ತು. ಇದಕ್ಕೆ ಚಿತ್ರ ತಂಡ ಕೂಡ ಸಮ್ಮತಿಸಿತ್ತು. ಆದರೆ ಈ ನಡುವೆಯೇ ಚಿತ್ರತಂಡದ ಗಮನಕ್ಕೂ ತರದೇ, ಕೇಂದ್ರ ಪ್ರಾದೇಶಕ ಸೆನ್ಸಾರ್ ಮಂಡಳಿಗೆ ಚಿತ್ರವನ್ನು ರವಾನಿಸಿದ್ದು, ಅದರ ಜತೆಗೆ ರೆವೈಸಿಂಗ್ ಕಮಿಟಿಗೂ ಕಳುಹಿಸಿದೆ. ಇದು ಅಸಮಾಧಾನಕ್ಕೂ ಕಾರಣವಾಗಿದೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಪಂಭಾಷೆಯಲ್ಲಿ ನಿರ್ಮಾಣವಾಗಿದೆ. ಜೋಗಿ ಪ್ರೇಮ್ ನಿರ್ದೇಶನದ ಈ ಚಿತ್ರದಲ್ಲಿ ಧ್ರುವ ಸರ್ಜಾ ನಾಯಕನಾಗಿ ನಟಿಸಿದ್ದು ಕಾಳಿದಾಸನಾಗಿ ಕಾಣಿಸಿಕೊಂಡಿದ್ದಾರೆ. ರೀಷ್ಮಾ ನಾಣಯ್ಯ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಬಾಲಿವುಡ್ ಬೆಡಗಿ ಶಿಲ್ಪಾ ಶೆಟ್ಟಿ, ಸಂಜಯ್ ದತ್, ರವಿಚಂದ್ರನ್, ರಮೇಶ್, ಅಭಿಜಿತ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಅರ್ಜುನ್ ಜನ್ಯಾ ಸಂಗೀತ ಈ ಚಿತ್ರಕ್ಕಿದ್ದು, ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸೂಪರ್ ಹಿಟ್ ಆಗಿವೆ.

ಪೆದ್ದಿ ಜತೆಯಾದ ಸಾಯಿಕುಮಾರ್

ರಾಮ್ ಚರಣ್ ಅಭಿನಯದ ಪೆದ್ದಿ ಆರಂಭದಿಂದಲೂ ಕುತೂಹಲ ಮೂಡಿಸುತ್ತಿದೆ. ಇದು ಗ್ರಾಮೀಣ ಹಿನ್ನೆಲೆಯಲ್ಲಿ ಸಾಗುವ ಕಥೆಯಾಗಿದ್ದು, ಕ್ರಿಕೆಟ್ ಆಟದ ಸುತ್ತ ಸಿನಿಮಾದ ಕಥೆ ಸಾಗಲಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇದು ಪವರ್ ಫುಲ್ ಪಾತ್ರವಾಗಿದ್ದು ಚಿತ್ರದ ಕಥೆಗೆ ಹೊಸ ತಿರುವು ನೀಡುವ ಪಾತ್ರ ಇದಾಗಿದೆ. ಶಿವಣ್ಣನ ಲುಕ್ ಈ ಹಿಂದೆಯೇ ರಿಲೀಸ್ ಆಗಿದ್ದು, ಕುತೂಹಲ ಮೂಡಿಸಿದೆ. ಈಗ ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಪೆದ್ದಿ ಚಿತ್ರತಂಡ ಸೇರಿದ್ದು, ಸಾಯಿಕುಮಾರ್ ಈ ಚಿತ್ರದಲ್ಲಿ ಮುಖ್ಯವಾದ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಹಿಂದೆ ಯೆವಡು ಚಿತ್ರದಲ್ಲಿ ರಾಮ್ ಚರಣ್ ಜತೆಗೆ ನಟಿಸಿದ್ದ ಸಾಯಿ ಕುಮಾರ್ ಈಗ ಹತ್ತು ವರ್ಷಗಳ ಬಳಿಕ ಮತ್ತೆ ರಾಮ್ ಚರಣ್ ಜತೆಯಾಗಿದ್ದಾರೆ. ಜಗಪತಿ ಬಾಬು ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದ್ದು, ಹಾಗಾಗಿ ಪೆದ್ದಿ ತಾರಾಗಣದ ಮೂಲಕವೇ ಕುತೂಹಲ ಹೆಚ್ಚಿಸಿದೆ. ಬುಚ್ಚಿ ಬಾಬು ಸನಾ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ರಾಮ್ ಚರಣ್ ಹೊಸ ಅವತಾರದಲ್ಲಿ ಕಂಗೊಳಿಸಲಿದ್ದಾರೆ. ಜಾನ್ವಿ ಕಪೂರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಗ್ಲಾಮರ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಪೆದ್ದಿ ಹೈವೋಲ್ಟೇಜ್ ಸಿನಿಮಾವಾಗಿದ್ದು, ಚಿತ್ರ ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.



ಸಾಮಾಜಿಕ ಸಂದೇಶ ಸಾರುವ ಕೆಂಡದ ಸೆರಗು ಟ್ರೇಲರ್ ರಿಲೀಸ್

ಸಾಮಾಜಿಕ ಸಂದೇಶದ ಜತೆಗೆ ಕ್ರೈಂ ತನಿಖೆಯ ಕಥೆಯನ್ನು ಒಳಗೊಂಡಿರುವ ಕೆಂಡದ ಸೆರಗು ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ಭೂಮಿ ಶೆಟ್ಟಿ ಕುಸ್ತಿಪಟುವಾಗಿ ಅಭಿನಯಿಸಿದ್ದು, ಮಾಲಾಶ್ರೀ ಖಾಕಿಯಲ್ಲಿ ಖದರ್ ಮಿಂಚಿದ್ದಾರೆ.

ರಾಕಿ ಸೋಮ್ಲಿ ನಿರ್ದೇಶದ ಚೊಚ್ಚಲ ಸಿನಿಮಾ ಇದಾಗಿದ್ದು, ಈ ಸಿನಿಮಾದ ಮೂಲಕ ಒಂದೊಳ್ಳೆಯ ಕಥೆಯನ್ನು ಹೇಳ ಹೊರಟಿದ್ದಾರೆ. ಮಹಿಳೆಯ ಆತ್ಮಗೌರವ ಮತ್ತು ಹೋರಾಟದ ಕಥೆಯ ಜತೆಗೆ ಇಂದಿನ ಸಮಾಜದಲ್ಲಿ ಕೆಲ ಯುವತಿಯರು ಎದಿರಿಸುವ ಮೋಸ ಮತ್ತು ಅಪಾಯಗಳನ್ನೂ ತೆರೆ ಮೇಲೆ ತರುವ ಪ್ರಯತ್ನ ನಡೆಯುತ್ತಿದೆ. ಶೋಭಿತಾ, ಪ್ರತಿಮಾ ಠಾಕೂರ್, ಮೋಹನ್ ಕುಮಾರ್, ವರ್ಧನ್, ಯಶ್ ಶೆಟ್ಟಿ, ಸಿಂಧು ಲೋಕನಾಥ್, ಹರೀಶ್ ಅರಸು ತಾರಾ ಬಳಗದಲ್ಲಿದ್ದಾರೆ.

ಶ್ರೀ ಮುತ್ತು ಟಾಕೀಸ್ ಮತ್ತು ಎಸ್.ಕೆ ಪ್ರೊಡಕ್ಷನ್ಸ್ ಬ್ಯಾನರ್ ನಲ್ಲಿ ಕೆ.ಕೋಟ್ರೇಶ್ ಗೌಡ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ವಿಪಿನ್ ವಿ ರಾಜ್ ಛಾಯಾಗ್ರಹಣ, ವೀರೇಶ್ ಕಂಬ್ಳಿ ಸಂಗೀತ ನಿರ್ದೇಶನ, ಶ್ರೀಕಾಂತ್ ಸಂಕಲನ ಇದೆ. ಏಪ್ರಿಲ್ 17ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.